ಮಂಗಳೂರು
ಮಂಗಳವಾರ, 31 ಮಾರ್ಚ್ 2026
ಸಂಪುಟ 48, ಸಂಚಿಕೆ 12, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ನೌಕಾಪಡೆಗೆ 3 ಯುದ್ಧ ನೌಕೆ ಸೇರ್ಪಡೆ | 09
ಆರ್‌ವಿಕೆ ಶಾಲೆ ಲೋಕಾರ್ಪಣೆ | 03
ಒಳ ನುಸುಳುವಿಕೆ ಕೇವಲ ಚುನಾವಣಾ ವಿಚಾರವಲ್ಲ | 09

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪೂರ್ವ

ದಿನದ ಮಾತು

ನಮ್ಮ ಹಿಂದೇನಿದೆ ಮತ್ತು ಮುಂದೇನಿದೆ ಎಂಬವುಗಳು ನಮ್ಮ ಒಳಗೇನಿದೆ ಎಂಬುದರ ಮುಂದೆ ಸಣ್ಣ ಸಂಗತಿಗಳು.

▲ಸುಭಾಷಿತ

ವಿದ್ಯುತ್ ಕ್ಷೇತ್ರದಲ್ಲಿ ಗೋಸಂಪತ್ತು

ಧರಣಿ ಮಂಡಲ

• ಕೆ.ಎಸ್.ಶೈಲೇಶ್ ಹೊಳ್ಳ

• ಪುಟ ೬


ಜವಾಬ್ದಾರಿಯನ್ನು ಹಕ್ಕು ಚಲಾಯಿಸಲು ಬಳಸಿದಾಗ...

▸ ಎಸ್. ಸುರೇಶ್‌ಕುಮಾರ್, ಶಾಸಕರು



ಐಪಿಎಲ್ ಟಿಕೆಟ್ ಕುರಿತು ವಿಧಾನಸಭೆಯಲ್ಲಿ ನಡೆದ ಇತ್ತೀಚಿನ ಚರ್ಚೆ ಮತ್ತು ಇದರಿಂದ ರಾಜ್ಯದಲ್ಲಿ ಜನಸಾಮಾನ್ಯರ ನಡುವೆ ಹೊಮ್ಮಿದ ಅಭಿಪ್ರಾಯ ಹಿನ್ನೆಲೆಯಲ್ಲಿ ನನ್ನ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಲು ಇಚ್ಛಿಸುತ್ತೇನೆ. ಓರ್ವ ಜನಪ್ರತಿನಿಧಿಯಾಗಿ ನಾನು ಐಪಿಎಲ್ ಟಿಕೆಟ್ ನಿರಾಕರಿಸಿದ್ದರ ಹಿಂದೆ ಯಾವುದೇ ವೈಯಕ್ತಿಕ ವೈಮನಸ್ಸಾಗಲೀ ಅಥವಾ ನನ್ನ ಅಹಂಕಾರವಾಗಲೀ ಇಲ್ಲ. ಅದು ನನ್ನ ಒಳಮನಸ್ಸಿನ ಒತ್ತಾಯ. ಒಂದು ರೀತಿಯಲ್ಲಿ ನನ್ನ ಸಾರ್ವಜನಿಕ ಜೀವನದ ನಂಬಿಕೆಗಳೊಂದಿಗೆ ನಾನೇ ನಡೆಸಿಕೊಂಡ ಒಂದು ಸಂಭಾಷಣೆಯ ಫಲ.

ಕಳೆದ ವರ್ಷ ಇದೇ ಐಪಿಎಲ್ ಗೆದ್ದ ಸಂದರ್ಭದಲ್ಲಿ,



ಬೆಂಗಳೂರಿನದೇ ಎಂದು ನಾವು ಅಂದುಕೊಳ್ಳುವ ಆರ್‌ಸಿಬಿ ಕಪ್ ಗೆದ್ದ ಸಂಭ್ರಮದಲ್ಲಿ, ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಉಂಟಾದ ದುರ್ಘಟನೆಯಲ್ಲಿ 11 ಜನ ಅಲ್ಲಿಗೆ ಹೋಗಿದ್ದ ಅಮಾಯಕರು ಅವರವರ ಮನೆಗೆ ಮರಳಲೇ ಇಲ್ಲ ಎನ್ನುವ ಆ ಒಂದು ಆಘಾತ ಭಾವ ನನ್ನೊಳಗೆ ಇನ್ನೂ ನೋವಾಗಿಯೇ ಉಳಿದಿದೆ. ರಾಜಕೀಯವೆಂದರೆ ಪ್ರಜೆಗಳ ಹಿತಕ್ಕಾಗಿ ನಾವು ಸೃಷ್ಟಿಸಬೇಕಾದ ಒಂದು ಸ್ವರ್ಗ ಎಂಬುದು ಹಳೆಯ ನಾಣ್ಣುಡಿ. ಪ್ರಜಾಪ್ರಭುತ್ವದ ಅರ್ಥವೆಂದರೆ ಜನರಿಂದ, ಜನರಿಗಾಗಿ ಮತ್ತು ಜನರ ವ್ಯವಸ್ಥೆ. ಈ ಎರಡು ಹೇಳಿಕೆಗಳ ಹಿನ್ನೆಲೆಯಲ್ಲಿ,

> **ಮೊನ್ನೆ ವಿಧಾನಸಭೆಯಲ್ಲಿ ನಮಗೆ ಐಪಿಎಲ್ ಟಿಕೆಟ್ ಬೇಕೇ ಬೇಕು, ನಮಗೆ ಕನಿಷ್ಠ 5 ಟಿಕೆಟ್ ಆದರೂ ಬೇಕು, ನಾವು ಕ್ಯೂನಲ್ಲಿ ನಿಲ್ಲುವುದು ಸಾಧ್ಯವಿಲ್ಲ, ನಮಗೆ ವಿಶೇಷ ಗ್ಯಾಲರಿ ಬೇಕು ಎನ್ನುವ ಮಾತುಗಳೆಲ್ಲಾ ವಿಧಾನಸಭೆ ಅಧಿವೇಶನದಲ್ಲಿ ಕೇಳಿ ಬಂದಾಗ ಅದನ್ನು ವೀಕ್ಷಿಸಿದವರಿಗೆ 'ಇವರೇನಾ ನಮ್ಮ ಮನೆ ಬಾಗಿಲಿಗೆ ಮತ ಯಾಚಿಸಲು ಬಂದವರು?' ಎಂಬ ಪ್ರಶ್ನೆ ಸುಳಿದಾಡಿದ್ದರೆ ಆಶ್ಚರ್ಯವಿಲ್ಲ.**

ಜನಪ್ರತಿನಿಧಿಗೆ ಜನರಿಂದ ನಾನು ಭಿನ್ನ, ಜನರಿಂದ ನನ್ನದು ಮೇಲುಗಡೆಯ ಸ್ಥಾನ ಅಥವಾ ಜನರಿಂದ ನಾನು ಪ್ರತ್ಯೇಕ ಎಂಬ ಭಾವನೆಗೆ ಅವಕಾಶವೇ ಇರಕೂಡದು. ಪ್ರತಿ ಚುನಾಯಿತ ಪ್ರತಿನಿಧಿ ಜನಸಾಮಾನ್ಯರ ಒಂದು ಭಾಗ. ಚುನಾವಣೆಗೆ ಮುನ್ನ ಜನಪ್ರತಿನಿಧಿಯಾಗುವವರು ಹೇಗೆ ಮತದಾರರ ಒಲವನ್ನು ಪಡೆಯಲು ವರ್ತಿಸುತ್ತಾರೋ, ಹಾಗೆಯೇ ಚುನಾವಣೆಯ ನಂತರ ನಾಗರಿಕರ ದೃಷ್ಟಿಯಲ್ಲಿ ತಮ್ಮ ಗೌರವವನ್ನು ಉಳಿಸಿಕೊಳ್ಳಲು ನಡವಳಿಕೆಯನ್ನು ಕಾಪಿಟ್ಟುಕೊಳ್ಳಬೇಕು. ಜನಸಾಮಾನ್ಯರು ಬಯಸುವುದು ಚುನಾಯಿತ ಪ್ರತಿನಿಧಿಗಳು ಸರಳವಾಗಿರಬೇಕು, ಸಿಗುವಂತಿರಬೇಕು ಮತ್ತು ಜನಸಾಮಾನ್ಯರ ಜತೆ ಸದಾ ಬೆರೆಯುವಂತಿರಬೇಕು.

ಇದು ಯಾವಾಗ ಸಾಧ್ಯ ಎಂದರೆ, ಪ್ರಧಾನಮಂತ್ರಿ ಮೋದಿಯವರು ಹೇಳಿದಂತೆ ನಾವು ಸದಾ ಜನಸೇವಕರಂತೆ ವರ್ತಿಸಿದಾಗ ಮಾತ್ರ.

➡ಪುಟ ೪

ಲೋಕಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಣೆ

ನಕ್ಸಲ್‌ಮುಕ್ತ ಭಾರತ



• **ಹೊಸದಿಲ್ಲಿ:** ಮಾವೋವಾದಿಗಳ ಅಗ್ರ ಸಂಸ್ಥೆ ಹಾಗೂ ಕೇಂದ್ರೀಕೃತ ರಚನೆ ಬಹುತೇಕ ಸಂಪೂರ್ಣವಾಗಿ ಧ್ವಂಸಗೊಂಡಿರುವುದರಿಂದ ದೇಶವು ನಕ್ಸಲರಿಂದ ಮುಕ್ತವಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಲೋಕಸಭೆಯಲ್ಲಿ ಘೋಷಿಸಿದ್ದಾರೆ. ಜತೆಗೆ, ನಕ್ಸಲ್ ಹಿಂಸಾಚಾರದ ದೀರ್ಘ ಅವಧಿಯನ್ನು ಅಂತ್ಯಗೊಳಿಸಲು ಕಾಂಗ್ರೆಸ್ ಏನೂ ಮಾಡಲಿಲ್ಲ ಎಂದು ಆರೋಪಿಸಿದ್ದಾರೆ.

ಎಡಪಂಥೀಯ ಉಗ್ರವಾದದಿಂದ (ಎಲ್‌ಡಬ್ಲ್ಯುಇ) ದೇಶವನ್ನು ಮುಕ್ತಗೊಳಿಸುವ ಪ್ರಯತ್ನಗಳು ಕುರಿತ ಚರ್ಚೆಗೆ ಪ್ರತಿಕ್ರಿಯಿಸಿದ ಶಾ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹಲವು ಬಾರಿ ಸಾರ್ವಜನಿಕವಾಗಿ ನಕ್ಸಲ್ ಸಹಾನುಭೂತಿದಾರರೊಂದಿಗೆ ಕಾಣಿಸಿಕೊಂಡಿದ್ದಾರೆ ಮತ್ತು ತಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಮಾವೋವಾದಿಗಳಿಗೆ 'ಸಹಾನುಭೂತಿ' ತೋರಿಸುವ ವಿಡಿಯೋಗಳನ್ನು ಪೋಸ್ಟ್ ಮಾಡಿದ್ದಾರೆ ಎಂದು ಬೊಟ್ಟು ಮಾಡಿದರು.

ಕಾಂಗ್ರೆಸ್ ವಿರುದ್ಧ ತೀಕ್ಷ್ಣ ಟೀಕೆ ಮಾಡಿದ ಗೃಹ ಸಚಿವರು, ಮಾಜಿ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು 1970ರ ದಶಕದಲ್ಲಿ ಅಂದಿನ ಏಕೀಕೃತ ಆಂಧ್ರಪ್ರದೇಶದಲ್ಲಿ ನಡೆದ ಚುನಾವಣೆಯಲ್ಲಿ ನಕ್ಸಲರ ಬೆಂಬಲವನ್ನು ಸ್ವೀಕರಿಸಿದ್ದರು ಮತ್ತು ಮಾವೋವಾದಿ ಚಿಂತನೆಗಳಿಂದ ಪ್ರಭಾವಿತರಾಗಿದ್ದರು ಎಂದು ಹೇಳಿದರು. ತಜ್ಞರು ಹೇಳುವಂತೆ, ಅಧಿಕಾರದಲ್ಲಿರುವವರ ಬೆಂಬಲವಿಲ್ಲದೆ ರೆಡ್ ಕಾರಿಡಾರ್ ನಿರ್ಮಾಣ ಸಾಧ್ಯವಿರಲಿಲ್ಲ ಎಂದು ಅವರು ಹೇಳಿದರು.

➡ಪುಟ ೪

ಎಐ ಚಿತ್ರ



ಕಾಂಗ್ರೆಸ್ ವಿಫಲ

ಕಾಂಗ್ರೆಸ್ ತನ್ನ 60 ವರ್ಷಗಳ ಆಡಳಿತದಲ್ಲಿ ಈ ಸಮಸ್ಯೆ ಪರಿಹರಿಸಲು ವಿಫಲವಾಗಿದೆ ಎಂದು ಶಾ ಆರೋಪಿಸಿದರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ನಕ್ಸಲಿಸಂ ಅನ್ನು ರಾಷ್ಟ್ರೀಯ ಸವಾಲು ಎಂದು ಒಪ್ಪಿಕೊಂಡಿದ್ದರೂ, ಹಿಂದಿನ ಸರ್ಕಾರ ಬುಡಕಟ್ಟು ಜನರಿಗೆ ವಸತಿ, ನೀರು, ಶಾಲೆ ಅಥವಾ ಬ್ಯಾಂಕಿಂಗ್ ಸೌಲಭ್ಯಗಳಂತಹ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಲಿಲ್ಲ ಎಂದು ಅಮಿತ್ ಶಾ ಹೇಳಿದರು.

ಆಂಧ್ರ ಮಾವೋಮುಕ್ತ ರಾಜ್ಯ

• **ಅಮರಾವತಿ:** ಹಿರಿಯ ನಾಯಕ ಸಿ. ನಾರಾಯಣ ರಾವ್ ಸೇರಿದಂತೆ ಒಂಬತ್ತು ಮಾವೋವಾದಿಗಳು ಪೊಲೀಸರ ಮುಂದೆ ಶರಣಾಗಿದ್ದಾರೆ ಎಂದು ಆಂಧ್ರಪ್ರದೇಶದ ಡಿಜಿಪಿ ಹರೀಶ್ ಕುಮಾರ್ ಗುಪ್ತಾ ಸೋಮವಾರ ತಿಳಿಸಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಎಡಪಂಥೀಯ ಉಗ್ರವಾದ(ಎಲ್‌ಡಬ್ಲ್ಯುಇ) ಕೊನೆಗೊಂಡಿದೆ ಎಂದೂ ಅವರು ಹೇಳಿದ್ದಾರೆ. ಕೇಂದ್ರ ಸರ್ಕಾರವು 2026ರ ಮಾ.31ರೊಳಗೆ ಎಲ್‌ಡಬ್ಲ್ಯುಇಯನ್ನು ಕೊನೆಗೊಳಿಸುವ ಭರವಸೆ ನೀಡಿದೆ. ರಾಜ್ಯ ಪೊಲೀಸರು ಸಹ ಈ ಗುರಿಯತ್ತ ತಮ್ಮ ಕೊಡುಗೆ ನೀಡಿದ್ದಾರೆ ಎಂದು ಡಿಜಿಪಿ ಹೇಳಿದ್ದಾರೆ. ಗುಪ್ತಾ ಅವರ ಪ್ರಕಾರ, ರಾವ್ ಆಂಧ್ರ ಒಡಿಶಾ ಗಡಿಯ (ಎಒಬಿ) ಕಾರ್ಯದರ್ಶಿಯಾಗಿದ್ದ. ಮಾವೋವಾದಿ ಚಳವಳಿಯಲ್ಲಿ 36 ವರ್ಷ ಕಾರ್ಯನಿರ್ವಹಿಸಿದ್ದ.

ಒಪ್ಪಂದವಾಗದಿದ್ದರೆ ದಾಳಿ: ಟ್ರಂಪ್ ಎಚ್ಚರಿಕೆ

ಸಂಘರ್ಷ ತೀವ್ರತೆ ಹೆಚ್ಚಳ

• **ದುಬೈ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಇರಾನ್‌ಗೆ ಗಂಭೀರ ಎಚ್ಚರಿಕೆ ನೀಡಿದ್ದು, ಯುದ್ಧ ಕೊನೆಗೊಳಿಸುವ ಒಪ್ಪಂದ ತಕ್ಷಣ ಸಾಧಿಸಲಿಲ್ಲವಾದರೆ, ಇರಾನ್‌ನ ಇಂಧನ ಸಂಪನ್ಮೂಲಗಳು ಮತ್ತು ಮಹತ್ವದ ನಾಗರಿಕ ಮೂಲಸೌಕರ್ಯಗಳನ್ನು ಸಂಪೂರ್ಣವಾಗಿ ನಾಶ ಮಾಡುವುದಾಗಿ ಹೇಳಿದ್ದಾರೆ. ಇದರಲ್ಲಿ ವಿದ್ಯುತ್ ಘಟಕಗಳು, ತೈಲ ಮತ್ತು ಕುಡಿಯುವ ನೀರನ್ನು ಒದಗಿಸುವ ಘಟಕಗಳೂ ಸೇರಿವೆ.



ಈ ಮಧ್ಯೆ, ಮಧ್ಯಪ್ರಾಚ್ಯದಲ್ಲಿ ದಾಳಿಗಳು ಮುಂದುವರಿದಿದ್ದು, ಇರಾನ್ ಕುವೈತ್‌ನ ಪ್ರಮುಖ ನೀರು ಮತ್ತು ವಿದ್ಯುತ್ ಘಟಕದ ಮೇಲೆ ದಾಳಿ ನಡೆಸಿದೆ. ಇಸ್ರೇಲ್‌ನ ತೈಲ ಶುದ್ಧೀಕರಣ ಘಟಕವೂ ದಾಳಿಗೆ ಗುರಿಯಾಗಿದೆ. ಪ್ರತಿಯಾಗಿ, ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ಹೊಸ ದಾಳಿಗಳನ್ನು ಪ್ರಾರಂಭಿಸಿದ್ದು, ಯುದ್ಧ ಅಂತ್ಯ ಕಾಣುವ ಲಕ್ಷಣಗಳು ಕಾಣಿಸುತ್ತಿಲ್ಲ. ಟ್ರಂಪ್ ಸಾಮಾಜಿಕ ಮಾಧ್ಯಮದ ಮೂಲಕ ಚರ್ಚೆಗಳು ಉತ್ತಮವಾಗಿ ಸಾಗುತ್ತಿವೆ ಎಂದು ಹೇಳಿದರೂ, ಅವರು ತಮ್ಮ ಕಠಿಣ ನಿಲುವನ್ನು ಸ್ಪಷ್ಟಪಡಿಸಿದರು. ಒಪ್ಪಂದ ಶೀಘ್ರವಾಗದಿದ್ದರೆ ಮತ್ತು ಹಾರ್ಮುಜ್ ಜಲಸಂಧಿ ತಕ್ಷಣ ತೆರೆಯದಿದ್ದರೆ, ನಾವು ಇರಾನ್‌ನ ಮೂಲಸೌಕರ್ಯವನ್ನು ಸಂಪೂರ್ಣವಾಗಿ ನಾಶ ಮಾಡುತ್ತೇವೆ ಎಂದು ಎಚ್ಚರಿಸಿದ್ದಾರೆ.

➡ಪುಟ ೪



ಯುದ್ಧದ ದಿಕ್ಕು ಇನ್ನೂ ಅನಿಶ್ಚಿತ

ಇರಾನ್, ಅಮೆರಿಕ ಮತ್ತು ಇಸ್ರೇಲ್ ನಡುವಿನ ಈ ಸಂಘರ್ಷವು ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದ್ದು, ರಾಜತಾಂತ್ರಿಕ ಪ್ರಯತ್ನಗಳು ಯಶಸ್ವಿಯಾಗುತ್ತವೆಯೋ ಅಥವಾ ಇನ್ನಷ್ಟು ಹಿಂಸಾಚಾರ ಉಂಟಾಗುತ್ತದೆಯೋ ಎಂಬುದು ಸ್ಪಷ್ಟವಾಗಿಲ್ಲ. ಗಲ್ಫ್ ಪ್ರದೇಶದ ಸ್ಥಿರತೆ, ಜಾಗತಿಕ ಇಂಧನ ಸರಬರಾಜು ಮತ್ತು ಮಾನವೀಯ ಪರಿಸ್ಥಿತಿಗಳು ಎಲ್ಲವೂ ಅಪಾಯದಲ್ಲಿವೆ. ಈ ಸಂದರ್ಭದಲ್ಲಿ, ಶಾಂತಿ ಒಪ್ಪಂದದ ಅಗತ್ಯತೆ ಇನ್ನಷ್ಟು ತುರ್ತಾಗಿದೆ.

ಹಾರ್ಮುಜ್ ತೆರೆಯದಿದ್ದರೆ ಇರಾನ್ ಧ್ವಂಸ! • ಪುಟ ೨

ಕುವೈತ್ ನೀರು ಸ್ಥಾವರ ಮೇಲಿನ ದಾಳಿಯಲ್ಲಿ ಭಾರತೀಯ ಸಾವು • ಪುಟ ೨

ಕಿರುಸುದ್ದಿ

ಹತ್ತು ವರ್ಷದಿಂದ ಸ್ವಂತ ಮಗಳನ್ನೇ ಗೃಹಬಂಧನದಲ್ಲಿ ಇಟ್ಟಿದ್ದ ಪೋಷಕರು!

• **ಬೆಳಗಾವಿ:** ಸ್ವಂತ ಮಗಳ ಕೈಗಳಿಗೆ ಹತ್ತು ವರ್ಷಗಳಿಂದ ಸರಪಳಿ ಹಾಕಿ ಗೃಹಬಂಧನದಲ್ಲಿಟ್ಟ ಅಮಾನವೀಯ ಘಟನೆ ಬೆಳಗಾವಿಯಲ್ಲಿ ಬೆಳಕಿಗೆ ಬಂದಿದ್ದು, ನಾಗರಿಕ ಸಮಾಜವೇ ತಲೆ ತಗ್ಗಿಸುವಂತೆ ಮಾಡಿದೆ. ಬೆಳಗಾವಿ ಜಿಲ್ಲೆಯ ಕಾಗವಾಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇದೀಗ ಬೆಳಕಿಗೆ ಬಂದಿದೆ. ಬಾನಾಮತಿ ಭಯದಿಂದ ಹೆತ್ತ ಮಗಳನ್ನೇ ತಂದೆ ಸಿದ್ರಾಯ ಗೃಹ ಬಂಧನದಲ್ಲಿಟ್ಟಿದ್ದಾರೆ. 10 ವರ್ಷಗಳ ಹಿಂದೆ ಮಗಳು ಸ್ನೇಹಾ ಎಲ್ಲರಂತೆ ಕಾಲೇಜಿಗೆ ಹೋಗುತ್ತಿದ್ದಳು. ಕಾಲೇಜಿಗೆ ಹೋಗುತ್ತಿದ್ದಾಗ ಸ್ನೇಹಾಗೆ ಯಾರೋ ಬಾನಾಮತಿ ಮಾಡಿಸಿದ್ದಾರೆ. ಅಂದಿನಿಂದ ಸ್ನೇಹಾ ವಿಚಿತ್ರವಾಗಿ ಡ್ಯಾನ್ಸ್ ಮಾಡೋದು, ಚಿತ್ರ ವಿಚಿತ್ರವಾಗಿ ವರ್ತಿಸಲಾರಂಭಿಸಿದ್ದಾಳೆ. ಇದರಿಂದಾಗಿ ಮಗಳು ಹುಚ್ಚಿಯಂತೆ ವರ್ತಿಸುತ್ತಿರುವುದರನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಆಕೆಯನ್ನು ಗೃಹ ಬಂಧನದಲ್ಲಿ ಇರಿಸಲಾಗಿದೆ ಎಂದು ಆಕೆಯ ತಂದೆ ತಿಳಿಸಿದ್ದಾರೆ.

➡ಪುಟ ೪

ಲಷ್ಕರ್ ಶಂಕಿತ ಉಗ್ರ ಸೆರೆ, ತಪ್ಪಿದ ದುರಂತ

• **ಹೊಸದಿಲ್ಲಿ:** ಲಷ್ಕರ್-ಎ-ತೊಯ್ಬಾ ಭಯೋತ್ಪಾದಕ ಗುಂಪಿನ ಬಾಂಗ್ಲಾದೇಶದ ಘಟಕವನ್ನು ಬೇಧಿಸಿರುವ ದಿಲ್ಲಿ ಪೊಲೀಸರು, ಎಲ್‌ಇಟಿ ಕಮಾಂಡರ್ ಶಬ್ಬೀರ್ ಅಹ್ಮದ್ ಲೋನ್‌ನನ್ನು ಬಂಧಿಸಿದ್ದಾರೆ. ಆತನನ್ನು ಐದು ದಿನ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

• ಪುಟ ೨

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ನುಗ್ಗಿದ ಕರಡಿ ಸೆರೆ

• ಪುಟ ೫

ನಾಳೆ ಸಿದ್ಧಗಂಗಾ ಮಠಕ್ಕೆ ರಾಷ್ಟ್ರಪತಿ ಮುರ್ಮು

• ಪುಟ ೫

ಸೇತುವೆಗೆ ಬಿದ್ದ ಬಸ್: 30 ಪ್ರಯಾಣಿಕರಿಗೆ ಗಾಯ

• ಪುಟ ೫

ಸ್ಟಾಲಿನ್, ವಿಜಯ್, ಸುವೇಂದು ಅಧಿಕಾರಿ ನಾಮಪತ್ರ ಸಲ್ಲಿಕೆ

• ಪುಟ ೨

ಬಾಗಲಕೋಟೆಯಲ್ಲಿ ಸಿದ್ದರಾಮಯ್ಯ ಭರವಸೆ

ಕೇಂದ್ರದ ಸಮ್ಮತಿ ಬಳಿಕ ಆಲಮಟ್ಟಿ ಎತ್ತರ ಹೆಚ್ಚಳ



• **ಬಾಗಲಕೋಟೆ:** ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸಿದರೆ ಮಾತ್ರ ಆಲಮಟ್ಟಿ ಜಲಾಶಯ ಎತ್ತರಿಸಲು ಸಾಧ್ಯವಿದೆ. ನೋಟಿಫಿಕೇಶನ್ ಆದ ತಕ್ಷಣವೇ ಆಲಮಟ್ಟಿ ಜಲಾಶಯ ಎತ್ತರಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಲಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಬಾಗಲಕೋಟೆ ಮತಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿ ಪರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಬಿಜೆಪಿ ಸರ್ಕಾರ 4 ವರ್ಷ ಆಡಳಿತ ನಡೆಸಿದರೂ ಯಾವುದೇ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಗೆ 3ನೇ ಹಂತದ ತೀರ್ಪು ಬಂದು 13 ವರ್ಷ ಕಳೆದರೂ ಯಡಿಯೂರಪ್ಪ,ಬೊಮ್ಮಾಯಿ ಸಿಎಂ ಇದ್ದಾಗ ಪ್ರಯತ್ನ ಮಾಡಲಿಲ್ಲ.

➡ಪುಟ ೪

ಗ್ಯಾರಂಟಿ ಮುಂದುವರಿಕೆಗೆ ಕಾಂಗ್ರೆಸ್ ಬೆಂಬಲಿಸಿ

• **ಬಾಗಲಕೋಟೆ:** ಪಂಚ ಗ್ಯಾರಂಟಿ ಯೋಜನೆಯಲ್ಲಿ ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದು ಮಹಿಳೆಯರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೆ ಇನ್ನೂ 2 ವರ್ಷ ಗ್ಯಾರಂಟಿ ಯೋಜನೆ ಮುಂದುವರಿಯಲಿವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

➡ಪುಟ ೪



ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಪಾದಯಾತ್ರೆ ಮೂಲಕ ಮತಯಾಚನೆ

ಬಿಜೆಪಿ ಬೆಂಬಲ ಕಂಡು ಕಾಂಗ್ರೆಸ್ ಅತಂತ್ರ: ಬಿವೈವಿ

• **ಬಾಗಲಕೋಟೆ:** ಸಿಎಂ ಅಲ್ಲದೆ ಯಾರೇ ಬಂದರೂ ಉಪಚುನಾವಣೆಯಲ್ಲಿ ಬಾಗಲಕೋಟೆ ಮತ್ತು ದಾವಣಗೆರೆ ಎರಡೂ ಕ್ಷೇತ್ರದಲ್ಲಿ ಬಿಜೆಪಿ ಬಹು ಅಂತರದಲ್ಲಿ ಗೆಲ್ಲಲಿದೆ. ಕಾಂಗ್ರೆಸ್ ಮತ ಬ್ಯಾಂಕ್ ಕುತಂತ್ರ ಅರ್ಥ ಮಾಡಿಕೊಂಡ ಮತದಾರರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. ನಗರದ ದೀಪಮ್ ಕಾಲೋನಿಯ ಸತ್ಯನಾರಾಯಣ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ವಾರ್ಡ್ ನಂ.1 ಮತ್ತು 3ರಲ್ಲಿ ವೀರಣ್ಣ ಚರಂತಿಮಠ ಅವರ ಪರವಾಗಿ ಮನೆ ಮನೆಗಳಿಗೆ ತೆರಳಿ ಮತಯಾಚನೆ ಮಾಡಿದರು.

➡ಪುಟ ೪



> **ಮತದಾರರು ಕಾಂಗ್ರೆಸ್ ದುರಾಡಳಿತಕ್ಕೆ ಸಂಪೂರ್ಣವಾಗಿ ಬೇಸತ್ತಿದ್ದು, ಇದನ್ನು ಅರ್ಥೈಸಿಕೊಂಡ ಮುಖ್ಯಮಂತ್ರಿಗಳು ಸೋಲುವ ಆತಂಕದಿಂದ ಹಳ್ಳಿಗಳಲ್ಲೂ ವಾಸ್ತವ್ಯ ಹೂಡಲು ಹೊರಟಿದ್ದಾರೆ.**
> ■ ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಎಲ್ಲವೂ ನಾಳೆಯಿಂದಲೇ...

ದೇಶದ ಮೊದಲ ಡಿಜಿಟಲ್ ಜನಗಣತಿ

• **ಹೊಸದಿಲ್ಲಿ:** ಜನಸಂಖ್ಯಾ ಮಾಹಿತಿ ಸಂಗ್ರಹ ಮತ್ತು ನಿರ್ವಹಣೆಯಲ್ಲಿ ಮಹತ್ವದ ಬದಲಾವಣೆಯಾಗಿ, ಭಾರತ ತನ್ನ ಮೊದಲ



ಸಂಪೂರ್ಣ ಡಿಜಿಟಲ್ ಜನಗಣತಿಯನ್ನು ಆರಂಭಿಸಲು ಸಜ್ಜಾಗಿದೆ. ಮೊದಲ ಹಂತವಾದ ಮನೆಗಳ ಪಟ್ಟಿ ಹಾಗೂ ವಸತಿ ಗಣತಿ ಏ.1ರಿಂದ ಎಂಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆರಂಭವಾಗಲಿದೆ. ನಾಗರಿಕರು ತಮ್ಮ ಮನೆ, ಜೀವನ ಪರಿಸ್ಥಿತಿ ಮತ್ತು ಮೂಲಭೂತ ಸೌಲಭ್ಯಗಳ ಕುರಿತು 33 ವಿವರವಾದ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

➡ಪುಟ ೪

ಸಹಜೀವನ ನಡೆಸುವವರೂ ವಿವಾಹಿತ ದಂಪತಿ ಎಂದೇ ಪರಿಗಣಿಸಲು ಸೂಚನೆ • ಪುಟ ೩

ತೆರಿಗೆ ಕ್ರಾಂತಿಯ ಹೊಸ ಶಕೆ



ಟೋಲ್ ದುಬಾರಿ



ಚೀನಾ ನಿರ್ಮಿತ ಸಿಸಿಟಿವಿ ಕಂಪನಿಗಳಿಗೆ ನಿಷೇಧ

• ಪುಟ ೪

ಖಾರ್ಗ್ ದ್ವೀಪ ಸೇರಿ ಪ್ರಮುಖ ಮೂಲಸೌಕರ್ಯಗಳ ಮೇಲೆ ದಾಳಿ ಎಚ್ಚರಿಕೆ | ಅಮೆರಿಕ ಜತೆ ಮಾತುಕತೆ ಇಲ್ಲ ಎಂದ ಇರಾನ್

ಹಾರ್ಮುಜ್ ತೆರೆಯದಿದ್ದರೆ ಇರಾನ್ ಧ್ವಂಸ!

ವಾಷಿಂಗ್ಟನ್/ದುಬೈ: ಒಪ್ಪಂದ ಸಾಧ್ಯವಾಗದಿದ್ದರೆ ಖಾರ್ಗ್ ದ್ವೀಪ ಸೇರಿದಂತೆ ಪ್ರಮುಖ ಮೂಲಸೌಕರ್ಯಗಳನ್ನು ಧ್ವಂಸ ಮಾಡುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಗಿದೆ. ಒಪ್ಪಂದ ಸಾಧ್ಯವಾಗದಿದ್ದರೆ ಖಾರ್ಗ್ ದ್ವೀಪ ಸೇರಿದಂತೆ ಪ್ರಮುಖ ತೈಲ



ಮತ್ತು ವಿದ್ಯುತ್ ಮೂಲಸೌಕರ್ಯಗಳನ್ನು ನಾಶಪಡಿಸುವುದಾಗಿ ಅವರು ಹೇಳಿದ್ದಾರೆ.

ಸೋಮವಾರ ತಮ್ಮ ಸಾಮಾಜಿಕ ಜಾಲತಾಣ ಟ್ರೂಥ್‌ನಲ್ಲಿ ಪ್ರಕಟಣೆ ನೀಡಿದ ಅವರು, ಇರಾನ್ ತಕ್ಷಣ ಹಾರ್ಮುಜ್ ಜಲಸಂಧಿಯನ್ನು ತೆರೆಯದಿದ್ದರೆ ಮತ್ತು ವಾಷಿಂಗ್ಟನ್ ಜತೆ ಒಪ್ಪಂದಕ್ಕೆ ಬರದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಟ್ರಂಪ್ ತಮ್ಮ ಹೇಳಿಕೆಯಲ್ಲಿ, ಈ ಕ್ರಮವು ಅಮೆರಿಕದ ಸೈನಿಕರು ಮತ್ತು ನಾಗರಿಕರ ಸಾವಿಗೆ ಪ್ರತೀಕಾರವಾಗಿ ಕೈಗೊಳ್ಳಲಾಗುವುದು. 47 ವರ್ಷದ ಆಡಳಿತದಲ್ಲಿ ನಮ್ಮ ಅನೇಕ ಸೈನಿಕರನ್ನು ಕೊಲ್ಲಲಾಗಿದೆ ಎಂದು ಆರೋಪಿಸಿದ್ದಾರೆ.

ನೇರ ಮಾತುಕತೆ ಇಲ್ಲ: ಇರಾನ್, ಅಮೆರಿಕದೊಂದಿಗೆ ನೇರ ಮಾತುಕತೆ ನಡೆದಿರುವುದನ್ನು ತಳ್ಳಿಹಾಕಿದೆ. ತಸ್ನೀಮ್ ಸುದ್ದಿ ಸಂಸ್ಥೆಯ ಪ್ರಕಾರ, ಅಮೆರಿಕ ನೀಡಿದ 15 ಅಂಶಗಳ ಯೋಜನೆಗೆ ಪಾಕಿಸ್ತಾನದ ಮೂಲಕ ಪ್ರತಿಕ್ರಿಯೆ ಕಳುಹಿಸಲಾಗಿದೆ. ನೇರ ಮಾತುಕತೆ ಇಲ್ಲ. ಮಧ್ಯವರ್ತಿಗಳ ಮೂಲಕ ಅವಾಸ್ತವಿಕ ಮತ್ತು ಅಸಮಂಜಸ ಬೇಡಿಕೆಗಳು ಮಾತ್ರ ಬರುತ್ತಿವೆ. ಪಾಕಿಸ್ತಾನದ ವೇದಿಕೆಗಳಲ್ಲಿ ನಾವು ಭಾಗವಹಿಸಿಲ್ಲ ಎಂದು ಸ್ಪಷ್ಟಪಡಿಸಿದೆ.

ದಾಳಿ-ಪ್ರತಿದಾಳಿಗಳ ಮುಂದುವರಿಕೆ: ಅಮೆರಿಕ ಮತ್ತು ಇಸ್ರೇಲ್ ಇರಾನ್ ವಿರುದ್ಧ ದಾಳಿಗಳನ್ನು ಮುಂದುವರಿಸುತ್ತಿರುವುದಾಗಿ ವರದಿಯಾಗಿದೆ. ಇದಕ್ಕೆ ಪ್ರತಿಯಾಗಿ ಇರಾನ್, ಕುವೈತ್‌ನ ಪ್ರಮುಖ ವಿದ್ಯುತ್ ಮತ್ತು ನೀರಿನ ಘಟಕದ ಮೇಲೆ ದಾಳಿ ನಡೆಸಿದೆ. ಜತೆಗೆ, ಉತ್ತರ ಇಸ್ರೇಲ್‌ನ ತೈಲ ಶೋಧನಾ ಘಟಕವನ್ನೂ ಗುರಿಯಾಗಿಸಿಕೊಂಡಿದೆ

ಸಮಾಧಾನದ ಸಂಕೇತ ಎಂದ ಟ್ರಂಪ್: ಟ್ರಂಪ್ ಹೇಳಿಕೆಯ ಪ್ರಕಾರ, ಇರಾನ್ 20 ತೈಲ ಟ್ಯಾಂಕರ್‌ಗಳಿಗೆ ಹಾರ್ಮುಜ್ ಜಲಸಂದಿ ಮೂಲಕ ಸಂಚಾರಕ್ಕೆ ಅನುಮತಿ ನೀಡಲು ಒಪ್ಪಿಕೊಂಡಿದೆ. ಇದು ತಾತ್ಕಾಲಿಕ ಸಮಾಧಾನದ ಸಂಕೇತವೆಂದು ಅವರು ಹೇಳಿದ್ದಾರೆ.

ಸೈನಿಕ ನಿಯೋಜನೆ ಹೆಚ್ಚಳ: ವಾಷಿಂಗ್ಟನ್ ಪೋಸ್ಟ್ ವರದಿ ಪ್ರಕಾರ, ಅಮೆರಿಕ ರಕ್ಷಣಾ ಇಲಾಖೆ ಇರಾನ್ ಮೇಲೆ ಭೂ ಆಕ್ರಮಣ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಸುಮಾರು 10,000 ಸೈನಿಕರನ್ನು ಕಳುಹಿಸಲು ಸಿದ್ಧತೆ ನಡೆಸುತ್ತಿದೆ. ಈಗಾಗಲೇ 3,500ಕ್ಕೂ ಹೆಚ್ಚು ಸೈನಿಕರು, ಅದರಲ್ಲೂ 2,200 ಮೆರೈನ್ ಪಡೆಗಳು ತಲುಪಿದ್ದು, ಇನ್ನಷ್ಟು ಪಡೆಗಳು 82ನೇ ಏರ್‌ಬೋರ್ನ್ ಡಿವಿಷನ್‌ನಿಂದ ಆಗಮಿಸುತ್ತಿವೆ

ಖಾರ್ಗ್ ದ್ವೀಪದ ಮಹತ್ವ: ಖಾರ್ಗ್ ದ್ವೀಪ ಇರಾನ್‌ನ ಪ್ರಮುಖ ತೈಲ ರಫ್ತು ಕೇಂದ್ರವಾಗಿದ್ದು, ದೇಶದ ಸುಮಾರು 90% ತೈಲವನ್ನು ನಿರ್ವಹಿಸುತ್ತದೆ. ಈ ದ್ವೀಪದ ಮೇಲಿನ ನಿಯಂತ್ರಣವು ಆರ್ಥಿಕ ಹಾಗೂ ತಾಂತ್ರಿಕವಾಗಿ ಅತ್ಯಂತ ಮಹತ್ವದ್ದಾಗಿದೆ.

ಫಿನಾನ್ಶಿಯಲ್ ಟೈಮ್ಸ್‌ಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್, ಇರಾನ್‌ನ ತೈಲವನ್ನು ಪಡೆಯುವುದು ನನ್ನ ಪ್ರಿಯ ಆಯ್ಕೆ. ನಾವು ಖಾರ್ಗ್ ದ್ವೀಪವನ್ನು ವಶಕ್ಕೆ ಪಡೆಯಬಹುದು ಅಥವಾ ಬೇಡವೆಂದು ತೀರ್ಮಾನಿಸಬಹುದು. ನಮ್ಮ ಬಳಿ ಹಲವಾರು ಆಯ್ಕೆಗಳಿವೆ ಎಂದು ಹೇಳಿದ್ದಾರೆ.

ಉದ್ವಿಗ್ನತೆ ತೀವ್ರ: ಈ ಬೆಳವಣಿಗೆಗಳ ನಡುವೆ ಮಧ್ಯಪ್ರಾಚ್ಯದಲ್ಲಿ ಸಂಘರ್ಷ ಮತ್ತಷ್ಟು ವಿಸ್ತಾರವಾಗುವ ಆತಂಕ ಹೆಚ್ಚಾಗಿದೆ. ರಾಜತಾಂತ್ರಿಕ ಪ್ರಯತ್ನಗಳು ಮುಂದುವರಿದಿದ್ದರೂ, ಸೈನಿಕ ಕ್ರಮಗಳು ತೀವ್ರಗೊಂಡಿರುವುದು ಜಾಗತಿಕ ಮಟ್ಟದಲ್ಲಿ ಚಿಂತೆಗೆ ಕಾರಣವಾಗಿದೆ.



ಕುವೈತ್ ನೀರು ಸ್ಥಾವರ ಮೇಲಿನ ದಾಳಿಯಲ್ಲಿ ಭಾರತೀಯ ಸಾವು

ದುಬೈ: ಕುವೈತ್‌ನ ನೀರು ಶುದ್ಧೀಕರಣ ಘಟಕದ ಮೇಲೆ ಇರಾನ್ ನಡೆಸಿದ ದಾಳಿಯಲ್ಲಿ ಭಾರತೀಯ ಮೂಲದ ವ್ಯಕ್ತಿಯೊಬ್ಬರು ಭಾನುವಾರ ಮೃತಪಟ್ಟಿದ್ದಾರೆ. ಇದರೊಂದಿಗೆ ಕಳೆದ ತಿಂಗಳು ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಆರಂಭವಾದ ನಂತರ ಮೃತಪಟ್ಟ ಭಾರತೀಯರ ಸಂಖ್ಯೆ ಎಂಟಕ್ಕೇರಿದೆ.ದಾಳಿಯ ವೇಳೆ ಸೇವಾ ಕಟ್ಟಡವೊಂದು ಹಾನಿಗೊಳಗಾಗಿದೆ ಎಂದು ಕುವೈತ್‌ನ ವಿದ್ಯುತ್, ನೀರು ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ ವರದಿ ಮಾಡಿದೆ. ಭಾರತೀಯ ಕಾರ್ಮಿಕರ ಸಾವನ್ನು ವಕ್ತಾರ ಫಾತಿಮಾ ಜವ್ಹರ್ ಹಯಾತ್ ಖಚಿತಪಡಿಸಿದ್ದಾರೆ. ಪರಿಸ್ಥಿತಿಯನ್ನು ನಿಯಂತ್ರಿಸಲು ತುರ್ತು ತಂಡಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾರತದ ರಾಯಭಾರಿ ಪರಮಿತ ತ್ರಿಪಾಠಿ, ಸೋಮವಾರ ಶವಾಗಾರಕ್ಕೆ ಭೇಟಿ ನೀಡಿ, ಮೃತದೇಹವನ್ನು ತಾಯ್ನಾಡಿಗೆ ಕಳುಹಿಸುವ ಪ್ರಕ್ರಿಯೆಯನ್ನು ಸುಗಮಗೊಳಿಸಿದರು. ಭಾರತೀಯ ರಾಯಭಾರ ಕಚೇರಿ ಕುವೈತ್ ಅಧಿಕಾರಿಗಳು ಮತ್ತು ಮೃತರ ಕುಟುಂಬದೊಂದಿಗೆ ಸಮನ್ವಯ ಸಾಧಿಸುತ್ತಿದೆ. ಸಂಘರ್ಷ ಆರಂಭವಾದ ನಂತರ ಯುಎಇ, ರಿಯಾದ್ ಮತ್ತು ಒಮಾನ್‌ನಲ್ಲಿ ಈ ಮೊದಲು ಭಾರತೀಯರ ಜೀವಹಾನಿಯಾಗಿತ್ತು.

ಇರಾನ್ ನೌಕಾಪಡೆಯ ಮುಖ್ಯಸ್ಥ ಸಾವು ದೃಢ

ದುಬೈ: ಇಸ್ರೇಲ್ ನಡೆಸಿದ ದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರೆವಲ್ಯೂಷನರಿ ಗಾರ್ಡ್ ನೌಕಾಪಡೆ ಮುಖ್ಯಸ್ಥ ರಿಯರ್ ಆಡ್ಮಿರಲ್ ಅಲಿರೇಜಾ ತಂಗ್ಸಿರಿ ಸೋಮವಾರ ಮೃತಪಟ್ಟಿದ್ದಾರೆ ಎಂದು ಇರಾನ್ ದೃಢಪಡಿಸಿದೆ.ತಂಗ್ಸಿರಿ ಅವರು



ತೀವ್ರ ಗಾಯಗಳಿಂದಾಗಿ ಮೃತಪಟ್ಟಿರುವುದಾಗಿ ಇರಾನ್ ಸರ್ಕಾರಿ ದೂರದರ್ಶನದಲ್ಲಿ ಓದಲಾದ ಹೇಳಿಕೆ ತಿಳಿಸಿದೆ. ಅವರನ್ನು ಹತ್ಯೆ ಮಾಡಿರುವುದಾಗಿ ಕಳೆದ ಗುರುವಾರ ಇಸ್ರೇಲ್ ಪ್ರತಿಪಾದಿಸಿತ್ತು. ಹಾರ್ಮುಜ್ ಜಲಸಂಧಿಯ ಮೇಲೆ ನಿಯಂತ್ರಣ ಸಾಧಿಸುವಲ್ಲಿ ಅವರ ಪಾತ್ರವನ್ನು ಗಾರ್ಡ್ ಸ್ಮರಿಸಿದ್ದು, ಅವರ ಕಾರ್ಯವನ್ನು ಇತರ ಹೋರಾಟಗಾರರು ಮುಂದುವರಿಸಲಿದ್ದಾರೆ ಎಂದು ಹೇಳಿದೆ. ಪ್ರತಿಯೊಬ್ಬ ಹೋರಾಟಗಾರನೂ ಒಬ್ಬ ತಂಗ್ಸಿರಿಯೇ, ಮುಂಬರುವ ದಿನಗಳಲ್ಲಿ ಮತ್ತು ತಿಂಗಳುಗಳಲ್ಲಿ ಅವರು ತರಲಿರುವ ಅಚ್ಚರಿಗಳನ್ನು ನಾವು ಕಾದು ನೋಡೋಣ ಎಂದು ಹೇಳಿಕೆ ತಿಳಿಸಿದೆ. ಮತ್ತೊಂದು ಬೆಳವಣಿಗೆಯಲ್ಲಿ ಟೆಹ್ರಾನ್‌ನ ವಾಯುವ್ಯಕ್ಕೆ 530 ಕಿಮೀ ದೂರದಲ್ಲಿರುವ ಪೆಟ್ರೋಕೆಮಿಕಲ್ ಸ್ಥಾವರದ ಮೇಲೆ ಸೋಮವಾರ ದಾಳಿ ನಡೆದಿದೆ ಎಂದು ಇರಾನ್ ಸರ್ಕಾರಿ ಮಾಧ್ಯಮ ವರದಿ ಮಾಡಿದೆ. ಅಗ್ನಿಶಾಮಕ ದಳದವರು ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ನಂದಿಸಿದ್ದಾರೆ.

ಹೂಡಿಕೆದಾರರಿಗೆ 10 ಲಕ್ಷ ಕೋಟಿ ರೂ. ನಷ್ಟ

ಬಾಂಬೆ ಷೇರು ಮಾರುಕಟ್ಟೆಯ(ಬಿಎಸ್‌ಇ) ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರು ಮಾರುಕಟ್ಟೆ ಯ(ಎನ್‌ಎಸ್ ಇ) ನಿಫ್ಟಿ ಹಾಗೂ ಬ್ಯಾಂಕ್ ನಿಫ್ಟಿ ಸೂಚ್ಯಂಕಗಳಲ್ಲಿ ಭಾರೀ ಇಳಿಕೆ ಕಂಡುಬಂದಿದ್ದು, ಒಂದೇ ದಿನದಲ್ಲಿ ಹೂಡಿಕೆದಾರರು ಸುಮಾರು 10 ಲಕ್ಷ ಕೋಟಿ ಸಂಪತ್ತನ್ನು ಕಳೆದುಕೊಂಡಿದ್ದಾರೆ. ಸೆನ್ಸೆಕ್ಸ್ 1,635 ಅಂಕ (-2.22%) ಕುಸಿದು 82,497.1ರಲ್ಲಿ ಮುಕ್ತಾಯವಾದರೆ, ನಿಫ್ಟಿ 488 ಅಂಕ (-2.1%) ಇಳಿದು 22,331.40ರಲ್ಲಿ ಕೊನೆಗೊಂಡಿತು. ಬ್ಯಾಂಕ್ ನಿಫ್ಟಿ 1,999.25 ಅಂಕ (-3.82%) ಕುಸಿದು 50,275.35ರಲ್ಲಿ ವ್ಯವಹಾರ ಮುಗಿಸಿದೆ ಅಮೆರಿಕದಿಂದ ಸಂಭವನೀಯ ಸೈನಿಕ ಕ್ರಮಗಳ ಬಗ್ಗೆ ಆತಂಕ, ನಿಫ್ಟಿ ಹಾಗೂ ಬ್ಯಾಂಕ್ ನಿಫ್ಟಿಯ ಫ್ಯೂಚರ್ ಕಾಂಟ್ರಾಕ್ಟ್‌ಗಳು ಮಂಗಳವಾರ ಎಕ್ಸ್‌ಪೈರ್ ಆಗಲಿರುವುದರಿಂದ ಹೂಡಿಕೆದಾರರು ಮುಂಚಿತವಾಗಿ ಮಾರಾಟಕ್ಕೆ ಮುಂದಾದದ್ದು ಸೇರಿ ಹಲವು ಕಾರಣಗಳಿಂದ ಷೇರು ಮಾರುಕಟ್ಟೆ ಕುಸಿದಿದೆ ಎಂದು ವಿಶ್ಲೇಷಿಸಲಾಗಿದೆ.

ಪಾಕ್‌ನ ಸಂಧಾನ ಪ್ರಯತ್ನ ಹೇಳಿಕೆ ತಿರಸ್ಕರಿಸಿದ ಇರಾನ್

ಹೊಸದಿಲ್ಲಿ: ಅಮೆರಿಕ ಮತ್ತು ಇರಾನ್ ನಡುವೆ ನೇರ ಮಾತುಕತೆಗೆ ವೇದಿಕೆ ಒದಗಿಸುವ ಪಾಕಿಸ್ತಾನದ ಸಂಧಾನದ ಪ್ರಯತ್ನದಲ್ಲಿ ತಾನು ಭಾಗಿಯಾಗಿಲ್ಲ ಎಂದು ಇರಾನ್ ಅಧಿಕೃತವಾಗಿ ಸ್ಪಷ್ಟಪಡಿಸಿದೆ.

ಅಮೆರಿಕದೊಂದಿಗೆ ಯಾವುದೇ ನೇರ ಮಾತುಕತೆ ನಡೆದಿಲ್ಲ ಎಂದು ಮುಂಬೈನಲ್ಲಿರುವ ಇರಾನ್ ಕಾನ್ಸುಲೇಟ್ ಜನರಲ್ ಸೋಮವಾರ ತಿಳಿಸಿದ್ದಾರೆ. ಮಧ್ಯವರ್ತಿಗಳ ಮೂಲಕ ಬಂದ ಅಮೆರಿಕದ ರಾಜತಾಂತ್ರಿಕ ಸಂದೇಶಗಳು ಅವಿವೇಕದ ಬೇಡಿಕೆಗಳು. ಇತ್ತೀಚೆಗೆ ಪಾಕಿಸ್ತಾನದಲ್ಲಿ ನಡೆದ ಸಭೆಗಳು ಆ ದೇಶದ ಸ್ವತಂತ್ರ ನಿರ್ಧಾರಗಳಾಗಿದ್ದು, ಅದರಲ್ಲಿ ಇರಾನ್ ಪ್ರಾತಿನಿಧ್ಯವಾಗಲಿ ಅಥವಾ ಭಾಗ ವಹಿಸುವಿಕೆ ಯಾಗಲಿ ಇರಲಿಲ್ಲ ಎಂದು ಕಾನ್ಸುಲೇಟ್ ಸ್ಪಷ್ಟಪಡಿಸಿದೆ.

ಪಾಕಿಸ್ತಾನದ ಪ್ರತಿಪಾದನೆ: ಇಸ್ಲಾಮಾಬಾದ್‌ನಲ್ಲಿ ಅಮೆರಿಕ-ಇರಾನ್ ಮಾತುಕತೆ ನಡೆಸುವುದಕ್ಕೆ ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿ ದೇಶಗಳು ಬೆಂಬಲ ಸೂಚಿಸಿವೆ ಎಂದು ಪಾಕಿಸ್ತಾನದ ವಿದೇಶಾಂಗ ಸಚಿವ ಇಶಾಕ್ ದಾರ್ ಈ ಹಿಂದೆ ಘೋಷಿಸಿದ್ದರು. ಪ್ರಧಾನಿ ಶೆಹಬಾಜ್ ಷರೀಫ್, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಮತ್ತು ವಿದೇಶಾಂಗ ಸಚಿವ ಅಬ್ಬಾಸ್ ಅರಾಗ್ಚಿ ಅವರೊಂದಿಗೆ ದೂರವಾಣಿ ಮೂಲಕ ಚರ್ಚಿಸಿದ್ದಾರೆ ಎಂದು ದಾರ್ ಪ್ರತಿಪಾದಿಸಿದ್ದರು. ಆದರೆ, ಭಾನುವಾರ ನಡೆದ ಈ ಮಾತುಕತೆಗಳಲ್ಲಿ ಇರಾನ್, ಇಸ್ರೇಲ್ ಅಥವಾ ಅಮೆರಿಕದ ಯಾವುದೇ ಪ್ರತಿನಿಧಿಗಳು ಇರಲಿಲ್ಲ.

ಟೆಹ್ರಾನ್ ಆಡಳಿತ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 15 ಅಂಶಗಳ ಯೋಜನೆಗೆ ಇಸ್ಲಾಮಾಬಾದ್ ಮೂಲಕ ಪ್ರತಿಕ್ರಿಯೆ ನೀಡಿದೆ ಎಂದು ವರದಿಯಾಗಿದ್ದರೂ, ಸೇನಾ ಕಾರ್ಯಾಚರಣೆಗಳು ಮುಂದುವರಿದಿವೆ. ಇರಾನ್, ಕುವೈತ್ ಮತ್ತು ಇಸ್ರೇಲ್‌ನ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡಿದೆ. ಇತ್ತ ಅಮೆರಿಕ, ಈ ಪ್ರದೇಶಕ್ಕೆ 2,500 ನೌಕಾಪಡೆಗಳನ್ನು ನಿಯೋಜಿಸಿದೆ.

ಇರಾನ್ ಮೇಲೆ ಇಸ್ರೇಲ್ ಪ್ರತಿದಾಳಿ

ಇಸ್ರೇಲ್ ಇರಾನ್ ರಾಜಧಾನಿ ಟೆಹ್ರಾನ್ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ 'ಸೈನಿಕ ಮೂಲಸೌಕರ್ಯ' ಗುರಿಯಾಗಿಸಿಕೊಂಡು ದಾಳಿ ನಡೆಸಿದೆ. ಟೆಹ್ರಾನ್‌ನಲ್ಲಿ ಸ್ಫೋಟಗಳ ಶಬ್ದ ಕೇಳಿಬಂದಿದ್ದು, ತಬ್ರೀಜ್‌ನ ಪೆಟ್ರೋಕೆಮಿಕಲ್ ಘಟಕ ಹಾನಿಗೊಳಗಾಗಿದೆ.



ಲೆಬನಾನ್‌ನಲ್ಲಿ ಹಿಂಸಾಚಾರ

ಲೆಬನಾನ್‌ನಲ್ಲಿ, ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವೆ ನಡೆಯುತ್ತಿರುವ ಸಂಘರ್ಷದಲ್ಲಿ ಒಬ್ಬ ಇಂಡೋನೇಷ್ಯಾ ಮೂಲದ ಯುಎನ್ ಶಾಂತಿಸೈನಿಕ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ. ಬೇರೂತ್ ನಗರದ ಉಪನಗರದಲ್ಲಿ ನಡೆದ ಇಸ್ರೇಲ್ ದಾಳಿಯಲ್ಲಿ ಒಬ್ಬರು ಮೃತಪಟ್ಟಿದ್ದು, 17 ಮಂದಿ ಗಾಯಗೊಂಡಿದ್ದಾರೆ. ಇವರಲ್ಲಿ ನಾಲ್ವರು ಮಕ್ಕಳು ಸೇರಿದ್ದಾರೆ.

ಸಾವಿನ ಸಂಖ್ಯೆ ಏರಿಕೆ

ಮಧ್ಯಪ್ರಾಚ್ಯ ಯುದ್ಧದಲ್ಲಿ ಮಾನವ ಹಾನಿ ಹೆಚ್ಚುತ್ತಿದ್ದು, ಇರಾನ್‌ನಲ್ಲಿ 1,900 ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ. ಇಸ್ರೇಲ್‌ನಲ್ಲಿ 19, ಗಲ್ಫ್ ದೇಶಗಳು ಮತ್ತು ಪಶ್ಚಿಮ ತೀರದಲ್ಲಿ ಸುಮಾರು 24 ಮಂದಿ ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿನಲ್ಲಿ 1,200 ಕ್ಕೂ ಹೆಚ್ಚು ಸಾವು ಮತ್ತು 10 ಲಕ್ಷಕ್ಕೂ ಹೆಚ್ಚು ಜನ ಸ್ಥಳಾಂತರಗೊಂಡಿದ್ದಾರೆ. ಅಮೆರಿಕ ತನ್ನ 13 ಸೈನಿಕರನ್ನು ಕಳೆದುಕೊಂಡಿದ್ದರೆ, ಇಸ್ರೇಲ್ 6 ಸೈನಿಕರನ್ನು ಕಳೆದುಕೊಂಡಿದೆ.

ಟರ್ಕಿಗೂ ಕ್ಷಿಪಣಿ ಭೀತಿ

ಟರ್ಕಿಯ ವಾಯುಪ್ರದೇಶದಲ್ಲಿ ಇರಾನ್‌ನಿಂದ ಹಾರಿಸಲಾದ ಕ್ಷಿಪಣಿಯನ್ನು ನ್ಯಾಟೋ ರಕ್ಷಣಾ ವ್ಯವಸ್ಥೆ ತಡೆದಿದೆ. ಯುದ್ಧ ಆರಂಭವಾದ ನಂತರ ಇದು ನಾಲ್ಕನೇ ಘಟನೆ. ಆದರೆ, ಇರಾನ್ ಈ ಆರೋಪಗಳನ್ನು ನಿರಾಕರಿಸಿದೆ. ಟರ್ಕಿ ಮಧ್ಯಸ್ಥಿಕೆಯಲ್ಲಿ ಭಾಗವಹಿಸುತ್ತಿದ್ದು, ತಟಸ್ಥ ನಿಲುವು ಕಾಯ್ದುಕೊಳ್ಳಲು ಪ್ರಯತ್ನಿಸುತ್ತಿದೆ.

ಜಾಗತಿಕ ಇಂಧನ ಸಂಕಷ್ಟದ ಭೀತಿ

ಈ ಸಂಘರ್ಷವು ಜಾಗತಿಕ ಇಂಧನ ಮಾರುಕಟ್ಟೆ ಮೇಲೆ ಗಂಭೀರ ಪರಿಣಾಮ ಬೀರಿದೆ. ಇರಾನ್ ಹಾರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸಿರುವುದರಿಂದ ತೈಲ ಮತ್ತು ಅನಿಲ ಸರಬರಾಜು ಅಸ್ತವ್ಯಸ್ತಗೊಂಡಿದೆ. ಬ್ರೆಂಟ್ ಕ್ರೂಡ್ ತೈಲದ ಬೆಲೆ ಬ್ಯಾರೆಲ್‌ಗೆ 115 ಡಾಲರ್ ತಲುಪಿದ್ದು, ಯುದ್ಧ ಆರಂಭವಾದಾಗಿಗಿಂತ ಸುಮಾರು 60% ಹೆಚ್ಚಾಗಿದೆ. ಟ್ರಂಪ್ ಹೇಳುವಂತೆ, ಇರಾನ್ 20 ತೈಲ ಟ್ಯಾಂಕರ್‌ಗಳನ್ನು ಹಾರ್ಮುಜ್ ಮೂಲಕ ಸಾಗಲು ಅನುಮತಿಸಿದೆ ಎಂದು ಹೇಳಿದರೂ, ಅದನ್ನು ದೃಢಪಡಿಸುವ ಮಾಹಿತಿ ಲಭ್ಯವಿಲ್ಲ.

ಕಿರುಸುದ್ದಿ

ನೌಕಾಪಡೆಗೆ ಮೂರು ಯುದ್ಧ ನೌಕೆ ಸೇರ್ಪಡೆ

ಹೊಸದಿಲ್ಲಿ: ಸ್ಥಳೀಯ ರಕ್ಷಣಾ ಉತ್ಪಾದನೆ ಮತ್ತು ಸ್ವಾವಲಂಬನೆಯ ಮಹತ್ವದ ಮೈಲಿಗಲ್ಲೊಂದರಲ್ಲಿ, ಭಾರತೀಯ ನೌಕಾಪಡೆಗೆ ಮೂರು ಯುದ್ಧನೌಕೆಗಳಾದ ದುನಾಗಿರಿ, ಸಂಶೋಧಕ್ ಮತ್ತು ಅಗ್ರೇಗಳನ್ನು ಕೋಲ್ಕತ್ತಾ ಪ್ರಧಾನ ಕಚೇರಿಯ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಎಂಜಿನಿಯರ್ಸ್ ಲಿಮಿಟೆಡ್ (ಜಿಆರ್ ಎಸ್‌ಇ) ಸೋಮವಾರ ತಲುಪಿಸಿದೆ. ಈ ಮೂಲಕ ಭಾರತೀಯ ನೌಕಾಪಡೆಗೆ ತಲುಪಿಸಲಾದ 80 ಯುದ್ಧನೌಕೆಗಳು ಸೇರಿದಂತೆ 118 ಯುದ್ಧನೌಕೆಗಳನ್ನು ನಿರ್ಮಿಸುವ ಮೈಲಿಗಲ್ಲನ್ನು ಜಿಆರ್‌ಎಸ್‌ಇ ತಲುಪಿದೆ.

64,920 ಕೋಟಿ ರೂ. ಅಕ್ರಮ ಆದಾಯ ಜಪ್ತಿ

ಹೊಸದಿಲ್ಲಿ: ಪಿಎಂಎಲ್‌ಎ ಅನ್ವಯದಲ್ಲಿ ಜಾರಿ ನಿರ್ದೇಶನಾಲಯ 1,105 ಬ್ಯಾಂಕ್ ವಂಚನೆ ಪ್ರಕರಣಗಳನ್ನು ತನಿಖೆ ಮಾಡಿದೆ. ಅಂತೆಯೇ 64,920 ಕೋಟಿ ಮೌಲ್ಯದ ಅಕ್ರಮ ಆದಾಯವನ್ನು ಮುಟ್ಟುಗೋಲು ಹಾಕಿಕೊಂಡಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ತಿಳಿಸಿದ್ದಾರೆ.

ನಕ್ಸಲ್ ಹಾವಳಿ ನಿಗ್ರಹದಲ್ಲಿ ಯುಪಿಎ ಸರ್ಕಾರ ವಿಫಲ

ಹೊಸದಿಲ್ಲಿ: ನಕ್ಸಲ್ ಹಾವಳಿಯನ್ನು ಮಟ್ಟ ಹಾಕುವಲ್ಲಿ ಹಿಂದಿನ ಯುಪಿಎ ಸರ್ಕಾರ ಸಂಪೂರ್ಣ ವಿಫಲವಾಗಿತ್ತು ಎಂದು ಬಿಜೆಪಿ ಮತ್ತು ಎನ್‌ಡಿಎ ಸದಸ್ಯರು ಸೋಮವಾರ ಲೋಕಸಭೆಯಲ್ಲಿ ವಿಪಕ್ಷ ಕೂಟವನ್ನು ಕಟುವಾಗಿ ತರಾಟೆಗೆತ್ತಿಕೊಂಡರು. ಪ್ರತಿಯಾಗಿ, ನಾವು ನಕ್ಸಲ್ ಸಮಸ್ಯೆ ಮೊಟಕು ಹಾಕಲು ಸಾಕಷ್ಟು ಪ್ರಯತ್ನಗಳನ್ನು ನಡೆಸಿದ್ದೆವು, ನಮ್ಮ ಹಲವು ಹಿರಿಯ ನಾಯಕರು ನಕ್ಸಲೀಯರಿಗೆ ಬಲಿಯಾಗಿದ್ದಾರೆ ಎಂದು ಕಾಂಗ್ರೆಸ್ ಹೇಳಿಕೊಂಡಿದೆ.

ನಕ್ಸಲ್ ಪಿಡುಗಿನಿಂದ ದೇಶವನ್ನು ಮುಕ್ತಗೊಳಿಸುವ ಪ್ರಯತ್ನಗಳು ಕುರಿತು ಲೋಕಸಭೆಯಲ್ಲಿ ಚರ್ಚೆ ಶುರುಮಾಡಿದ ಶಿವಸೇನೆಯ ಶ್ರೀಕಾಂತ್ ಶಿಂಧೆ, ಬಿಜೆಪಿ ಆಳ್ವಿಕೆಯಲ್ಲಿ ಕೆಂಪು ಕಾರಿಡಾರ್ ಬಹುತೇಕ ನಶಿಸಿದೆ ಮತ್ತು ಇದರ ಜಾಗದಲ್ಲಿ ಗ್ರೋತ್ ಕಾರಿಡಾರ್ ಕಂಗೊಳಿಸತೊಡಗಿದೆ ಎಂದರು.

ಬಿಜೆಪಿ ಆಳ್ವಿಕೆಯಲ್ಲಿ ಕಳೆದ ವರ್ಷ 317 ನಕ್ಸಲರ ವಧೆಯಾಗಿದೆ. 862 ಮಂದಿಯನ್ನು ಸೆರೆಹಿಡಿಯಲಾಗಿದೆ ಮತ್ತು 1900 ನಕ್ಸಲರು ಶರಣಾಗಿದ್ದಾರೆ. 2024-25ರಲ್ಲಿ ನಕ್ಸಲರ ಕೇಂದ್ರೀಯ ಸಮಿತಿ ಆರು ಸದಸ್ಯರ ಸಹಿತ 28 ನಕ್ಸಲ್ ನಾಯಕರು ಹತರಾಗಿದ್ದಾರೆ. 2026ರಲ್ಲಿ ಇದುವರೆಗೆ 630 ನಕ್ಸಲರು ಶಸ್ತ್ರ -ಹಿಂಸೆ ತೊರೆದು ಪ್ರಧಾನ ಹೆದ್ದರೆಗೆ ಸೇರ್ಪಡೆಯಾಗಿದ್ದಾರೆ.

ಮೋದಿ, ಶಾಗೆ ಕೃತಜ್ಞತೆ: ಕಾಂಗ್ರೆಸ್ ಆಳ್ವಿಕೆಯಲ್ಲಿ ನಕ್ಸಲ್ ಹಾವಳಿ ಅತಿ ತಾರಕಕ್ಕೇರಿತ್ತು. ಆದರೆ, ನಕ್ಸಲರ ಹಾವಳಿ ಇದೀಗ ಸಂಪೂರ್ಣ ಉಡುಗಿದೆ. ಇದಕ್ಕೆ ಪೂರಕ ನೀತಿ ಅನುಷ್ಠಾನಿಸಿದ ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೆ ಕೃತಜ್ಞತೆಗಳು ಎಂದು ಟಿಡಿಪಿ ಸಂಸದೆ ಬೈರೆಡ್ಡಿ ಶಬರಿ ಸದನದಲ್ಲಿ ಹೇಳಿದರು.

ಬಂಗಾಳ ಮತದಾರರಿಗೆ ಟಿಎಂಸಿ ಬೆದರಿಕೆ; ದೂರು

ಹೊಸದಿಲ್ಲಿ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕದಂತೆ ಪ.ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಟಿಎಂಸಿ ನಾಯಕರು ಮತದಾರರನ್ನು ಬೆದರಿಸುತ್ತಿದ್ದಾರೆ ಎಂದು ಬಿಜೆಪಿ ಸೋಮವಾರ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಪ್ರಚಾರ ಅಭಿಯಾನಗಳಲ್ಲಿ ಮಮತಾ ಬ್ಯಾನರ್ಜಿ ಪಾಲ್ಗೊಳ್ಳುವಿಕೆಯನ್ನು ನಿಷೇಧಿಸಬೇಕು ಮತ್ತು ಟಿಎಂಸಿ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶ ಹೊರಡಿಸಬೇಕೆಂದು ಬಿಜೆಪಿ ನಿಯೋಗ ಕೋರಿದೆ.



ಆಳುವ ಟಿಎಂಸಿ ಜತೆ ಕೈಜೋಡಿಸಿರುವ ಪ.ಬಂಗಾಳ ಪೊಲೀಸರು ದುರ್ಬಲರಿದ್ದಾರೆ. ಹಾಗಾಗಿ ಸೂಕ್ಷ್ಮಸಂವೇದಿ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರೀಯ ಪಡೆಗಳ ನಿಯೋಜಿಸುವಂತೆಯೂ ನಿಯೋಗ ಆಯೋಗವನ್ನು ಒತ್ತಾಯಿಸಿದೆ. ಕೇಂದ್ರ ಸಚಿವರುಗಳಾದ ಕಿರಣ್ ರಿಜಿಜು, ಪಿಯುಷ್ ಗೋಯಲ್, ಸುಕಂತ ಮಜುಂದಾರ್, ಪಕ್ಷದ ಪ್ರಮುಖ ವಕ್ತಾರ ಅನಿಲ್ ಬಲೂನಿ, ರಾಜ್ಯಸಭಾ ಸಂಸದ ಅರುಣ್ ಸಿಂಗ್ ಮತ್ತಿತರ ನಾಯಕರು ನಿಯೋಗದಲ್ಲಿದ್ದರು. ನಿಯೋಗ ಇಲ್ಲಿನ ಚುನಾವಣಾ ಆಯೋಗದ ಕಚೇರಿಯಲ್ಲೇ ಅಧಿಕಾರಿಗಳನ್ನು ಭೇಟಿ ಮಾಡಿತು.

ಅಧಿಕ ಸಂಖ್ಯೆಯಲ್ಲಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳನ್ನು ಇಸಿಐ ವೀಕ್ಷಕರಾಗಿ ನಿಯೋಜಿಸುವಂತೆಯೂ ನಿಯೋಗ ತನ್ನ ಲಿಖಿತ ದೂರಿನಲ್ಲಿ ಮನವಿ ಮಾಡಿದೆ.

ಅಕ್ರಮ ನುಸುಳುಕೋರರ ಪ್ರವೇಶಕ್ಕೆ ಕಾಂಗ್ರೆಸ್ ದಾರಿ!

ಜಾಗೀರೋಡ್: ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಬಾಂಗ್ಲಾದೇಶಿಯರನ್ನು ಅಸ್ಸಾಂಗೆ ಅಕ್ರಮವಾಗಿ ಪ್ರವೇಶಿಸಲು ಅನುಕೂಲ ಮಾಡಿಕೊಟ್ಟಿದೆ ಎಂದು ಬಿಜೆಪಿ ಅಧ್ಯಕ್ಷ ನಿತಿನ್ ನವೀನ್ ಸೋಮವಾರ ಆರೋಪಿಸಿದ್ದಾರೆ.

ರಾಜ್ಯದಲ್ಲಿ ಸರ್ಕಾರ ರಚಿಸಿದ ನಂತರ ಅವರ ಪ್ರವೇಶವನ್ನು ಸ್ಥಗಿತಗೊಳಿಸಿದ್ದು ಬಿಜೆಪಿಯೇ ಎಂದು ಹೇಳಿದ್ದಾರೆ. ಮೊರಿಗಾಂವ್ ಜಿಲ್ಲೆಯ ಜಶಗೀರೋಡ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಮಾತನಾಡಿದ ನವೀನ್, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದಿಲ್ಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ತಮಗೆ ನೀಡಲಾಗಿದ್ದ ಸಾಂಪ್ರದಾಯಿಕ ಅಸ್ಸಾಮಿ ಸ್ಕಾರ್ಫ್ ಗಮೋಚಾ ಧರಿಸಿರಲಿಲ್ಲ. ಇದು ರಾಜ್ಯದ ಜನರ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ನವೀನ್ ಆರೋಪಿಸಿದ್ದಾರೆ.ಅಸ್ಸಾಂನಲ್ಲಿ ನುಸುಳುಕೋರರನ್ನು ಕಾಂಗ್ರೆಸ್ ಬೆಂಬಲಿಸುತ್ತಿದೆ ಎಂದು ನಬಿನ್ ಆರೋಪಿಸಿದರು. ಅವರು ಬಾಂಗ್ಲಾದೇಶದ ನುಸುಳುಕೋರರಿಗೆ ಸಿಲಿಗುರಿ ಕಾರಿಡಾರ್ ಮೂಲಕ ದೇಶವನ್ನು ಪ್ರವೇಶಿಸಲು ಅವಕಾಶ ಮಾಡಿಕೊಟ್ಟರು. ರಾಜ್ಯದ ಬಿಜೆಪಿ ಸರ್ಕಾರವು ಈ ಪ್ರವೃತ್ತಿಯನ್ನು ಬದಲಾಯಿಸುತ್ತಿದೆ. ಅಕ್ರಮ ವಲಸಿಗರಿಗೆ ನಿರ್ಗಮನದ ಮಾರ್ಗವನ್ನು ತೋರಿಸುತ್ತಿದೆ ಎಂದು ನವೀನ್ ಹೇಳಿದರು. ಇದನ್ನು ಭದ್ರತೆ ಮತ್ತು ಕಾರ್ಯತಂತ್ರದ ದೃಷ್ಟಿಕೋನಗಳೆರಡರಿಂದಲೂ ನಿರ್ಣಾಯಕ ಮತ್ತು ಸೂಕ್ಷ್ಮ ಜೀವಸೆಲೆ ಎಂದು ಪರಿಗಣಿಸಲಾಗಿದೆ.

ಬಿಜೆಪಿ ಆಡಳಿತದ 10 ವರ್ಷಗಳ ಅವಧಿಯಲ್ಲಿ ಅಸ್ಸಾಂ ಬೃಹತ್ ಅಭಿವೃದ್ಧಿಯನ್ನು ಕಂಡಿದೆ. ಜನರು ಅದರ ಹಿಂದಿನ ಪರಿಸ್ಥಿತಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಸ್ಟಾಲಿನ್, ವಿಜಯ್, ಸುವೇಂದು ಅಧಿಕಾರಿ ನಾಮಪತ್ರ ಸಲ್ಲಿಕೆ

ಚೆನ್ನೈ: ತಮಿಳುನಾಡಿನ ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಅವರು ಏ.13ರ ಚುನಾವಣೆಗೆ ಚೆನ್ನೈನ ಕೋಲತ್ತೂರು ವಿಧಾನಸಭಾ ಕ್ಷೇತ್ರದಿಂದ ಹಾಗೂ ಟಿವಿಕೆ ಮುಖ್ಯಸ್ಥ, ನಟ ವಿಜಯ್ ಪೆರಂಬೂರು ಕ್ಷೇತ್ರದಿಂದ ವಿಧಾನಸಭಾ ಚುನಾವಣೆಯಲ್ಲಿ ಸೋಮವಾರ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದಾರೆ. ಅದೇ ರೀತಿ ಬಿಜೆಪಿ ನಾಯಕ ಸುವೇಂದು ಅಧಿಕಾರಿ ಸೋಮವಾರ ಪಶ್ಚಿಮ ಬಂಗಾಳದ ನಂದಿಗ್ರಾಮ ಕ್ಷೇತ್ರಕ್ಕೆ ನಾಮಪತ್ರ ಸಲ್ಲಿಸಿದರು.

ತಮ್ಮ ನಾಮಪತ್ರ ಸಲ್ಲಿಸಿದ ನಂತರ, ಕೋಲತ್ತೂರು ಕ್ಷೇತ್ರದಲ್ಲಿ ಜನರು ಸತತವಾಗಿ 4ನೇ ಬಾರಿಗೆ ತಮಗೆ ಅದ್ಭುತ ವಿಜಯವನ್ನು ನೀಡಲಿದ್ದಾರೆ ಎಂಬ ಸಂಪೂರ್ಣ ವಿಶ್ವಾಸವನ್ನು ಸ್ಟಾಲಿನ್ ವ್ಯಕ್ತಪಡಿಸಿದ್ದಾರೆ.

ಟಿವಿಕೆ ಮುಖ್ಯಸ್ಥ ವಿಜಯ್ , ಡಿಎಂಕೆ ಒಂದು ದುಷ್ಟ ಶಕ್ತಿ ಎಂಬ ತಮ್ಮ ಆರೋಪವನ್ನು ಪುನರುಚ್ಚರಿಸಿದ್ದಾರೆ.

ಒಳ ನುಸುಳುವಿಕೆ ಕೇವಲ ಚುನಾವಣಾ ವಿಚಾರವಲ್ಲ: ಪ್ರಧಾನಿ ಮೋದಿ

ಅದು ರಾಷ್ಟ್ರೀಯ ಭದ್ರತೆ ರಕ್ಷಿಸುವ ವಿಷಯ

ಹೊಸದಿಲ್ಲಿ: ಅಕ್ರಮ ನುಸುಳುಕೋರರು ಅಸ್ಸಾಂ ಮೂಲವಾಸಿಗಳ ಭೂಮಿಯನ್ನು ಅಕ್ರಮವಾಗಿ ವಶಪಡಿಸಲು ಕಾಂಗ್ರೆಸ್ ಅವಕಾಶ ನೀಡಿತ್ತು ಎಂದು ಆರೋಪಿಸಿರುವ ಪ್ರಧಾನಿ ನರೇಂದ್ರ ಮೋದಿ, ಅಸ್ಸಾಂನಲ್ಲಿನ ಅಕ್ರಮ ನುಸುಳುವಿಕೆ ಪಿಡುಗು ಚುನಾವಣೆಗೆ ಸೀಮಿತ ವಿಚಾರವಲ್ಲ, ಬದಲಾಗಿ ರಾಜ್ಯದ ಅಸ್ಮಿತೆ ಮತ್ತು ರಾಷ್ಟ್ರೀಯ ಭದ್ರತೆಯನ್ನು ರಕ್ಷಿಸುವುದಕ್ಕೆ ಸಂಬಂಧಿಸಿದ್ದಾಗಿದೆ ಎಂದು ಹೇಳಿದ್ದಾರೆ.

ಸುದೀರ್ಘ ಕಾಲದಿಂದ ಅಸ್ಥಿರತೆಯಲ್ಲಿ ತೊಳಲಾಡಿದ್ದ ಅಸ್ಸಾಂನಲ್ಲಿ ಶಾಂತಿ ಸ್ಥಾಪನೆಗಾಗಿ ಬಿಜೆಪಿ ನೇತೃತ್ವದ ಡಬಲ್ ಇಂಜಿನ್ ಸರ್ಕಾರ ತುಂಬು ಪರಿಶ್ರಮಿಸಿದ ಪರಿಣಾಮ, ಕಳೆದ ದಶಕದಿಂದೀಚೆಗೆ ಸನ್ನಿವೇಶ ಬದಲಾಗಿದೆ ಎಂದು ಪ್ರಧಾನಿ ಗಮನ ಸೆಳೆದರು. ಅಸ್ಸಾಂನಲ್ಲಿ ಹಿಂದಿನ ಕಾಂಗ್ರೆಸ್ ಸರಕಾರಗಳ ದುರಾಡಳಿತ ಬಗ್ಗೆ ಪ್ರಪ್ರಥಮ ಮತದಾರರಿಗೆ ಸ್ಪಷ್ಟ ಮನವರಿಕೆ ಮಾಡಬೇಕು ಮತ್ತು ಒಂದು ಸಣ್ಣ ತಪ್ಪಿನಿಂದಲೂ ರಾಜ್ಯವು ಹಿಂದಿನ ಅದೇ ದುಃಸ್ಥಿತಿಗೆ ಜಾರುವ ಅಪಾಯವಿರುವುದನ್ನು

ಜನರಲ್ಲಿ ನವ ಆತ್ಮವಿಶ್ವಾಸ ಮೂಡಿದ್ದು ಬಿಜೆಪಿಯಿಂದ

ಈಶಾನ್ಯ ವಲಯದಲ್ಲಿ ಸರಕಾರ ವಿವಿಧ ಸಂಘಟನೆಗಳ ಜತೆ 12ಶಾಂತಿ ಒಪ್ಪಂದಗಳಿಗೆ ಸಹಿ ಹಾಕಿದೆ. ಆದರೆ ಪ್ರಚಾರಕ್ಕಾಗಿ ಹಾತೊರೆವ ಮತ್ತು ಜನರಿಗೆ ಮಂಕುಬೂದಿ ಎರಚುವುದರಲ್ಲಿ ನಿಸ್ಸೀಮ ಕಾಂಗ್ರೆಸ್ ಒಪ್ಪಂದಗಳು ಬರೀ ಕಾಗದಗಳಿಗೆ ಸೀಮಿತವಾಗಿತ್ತು ಎಂಬುದನ್ನೂ ಬಿಜೆಪಿ ಕಾರ್ಯಕರ್ತರು ಜನರಿಗೆ ತಿಳಿಸಬೇಕು. ಹಿಂದೆ ಅಸ್ಸಾಂ ಹೊತ್ತುರಿಯುತ್ತಿದ್ದ, ಸುದೀರ್ಘಕಾಲ ಅಸ್ಥಿರತೆಯಿಂದ ತೊಳಲಾಡುತ್ತಿದ್ದ ಕಾಲ ಘಟ್ಟವಿತ್ತು. ಆದರೆ ಕಳೆದ ದಶಕದಲ್ಲಿ ಸನ್ನಿವೇಶ ಬದಲಾಗಿದೆ. ಬಿಜೆಪಿಯ ಡಬಲ್ ಇಂಜಿನ್ ಸರಕಾರ ಶಾಂತಿಗಾಗಿ ಶ್ರಮಿಸಿದ್ದರಿಂದ ಜನರಲ್ಲಿ ಹೊಸ ಆತ್ಮವಿಶ್ವಾಸ ಚಿಗುರೊಡೆದಿದೆ ಎಂದು ಪ್ರಧಾನಿ ಗಮನ ಸೆಳೆದರು.

ಮತದಾರರಿಗೆ ತಿಳಿಹೇಳಬೇಕೆಂದು ಪ್ರಧಾನಿ ಮೋದಿ ಕರೆ ನೀಡಿದರು. ರಾಜ್ಯದಲ್ಲಿ ಡಬಲ್ ಇಂಜಿನ್ ಸರಕಾರದ ಹ್ಯಾಟ್ರಿಕ್ ವಿಜಯಕ್ಕಾಗಿ ಪಕ್ಷ ಕಾರ್ಯಕರ್ತರು ಅಹರ್ನಿಶಿ ಶ್ರಮಿಸುತ್ತಿದ್ದಾರೆಂದು ಹೇಳಿದರು. ಏ.9ರಂದು ವಿಧಾನಸಭಾ ಚುನಾವಣೆಗಳು ನಡೆಯಲಿರುವ ಅಸ್ಸಾಂನ ಬಿಜೆಪಿ ಬೂತ್ ಮಟ್ಟದ ಕಾರ್ಯಕರ್ತರನ್ನು ಉದ್ದೇಶಿಸಿ ಪ್ರಧಾನಿ ವರ್ಚ್ಯುಲ್ ಆಗಿ ಮಾತನಾಡಿದರು.

ಅಕ್ರಮ ನುಸುಳುಕೋರರು ಎಲ್ಲಿ ವಾಸ್ತವ್ಯ ಹೂಡುವರೋ ಅಲ್ಲಿನ ಮೂಲವಾಸಿಗಳ ಸಣ್ಣ ಪುಟ್ಟ ವ್ಯಾಪಾರ ವ್ಯವಹಾರ, ಅವರ ಜೀವನೋಪಾಯ ಎಲ್ಲವುಗಳನ್ನು ತಮ್ಮ ಸ್ವಾಧೀನಪಡಿಸುತ್ತಾರೆ ಎಂದು ಪ್ರಧಾನಿ ಆರೋಪಿಸಿದರು. ಚುನಾವಣೆ ಎದುರಿಸಲಿರುವ ರಾಜ್ಯಗಳ ಬಿಜೆಪಿ ಕಾರ್ಯಕರ್ತರೊಂದಿಗೆ ನೇರ ಸಂಪರ್ಕ ಸಾಧ್ಯವಾಗಲು, ಆಳುವ ಬಿಜೆಪಿ ಕೈಗೊಂಡಿರುವ ಉಪಕ್ರಮ ಮೇರಾ ಬೂತ್ ಸಬ್‌ಸೇ ಮಜ್‌ಬೂತ್ ಸಂವಾದ ಸಂದರ್ಭ ಪ್ರಧಾನಿ ಮೋದಿ ಕಾಂಗ್ರೆಸ್ ಸರಕಾರಗಳ ದುರಾಡಳಿತವನ್ನು ಒಂದೊಂದಾಗಿ ನೆನಪಿಸಿದರು.

ಪಾಕ್‌ನ ಐಎಸ್‌ಐ ಜತೆ ನಂಟು ಹೊಂದಿದ್ದ ಎಲ್‌ಇಟಿ ಕಮಾಂಡರ್ ಶಬ್ಬೀರ್

ಲಷ್ಕರ್ ಶಂಕಿತ ಉಗ್ರ ಸೆರೆ, ತಪ್ಪಿದ ದುರಂತ

ಹೊಸದಿಲ್ಲಿ: ಲಷ್ಕರ್-ಎ-ತೊಯ್ಬಾ ಭಯೋತ್ಪಾದಕ ಗುಂಪಿನ ಬಾಂಗ್ಲಾದೇಶದ ಘಟಕವನ್ನು ಬೇಧಿಸಿರುವ ದಿಲ್ಲಿ ಪೊಲೀಸರು, ಎಲ್‌ಇಟಿ ಕಮಾಂಡರ್ ಶಬ್ಬೀರ್ ಅಹ್ಮದ್ ಲೋನ್‌ನನ್ನು ಬಂಧಿಸಿದ್ದಾರೆ. ಆತನನ್ನು ಐದು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಲೋನ್ ಉನ್ನತ ತರಬೇತಿ ಪಡೆದ ಭಯೋತ್ಪಾದಕ ಎಂಬ ಶಂಕೆ ಇದೆ. ಆತ ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್(ಐಎಸ್‌ಐ) ಪರವಾಗಿ ಕಾರ್ಯನಿರ್ವಹಿಸುತ್ತಿದ್ದ ಹ್ಯಾಂಡ್ಲರ್‌ಗಳ ಜತೆ ಸಂಪರ್ಕ ಹೊಂದಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸ್ ಹೇಳಿಕೆಯ ಪ್ರಕಾರ, ಈ ಘಟಕವು ಭಾರತದಲ್ಲಿ ದೊಡ್ಡ ಭಯೋತ್ಪಾದಕ ದಾಳಿಗೆ ಸಿದ್ಧತೆ ನಡೆಸುತ್ತಿತ್ತು, ದಿಲ್ಲಿ ಪೊಲೀಸರ ಸಮಯ ಪ್ರಜ್ಞೆ ಮತ್ತು ಕರ್ತವ್ಯಪರತೆಯಿಂದ ಭಾರೀ ಅವಘಡ ತಪ್ಪಿದೆ.

ದಿಲ್ಲಿಯ ಜನಪಥ್ ಮೆಟ್ರೊ ನಿಲ್ದಾಣದಲ್ಲಿ ಅನುಮಾನಾಸ್ಪದ ಭಿತ್ತಿಪತ್ರಗಳು ಕಾಣಿಸಿಕೊಂಡ ಬೆನ್ನಲ್ಲೇ ಫೆ.8ರಂದು ಕಾರ್ಯಾಚರಣೆ ಶುರುವಾಗಿತ್ತು.

ಬಂಧಿತ ರಾಜಾ ಮತ್ತು ಕಾಶ್ಮೀರಿ ಎಂಬ ಹೆಸರುಗಳಿಂದ ದೇಶ-ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಲೋನ್, ಜಮ್ಮು -ಕಾಶ್ಮೀರದ ಶ್ರೀನಗರದ ನಿವಾಸಿಯಾಗಿದ್ದು, ದಿಲ್ಲಿ ಮತ್ತು ಕೋಲ್ಕತ್ತಾದ ಅನೇಕ ಸ್ಥಳಗಳಲ್ಲಿ ರಾಷ್ಟ್ರ ವಿರೋಧಿ ಭಿತ್ತಿಪತ್ರಗಳನ್ನು ಅಂಟಿಸುವಲ್ಲಿ



ಭಾಗಿಯಾಗಿದ್ದ ಇತ್ತೀಚೆಗೆ ಪತ್ತೆಯಾದ ಘಟಕವೊಂದರ ನಿರ್ವಾಹಕನಾಗಿ ಕಾರ್ಯನಿರ್ವಹಿಸುತ್ತಿದ್ದನು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಿತ್ತಿಪತ್ರದಲ್ಲಿ ಪಾಕ್ ಪರ ಘೋಷಣೆ: ನಾವು ಪಾಕಿಸ್ತಾನಿಗಳು, ಪಾಕಿಸ್ತಾನ ನಮ್ಮದು, ಕಾಶ್ಮೀರದ ಬಗ್ಗೆ ಪ್ರಚೋದನಕಾರಿ ಸಂದೇಶಗಳು ಮತ್ತು ಹತ್ಯೆಗೀಡಾದ ಭಯೋತ್ಪಾದಕ ಬುರ್ಹಾನ್ ವಾನಿಯ ಚಿತ್ರಗಳು ಮುಂತಾದ ಪಾಕಿಸ್ತಾನ ಪರವಾದ ಘೋಷಣೆಗಳನ್ನು ಈ ಭಿತ್ತಿಪತ್ರಗಳು ಹೊತ್ತುಕೊಂಡಿದ್ದವು. ನಂತರ ದಿಲ್ಲಿಯ ಇತರ ಹಲವಾರು ಪ್ರದೇಶಗಳಲ್ಲಿ ಇದೇ ರೀತಿಯ ಭಿತ್ತಿಪತ್ರಗಳು ಕಂಡುಬಂದಿದ್ದವು.

ವಿದೇಶಿ ಕರೆನ್ಸಿ ವಶ

ಪೊಲೀಸರು ಆತನ ಬಳಿಯಿದ್ದ ಅನೇಕ ವಿದೇಶಿ ಕರೆನ್ಸಿಗಳು ಮತ್ತು ಇತರ ದೋಷಾರೋಪಣೆ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಇದರಲ್ಲಿ ಸುಮಾರು 2,300 ಯುನಿಟ್ ಬಾಂಗ್ಲಾದೇಶಿ ಟಕ್ಕಾ, 1,400 ಯುನಿಟ್ ನೇಪಾಳಿ ಕರೆನ್ಸಿ, 5,000 ಯುನಿಟ್ ಪಾಕಿಸ್ತಾನಿ ಕರೆನ್ಸಿ ಮತ್ತು 3,000 ಯುನಿಟ್ ಭಾರತೀಯ ಕರೆನ್ಸಿ ಸೇರಿವೆ ಎಂದು ಅವರು ಹೇಳಿದರು. ನೇಪಾಳದ ಸಿಮ್ ಕಾರ್ಡ್ ಅನ್ನು ಸಹ ವಶಪಡಿಸಿಕೊಳ್ಳಲಾಗಿದೆ.



ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಳ ಪದವಿಪೂರ್ವ ಕಾಲೇಜಿಗೆ ಭೀಮ ಗೋಲ್ಡ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಹತ್ತು ಕಂಪ್ಯೂಟರ್‌ಗಳನ್ನು ಹಸ್ತಾಂತರಿಸಲಾಯಿತು. ಭೀಮ ಗೋಲ್ಡ್‌ನ ಮಾರಾಟ ವಿಭಾಗದ ಅಧಿಕಾರಿ ಗುರುಪ್ರಸಾದ್ ರಾವ್, ಸಹಾಯಕ ಪ್ರಬಂಧಕರಾದ ಹರಿಕೃಷ್ಣ ರಾವ್, ರಾಘವೇಂದ್ರ ಭಟ್, ಕಟೀಲು ದೇಗುಲದ ಅರ್ಚಕ ಸದಾನಂದ ಆಸ್ರಣ್ಣ, ಕಾಲೇಜಿನ ಪ್ರಾಂಶುಪಾಲೆ ಕುಸುಮಾವತಿ, ಪ್ರೌಢಶಾಲೆಯ ಮುಖ್ಯಸ್ಥರಾದ ರಾಜಶೇಖರ, ಗಿರೀಶ್ ರಾವ್ ಮತ್ತಿತರರಿದ್ದರು.

ಕಿರುಸುದ್ದಿ

ಇಂದು 'ಯಕ್ಷಾಯಣ-ದಾಖಲೀಕರಣ' ಸರಣಿ-10 ಕಾರ್ಯಕ್ರಮ

ಕೊಣಾಜೆ: ಮಂಗಳೂರು ವಿಶ್ವವಿದ್ಯಾನಿಲಯದ ಡಾ.ಪಿ.ದಯಾನಂದ ಪೈ ಮತ್ತು ಶ್ರೀ ಪಿ.ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ ಇದರ ವತಿಯಿಂದ ಕರಾವಳಿಯ ಯಕ್ಷಗಾನದ ಸ್ಥಿತ 'ಯಕ್ಷಾಯಣ-ದಾಖಲೀಕರಣ' ಸರಣಿ -10ರ ಕಾರ್ಯಕ್ರಮ ಮಾ.31 ರಂದು ಯಕ್ಷಗಾನ ಅಧ್ಯಯನ ಕೇಂದ್ರದಲ್ಲಿ ನಡೆಯಲಿದೆ. ಯಕ್ಷಗಾನ ವಿದ್ವಾಂಸರಾದ ಪ್ರೊ.ಎಂ.ಎಲ್. ಸಾಮಗ ಅವರು ಕಾರ್ಯಕ್ರಮದಲ್ಲಿ ಯಕ್ಷಪಯಣದ ಅನುಭವವನ್ನು ಹಂಚಿಕೊಳ್ಳಲಿ ದ್ದಾರೆ ಎಂದು ಯಕ್ಷಗಾನ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಧನಂಜಯ ಕುಂಬ್ಳೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವಕ ನಾಪತ್ತೆ: ದೂರು



ಮಂಜೇಶ್ವರ: ಮನೆಯಿಂದ ಯುವಕನೋರ್ವ ನಾಪತ್ತೆಯಾದ ಬಗ್ಗೆ ಮಂಜೇಶ್ವರ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಅನಂತೇಶ್ವರ ಕ್ಷೇತ್ರ ಬಳಿಯ ಮಂಜೇಶ್ವರ ಪೊಲೀಸ್ ಠಾಣಾ ಪರಿಸರ ನಿವಾಸಿ ಅಶೋಕ್ ಶೆಟ್ಟಿ (46) ಎಂಬವರು ನಾಪತ್ತೆಯಾಗಿದ್ದಾರೆ. ಮಾ.22ರಂದು ಬೆಳಗ್ಗೆ 6 ಗಂಟೆ ವೇಳೆ ಮನೆಯಿಂದ ನಾಪತ್ತೆಯಾಗಿದ್ದು, ವಿವಿಧೆಡೆಗಳಲ್ಲಿ ಹುಡುಕಾಡಿದರೂ ಪತ್ತೆಯಾಗಿಲ್ಲ. ಹೊಸಂಗಡಿ ಕಟ್ಟಡವೊಂದರ ಸಿಸಿಟಿವಿ ಕ್ಯಾಮರಾವನ್ನು ತಪಾಸಣೆ ಮಾಡಿದಾಗ ಬೆಳಗ್ಗೆ 6.20ರ ವೇಳೆ ಹೊಸಂಗಡಿಯಲ್ಲಿರುವ ದೃಶ್ಯ ಸಿಸಿಟಿವಿ ಕ್ಯಾಮರಾದಲ್ಲಿ ಕಂಡು ಬಂದಿರುವುದಾಗಿ ಮನೆಯವರು ತಿಳಿಸಿದ್ದಾರೆ. ಅವರ ಸಹೋದರ ಅಶ್ವಿನ್ ಕೆ. ಶೆಟ್ಟಿ ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ. ಅವರನ್ನು ಕಂಡು ಬಂದಲ್ಲಿ ಠಾಣೆಗೆ ಮಾಹಿತಿ ನೀಡಲು ವಿನಂತಿಸಲಾಗಿದೆ.

ಬಪ್ಪನಾಡು ಜಾತ್ರೆ: ಇಂದು ಹೊರೆ ಕಾಣಿಕೆ ಸಮರ್ಪಣೆ



ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜಾತ್ರಾ ಮಹೋತ್ಸವ ಏ.10ರಿಂದ 8ರವರೆಗೆ ನಡೆಯಲಿದ್ದು ಪೂರ್ವಭಾವಿಯಾಗಿ ಮುಲ್ಕಿ ಕಾರು, ಆಟೋ ಚಾಲಕರ ಹಾಗೂ ಮಾಲಕರ ಸಂಘ, ರಿಕ್ಷಾ ಚಾಲಕರ ಹಾಗೂ ಮಾಲಕರ ಸಂಘ, ಹಿಂದೂ ಯುವ ಸೇನೆ ಮತ್ತು ಒಂಬತ್ತು ಮಾಗಣೆಯ ಭಕ್ತರ ವತಿಯಿಂದ ಸೀಮೆ

ಒಂಭತ್ತು ಮಾಗಣೆಯ ಭಕ್ತರ 5ನೇ ವರ್ಷದ ಹೊರೆ ಕಾಣಿಕೆ ಸಮರ್ಪಣೆಯು ಮಾ.31 (ಇಂದು) ರಂದು ನಡೆಯಲಿದೆ. ಮಂಗಳವಾರ ಸಂಜೆ ಶಾರದಾ ಮಂಟಪದಿಂದ ಸಂಜೆ 5.30ಕ್ಕೆ ಹೊರೆಕಾಣಿಕೆಯ ಮೆರವಣಿಗೆಯು ಭವ್ಯ ಶೋಭಾ ಯಾತ್ರೆಯಲ್ಲಿ ಹೊರಟು ಬಪ್ಪನಾಡು ದೇವಸ್ಥಾನಕ್ಕೆ ಸಮರ್ಪಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಪುಸ್ತಕ ಪುರಸ್ಕಾರ ಪ್ರಕಟ





ಮಂಗಳೂರು: ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ವತಿಯಿಂದ ನೀಡಲಾಗುವ 2025ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಪುರಸ್ಕಾರಗಳನ್ನು ಪ್ರಕಟಿಸಲಾಗಿದೆ. ಗೌರವ ಪ್ರಶಸ್ತಿಗೆ ಕೊಂಕಣಿ ಸಾಹಿತ್ಯ ವಿಭಾಗದಲ್ಲಿ ರೊನ್ ರೋಚ್ ಕಾಸ್ಸಿಯಾ, ಕೊಂಕಣಿ ಕಲೆ ವಿಭಾಗದಲ್ಲಿ ರಾಮದಾಸ ದತ್ತಾ ಶ್ರೇಯ ಗುಲ್ವಾಡಿ ಹಾಗೂ ಕೊಂಕಣಿ ಜಾನಪದ ವಿಭಾಗದಲ್ಲಿ ಸೈರು (ಮುರಳೀಧರ) ಪುತ್ತು ನಾಯ್ಕ ಆಯ್ಕೆಯಾಗಿದ್ದಾರೆ.

ಕೊಂಕಣಿ ಪುಸ್ತಕ ಪುರಸ್ಕಾರದಡಿ ಕೊಂಕಣಿ ಕವನ ವಿಭಾಗದಲ್ಲಿ ಆ್ಯಂಡ್ರ್ಯು ಎಲ್. ಡಿಕುನ್ಹಾ ಅವರ 'ಉಜ್ವಾಡಾಚ್ಯೆ ವೆಂಗೆಂತ್', ಲೇಖನ ವಿಭಾಗದಲ್ಲಿ ರೋಷನ್ ಮೆಲ್ವಿ ಸಿಕ್ವೇರ ಅವರ 'ಕೊಂಕಣಿ ಸರ್ಸನ್' ಹಾಗೂ ಕೊಂಕಣಿ ಸಣ್ಣ ಕಥೆಗಳ ವಿಭಾಗದಲ್ಲಿ ರಿಚರ್ಡ್ ಅಲ್ವಾರಿಸ್ ಅವರ 'ಫಿತುರ' ಪುಸ್ತಕಗಳು ಆಯ್ಕೆಯಾಗಿವೆ ಎಂದು ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಏ. 26ರಂದು ಸಂಜೆ 5 ಗಂಟೆಗೆ ಉಡುಪಿ ಉದ್ಯಾವರ ಚರ್ಚ್ ವಠಾರದಲ್ಲಿ ಪ್ರಶಸ್ತಿ ಹಾಗೂ ಪುಸ್ತಕ ಪುರಸ್ಕಾರ ಪ್ರದಾನ ಸಮಾರಂಭ ನಡೆಯಲಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ ಕಾರ್ಯಕ್ರಮವನ್ನು ಉದ್ಘಾಟಿಸುವರು. ಕಾಪು ಶಾಸಕ ಸುರೇಶ್ ಶೆಟ್ಟಿ ಗುರ್ಮೆ, ಉಡುಪಿ ಬಿಷಪ್ ಅ.ವಂ. ಜೆರಾಲ್ಡ್ ಐಸಾಕ್ ಲೋಬೊ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಹಾರ್ವಿ, ಸಿದ್ಧಿ, ಕುಡುಬಿ ಸಮುದಾಯದ ಸಾಂಸ್ಕೃತಿಕ ನೃತ್ಯ, ಬ್ರಾಸ್ ಬ್ಯಾಂಡ್ ಹಾಗೂ ಕೊಂಕಣಿ ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಲಿದೆ ಎಂದು ಅವರು ಹೇಳಿದರು.

ಪ್ರಮುಖರಾದ ನವೀನ್ ಲೋಬೊ, ರೊನಾಲ್ಡ್ ಕ್ರಾಸ್ತಾ, ಇಲಿಯಾಸ್ ಫೆರ್ನಾಂಡಿಸ್ ಉಪಸ್ಥಿತರಿದ್ದರು.

ಕೊಡಗು ಸೈನಿಕ ಶಾಲೆಗೆ ಮಿಲಿಟರಿ ಶಾಲೆಗಳ ನಿರ್ದೇಶಕ ಅಜಿತ್ ಭೇಟಿ



ಮಡಿಕೇರಿ/ಕುಶಾಲನಗರ: ಸೈನಿಕ ಶಾಲೆಗಳು, ರಾಷ್ಟ್ರೀಯ ಮಿಲಿಟರಿ ಶಾಲೆಗಳು ಮತ್ತು ಆರ್‌ಐಎಂಸಿ ನಿರ್ದೇಶಕ ಕೆ. ಎ. ಅಜಿತ್ ಅವರು ಸೋಮವಾರ ಕೊಡಗು ಸೈನಿಕ ಶಾಲೆಗೆ ಭೇಟಿ ನೀಡಿದರು.

ಕಾರ್ಯಕ್ರಮದ ಮೊದಲಿಗೆ ಶಾಲೆಯ ಅಶ್ವದಳವು ಮುಖ್ಯ ಅತಿಥಿಗಳನ್ನು ಸ್ವಾಗತಿಸಿತು. ನಂತರ ಮುಖ್ಯ ಅತಿಥಿಗಳು ಶಾಲೆಯ ಆವರಣದಲ್ಲಿದ್ದ ಯುದ್ಧ ವೀರರ ಸ್ಮಾರಕಕ್ಕೆ ಪುಷ್ಪಗುಚ್ಛವನ್ನು ಸಮರ್ಪಿಸುವುದರ ಮೂಲಕ ಗೌರವ ವಂದನೆ ಸಲ್ಲಿಸಿದರು.

ಬಳಿಕ ಶಾಲೆಯ ಪರೇಡ್ ಮೈದಾನದಲ್ಲಿ ಅವರಿಗೆ ಗೌರವ ವಂದನೆ ಅರ್ಪಿಸಲಾಯಿತು. ವಿಶೇಷ ಸಭೆಯನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು.

ಕೆ. ಎ. ಅಜಿತ್, ಯುಪಿಎಸ್ಸಿ, ಎನ್‌ಡಿಎ ಪರೀಕ್ಷೆಗಳು, ಬೋರ್ಡ್ ಪರೀಕ್ಷಾ ಫಲಿತಾಂಶಗಳು, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಶಾಲೆಯ ವಿದ್ಯಾರ್ಥಿಗಳು ಸಾಧಿಸಿದ ಅಭೂತಪೂರ್ವ ಯಶಸ್ಸನ್ನು ಶ್ಲಾಘಿಸಿದರು. ವಿದ್ಯಾರ್ಥಿಗಳು ಸಂಸ್ಥೆಯ ಮೂಲ ಮೌಲ್ಯಗಳನ್ನು ಎತ್ತಿಹಿಡಿಯಬೇಕು ಮತ್ತು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಶ್ರೇಷ್ಠತೆಯನ್ನು ಸಾಧಿಸಲು ಶ್ರಮಿಸಬೇಕು ಎಂದು ಕರೆ ನೀಡಿದರು. ಕೊಡಗು ಸೈನಿಕ ಶಾಲೆಯ ವಿದ್ಯಾರ್ಥಿಗಳು ಉನ್ನತ ಗುರಿಗಳನ್ನು ತಲುಪುವಲ್ಲಿ ಯಾವುದೇ ಅವಕಾಶವನ್ನು ವ್ಯರ್ಥ ಮಾಡುವುದಿಲ್ಲ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಕೊಡಗು ಸೈನಿಕ ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ್ ಜೀತ್ ಸಿಂಗ್ ವಂದಿಸಿದರು. ನಂತರ ಶಾಲೆಯಲ್ಲಿ ಕೈಗೊಳ್ಳಲಾದ ವಿವಿಧ ಅಭಿವೃದ್ಧಿ ಕಾರ್ಯಗಳು ಮತ್ತು ಚಟುವಟಿಕೆಗಳ ಕುರಿತು ನಿರ್ದೇಶಕರಿಗೆ ಮಾಹಿತಿ ನೀಡಿದರು.

ಸುದೀರ್ಘ ಇತಿಹಾಸ ಹೊಂದಿದ ಅಕ್ಷರ ದೇಗುಲ ಭಾಗಶಃ ಧರಾಶಾಹಿ

ಅತಂತ್ರ ಸ್ಥಿತಿಯಲ್ಲಿದೆ ಅಂಗನವಾಡಿ

ದಿಗಂತ ವಿಶೇಷ

ಕುಂದಾಪುರ: ಮಕ್ಕಳ ಕೊರತೆಯಿಂದ ಕನ್ನಡ ಮಾಧ್ಯಮ ಶಾಲೆಗಳು ಒಂದೊಂದಾಗಿ ಬಾಗಿಲು ಹಾಕುತ್ತಿದ್ದು, ತಾತ್ಕಾಲಿಕವಾಗಿ ಮುಚ್ಚಿದ ಶಾಲಾ ಕಟ್ಟಡಗಳು ನಿರ್ವಹಣೆಯಿಲ್ಲದೆ ಬೀಳುವ ಹಂತಕ್ಕೆ ತಲುಪಿದೆ. ಕಳೆದ ಒಂದು ದಶಕದ ಹಿಂದೆ ಮುಚ್ಚಲ್ಪಟ್ಟ ಬೈಂದೂರು ವಲಯಕ್ಕೆ ಸೇರಿರುವ ಮರವಂತೆ ಕರಾವಳಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡ ಅರ್ಧಾಂಶ ಧರಾಶಾಯಿಯಾಗಿದೆ. ಕಟ್ಟಡದ ಸನಿಹದಲ್ಲೇ ಅಂಗನವಾಡಿ ಕೇಂದ್ರವಿದ್ದು, ಸಂಭವನೀಯ ದುರಂತ ತಡೆಯುವ ನಿಟ್ಟಿನಲ್ಲಿ ಸಂಬಂಧಿತರು ಕ್ರಮ ವಹಿಸಬೇಕೆಂಬ ಕೂಗು ಮೊಳಗಿದೆ.

ಹೆದ್ದಾರಿ ಪಕ್ಕದ ಶಾಲೆ ಅವಸಾನದತ್ತ

ಸುದೀರ್ಘ ಇತಿಹಾಸ ಹೊಂದಿರುವ ಈ ಶಾಲೆ ಬಡ ಮೀನುಗಾರ ಮಕ್ಕಳ ಶಿಕ್ಷಣಕ್ಕೆ ಆಸರೆಯಾಗಿತ್ತು. ಚತುಷ್ಪಥ ಹೆದ್ದಾರಿಯ ರಚನೆ ಬಳಿಕ ಮಕ್ಕಳ ಸಂಖ್ಯೆ ಕ್ಷೀಣಿಸಿತು. ಕಳೆದ ಕೆಲವು ವರ್ಷಗಳ ಹಿಂದೆ ತಾತ್ಕಾಲಿಕವಾಗಿ ಮುಚ್ಚುಗಡೆ ಕಂಡ ಶಾಲೆ ಮತ್ತೆ ಪುನಶ್ಚೇತನಗೊಳ್ಳಲೇ ಇಲ್ಲ. ಶಾಲೆ ಆವರಣದಲ್ಲಿ ಅಂಗನವಾಡಿ ಕೇಂದ್ರ ಯಶಸ್ವಿಯಾಗಿ ಮುನ್ನಡೆಯುತ್ತಿದ್ದರೂ ಪೂರ್ವ ಪ್ರಾಥಮಿಕ ವಿಭಾಗಕ್ಕೆ ದಾಖಲಾತಿ ಸಿಗದೆ ಬಾಗಿಲು ಹಾಕಿಕೊಳ್ಳುವಂತಾಯಿತು.

ಆಸ್ತಿ ನಾಶ: ಶಾಲಾ ಕಟ್ಟಡದ ಅರ್ಧ ಭಾಗ ಮಾಡು ಸಹಿತ ಕಳಚಿ ಬಿದ್ದಿದೆ. ಉಳಿದರ್ಧ ಭಾಗದ ಕಿಟಕಿ, ಬಾಗಿಲು, ಮೇಲ್ಛಾವಣಿ, ಗೋಡೆ ಈಗಲೋ ನಾಳೆಯೋ ಕಟ್ಟಡ ಧರಾಶಾಯಿಯಾಗಲಿದೆ ಎಂಬಂತಿದೆ. ಶಾಲೆಯ ಪಕ್ಕದಲ್ಲೇ ಅಂಗನವಾಡಿ ಕೇಂದ್ರವಿದ್ದು, 18 ಪುಟಾಣಿಗಳಿದ್ದಾರೆ. ಶಾಲಾ ಕಟ್ಟಡದ ಅಪಾಯಕಾರಿ ಸ್ಥಿತಿ ಮಕ್ಕಳ ಪೋಷಕರ ನಿದ್ದೆಗೆಡಿಸಿದೆ. ಶಾಲೆಯಲ್ಲಿರುವ ಸುಸಜ್ಜಿತ ನಲಿಕಲಿ ಕಟ್ಟಡ ಮೂಲೆಗುಂಪಾಗಿದೆ. ದಿನೇ ದಿನೇ ಸರಕಾರಿ ಆಸ್ತಿ ನಾಶ ಆಗುತ್ತಿದ್ದರೂ ರಕ್ಷಣೆ ಎಂಬುದೇ ಇಲ್ಲ.




■ ಬಾಗಿಲು ಮುಚ್ಚಿದ ಮರವಂತೆ ಕರಾವಳಿ ಕಿರಿಯ ಪ್ರಾಥಮಿಕ ಶಾಲೆ ■ ಧರಾಶಾಯಿಯಾಗಿರುವ ಶಾಲೆಯ ಕಟ್ಟಡ

> ಮಕ್ಕಳ ಕೊರತೆಯಿಂದ 10 ವರ್ಷಗಳ ಹಿಂದೆ ಶಾಲೆ ತಾತ್ಕಾಲಿಕ ಮುಚ್ಚುಗಡೆ ಕಂಡಿದೆ. ಶಾಲಾ ಆಸ್ತಿಯ ನಿರ್ವಹಣೆ ಗ್ರಾಮ ಪಂಚಾಯತ್ ನೋಡಿಕೊಳ್ಳುವಂತದ್ದು. ಹಾಲಿ ಪರಿಸ್ಥಿತಿ ಸ್ಥಳೀಯಾಡಳಿತದ ಗಮನಕ್ಕೆ ತಂದಿದ್ದೇವೆ. ಶಾಲಾ ಕಟ್ಟಡದ ತೆರವಿಗೆ ಆದೇಶವು ಆಗಿದೆ.
> ■ **ನಾಗೇಶ್ ನಾಯ್ಕ**, ಇಒ, ಬೈಂದೂರು ವಲಯ.

> ಬೈಂದೂರು ವಿಧಾನಸಭೆ ಕ್ಷೇತ್ರದ ಪ್ರಮುಖ ಮತಗಟ್ಟೆಯಾಗಿದ್ದ ಶಾಲೆಯ ಇಂದಿನ ಸ್ಥಿತಿ ಬೇಸರ ಮೂಡಿಸುತ್ತದೆ. ಶಾಲೆ ಉಳಿಸಲಂತೂ ಆಗಲಿಲ್ಲ. ಕೊನೆಯ ಪಕ್ಷ ಆಸ್ತಿಪಾಸ್ತಿ ರಕ್ಷಣೆ ಮಾಡಬೇಕಿತ್ತು. ಅದನ್ನು ಸಹ ನಿರ್ಲಕ್ಷಿಸಲಾಗಿದೆ. ಸಂಭವನೀಯ ದುರಂತ ತಡೆಯುವ ನಿಟ್ಟಿನಲ್ಲಿ ಸಂಬಂಧಿತ ಇಲಾಖೆ ಎಚ್ಚೆತ್ತುಕೊಳ್ಳಬೇಕು.
> ■ **ಮನ್ಸೂರ್ ಇಬ್ರಾಹಿಂ**, ಮರವಂತೆ.

25 ಮಕ್ಕಳಿಗಿಂತ ಕಡಿಮೆ ಸಂಖ್ಯೆ ಹೊಂದಿರುವ ಶಾಲೆಗೆ ಶಿಕ್ಷಕರ ನಿಯೋಜನೆ ಮರೀಚಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ 2026- 27ನೇ ಸಾಲಿನಲ್ಲಿ ಹಲವು ಸರಕಾರಿ ಶಾಲೆಗಳು ಮುಚ್ಚುವ ಭೀತಿ ಎದುರಿಸಲಿದೆ. ಸರಕಾರಿ ಶಾಲೆಗಳ ಮುಚ್ಚುವಿಕೆಯು ಗ್ರಾಮೀಣ, ಬುಡಕಟ್ಟು ಸಮುದಾಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ

ಇಂದು ಚಂಡಿಕಾಯಾಗ, ಮಾತೃ ಸಂಗಮ


ವಿಟ್ಲ: ಪದ್ಯಾಣಶ್ರೀಮಹಾಲಿಂಗೇಶ್ವರದೇವಸ್ಥಾನ ದಲ್ಲಿ ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳು ಆರಂಭಗೊಂಡಿದ್ದು, ಮಾ.31ರ ಮಂಗಳವಾರ ಬೆಳಗ್ಗೆ ಚಂಡಿಕಾಯಾಗ ಸಂಜೆ ಮಾತೃ ಸಂಗಮ ಕಾರ್ಯಕ್ರಮಗಳು ನಡೆಯಲಿವೆ.

ಕಾರ್ಯಕ್ರಮ ವಿವರ

ಬೆಳಗ್ಗೆ 7ರಿಂದ ವೈದಿಕ ಕಾರ್ಯಕ್ರಮಗಳು ಆರಂಭ, ಚಂಡಿಕಾಯಾಗ, ಮಧ್ಯಾಹ್ನ ಪೂಜೆ, ಸಂಜೆ 5ರಿಂದ ಅಂಕುರ ಪೂಜೆ, ರಾತ್ರಿ ಪೂಜೆ, ಶ್ರೀ ದುರ್ಗಾಪೂಜೆ, ಅನುಜ್ಞಾ ಕಲಶ ಪೂರಣೆ, ಅಧಿವಾಸಹೋಮ ನಡೆಯಲಿದೆ. ಬೆಳಗ್ಗೆ 8.30ರಿಂದ ಭಜನೆ ಕನ್ಯಾನ ಮತ್ತು ಕುರುಡಪದವು ತಂಡಗಳಿಂದ, ಪ್ರಸಿದ್ಧ ಕಲಾವಿದರಿಂದ ಯಕ್ಷಗಾನ ತಾಳಮದ್ದಳೆ ಶಿವಭಕ್ತ ವೀರಮಣಿ. ಮಧ್ಯಾಹ್ನ 2.30ರಿಂದ ನಯನಗೌರಿ ಸೇರಾಜೆ ಮತ್ತು ಬಳಗದ ಸುಗಮ ಸಂಗೀತ ನಡೆಯಲಿದೆ.

ಸಂಜೆ 4.30ರಿಂದ ಸುಧರ್ಮ ಸಭೆ, ಮಾತೃ ಸಂಗಮ ನಡೆಯಲಿದ್ದು, ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಂನ ಸಾಧ್ವಿ ಶ್ರೀ ಮಾತಾನಂದಮಯಿ ಆಶೀರ್ವಚನ ನೀಡಲಿದ್ದಾರೆ. ಕರೋಪಾಡಿ ಗ್ರಾ.ಪಂ. ಅಧ್ಯಕ್ಷೆ ಸೂರ್ಯಕಾಂತಿ ದೀಪ ಪ್ರಜ್ವಲನ ಮಾಡುವರು. ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅಧ್ಯಕ್ಷತೆ ವಹಿಸುವರು. ದೆಹಲಿಯ ವಾಗ್ಮಿ ಕಾಜಲ್ ಹಿಂದುಸ್ಥಾನಿ ಧಾರ್ಮಿಕ ಉಪನ್ಯಾಸ ನೀಡುವರು. ಕರ್ನಾಟಕ ಲೋಕಸೇವಾ ಆಯೋಗ ಸದಸ್ಯೆ ಬಿ.ವಿ. ಗೀತಾ, ಮಾಜಿ ಶಾಸಕಿ ಶಕುಂತಳಾ ಶೆಟ್ಟಿ, ಹಿರಿಯ ಐಪಿಎಸ್ ಅಧಿಕಾರಿ ಡಿ. ರೂಪಾ ಮೌದ್ಗಿಲ್, ಸುಮನಾ ಫೌಂಡೇಶನ್ ಅಧ್ಯಕ್ಷೆ ಡಾ. ಸುನೀತಾ ಮಂಜುನಾಥ್, ಪತ್ರಕರ್ತೆ ಶೋಭಾ ಮಳವಳ್ಳಿ, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಕ್ಕಳ, ಜಿ.ಪಂ. ಮಾಜಿ ಅಧ್ಯಕ್ಷೆ ಶೈಲಜಾ ಭಟ್, ಯಮುನಾ ಬೋರ್‌ವೆಲ್ಸ್ ಮಾಲಕಿ ಕಾವ್ಯ ಕೃಷ್ಣ ಶೆಟ್ಟಿ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ವಿದ್ಯಾಗೌರಿ ಪುತ್ತೂರು, ಕನ್ಯಾನ ಗ್ರಾಪಂ ಅಧ್ಯಕ್ಷೆ ರೇಖಾ ರಮೇಶ್ ಪಂಜಾಜೆ ಅತಿಥಿಗಳಾಗಿರುವರು.

ಬಳಿಕ ಸಂಜೆ 7ರಿಂದ ಪದಯಾನ ತಂಡದಿಂದ ನೃತ್ಯಾಂಜಲಿ ಪ್ರಣತಿ ಚೈತನ್ಯ ಪದ್ಯಾಣ ಮತ್ತು ಚೈತ್ರ ಈಶಾನ್ಯ ಪದ್ಯಾಣ ನಿರ್ದೇಶನದಲ್ಲಿ ಹಾಗೂ ಲಕ್ಷ್ಮೀ ಗುರುರಾಜ್ ತಂಡದಿಂದ ಶಿವಸಂಭೂತ ನೃತ್ಯ ನಾಟಕ ನಡೆಯಲಿದೆ.



ಉಡುಪಿ ಪ್ರಸಾದ್ ನೇತ್ರಾಲಯ ವತಿಯಿಂದ ಉಚಿತ ನೇತ್ರತಪಾಸಣಾ ಶಿಬಿರ

ಅಭಿವೃದ್ಧಿ ಕಾರ್ಯಗಳಿಗಿಂತಲೂ ಸಮಾಜ ಸೇವೆಯೇ ಮಿಗಿಲು: ಬಿ.ವೈ.ವಿಜಯೇಂದ್ರ



ಮಂಗಳೂರು: ಪ್ರಸ್ತುತ ಸಮಾಜದಲ್ಲಿ ವೈದ್ಯಕೀಯಸೇವೆಗಳುಸಾಕಷ್ಟುದೊರೆಯುತ್ತಿದ್ದರೂ ಬಡವ-ಶ್ರೀಮಂತ, ಅಕ್ಷರಸ್ಥ-ಅನಕ್ಷರಸ್ಥರ ಸಹಿತ ಪ್ರತಿಯೊಬ್ಬರೂ ಗುಣಮಟ್ಟದ ಸೇವೆಯನ್ನು, ಕಡಿಮೆ ವೆಚ್ಚದಲ್ಲಿ ಪಡೆಯಲಾಗುತ್ತಿಲ್ಲ. ಆರ್ಥಿಕ ದುರ್ಬಲರ ಹಾಗೂ ಸದೃಢರ ನಡುವಿನ ಕಂದಕ ಬೆಳೆಯುತ್ತಿದೆ. ಆದರೆ ಇಂತಹ ಕಂದಕವನ್ನು ಮುಚ್ಚುವಲ್ಲಿ ಪ್ರಸಾದ್ ನೇತ್ರಾಲಯದಂತಹ ಸಂಸ್ಥೆಗಳು ರಾಜ್ಯಾದ್ಯಂತ ನಡೆಸುವ ಗುಣಮಟ್ಟದ ಉಚಿತ ಶಿಬಿರಗಳು ಮಹತ್ತರ ಪಾತ್ರ ವಹಿಸಿವೆ. ಇಂತಹ ಸಮಾಜಮುಖಿ ಸೇವೆಗಳು ಅಭಿವೃದ್ಧಿ ಕಾರ್ಯಗಳಿಗಿಂತಲೂ ಶ್ರೇಷ್ಠವಾಗಿದೆ ಎಂದು ಶಿಕಾರಿಪುರ ಶಾಸಕ, ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪ್ರಸಾದ್ ನೇತ್ರಾಲಯ ಕಣ್ಣಿನ ಆಸ್ಪತ್ರೆ, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಹಾಗೂ ಒನ್‌ಸೈಟ್ ಎಸ್ಸಿಲಾರ್ ಲಕ್ಸೋಟ್ಟಿಕಾ ಫೌಂಡೇಶನ್, ಬೆಂಗಳೂರು ಇವರ ಆಶ್ರಯದಲ್ಲಿ ಶಿಕಾರಿಪುರದ ಮಂಗಳ ಭವನದಲ್ಲಿ ನಡೆದ ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸೆ ಹಾಗೂ ಉಚಿತ ಕನ್ನಡಕ ವಿತರಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಹದಲ್ಲಿ ಕಣ್ಣು ಅತೀ ಸೂಕ್ಷ್ಮ ಅಂಗ. ಜಗತ್ತಿನ ಸೌಂದರ್ಯ ಸವಿಯಲು ಕಣ್ಣು ಅತೀ ಮುಖ್ಯ. ಕಣ್ಣಿನ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಎಲ್ಲರ ಕರ್ತವ್ಯ. ಶಸ್ತ್ರಚಿಕಿತ್ಸೆಯ ನಂತರವೂ ಕೂಡ ಸೂಕ್ತ ಜಾಗ್ರತೆ ವಹಿಸಬೇಕು ಎಂದರು.

ನಾಡೋಜ ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಪ್ರಸಾದ್ ನೇತ್ರಾಲಯ ಸಮೂಹ ಕಣ್ಣಿನ ಆಸ್ಪತ್ರೆಗಳ ವೈದ್ಯಕೀಯ ನಿರ್ದೇಶಕ, ಹಿರಿಯ ನೇತ್ರತಜ್ಞ ಡಾ. ಕೃಷ್ಣಪ್ರಸಾದ್ ಕೂಡ್ಲು ಅವರು ಮಾತನಾಡಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಅಭಿವೃದ್ಧಿ ಕಾರ್ಯ ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗದೆ ರಾಜ್ಯಾದ್ಯಂತ ಹರಡಿದೆ. ಅವರ ಹಾದಿಯಲ್ಲಿ ನಡೆಯುತ್ತಾ ಪುತ್ರರಾದ ಬಿ.ವೈ. ರಾಘವೇಂದ್ರ ಹಾಗೂ ಬಿ.ವೈ. ವಿಜಯೇಂದ್ರ ಸೇವೆ ಸಲ್ಲಿಸುತ್ತಿದ್ದಾರೆ. ಶಿಕಾರಿಪುರದಲ್ಲಿ ಶಿಬಿರ ನಡೆಸುವ ಕನಸು ಇಂದು ನನಸಾಗಿದೆ. ವಿಜಯೇಂದ್ರ ಅವರ ನೇತೃತ್ವದಲ್ಲಿ ರಾಜ್ಯಾದ್ಯಂತ ಶಿಬಿರಗಳನ್ನು ಆಯೋಜಿಸಿ ರಾಜ್ಯವನ್ನು ಅಂಧಮುಕ್ತ ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು. ಡಾ. ಕೃಷ್ಣಪ್ರಸಾದ್‌ರವರ ಸಮಾಜ ಸೇವೆಗಾಗಿ ಅವರನ್ನು ಈ ಸಂದರ್ಭದಲ್ಲಿ ವಿಜಯೇಂದ್ರ ಸನ್ಮಾನಿಸಿದರು.

ಎಂಎಡಿಬಿ ಮಾಜಿ ಅಧ್ಯಕ್ಷ ಗುರುಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪುರಸಭಾ ಮಾಜಿ ಅಧ್ಯಕ್ಷ ವಸಂತ ಗೌಡ, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಚೆನ್ನವೀರಪ್ಪ, ಮುಖಂಡರಾದ ಹುಲ್ಮಾರ್ ಮಹೇಶ್, ಸಂದೀಪ, ಪಾಲಾಕ್ಷಪ್ಪ ಪ್ರಸಾದ್ ನೇತ್ರಾಲಯದ ವೈದ್ಯರು ಹಾಗೂ ಸಿಬಂದಿ, ವಿದ್ಯಾ ಸಂಸ್ಥೆಯ ಮುಖ್ಯಸ್ಥರು ಉಪಸ್ಥಿತರಿದ್ದರು. 855 ಮಂದಿ ಶಿಬಿರದಲ್ಲಿ ಭಾಗವಹಿಸಿದ್ದರು.

ಇಲ್ಲಿ ಇಲ್ಲ ನೀರಿನ ಸಮಸ್ಯೆ | ಜಲಸಿರಿ ಯೋಜನೆ ಪೈಪ್‌ಲೈನ್ ಬಹುತೇಕ ಪೂರ್ಣ

ದಿನಕ್ಕೆ ಮೂರು ಗಂಟೆ ನೀರು ಪೂರೈಕೆ ಖಚಿತ

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಭಾಗ್

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ಕೊಟ್ಟಾರ ಚೌಕಿ ಬಳಿಯಿಂದ ಕೊಟ್ಟಾರ, ಸುಂಕದಕಟ್ಟೆ, ಅಬ್ಬಕ್ಕನಗರ, ಉರ್ವಸ್ಟೋರ್ ಸುತ್ತಲಿನ ಪ್ರದೇಶ, ಈರಿ, ಅಶೋಕನಗರ, ಶೇಡಿಗುರಿ, ಹೊಯಿಗೆಬೈಲು ಪರಿಸರ ಒಳಗೊಂಡಿರುವ ದೇರೆಬೈಲು ಪಶ್ಚಿಮ ವಾರ್ಡ್‌ನಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ಕಾಣಿಸಿಕೊಂಡಿಲ್ಲ.

ಈ ವಾರ್ಡ್‌ಗೆ ಕೊಟ್ಟಾರ ಚೌಕಿ ಪಂಪ್‌ಹೌಸ್ ಹಾಗೂ ಲೇಡಿಹಿಲ್‌ನ ಕರಾವಳಿ ಪಂಪ್‌ಹೌಸ್‌ನಿಂದ ನೀರು ಪೂರೈಕೆಯಾಗುತ್ತಿದೆ. ಕೊಟ್ಟಾರ ಚೌಕಿಯಿಂದ ಕೊಟ್ಟಾರ, ಅಬ್ಬಕ್ಕನಗರಕ್ಕೆ ನೀರು ಬಂದರೆ, ಕರಾವಳಿ ಪಂಪ್‌ಹೌಸ್‌ನಿಂದ ಅಶೋಕನಗರ ಭಾಗಕ್ಕೆ ನೀರು ಪೂರೈಕೆ ಆಗುತ್ತಿದೆ. ಉರ್ವಸ್ಟೋರ್ ಮುಡಾ ಕಚೇರಿ ಬಳಿ ಪಂಪ್ ಹೌಸ್ ಇದೆ. ಎಂಸಿಎಫ್ ಪೈಪ್‌ಲೈನ್‌ನಿಂದಲೂ ಈ ವಾರ್ಡ್‌ಗೆ ನೀರು ದೊರೆಯುತ್ತಿದೆ.

'ಪ್ರತಿದಿನ 2-3 ಗಂಟೆ ಉತ್ತಮ ಪ್ರೆಶರ್‌ನೊಂದಿಗೆ ನೀರು ಸರಬರಾಜು ಆಗುತ್ತಿದೆ' ಎನ್ನುವುದು ಸ್ಥಳೀಯರ ಮಾತು.

ಈರಿ ಪ್ರದೇಶದಲ್ಲಿ ನೀರು ಪೂರೈಕೆ ಪೈಪ್‌ಲೈನ್‌ನಲ್ಲಿ ಪ್ರೆಶರ್ ಸಮಸ್ಯೆ ಇತ್ತು. ಇಲ್ಲಿನ ನಿಕಟಪೂರ್ವ ಕಾರ್ಪೋರೇಟರ್ ಅವರು ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದು ಈ ಸಮಸ್ಯೆ ಬಗೆಹರಿಸಿದ್ದಾರೆ. ಜಲಸಿರಿ ಯೋಜನೆ ಪೈಪ್ ಅಳವಡಿಕೆಗೆ ರಸ್ತೆ ಅಗೆದಾಗ, ಇತರ ಕಾರಣದಿಂದ ಪೈಪ್‌ಲೈನ್ ಬ್ಲಾಕ್ ಆದಾಗ, ಪಂಪ್‌ಹೌಸ್‌ನಲ್ಲಿ ತೊಂದರೆ ಉಂಟಾದಾಗ ಮಾತ್ರ ಈ ವಾರ್ಡ್‌ಗೆ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿದೆ.

ಈ ವಾರ್ಡ್‌ನಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸುವ ಅಗತ್ಯತೆ ಈ ಬೇಸಗೆಯಲ್ಲಿ ಇದುವರೆಗೆ ಬಂದಿಲ್ಲ. ಸುಂಕದಕಟ್ಟೆ ಡೈರಿ ಬಳಿ ಸರಕಾರಿ ಬಾವಿ ಇದ್ದು, ಇದನ್ನು ಮನಪಾ ವತಿಯಿಂದ ಶುಚಿಗೊಳಿಸಿದರೆ ನೀರು ಬಳಸಬಹುದು. ಸುಬ್ಬಯ್ಯ ಕಂಪೌಂಡ್‌ನಲ್ಲೂ ಸರಕಾರಿ ಬಾವಿ ಇದೆ. ಅಶೋಕನಗರ, ಶೇಡಿಗುರಿಯಲ್ಲಿ ಬೋರ್‌ವೆಲ್ ಇದ್ದು, ಅದರ ನೀರನ್ನು ಬಳಸಲಾಗುತ್ತಿದೆ. ದೇರೆಬೈಲು ಪಶ್ಚಿಮ ವಾರ್ಡ್‌ನಲ್ಲಿ ಜಲಸಿರಿ ಯೋಜನೆ ಪೈಪ್‌ಲೈನ್ ಬಹುತೇಕ ಪೂರ್ಣಗೊಂಡಿದೆ. ಕೋಡಿಕಲ್ ಜಂಕ್ಷನ್ ಬಳಿ ನೀರಿನ ಹೊಸ ಟ್ಯಾಂಕ್ ನಿರ್ಮಾಣವಾಗಿದೆ.






ವಾರ್ಡ್ ನಂಬರ್ 25 ದೇರೆಬೈಲು ಪಶ್ಚಿಮ

ಕೊಟ್ಟಾರದ ಕಲ್ಲಾವಿಗೆ ತೆರಳುವ ರಸ್ತೆ ಬಳಿ ಮ್ಯಾನ್‌ಹೋಲ್‌ನಲ್ಲಿ ಸೋಮವಾರ ನೀರು ಉಕ್ಕಿ ಹರಿಯುತ್ತಿತ್ತು

ನಲ್ವತ್ತು ವರ್ಷಗಳ ಸಮಸ್ಯೆ ಪರಿಹಾರ

ಕೊಟ್ಟಾರ ಕೃಷ್ಣಮಂದಿರ ದ್ವಾರದ ಬಳಿ 40 ವರ್ಷಗಳಿಂದ ಡ್ರೈನೇಜ್ ಸಮಸ್ಯೆಯಿತ್ತು. ಜಾಗವೊಂದರ ಸಮಸ್ಯೆಯಿಂದಾಗಿ ಇಲ್ಲಿ ಡ್ರೈನೇಜ್ ನಿರ್ಮಾಣ ಸಾಧ್ಯವಾಗಿರಲಿಲ್ಲ. ಶಾಸಕವೇದವ್ಯಾಸ ಕಾಮತ್ ಅವರ ಸತತ ಪ್ರಯತ್ನ ದಿಂದಾಗಿ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿ ಇಲ್ಲಿ ಡ್ರೈನೇಜ್, ಮ್ಯಾನ್‌ಹೋಲ್, ರಸ್ತೆ ನಿರ್ಮಿಸಲಾಗಿದೆ. ತಡೆಗೋಡೆ ನಿರ್ಮಾಣವೂ ಆಗಿದೆ. ಶೀಘ್ರ ಈ ಕಾಮಗಾರಿ ಉದ್ಘಾಟನೆ ಆಗಲಿದೆ. ಕೊಟ್ಟಾರ, ತಂತ್ರಿಲೇನ್‌ನಲ್ಲೂ ಡ್ರೈನೇಜ್ ಸಮಸ್ಯೆ ಬಗೆಹರಿದಿದೆ ಎನ್ನುತ್ತಾರೆ ದೇರೆಬೈಲು ಪಶ್ಚಿಮ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್ ಜಯಲಕ್ಷ್ಮೀ ವಿ. ಶೆಟ್ಟಿ.



> ದೇರೆಬೈಲು ಪಶ್ಚಿಮ ವಾರ್ಡ್‌ನಲ್ಲಿ ಬಹುತೇಕ ಎಲ್ಲ ಪ್ರದೇಶಗಳಿಗೆ ಸಮರ್ಪಕವಾಗಿ ನೀರು ಪೂರೈಕೆ ಆಗುತ್ತಿದೆ. ಮುಖ್ಯ ಟ್ಯಾಂಕ್‌ನಿಂದ ರಾತ್ರಿ 12 ಗಂಟೆಯಿಂದ ಬೆಳಗ್ಗೆವರೆಗೆ ಪಂಪ್‌ಹೌಸ್‌ಗಳಿಗೆ ನೀರು ಬಿಡಲಾಗುತ್ತಿದ್ದು, ವಾರ್ಡ್‌ನ ಜನತೆಗೆ ಪ್ರತಿದಿನ ಕನಿಷ್ಠ ಮೂರು ಗಂಟೆಗಳ ಕಾಲ ನೀರು ಪೂರೈಕೆ ಆಗುತ್ತಿದೆ. ನೀರಿನ ಸಮಸ್ಯೆ ಕಂಡುಬಂದ ತಕ್ಷಣ ಮನಪಾ ಅಧಿಕಾರಿಗಳ ಗಮನಕ್ಕೆ ತಂದರೆ ಅವರು ಪರಿಹಾರ ಕಲ್ಪಿಸುತ್ತಿದ್ದಾರೆ. ನೀರಿನ ಸಮಸ್ಯೆ ಇಲ್ಲವಾದ ಕಾರಣ ನಮ್ಮಲ್ಲಿ ಟ್ಯಾಂಕರ್ ನೀರು ಪೂರೈಸುವ ಪರಿಸ್ಥಿತಿ ಬಂದಿಲ್ಲ. ನೀರಿನ ಸಮಸ್ಯೆ ಬಗ್ಗೆ ಶಾಸಕ ವೇದವ್ಯಾಸ ಕಾಮತ್ ಅವರು ಸಭೆ ನಡೆಸಿದ್ದು, ಅಧಿಕಾರಿಗಳ ಮೂಲಕ ಕ್ರಮ ಕೈಗೊಂಡಿದ್ದಾರೆ.
> ■ **ಜಯಲಕ್ಷ್ಮೀ ವಿ. ಶೆಟ್ಟಿ**, ದೇರೆಬೈಲು ಪಶ್ಚಿಮ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್

ನಾಳೆ ವಾರ್ಡ್ -26
ದೇರೆಬೈಲು ನೈರುತ್ಯ ಪರಿಸರದ ಸ್ಥಿತಿಗತಿ

ಗೈಲ್ ಪೈಪ್‌ಲೈನ್ ಅವಾಂತರ

ಗೈಲ್ ಎಲ್‌ಪಿಜಿ ಗ್ಯಾಸ್ ಪೈಪ್ ಲೈನ್ ಯೋಜನೆ ಈ ವಾರ್ಡ್‌ನಲ್ಲಿ ಅಸಮರ್ಪಕವಾಗಿ ಅನುಷ್ಠಾನಗೊಂಡಿದೆ. ಪೈಪ್‌ಲೈನ್ ಅಳವಡಿಕೆಗಾಗಿ ರಸ್ತೆ ಅಗೆದು ಬಿಟ್ಟುಬಿಡಲಾಗಿದೆ. ಅಗೆದಲ್ಲಿ ಗುಂಡಿ ಮುಚ್ಚುವುದು, ತೇಪೆ ಹಾಕುವುದು, ರಸ್ತೆಗೆ ಸಿಮೆಂಟ್, ಇಂಟರ್‌ಲಾಕ್ ಅಳವಡಿಕೆ ಮಾಡಿಲ್ಲ. ಒಂದು ವರ್ಷದ ಹಿಂದೆ ರಸ್ತೆ ಬದಿ ಅಥವಾ ಖಾಲಿ ಜಾಗದಲ್ಲಿ ತಂದುಹಾಕಿರುವ ಪೈಪ್‌ಗಳು ಹಾಳಾಗುತ್ತಿವೆ. ಕೆಲವೆಡೆ ಈ ಪೈಪ್‌ಗಳ ಕಳ್ಳತನವೂ ಆಗಿದೆ. ಅಲ್ಲಲ್ಲಿ ರಸ್ತೆ ಅಗೆದು ಬಿಟ್ಟು ಹೋಗಿದ್ದಾರೆ ಎನ್ನುತ್ತಾರೆ ಸ್ಥಳೀಯರು.

ವಾರ್ಡ್‌ನ ಕೊಟ್ಟಾರದ ಕಲ್ಲಾವಿಗೆ ತೆರಳುವ ರಸ್ತೆಯಲ್ಲಿ ಒಂದು ವಾರದ ಹಿಂದೆ ಮ್ಯಾನ್‌ಹೋಲ್‌ನಲ್ಲಿ ನೀರು ಉಕ್ಕಿ ಹರಿದಿದ್ದು, ಸೋಮವಾರವೂ ಪುನರಾವರ್ತನೆಯಾಗಿದೆ. ಬಳಿಕ ಮನಪಾ ಸಿಬ್ಬಂದಿ ಮ್ಯಾನ್‌ಹೋಲ್ ಶುಚಿಗೊಳಿಸಿದ್ದಾರೆ.

10ವರ್ಷದಿಂದ ಸ್ವಂತ ಮಗಳನ್ನೇ ಗೃಹಬಂಧನದಲ್ಲಿ ಇಟ್ಟಿದ್ದ ಪೋಷಕರು!

ಪುಟ ೧ ಸ್ನೇಹಾಗೆ ಬಾನಾಮತಿಯಾಗಿದೆ ಎಂದು ಸ್ವಾಮೀಜಿಯೊಬ್ಬರು ಹೇಳಿದ್ದರಂತೆ. ಬಾನಾಮತಿ ತೆಗೆಯಲು ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ ಎಂದಿದ್ದಾರೆ. ಹಾಗಾಗಿ ನಾವು ಮಗಳನ್ನು ಮನೆಯಲ್ಲಿಯೇ ಇಟ್ಟುಕೊಂಡಿದ್ದೇವೆ. ಸರಪಳಿ ಬಿಚ್ಚಿದರೆ ಕಲ್ಲು ಎಸೆಯುವುದು, ಹೊಡೆಯುವುದು, ಓಡಿಹೋಗುವುದು ಮಾಡುತ್ತಾಳೆ. ನಮ್ಮ ಮೂವರು ಮಕ್ಕಳ ಪೈಕಿ ಓರ್ವ ಮಗಳ ಸ್ಥಿತಿ ಹೀಗಾಗಿದೆ. ಆದ್ದರಿಂದ ಅನಿವಾರ್ಯವಾಗಿ ಮಗಳನ್ನು ಗೃಹಬಂಧನದಲ್ಲಿಟ್ಟಿದ್ದೇವೆ ಎಂದು ಸ್ನೇಹಾ ತಂದೆ ಸಿದ್ರಾಯ ಅಳಲು ತೋಡಿಕೊಂಡಿದ್ದಾರೆ.ಕಾಗವಾಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಮಾನಸಿಕ ಸಮಸ್ಯೆಗೆ ಮನೋವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಕೊಡಿಸುವುದನ್ನು ಬಿಟ್ಟು ಬಾನಾಮತಿ ಹೆಸರಲ್ಲಿ ಮಗಳನ್ನು ಕಟ್ಟಿ ಹಾಕಿ ಕಳೆದ 10 ವರ್ಷಗಳಿಂದ ಗೃಹಬಂಧನದಲ್ಲಿಟ್ಟು ಶಿಕ್ಷಿಸುತ್ತಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿದೆ.

ಬಿಜೆಪಿ ಬೆಂಬಲ ಕಂಡು ಕಾಂಗ್ರೆಸ್ ಅತಂತ್ರ: ಬಿವೈವಿ

ಪುಟ ೧ ಬಳಿಕ ಮಾತನಾಡಿದ ಅವರು, ಉಪಚುನಾವಣೆಯ ಎರಡೂ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರು ಉತ್ಸಾಹದಿಂದ ಕೆಲಸ ಮಾಡುತ್ತಿದ್ದು ಬಾಗಲಕೋಟೆ ಮತಕ್ಷೇತ್ರ ರಣರಂಗವಾಗಿ ಬದಲಾಗಿದೆ ಎಂದರು.

ಕಳೆದ 3 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ರಾಜ್ಯದಲ್ಲಿ ಹಿಂದು ಕಾರ್ಯಕರ್ತರ ಅಪಮಾನ ಮತ್ತು ಸುಳ್ಳು ಕೇಸ್ ದಾಖಲು ಪ್ರಕರಣಗಳು ಹೆಚ್ಚಾಗಿವೆ. ಬಾಗಲಕೋಟೆ ಸೇರಿದಂತೆ ವಿವಿಧೆಡೆ ಹಿಂದು ಮೆರವಣಿಗೆಗಳ ಮೇಲೆ ಕಲ್ಲು ತೂರಾಟಗಳು ನಡೆಯುತ್ತಿವೆ. ದೇಶದ್ರೋಹಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ. ದಲಿತರ ಮೇಲೆ ಹಲ್ಲೆಗಳು ನಡೆಯುತ್ತಿದ್ದರೂ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಉದ್ಯೋಗ ಭರವಸೆ ನೀಡಿ ಒಂದು ಹುದ್ದೆಯನ್ನು ಭರ್ತಿ ಮಾಡದೇ ಪ್ರತಿಭಟನೆ ಮಾಡುವ ಉದ್ಯೋಗ ಆಕಾಂಕ್ಷಿಗಳ ಮೇಲೆ ಲಾಟಿ ಪ್ರಹಾರ ಮಾಡಿಸಿದ್ದಾರೆ. ಸರ್ಕಾರದ ಇಂತಹ ಸಾಲು ಸಾಲು ವೈಫಲ್ಯಗಳೇ ಬಿಜೆಪಿ ಗೆಲ್ಲಿಸುತ್ತವೆ ಎಂದರು.

ಫಲಿಸದ ಕುತಂತ್ರ: ಸಂಸದ ಗೋವಿಂದ ಕಾರಜೋಳ ಮಾತನಾಡಿ, ಕಾಂಗ್ರೆಸ್‌ಗೆ ಚುನಾವಣೆ ಮೊದಲೇ ಸೋಲು ಖಚಿತವಾಗಿದ್ದು ಅತಂತ್ರ ಸ್ಥಿತಿ ತಲುಪಿದೆ. ಬಾಗಲಕೋಟೆಯಲ್ಲಿ ವೀರಣ್ಣ ಚರಂತಿಮಠರ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಚಾರದ ಮುಂದೆ ಮುಖ್ಯಮಂತ್ರಿಗಳ ಪ್ರಚಾರ ಕೆಲಸ ಮಾಡುವುದಿಲ್ಲ. ಅವರ ಯಾವ ಕುತಂತ್ರವೂ ಫಲ ನೀಡದ ಕಾರಣ ವಾಸ್ತವ್ಯ ಹೂಡಲು ಮುಂದಾಗಿದ್ದಾರೆ ಎಂದು ಹೇಳಿದರು. ಮತಯಾಚನೆಯಲ್ಲಿ ಜಮಖಂಡಿ ಶಾಸಕರಾದ ಜಗದೀಶ ಗುಡಗುಂಟಿ, ಬಾದಾಮಿ ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹಣಮಂತ ಮಾವಿಮರದ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ್, ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯಕ, ಸರಸ್ವತಿ ಕುರುಬರ, ಶೀವಲೀಲಾ ಪಟ್ಟಣಶೆಟ್ಟಿ ಕಿರಣ ಕೋರಿ, ಮಲ್ಲು ಕಾಂಭಳೆ, ವಿಶ್ವನಾಥ ವಿಜಾಪುರ ಸೇರಿದಂತೆ ಬಿಜೆಪಿ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ನಕ್ಸಲ್‌ಮುಕ್ತ ಭಾರತ

ಪುಟ ೧ ಛತ್ತೀಸ್‌ಗಢ, ಜಾರ್ಖಂಡ್, ಒಡಿಶಾ, ಮಹಾರಾಷ್ಟ್ರ, ಕೇರಳ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳನ್ನು ಒಳಗೊಂಡ ನಕ್ಸಲ ಪ್ರಭಾವಿತ ಪ್ರದೇಶವನ್ನು ಅವರು ಉಲ್ಲೇಖಿಸಿದರು. ಈ ಚರ್ಚೆ ನಕ್ಸಲ್ ಹಿಂಸೆಯನ್ನು ನಿರ್ಮೂಲನೆ ಮಾಡುವ ಗಡುವಿನ ಮುನ್ನಾದಿನ ನಡೆಯಿತು. ಕಳೆದ ವರ್ಷ, ಶಾ ಅವರು 2026ರ ಮಾರ್ಚ್ 31ರೊಳಗೆ ದೇಶದಲ್ಲಿ ಎಡಪಂಥೀಯ ಉಗ್ರವಾದವನ್ನು ಅಂತ್ಯಗೊಳಿಸಲಾಗುತ್ತದೆ ಎಂದು ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ನಕ್ಸಲರ ವಿರುದ್ಧ ಮಹತ್ವದ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು.

ಭದ್ರತಾ ಪಡೆಗಳ ಸಾಧನೆಗಳ ವಿವರ ನೀಡಿದ ಗೃಹ ಸಚಿವರು, ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಛತ್ತೀಸ್‌ಗಢದ ರಾಜ್ಯ ಸಮಿತಿಗಳ ಎಲ್ಲಾ ಸದಸ್ಯರು ಶರಣಾಗಿದ್ದಾರೆ ಎಂದು ಹೇಳಿದರು. ಒಡಿಶಾದಲ್ಲಿ ಉಳಿದಿದ್ದ ನಾಲ್ವರಲ್ಲಿ ಒಬ್ಬರು ಶರಣಾಗಿದ್ದು, ಮೂವರು ಸಾವಿಗೀಡಾಗಿದ್ದಾರೆ ಎಂದು ತಿಳಿಸಿದರು. ತೆಲಂಗಾಣದಲ್ಲಿ ಆರು ಮಂದಿ ಶರಣಾಗಿದ್ದು, ಮೂವರು ಸಾವಿಗೀಡಾಗಿದ್ದಾರೆ ಮತ್ತು ಈಗ ಅಲ್ಲಿ ಒಬ್ಬರೂ ಉಳಿದಿಲ್ಲ ಎಂದು ಹೇಳಿದರು.

ನಕ್ಸಲರಿಗೆ ಅಭಿವೃದ್ಧಿಯಲ್ಲ,ಅಧಿಕಾರದಲ್ಲೇ ಆಸಕ್ತಿ: 'ರಾಜಕೀಯ ಅಧಿಕಾರವು ಬಂದೂಕಿನ ನಾಳದಿಂದ ಬೆಳೆಯುತ್ತದೆ' ಎಂಬುದು ಮಾವೋವಾದಿಗಳ ಮೂಲ ಸಿದ್ಧಾಂತವಾಗಿದ್ದು, ಜನರಿಗೆ ಸೇವೆ ಸಲ್ಲಿಸುವುದು ಅಥವಾ ಅಭಿವೃದ್ಧಿಯನ್ನು ಉತ್ತೇಜಿಸುವುದು ಅವರ ಉದ್ದೇಶವೇ ಅಲ್ಲ ಎಂದು ಅಮಿತ್ ಶಾ ಮಾವೋವಾದ ಸಿದ್ಧಾಂತದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ದೇಶವನ್ನು ಮಾವೋವಾದಿಗಳಿಂದ ಮುಕ್ತಗೊಳಿಸುವ ಪ್ರಯತ್ನಗಳ ಕುರಿತಾದ ಚರ್ಚೆಯ ಸಂದರ್ಭ ದಲ್ಲಿ ಲೋಕಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, 'ಅವರ ಏಕೈಕ ಗುರಿ ತಮ್ಮ ಸಿದ್ಧಾಂತಗಳನ್ನು ಆದಿವಾಸಿ ಸಮುದಾಯಗಳಲ್ಲಿ ಹರಡುವುದು ಮತ್ತು ಅಧಿಕಾರ ಕಬಳಿಸು ವುದು. ಅವರ ಸಿದ್ಧಾಂತದಲ್ಲಿ ಅಭಿವೃದ್ಧಿ, ಪ್ರಜಾಪ್ರಭುತ್ವ ಅಥವಾ ಪ್ರಗತಿಯ ಬಗ್ಗೆ ಯಾವುದೇ ಚರ್ಚೆಯಿಲ್ಲ' ಎಂದರು.

ನ್ಯಾಯದ ಹೆಸರಿನಲ್ಲಿ ಮಾವೋವಾದಿ ಹಿಂಸೆಯನ್ನು ಸಮರ್ಥಿಸುವವರನ್ನೂ ಇದೇ ವೇಳೆ ಅಮಿತ್ ಶಾ ಟೀಕಿಸಿದರು. ಸಂವಿಧಾನವನ್ನು ಉಲ್ಲಂಘಿಸಿ, ಶಸ್ತ್ರಾಸ್ತ್ರಗಳನ್ನು ಎತ್ತಿಕೊಂಡು ನಿರಪರಾಧಿ ನಾಗರಿಕರನ್ನು ಕೊಲ್ಲುವವರು ಹೇಗೆ ಭಗತ್ ಸಿಂಗ್ ಮತ್ತು ಬಿರ್ಸಾ ಮುಂಡಾರಂತಹ ಸ್ವಾತಂತ್ರ್ಯ ಹೋರಾಟ ಗಾರರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳಬಹುದು ಎಂದು ಅವರು ಪ್ರಶ್ನಿಸಿದರು. 'ಇಂತಹ ಹೋಲಿಕೆಗಳು ಸಂಪೂರ್ಣವಾಗಿ ಅಸ್ವೀಕಾರಾರ್ಹ' ಎಂದು ಅವರು ಹೇಳಿದರು.

ಮೋದಿ ಸರ್ಕಾರವು ಭದ್ರತೆ ಮತ್ತು ಅಭಿವೃದ್ಧಿ ಎಂಬ ತಂತ್ರದ ಮೂಲಕ ಮಾವೋವಾದವನ್ನು ನಿರ್ಮೂಲನೆ ಮಾಡುವುದಕ್ಕೆ ಬದ್ಧವಾಗಿದೆ. ಎಡಪಂಥೀಯ ಅತಿರೇಕದ ವಿರುದ್ಧದ ಹೋರಾಟದಲ್ಲಿ ಪ್ರಾಣ ಕಳೆದುಕೊಂಡ ಭದ್ರತಾ ಸಿಬ್ಬಂದಿ ಮತ್ತು ನಾಗರಿಕರಿಗೆ ಅವರು ಇದೇ ವೇಳೆ ಶ್ರದ್ಧಾಂಜಲಿ ಸಲ್ಲಿಸಿದರು.

ನಕ್ಸಲಿಸಂ ಬಹುತೇಕ ಅಂತ್ಯ: ಛತ್ತೀಸ್‌ಗಢದ ಬಸ್ತಾರ್‌ನಲ್ಲಿ ಪ್ರಮುಖ ಭದ್ರತಾ ಕಾರ್ಯಾಚರಣೆಯ ನಂತರ ನಕ್ಸಲಿಸಂನ್ನು ಬಹುತೇಕ ನಿರ್ಮೂಲನೆ ಮಾಡಲಾಗಿದೆ ಎಂದು ಅಮಿತ್ ಶಾ ತಿಳಿಸಿದರು. ಬಸ್ತಾರ್‌ನಲ್ಲಿ ಭಯೋತ್ಪಾದನೆಯ ನೆರಳು ಸರಿಯುತ್ತಿದ್ದು, ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಈ ಯಶಸ್ಸಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು, ವಿಶೇಷವಾಗಿ ಕೋಬ್ರಾ ಮತ್ತು ಸಿಆರ್‌ಪಿಎಫ್ ಘಟಕಗಳು, ಛತ್ತೀಸ್‌ಗಢ ಪೊಲೀಸ್, ಡಿಆರ್‌ಜಿ ಸಿಬ್ಬಂದಿ ಮತ್ತು ಸ್ಥಳೀಯ ಬುಡಕಟ್ಟು ನಿವಾಸಿಗಳ ಶ್ರಮ ಕಾರಣ ಎಂದು ಅವರು ಶ್ಲಾಘಿಸಿದರು. ಬಸ್ತಾರ್‌ನ ಪ್ರತಿ ಗ್ರಾಮದಲ್ಲಿ ಶಾಲೆಗಳು ಮತ್ತು ಪಡಿತರ ಅಂಗಡಿಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ, ಎಂದು ಅವರು ವಿವರಿಸಿದರು.

ಕಿಡಿ ನುಡಿ
• ವಾಸುದೇವರಾವ್ ಕಕ್ಕೆನೇಜಿ

◈ ದಾಖಲೆ ಬಜೆಟ್ ಮಂಡಿಸಿರುವ ಖ್ಯಾತಿಯ ಸಿದ್ದರಾಮಯ್ಯನವರು ತಮ್ಮದೇ ಸರಕಾರ ಮಾಡಿರುವ ಸಾಲದಿಂದಾಗಿ ಸಾಲದ ರಾಮಯ್ಯ ಆಗಿ ಉಳಿಯಲಿದ್ದಾರೆ

– ಪ್ರತಾಪಸಿಂಹ ನಾಯಕ್

–ಅಧಿಕಾರದ ಆಸೆಯ ಮುಂದೆ ಸಾಲ ಶೂಲ ಲೆಕ್ಕಕ್ಕಿಲ್ಲ, ಅಧಿಕಾರ ಅಂತ್ಯವಾದಾಗ ತಾನು ಯಾರಿಗೂ ಲೆಕ್ಕಕ್ಕಿಲ್ಲ ಎಂಬುದು ಅರಿವಾದಾಗ ತಡವಾಗಿರುತ್ತದೆ!

ದಿನ ಭವಿಷ್ಯ

ಮೇಷ ಕೆಲ ದಿನಗಳ ಚಿಂತೆ ಕಳೆದು ಹುರುಪು ತುಂಬುವ ಬೆಳವಣಿಗೆ. ಪ್ರೀತಿಪಾತ್ರರ ಸಂಗದಲ್ಲಿ ಉತ್ಸಾಹ. ಹಣದ ಬಿಕ್ಕಟ್ಟು ಪರಿಹಾರ ಕಾಣಲಿದೆ.

ವೃಷಭ ಕ್ಷುಲ್ಲಕ ವಿಚಾರ ಬದಿಗಿಡಿ, ತಕ್ಷಣದ ಪರಿಣಾಮ ಬೀರುವ ವಿಷಯಕ್ಕೆ ಗಮನ ಕೊಡಿ. ನಿಮ್ಮ ನಿರ್ಧಾರ ಒಳ್ಳೆ ಫಲ ನೀಡಲಿದೆ, ಚಿಂತೆ ಬೇಡ.

ಮಿಥುನ ಕಚೇರಿ ಮತ್ತು ಮನೆಯಲ್ಲಿ ಕೆಲವಾರು ವಿಷಯ ನಿಮ್ಮ ತಾಳ್ಮೆ ಕೆಣಕುವುದು. ಯಾವುದೂ ನಿಮ್ಮ ಮನಸ್ಸಿಗೆ ತೃಪ್ತಿ ತರುವಂತಿರುವುದಿಲ್ಲ.

ಕಟಕ ಕೆಲ ವಿಷಯದಲ್ಲಿ ನಿಮ್ಮ ಧೋರಣೆ ಬದಲಿಸಿ. ಹೊಂದಾಣಿಕೆಯ ಸ್ವಭಾವ ಬೆಳೆಸಿಕೊಳ್ಳಿ. ಇತರರ ಮಾತಿಗೂ ಬೆಲೆ ಕೊಡಿ. ಸಂಘರ್ಷ ತಪ್ಪಿಸಿರಿ.

ಸಿಂಹ ಎಲ್ಲ ಕೆಲಸ ಪರಿಪೂರ್ಣವಾಗಿ ಮುಗಿಯಲಿದೆ. ನಿಮ್ಮ ಸಾಧನೆ ನಿಮಗೇ ಅಚ್ಚರಿ ತಂದೀತು. ವೈವಾಹಿಕ ಸಂಬಂಧ ಏರ್ಪಡಲಿದೆ.

ಕನ್ಯಾ ಒತ್ತಡ ಮತ್ತು ಅತಿ ಪ್ರಯಾಸದ ದಿನ. ಯಾವ ಕಾರ್ಯವೂ ಸುಲಭದಲ್ಲಿ ಸಾಧ್ಯವಾಗದು. ತೊಡಕು, ವಾದ ಉಂಟಾಗುವುದು. ನೆಗೆಟಿವ್ ಚಿಂತನೆ ಬಿಡಿ.

ತುಲಾ ಹಿಗ್ಗು ಕುಗ್ಗು ಎರಡನ್ನೂ ಇಂದು ಅನುಭವಿಸುವಿರಿ. ಆಪ್ತರೊಬ್ಬರು ನಿಮ್ಮ ಜತೆ ಮುನಿಸಿಕೊಂಡಾರು. ವ್ಯವಹಾರದಲ್ಲಿ ಪ್ರಗತಿ.

ವೃಶ್ಚಿಕ ನಿಮ್ಮ ಚಿಂತೆ ಕುರಿತು ಮುಕ್ತವಾಗಿ ಹಂಚಿಕೊಳ್ಳಿ. ಹೆಗಲ ಮೇಲಿನ ಹೊರೆ ಕಡಿಮೆಯಾದೀತು. ಭಾವುಕ ಸನ್ನಿವೇಶ ಎದುರಿಸುವಿರಿ.

ಧನು ನಿಮ್ಮ ಕುರಿತಂತೆ ಬಹಳಷ್ಟು ಮಂದಿ ಆಸಕ್ತಿ ತೋರುವರು. ನಿಮ್ಮ ಸಾಧನೆ ತೋರಿಸಲು ಮುಜುಗರ ಬೇಕಾಗಿಲ್ಲ. ಶ್ಲಾಘನೆ ಸ್ವೀಕರಿಸಿ.

ಮಕರ ಕೆಲವರ ಜತೆ ವ್ಯವಹಾರ ಕಷ್ಟವಾದೀತು. ಆದರೆ ಅದರಿಂದ ಧೃತಿಗೆಡದಿರಿ. ಹಣದ ಕೊರತೆ ನಿವಾರಣೆ. ಆತ್ಮೀಯರಿಂದ ನೆರವು.

ಕುಂಭ ಈ ಹಿಂದೆ ಗೊಂದಲ ಸೃಷ್ಟಿಸಿದ್ದ ವಿಷಯಗಳಲ್ಲಿ ಸ್ಪಷ್ಟತೆ ರೂಪಿಸಿಕೊಳ್ಳಿ. ಬದುಕಿನಲ್ಲಿ ಖುಷಿ ಪಡಲು ಸಾಕಷ್ಟು ವಿಷಯಗಳಿವೆ, ಅರಿಯಿರಿ. ಧನವ್ಯಯ.

ಮೀನ ವೃತ್ತಿ ಒತ್ತಡ ಮರೆತು, ದಿನವಹಿ ಜಂಜಾಟ ಬಿಟ್ಟು ಕಾಲ ಕಳೆಯಿರಿ. ನಿರಾಳ ದಿನವನ್ನು ಗ್ರಹಗತಿ ಸೂಚಿಸುತ್ತಿದೆ. ಆತ್ಮೀಯರ ಒಡನಾಟ ಸಾಧ್ಯತೆ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30

ಅದೃಷ್ಟ ಸಂಖ್ಯೆ: 0,7,3,5

8 ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಲ್ಲಿ ಮೊದಲ ಹಂತದ ಜನಗಣತಿ | 33 ಪ್ರಶ್ನೆಗಳಿಗೆ ಬೇಕಿದೆ ಮಾಹಿತಿ

ನಾಳೆಯಿಂದ ಕರ್ನಾಟಕದಲ್ಲೂ ಸ್ವಯಂಗಣತಿ

• **ಬೆಂಗಳೂರು:** ಮಹತ್ವದ ರಾಷ್ಟ್ರೀಯ ಜನಗಣತಿ–2027 ರ ಕಾರ್ಯಕ್ಕೆ ರಾಜ್ಯ ಸಿದ್ಧವಾಗಿದೆ. ಜನಗಣತಿ–2027 ರ ಮೊದಲ ಹಂತ ಏಪ್ರಿಲ್ 1ರಿಂದ ಆರಂಭವಾಗಲಿದ್ದು, ಸ್ವಯಂ–ಗಣತಿಗೆ ಏಪ್ರಿಲ್ 1 ರಿಂದ 15ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಕೇಂದ್ರ ಗೃಹ ಸಚಿವಾಲಯ 2027ರ ಜನಗಣತಿಯನ್ನು 2 ಹಂತಗಳಲ್ಲಿ ನಡೆಸಲು ಉದ್ದೇಶಿಸಿದೆ. ಮೊದಲ ಹಂತದಲ್ಲಿ ಮನೆ ಪಟ್ಟಿ ಏ.1ರಿಂದ ಆರಂಭವಾಗಲಿದೆ. ಮೊದಲ ಹಂತ ಮೊದಲ ಭಾಗದಲ್ಲಿ ಏ.1 ರಿಂದ 15 ರ ವರೆಗೆ 15 ದಿನಗಳ ಕಾಲ ವೆಬ್ ಪೋರ್ಟಲ್ https://se.census.gov.in ಮೂಲಕ ಸ್ವಯಂ–ಗಣತಿಗೆ ಅವಕಾಶ ಕಲ್ಪಿಸಲಾಗಿದೆ. ಅದರಂತೆ, ಮನೆಯ ಯಾವುದೇ ಒಬ್ಬ ಸದಸ್ಯರು ಸುಮಾರು 15ರಿಂದ 20 ನಿಮಿಷಗಳ ಅವಧಿಯಲ್ಲಿ ಸ್ವಯಂ–ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಬಹುದು. ಮೊಬೈಲ್, ಇಮೇಲ್‌ನಲ್ಲಿ ಸ್ವಯಂ–ಗಣತಿ ಐಡಿಯನ್ನು ಪಡೆಯಬಹುದಾಗಿರುತ್ತದೆ. ಮೊದಲ ಹಂತದ ಎರಡನೇ ಭಾಗವಾಗಿ ಏ.16ರಿಂದ ಮೇ 15ರವರೆಗೆ 30 ದಿನಗಳ ಕಾಲ ಗಣತಿದಾರರು ಮನೆ–ಮನೆಗೆ ಭೇಟಿ ನೀಡಿ ಮನೆಪಟ್ಟಿ ಮತ್ತು ಮನೆ ಗಣತಿ ಮಾಹಿತಿ ಸಂಗ್ರಹಿಸಲಿದ್ದಾರೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ ಸ್ವಯಂ–ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಸ್ವಯಂ–ಗಣತಿ ಐಡಿಯನ್ನು ಗಣತಿದಾರರೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ.

ದೇಶದ ಮೊದಲ ಡಿಜಿಟಲ್ ಜನಗಣತಿ

ಪುಟ ೧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜನಗಣತಿ ಆಯುಕ್ತ ಮೃತ್ಯುಂಜಯ್ ಕುಮಾರ್ ನಾರಾಯಣ, ಜನಗಣತಿ ಎರಡು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತವು ವಸತಿ ವಿವರಗಳ ಮೇಲೆ ಕೇಂದ್ರೀಕರಿಸಲಿದೆ ಎಂದರು.

ಎರಡನೇ ಹಂತವಾದ ಜನಸಂಖ್ಯಾ ಗಣತಿಯಲ್ಲಿ ವ್ಯಕ್ತಿಗತ ಮಟ್ಟದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಇದರಲ್ಲಿ ಮೊದಲ ಬಾರಿಗೆ ಜಾತಿ ಮಾಹಿತಿ ಡಿಜಿಟಲ್ ರೀತಿಯಲ್ಲಿ ದಾಖಲಿಸಲಾಗುತ್ತದೆ. ಸುಮಾರು 30 ಲಕ್ಷ ಗಣಕರ್ತರು ಆಂಡ್ರಾಯ್ಡ್ ಮತ್ತು ಐಒಎಸ್ ಪ್ಲಾಟ್‌ಫಾರ್ಮ್‌ಗಳಲ್ಲಿ ಲಭ್ಯವಿರುವ ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿ ನಿಖರತೆ ಮತ್ತು ಕಾರ್ಯಕ್ಷಮತೆಯನ್ನು ಖಚಿತಪಡಿಸಲಿದ್ದಾರೆ. ಈ ಆ್ಯಪ್ 16 ಭಾಷೆಗಳನ್ನು ಒಳಗೊಂಡಿದೆ ಮತ್ತು ಇಂಟರ್ನೆಟ್ ಸಂಪರ್ಕವಿಲ್ಲದೆಯೂ ಕಾರ್ಯ ನಿರ್ವಹಿಸಬಲ್ಲದು, ಇದರಿಂದ ಗ್ರಾಮೀಣ ಹಾಗೂ ದೂರದ ಪ್ರದೇಶಗಳಲ್ಲಿಯೂ ಸುಲಭವಾಗಿ ಬಳಸಬಹುದು.

ಜಾತಿಗೆ ಸಂಬಂಧಪಟ್ಟ ಮಾಹಿತಿಗಳನ್ನು ದ್ವಿತೀಯ ಹಂತದ ಜನಗಣತಿಯಲ್ಲಿ ಸಂಗ್ರಹಿಸಲಾಗುವುದು ಎಂದು ರಿಜಿಸ್ಟ್ರಾರ್ ಜನರಲ್ ಹೇಳಿದರು. ಜಾತಿ ಬಗ್ಗೆ ಯಾವ ವಿಧಾನದಿಂದ ಮಾಹಿತಿ ಸಂಗ್ರಹಿಸಬೇಕೆಂಬ ಬಗ್ಗೆ ಸಮಗ್ರ ಚರ್ಚೆಗಳನ್ನು ನಡೆಸುತ್ತೇವೆ. ಜಾತಿ ಮಾಹಿತಿ ಸಂಗ್ರಹ ಬಗ್ಗೆ ಹಲವು ಸಲಹೆಗಳು ಬಂದಿವೆ.

ವೈಯಕ್ತಿಕ ಮಾಹಿತಿ ಸುಭದ್ರ
ಜನಗಣತಿದಾರರಿಗೆ ಸರಿಯಾದ ಮಾಹಿತಿ ನೀಡಿ ಸಹಕರಿಸಿ. ನಿಮ್ಮ ವೈಯಕ್ತಿಕ ಮಾಹಿತಿಗಳನ್ನು ರಹಸ್ಯವಾಗಿಡಲಾಗು ವುದು. ಯಾವ ಕಾರಣಕ್ಕೂ ಸಾಕ್ಷ್ಯವಾಗಿ ಅಥವಾ ಯಾವುದೇ ಸ್ಕೀಮ್‌ನ ಪ್ರಯೋಜನಕ್ಕಾಗಿ ಬಳಸುವುದು ಅಸಾಧ್ಯ ಎಂದು ಮೃತ್ಯುಂಜಯ್ ಸ್ಪಷ್ಟಪಡಿಸಿದರು. ಜನರ ವೈಯಕ್ತಿಕ ಮಾಹಿತಿಗಳನ್ನು ಮಾಹಿತಿ ಹಕ್ಕು ಕಾಯಿದೆಯಲ್ಲಿ ಸರಕಾರಿ ಅಥವಾ ಖಾಸಗಿ ಸಂಸ್ಥೆಗಳೊಂದಿಗೆ ಶೇರ್ ಮಾಡಲಾಗುವುದಿಲ್ಲ ಅಥವಾ ನ್ಯಾಯಾಲಯದಲ್ಲಿ ಸಾಕ್ಷ್ಯವಾಗಿ ಬಳಸಿಕೊಳ್ಳಲೂ ಆಗದು. ಸಮಗ್ರ ದತ್ತಾಂಶಗಳನ್ನು ಮಾತ್ರ ಕ್ರಮಬದ್ಧವಾಗಿ ಪಟ್ಟಿ ಸಿದ್ಧಪಡಿಸುವ ಉದ್ದೇಶಗಳಿಗೆ ಬಳಸಲಾಗುವುದು.

ಸಹಜೀವನ ನಡೆಸುವವರೂ ವಿವಾಹಿತ ದಂಪತಿ!
ಸಹ–ಜೀವನ(ಲೀವ್–ಇನ್) ನಡೆಸುತ್ತಿರುವ ದಂಪತಿಗಳು ತಮ್ಮದು ಶಾಶ್ವತ ಸಂಬಂಧ ಎಂದು ಪರಿಗಣಿಸಿದ್ದರೆ ಅವರನ್ನು ಜನಗಣತಿ ವೇಳೆ ವಿವಾಹಿತ ದಂಪತಿಗಳು ಎಂದೇ ಪರಿಗಣಿಸಬೇಕು ಕೇಂದ್ರ ಹೇಳಿದೆ. ಸ್ವಯಂ–ಗಣತಿ ಪೋರ್ಟಲ್‌ನಲ್ಲಿ ಪದೇಪದೆ ಕೇಳಲಾಗುತ್ತಿರುವ ಪ್ರಶ್ನೆಗೆ ಕೇಂದ್ರ ಈ ಸ್ಪಷ್ಟನೆ ನೀಡಿದೆ.

ಒಂದೇ ವರ್ಷ, ಒಂದೇ ಹೆಸರು!
- ಹಿಂದಿನ ವರ್ಷ (ಪ್ರೀವಿಯಸ್ ಇಯರ್) ಮತ್ತು ಮೌಲ್ಯಮಾಪನ ವರ್ಷ (ಅಸೆಸ್‌ಮೆಂಟ್ ಇಯರ್) ಇನ್ನಿಲ್ಲ.
- ಎರಡರ ಬದಲಿಗೆ ಕೇವಲ ತೆರಿಗೆ ವರ್ಷ (ಟ್ಯಾಕ್ಸ್ ಇಯರ್) ಎಂಬ ಏಕರೂಪದ ಹೆಸರು.
- ಎಲ್ಲಾ ಗಡುವುಗಳು ಮತ್ತು ಸಮಯ ಮಿತಿಗಳ ನಿಗದಿಗೆ ಇನ್ನು ಇದೇ ಉಲ್ಲೇಖ
- ಮೊದಲ ಬಾರಿ ತೆರಿಗೆ ಪಾವತಿಸುವವರಿಗೆ ಮತ್ತು ವೈಯಕ್ತಿಕ ತೆರಿಗೆದಾರರಿಗೆ ದೊಡ್ಡ ಸಮಾಧಾನ

ಬೆಂಗಳೂರು, ಪುಣೆ ಬಾಡಿಗೆದಾರರಿಗೆ ಸಿಹಿ ಸುದ್ದಿ!
- ಮನೆ ಬಾಡಿಗೆ ಭತ್ಯೆ (ಎಚ್‌ಆರ್‌ಎ) ವಿನಾಯಿತಿ ಮಿತಿ ಮೂಲ ವೇತನದ ಶೇ.40ರಿಂದ ಶೇ.50ಕ್ಕೆ ಏರಿಕೆ.
- ಬೆಂಗಳೂರು, ಹೈದರಾಬಾದ್, ಪುಣೆ ಮತ್ತು ಅಹಮದಾಬಾದ್ ಈಗ ಮುಂಬೈ, ದಿಲ್ಲಿಯಂತೆ ಪರಿಗಣನೆ.
- ಮೊದಲ ಬಾರಿಗೆ ಹೆಚ್ಚಿನ ನಗರಗಳಿಗೆ ಮೆಟ್ರೊ ನಗರಗಳ ಮಟ್ಟದ ತೆರಿಗೆ ಸೌಲಭ್ಯ ವಿಸ್ತರಣೆ.

ಮನೆ ಮಾಲೀಕರ ವಿವರ ಕಡ್ಡಾಯ
- ಎಚ್‌ಆರ್‌ಎ ವಿನಾಯಿತಿಗೆ ಮನೆ ಮಾಲೀಕರೊಂದಿಗೆ ಇರುವ ಸಂಬಂಧ ಘೋಷಣೆ ಕಡ್ಡಾಯ
- ಬಾಡಿಗೆ ರಸೀದಿಗಳ ದುರುಪಯೋಗ ತಡೆಯುವುದು ಇದರ ಮುಖ್ಯ ಉದ್ದೇಶ.

ಮಕ್ಕಳ ಶಿಕ್ಷಣ ಭತ್ಯೆಯಲ್ಲಿ ಭಾರಿ ಏರಿಕೆ
- ಶಿಕ್ಷಣ ಭತ್ಯೆ: ಪ್ರತಿ ಮಗುವಿಗೆ ತಿಂಗಳಿಗೆ 100 ಇದ್ದದ್ದು ಈಗ 3,000 ರೂ.ಗೆ ಏರಿಕೆ.
- ಹಾಸ್ಟೆಲ್ ಭತ್ಯೆ: ತಿಂಗಳಿಗೆ 300 ಇದ್ದದ್ದು ಈಗ 9,000 ರೂ.ಗೆ ಹೆಚ್ಚಳ
- ದಶಕಗಳಿಂದ ಬದಲಾಗದಿದ್ದ ಈ ಮಿತಿಯಲ್ಲಿ ಕೊನೆಗೂ ದೊಡ್ಡ ಬದಲಾವಣೆ

ಕಚೇರಿ ಊಟದ ಮೇಲಿನ ತೆರಿಗೆ ವಿನಾಯಿತಿ
- ಉದ್ಯೋಗದಾತರು ನೀಡುವ ಊಟ ಮತ್ತು ಫುಡ್ ಕೂಪನ್‌ಗಳ ಮಿತಿ 50ರಿಂದ 200ಗೆ ಏರಿಕೆ.
- ಇದು ಆಲ್ಕೋಹಾಲ್ ಅಲ್ಲದ ಪಾನೀಯಗಳಿಗೂ ಅನ್ವಯಿಸುತ್ತದೆ.
- ಹಣದುಬ್ಬರಕ್ಕೆ ಅನುಗುಣವಾಗಿ ಬದಲಾವಣೆ, ಕೈಗೆ ಬರುವ ಸಂಬಳ ಹೆಚ್ಚಾಗಲಿದೆ.

ವಿದೇಶಕ್ಕೆ ಹಣ ಕಳುಹಿಸುವುದು ಅಗ್ಗ (ಪ್ರಸ್ತಾವಿತ)
- ವಿದೇಶಿ ಪ್ರವಾಸದ ಪ್ಯಾಕೇಜ್‌ಗಳ ಮೇಲಿನ ಟಿಸಿಎಸ್ ದರ ಶೇ.5ರಿಂದ ಶೇ. 2ಕ್ಕೆ ಇಳಿಕೆ.
- ವಿದೇಶಿ ಶಿಕ್ಷಣ ಮತ್ತು ವೈದ್ಯಕೀಯ ವೆಚ್ಚದ ಮೇಲಿನ ಟಿಸಿಎಸ್ ಶೇ.20ರಿಂದ ಶೇ.2ಕ್ಕೆ ಕಡಿತ.
- ಇದು ವಿದೇಶದಲ್ಲಿ ಓದುವ ವಿದ್ಯಾರ್ಥಿಗಳ ಪೋಷಕರಿಗೆ ದೊಡ್ಡ ಆರ್ಥಿಕ ನೆರವು

ಇತರ ಉದ್ಯೋಗದ ಸೌಲಭ್ಯ ಪರಿಷ್ಕರಣೆ
- ವಿಶಿಷ್ಟಚೇತನ ಉದ್ಯೋಗಿಗಳಿಗೆ ಸಾರಿಗೆ ಭತ್ಯೆಯಲ್ಲಿ ಹೆಚ್ಚಿನ ವಿನಾಯಿತಿ.
- ಉದ್ಯೋಗದಾತರು ನೀಡುವ ತೆರಿಗೆ ರಹಿತ ಉಡುಗೊರೆ ಮತ್ತು ವೋಚರ್‌ಗಳ ಮಿತಿ ಏರಿಕೆ.
- ಕಂಪನಿ ನೀಡುವ ಸಾಲಗಳ ಮೇಲಿನ ವಿನಾಯಿತಿ ವ್ಯಾಪ್ತಿ ವಿಸ್ತರಣೆ.

ಕಂಪನಿ ಕಾರು ಬಳಸುವವರಿಗೆ ಹೆಚ್ಚಿನ ತೆರಿಗೆ
- ಕಂಪನಿ ನೀಡುವ ಕಾರಿನ ಸೌಲಭ್ಯದ ಮೇಲಿನ ತೆರಿಗೆ ಮೌಲ್ಯ ಏರಿಕೆ.
- ಹೊಸ ತೆರಿಗೆ ಮೌಲ್ಯ: ತಿಂಗಳಿಗೆ 2,000 ಹಾಗೂ 7,000 ರೂ. (ಹಿಂದೆ 600 ಹಾಗೂ 2,400 ರೂ. ಇತ್ತು).
- ಚಾಲಕನ ಸೌಲಭ್ಯವಿದ್ದರೆ ತಿಂಗಳಿಗೆ 3,000 ರೂ. ಹೆಚ್ಚುವರಿ (ಹಿಂದೆ 900 ರೂ. ಇತ್ತು).
- ಇದೇ ಮೊದಲ ಬಾರಿಗೆ ಎಲೆಕ್ಟ್ರಿಕ್ ವಾಹನಗಳಿಗೂ (ಇವಿ) ಪ್ರತ್ಯೇಕ ತೆರಿಗೆ ಚೌಕಟ್ಟು

ಸಂಬಳದ ಪ್ರಮಾಣಪತ್ರದ ಹೆಸರು ಬದಲಾವಣೆ
- ಫಾರ್ಮ್ 16 (ಸಂಬಳ ಪ್ರಮಾಣಪತ್ರ) ಇನ್ನು ಮುಂದೆ ಫಾರ್ಮ್ 130 ಎಂದು ಕರೆಯಲ್ಪಡುತ್ತದೆ.
- ಫಾರ್ಮ್ 12ಬಿಬಿ (ಉದ್ಯೋಗಿ ಘೋಷಣೆ) ಇನ್ನು ಮುಂದೆ ಫಾರ್ಮ್ 124 ಆಗಲಿದೆ.
- ಟಿಡಿಎಸ್ ಫಾರ್ಮ್‌ಗಳು ಮತ್ತು ಪ್ಯಾನ್ (ಪಿಎಎನ್) ಅರ್ಜಿ ಪ್ರಕ್ರಿಯೆ ಇನ್ನಷ್ಟು ಸರಳ

ಚೀನಾ ನಿರ್ಮಿತ ಸಿಸಿಟಿವಿ ಕಂಪನಿಗಳಿಗೆ ನಿಷೇಧ

• **ಹೊಸದಿಲ್ಲಿ:** ಮಹತ್ತರ ಬೆಳವಣಿಗೆಯೊಂದರಲ್ಲಿ ದೇಶೀಯ ಕಂಪನಿಗಳಿಗೆ ಪ್ರೋತ್ಸಾಹಿಸುವ ಭಾಗವಾಗಿ ಏ.1ರಿಂದ ಭಾರತದಲ್ಲಿ ಚೀನಾ ನಿರ್ಮಿತ ಅಂತರ್ಜಾಲ ಸಂಪರ್ಕಿತ ಕಂಪನಿ ಹಿಕ್ವಿಷನ್ ಸಿಸಿಟಿವಿ ಕ್ಯಾಮರಾ ಮಾರಾಟ ಮಾಡುವುದನ್ನು ಕೇಂದ್ರ ನಿಷೇಧಿಸಿದೆ. ಹಿಕ್ವಿಷನ್ ಮತ್ತು ದಹುವಾ ಮುಂತಾದ ಸಾಗರೋತ್ತರ ಕಂಪನಿಗಳಿಗೆ ಭಾರತದ ಪ್ರಮಾಣೀಕರಣ ಚೌಕಟ್ಟಿನ ಅನುಸರಣೆ ಕಡ್ಡಾಯವಾಗಿದೆ. ಆದ್ದರಿಂದ ದೇಶದಲ್ಲಿ ಸಿಸಿಟಿವಿ ಉತ್ಪನ್ನಗಳ ಮಾರಾಟವನ್ನು ಕೇಂದ್ರ ಪರಿಣಾಮಕಾರಿಯಾಗಿ ನಿರ್ಬಂಧಿಸಿದೆ. ಕಣ್ಗಾವಲು ಸಾಧನಗಳ ಮೇಲ್ವಿಚಾರಣೆಯನ್ನು ಬಿಗಿಗೊಳಿಸುವ ಮತ್ತು ಭದ್ರತಾ ಮಾನದಂಡಗಳ ಕಟ್ಟುನಿಟ್ಟಾದ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಈ ಕ್ರಮವು ಹೊಂದಿದೆ.

ವಿದೇಶಿ ಆಸ್ತಿ ಘೋಷಣೆಗೆ ಕೊನೆ ಅವಕಾಶ (ಪ್ರಸ್ತಾವಿತ)
- ಸಣ್ಣ ತೆರಿಗೆದಾರರಿಗಾಗಿ ವಿದೇಶಿ ಆಸ್ತಿ ಘೋಷಣಾ ಯೋಜನೆ ಪ್ರಸ್ತಾಪಿಸಲಾಗಿದೆ.
- ಘೋಷಿಸದ ವಿದೇಶಿ ಆಸ್ತಿಗಳ ಬಗ್ಗೆ ಮಾಹಿತಿ ನೀಡಲು 6 ತಿಂಗಳ ಕಾಲಾವಕಾಶ.
- ಅನ್ವಯವಾಗುವ ತೆರಿಗೆ ಪಾವತಿಸಿ ಶಿಕ್ಷೆಯಿಂದ ಪಾರಾಗಲು ಸುವರ್ಣಾವಕಾಶ.

ವಿದೇಶಿ ತೆರಿಗೆ ಕ್ರೆಡಿಟ್: ಸಿಎ ಪತ್ರ ಕಡ್ಡಾಯ
- 1 ಲಕ್ಷ ರೂ.ಗಿಂತ ಹೆಚ್ಚಿನ ವಿದೇಶಿ ತೆರಿಗೆ ಕ್ರೆಡಿಟ್ ಕ್ಲೈಮ್ ಮಾಡಲು ಸಿಎ ಪ್ರಮಾಣಪತ್ರ ಬೇಕು.
- ಹಳೆಯ ಫಾರ್ಮ್ 67ರ ಬದಲಿಗೆ ಹೊಸ ಫಾರ್ಮ್ 44 ಬಳಕೆಗೆ ಬರಲಿದೆ.

ರಾಜ್ಯದಲ್ಲಿ ಟೋಲ್ ದುಬಾರಿ
ಏಪ್ರಿಲ್ 1 ರಿಂದ ಬೆಂಗಳೂರು – ಮೈಸೂರು ಎಕ್ಸ್‌ಪ್ರೆಸ್ ವೇ ಹೆದ್ದಾರಿ ಸೇರಿದಂತೆ ರಾಜ್ಯದ 9 ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶೇ.3ರಿಂದ ಶೇ.5ರಷ್ಟು ಟೋಲ್ ದರ ಹೆಚ್ಚಳವಾಗಲಿದೆ. ಈ ಮೂಲಕ ವಾಹನ ಸವಾರರ ಜೇಬಿಗೆ ಕತ್ತರಿ ಬೀಳಲಿದೆ.

ಮೈಸೂರು ಎಕ್ಸ್‌ಪ್ರೆಸ್ ವೇ ಮತ್ತಷ್ಟು ದುಬಾರಿ: ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಸಂಚಾರ ಆರಂಭವಾದಾಗಿನಿಂದ ಇದು ನಾಲ್ಕನೇ ಬಾರಿ ಬೆಲೆ ಏರಿಕೆಯಾಗಿದೆ. 2023ರ ಏಪ್ರಿಲ್ 1 ರಿಂದ ಎಕ್ಸ್‌ಪ್ರೆಸ್ ವೇ ಸಂಚಾರಕ್ಕೆ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಟೋಲ್ ದರ ನಿಗದಿ ಮಾಡಿತ್ತು. ಈ ವರ್ಷವೂ ಏ.1ರಿಂದ ವಾರ್ಷಿಕ ಶೇ.5ರಷ್ಟು ಟೋಲ್ ದರ ಹೆಚ್ಚಳವಾಗಲಿದೆ.

ತೆರಿಗೆ ಕ್ರಾಂತಿಯ ಹೊಸ ಶಕೆ
• **ಹೊಸದಿಲ್ಲಿ:** ದಶಕಗಳಲ್ಲೇ ಅತ್ಯಂತ ದೊಡ್ಡದಾದ ಆದಾಯ ತೆರಿಗೆ ಸುಧಾರಣಾ ಕ್ರಮಗಳು ಇದೇ ಏಪ್ರಿಲ್ 1 ರಿಂದ ಜಾರಿಗೆ ಬರಲಿವೆ. ಹೊಸ ಆದಾಯ ತೆರಿಗೆ ಕಾಯ್ದೆ 2025 ಅಡಿಯಲ್ಲಿ ಕೋಟ್ಯಂತರ ತೆರಿಗೆದಾರರು ತಮ್ಮ ತೆರಿಗೆ ಸಲ್ಲಿಕೆ ಮತ್ತು ಘೋಷಣೆ ಮಾಡುವ ವಿಧಾನದಲ್ಲಿ ಮಹತ್ತರ ಬದಲಾವಣೆಯಾಗಲಿದೆ.

ಪ್ರಮುಖಾಂಶಗಳು
- ಹೊಸ ಆದಾಯ ತೆರಿಗೆ ಕಾಯ್ದೆ, 2025 ಮತ್ತು ನಿಯಮಗಳ ಜಾರಿ
- ಸರಳತೆ, ಪಾರದರ್ಶಕತೆ ಮತ್ತು ಜಾಗತಿಕ ಗುಣಮಟ್ಟಕ್ಕೆ ಒತ್ತು.
- ಸಂಬಳ ಪಡೆಯುವ ಉದ್ಯೋಗಿಗಳು, ವೃತ್ತಿಪರರು ಮತ್ತು ವಿದೇಶಿ ಆಸ್ತಿ ಹೊಂದಿರುವವರಿಗೆ ಅನ್ವಯ.

ಸಂಘರ್ಷ ತೀವ್ರತೆ ಹೆಚ್ಚಳ

ಪುಟ ೧ ಇರಾನ್ ಅಮೆರಿಕದ ಬೇಡಿಕೆಗಳು ಅತಿಯಾದವು, ಅಸಂಬದ್ಧ ಮತ್ತು ಅಸಾಧ್ಯ ಎಂದು ತಿರಸ್ಕರಿಸಿದೆ. ಇರಾನ್ ಸಂಸತ್ ಸ್ಪೀಕರ್ ಮೊಹಮ್ಮದ್ ಬಾಘರ್ ಖಾಲಿಬಾಫ್, ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಮಾತುಕತೆಗಳು ಕೇವಲ ಒಂದು ನಾಟಕ ಎಂದು ಆರೋಪಿಸಿದ್ದು, ಅಮೆರಿಕ ಸೈನಿಕರು ನಮ್ಮ ನೆಲಕ್ಕೆ ಬಂದರೆ, ಅವರನ್ನು ಬೆಂಕಿಯಲ್ಲಿ ಸುಟ್ಟು ಶಿಕ್ಷೆ ನೀಡುತ್ತೇವೆ ಎಂದು ಎಚ್ಚರಿಕೆ ನೀಡಿದ್ದರು.



ಗಲ್ಫ್ ಮತ್ತು ಇಸ್ರೇಲ್ ಮೇಲೆ ಇರಾನ್ ದಾಳಿ: ಇರಾನ್ ತನ್ನ ದಾಳಿಗಳನ್ನು ಗಲ್ಫ್ ದೇಶಗಳತ್ತ ವಿಸ್ತರಿಸಿದೆ. ಸೌದಿ ಅರೇಬಿಯಾದ ಪೂರ್ವ ಪ್ರಾಂತ್ಯವನ್ನು ಗುರಿಯಾಗಿಸಿಕೊಂಡ ಐದು ಕ್ಷಿಪಣಿಗಳನ್ನು ತಡೆಯಲಾಗಿದೆ. ದುಬೈ ಮೇಲೆಯೂ ಕ್ಷಿಪಣಿ ತಡೆಗಟ್ಟುವ ಸಂದರ್ಭದಲ್ಲಿ ಭಾರೀ ಸ್ಫೋಟ ಸಂಭವಿಸಿದೆ. ಕುವೈತ್‌ನಲ್ಲಿ ನಡೆದ ದಾಳಿಯಲ್ಲಿ ವಿದ್ಯುತ್ ಮತ್ತು ನೀರು ಘಟಕ ಹಾನಿಗೊಳಗಾಗಿದ್ದು, ಭಾರತದ ಒಬ್ಬ ಕಾರ್ಮಿಕ ಮೃತಪಟ್ಟಿದ್ದು, 10 ಸೈನಿಕರು ಗಾಯಗೊಂಡಿದ್ದಾರೆ. ಇಸ್ರೇಲ್‌ನಲ್ಲಿ, ಪ್ರಮುಖ ಅಣು ಸಂಶೋಧನಾ ಕೇಂದ್ರದ ಬಳಿ ಸೈರನ್‌ಗಳು ಮೊಳಗಿವೆ. ಯೆಮನ್‌ನ ಹೌತಿ ಪಡೆಗಳಿಂದ ಉಡಾಯಿಸಲಾದ ಎರಡು ಡ್ರೋನ್‌ಗಳನ್ನು ಇಸ್ರೇಲ್ ಹೊಡೆದುರುಳಿಸಿದೆ.

ಜವಾಬ್ದಾರಿಯನ್ನು ಹಕ್ಕು ಚಲಾಯಿಸಲು ಬಳಸಿದಾಗ...

ಪುಟ ೧ ನಮ್ಮ ರಾಜ್ಯದಲ್ಲಿ ಶಾಂತವೇರಿ ಗೋಪಾಲಗೌಡ, ಅಬ್ದುಲ್ ನಜೀರ್ ಸಾಬ್, ಎ. ಲಕ್ಷ್ಮೀಸಾಗರ್, ಟಿ.ಆರ್. ಶಾಮಣ್ಣ ವಿ.ಎಸ್. ಕೃಷ್ಣ ಅಯ್ಯರ್, ಬಾವುರಾವ್ ದೇಶಪಾಂಡೆ, ಎಸ್. ಮಲ್ಲಿಕಾರ್ಜುನಯ್ಯ, ಡಾ. ಎಂ.ಆರ್. ತಂಗಾ ಮೊದಲಾದ ಹಲವು ನಾಯಕರು ಮೌಲ್ಯಾಧಾರಿತ ಸಾರ್ವಜನಿಕ ಜೀವನವನ್ನು ನಡೆಸಿದ್ದನ್ನು ನಾನು ಕಂಡಿದ್ದೇನೆ ಮತ್ತು ಸ್ವತಃ ಅನುಭವಿಸಿದ್ದೇನೆ.

ಇವರೆಲ್ಲ ಪಕ್ಷಾತೀತವಾಗಿ ಜನಸಾಮಾನ್ಯರ ಮನ್ನಣೆ ಗಳಿಸಿದವರು. ಪ್ರೊಫೆಸರ್ ಲಕ್ಷ್ಮೀಸಾಗರ್ ಅವರು ಶಾಸಕರಾಗಿ ಆಯ್ಕೆಯಾಗುವ ಮುನ್ನ ನನಗೆ ರೇಣುಕಾಚಾರ್ಯ ಕಾನೂನು ಕಾಲೇಜಿನಲ್ಲಿ ಪಾಠ ಹೇಳಿದ ಮೇಷ್ಟ್ರು. ನಾನು ಬೆಂಗಳೂರು ನಗರಸಭಾ ಸದಸ್ಯನಾಗಿದ್ದಾಗ ಅವರು ನಗರಾಭಿವೃದ್ಧಿ ಸಚಿವರಾಗಿದ್ದರು. ಆಗ ಬೆಂಗಳೂರಿನಲ್ಲಿ ನೀರಿನ ಕೊರತೆ ಉಂಟಾದಾಗ ನಮ್ಮ ಕ್ಷೇತ್ರಕ್ಕೂ ಬಂದು ನನ್ನೊಡನೆ ಕಾಲ್ನಡಿಗೆಯಲ್ಲಿ ಎಲ್ಲಾ ಕಡೆ ಸಂಚರಿಸಿ ಸಮಸ್ಯೆಯ ತೀವ್ರತೆ ಅರಿತಿದ್ದರು.

ಇವರ್ಯಾರೂ ಜನಸಾಮಾನ್ಯರಿಗಿಂತ ತಾವು ಭಿನ್ನ, ತಮಗೆ ವಿಶೇಷ ಸವಲತ್ತುಗಳು ಬೇಕು, ನಮಗೆ ವಿಐಪಿ ಟ್ರೀಟ್ಮೆಂಟ್ ಬೇಕು ಎಂದು ಭಾವಿಸಿದವರಲ್ಲ ಮತ್ತು ಅಪೇಕ್ಷಿಸಿದವರಲ್ಲ. ನಿಜ, ಪ್ರಧಾನಮಂತ್ರಿಗಳು, ರಾಷ್ಟ್ರಪತಿಗಳು, ಮುಖ್ಯಮಂತ್ರಿಗಳಿಗೆ ಸಹಜವಾಗಿ ಭದ್ರತೆಯ ಕಾರಣ ಒಂದಷ್ಟು ವಿಶೇಷ ಸೌಲಭ್ಯಗಳು ಇರಲೇಬೇಕು. ಅದನ್ನು ನಾವು ವಿಐಪಿ ಟ್ರೀಟ್ಮೆಂಟ್ ದೃಷ್ಟಿಯಿಂದ ನೋಡಲಾಗುವುದಿಲ್ಲ. ಹಾಗೆಯೇ ಅಂದಿನ ಕಾಲದಲ್ಲಿ ನಗರಸಭಾ ಸದಸ್ಯರಿಗೆ, ಶಾಸಕರಿಗೆ ಟೆಲಿಫೋನ್ ಸಂಪರ್ಕ ಕೊಡಿಸುವ ವ್ಯವಸ್ಥೆಯೂ ಇತ್ತು. ಇವೆಲ್ಲವೂ ಜನರ ಸಮಸ್ಯೆಗಳನ್ನು ಪರಿಹರಿಸುವ ದೃಷ್ಟಿಯಿಂದ ನೀಡಲಾಗಿದ್ದ ಸೌಲಭ್ಯಗಳು. ಆದರೆ ಕಾಲಕ್ರಮೇಣ ಶಾಸಕ ಸ್ಥಾನ ಎಂಬುದು ಒಂದು ಸೇವೆ ಅಥವಾ ಸೇವಾ ಸ್ಥಾನ ಎಂಬುದರ ಬದಲಾಗಿ ಹಕ್ಕು ಚಲಾಯಿಸುವ ಸ್ಥಾನವಾಗಿ ಮಾರ್ಪಾಟಾಗಿದ್ದು ದುರದೃಷ್ಟಕರ. ಇತ್ತೀಚೆಗೆ ವ್ಯಾಪಕವಾಗುತ್ತಿರುವ ಮತ್ತು ನಮಗೆ ವಿಶೇಷ ಸವಲತ್ತುಗಳು ದೊರಕಲೇಬೇಕು ಎನ್ನುವ ಮನಸ್ಥಿತಿಯ ವಿಐಪಿ ಮತ್ತು ವಿವಿಐಪಿ ಸಂಸ್ಕೃತಿ ಜನನಾಯಕರ ಬಗ್ಗೆ ಜನಸಾಮಾನ್ಯರ ದೃಷ್ಟಿಯಲ್ಲಿ ಜನಪ್ರತಿನಿಧಿಗಳ ಗೌರವದ ಅವನತಿಯ ಕಡೆ ಸಾಗಿರುವುದು ಕೂಡ ದಿಟ.

ಈ ವಿಐಪಿ ಸಂಸ್ಕೃತಿಯ ಅಡಿಯಲ್ಲಿಯೇ, ರಾಜಕಾರಣಿಗಳ ಫೋಟೋ ವಿಜೃಂಭಿಸುವ ನಗರದ ಸೌಂದರ್ಯಕ್ಕೆ ಮಾರಕವಾಗುತ್ತಿರುವ 'ಫ್ಲೆಕ್ಸ್ ಸಂಸ್ಕೃತಿ'ಯೂ ಸೇರುತ್ತದೆ. ಜನಸಾಮಾನ್ಯರು ಈ ಫ್ಲೆಕ್ಸ್‌ಗಳನ್ನು ನೋಡುತ್ತ ಮನಸ್ಸಿನಲ್ಲೇ ಎಷ್ಟು ಬೈದುಕೊಂಡು ಓಡಾಡುತ್ತಾರೋ ತಿಳಿಯದು. ನಾನು ವಿಧಾನಸಭೆಯಲ್ಲಿ ತಿಳಿಸಿದಂತೆ ಕೆಲವು ವರ್ಷಗಳ ಹಿಂದೆ ಉಗ್ರಗಾಮಿಗಳ ವಿರುದ್ಧ ಹೋರಾಡಿ ತನ್ನ ಜೀವವನ್ನು ಬಲಿಕೊಟ್ಟ ಭಾರತದ ಸೈನ್ಯದ ಕಮಾಂಡೊ ಒಬ್ಬರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಲು ಹೋದಾಗ ದಾರಿಯುದ್ದಕ್ಕೂ ಹಾಕಲಾಗಿದ್ದ ಫ್ಲೆಕ್ಸ್‌ಗಳ ಭರಾಟೆ ಕಂಡು ನನಗೆ ತೀವ್ರ ವೇದನೆಯಾಯಿತು. ಆ ಎಲ್ಲಾ ಫ್ಲೆಕ್ಸ್‌ಗಳಲ್ಲಿ ದೇಶಕ್ಕಾಗಿ ಬಲಿದಾನ ಮಾಡಿದ ಆ ಹುತಾತ್ಮನ ಫೋಟೋ ಕೇವಲ ಸ್ಟ್ಯಾಂಪ್ ಸೈಜ್ ಗಾತ್ರದಲ್ಲಿದ್ದರೆ, ಸ್ಥಳೀಯ ರಾಜಕೀಯ ನಾಯಕರ ಫೋಟೋಗಳು ಲೈಫ್–ಸೈಜ್‌ನಲ್ಲಿ ಬಹಳ ದೊಡ್ಡದಾಗಿ ರಾರಾಜಿಸುತ್ತಿದ್ದವು.

ಕೇಂದ್ರದ ಸಮ್ಮತಿ ಬಳಿಕ ಆಲಮಟ್ಟಿ ಎತ್ತರ ಹೆಚ್ಚಳ

ಪುಟ ೧ ನಮ್ಮ ಸರ್ಕಾರ ಬಂದ ಬಳಿಕ ರೈತರಿಗೆ ಪರಿಹಾರ ಕೊಡುವ ಕೆಲಸ ಮಾಡುತ್ತಿದ್ದೇವೆ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತಕ್ಕಾಗಿ ಮುಳುಗಡೆಯಾಗುವ ಭೂಮಿಗೆ ಮೂರು ವರ್ಷದಲ್ಲಿ ರೈತರಿಗೆ ಪರಿಹಾರ ನೀಡುತ್ತೇವೆ. ಗೆಜೆಟ್ ನೋಟಿಫಿಕೇಶನ್ ಹೊರಡಿಸಿದರೆ ಸಂತ್ರಸ್ತರನ್ನು ಸ್ಥಳಾಂತರ ಮಾಡಿ ಪುನರ್ವಸತಿ ಕಲ್ಪಿಸುವುದು ಮತ್ತು ಕಾಲುವೆಗಳಿಗೆ ಮುಳುಗಡೆಯಾಗುವ ಭೂಮಿಗೆ ಪರಿಹಾರ ಕೊಡುತ್ತೇವೆ ಎಂದು ಹೇಳಿದರು. ಕೇಂದ್ರ ನೀರಾವರಿ ಮಂತ್ರಿಯನ್ನು ಭೇಟಿಯಾಗಿ ಹಲವು ಬಾರಿ ಹೇಳಿದರೂ ಇನ್ನೂ ಗೆಜೆಟ್ ನೋಟಿಫಿಕೇಶನ್ ಹೊರಡಿಸುತ್ತಿಲ್ಲ. ನ್ಯಾಯಾಧಿಕರಣ ತೀರ್ಪು ಬಂದು 13 ವರ್ಷವಾದರೂ ಇನ್ನೂ ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಹೇಳಿದರು.

ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಆಲಮಟ್ಟಿ ವಿಚಾರದಲ್ಲಿ ಜನವಿರೋಧಿ ನಿಲುವು ಹೊಂದಿದೆ. 4 ವರ್ಷ ಅಧಿಕಾರದಲ್ಲಿದ್ದಾಗಲೂ ಭೂ ಪರಿಹಾರ ಘೋಷಿಸಿದರೂ ಹಣ ನೀಡಲಿಲ್ಲ. ನಮ್ಮ ಸರ್ಕಾರ ಪರಿಹಾರ ಕೊಡುವ ತೀರ್ಮಾನ ಮಾಡಿ ಕೆಲಸ ಪ್ರಾರಂಭ ಮಾಡಿದೆ ಎಂದರು. ಯಡಿಯೂರಪ್ಪ, ಬೊಮ್ಮಾಯಿ ಸರ್ಕಾರ ಬರೀ ಲೂಟಿ ಮಾಡಿದ್ದು ಬಿಟ್ಟರೆ ಅಭಿವೃದ್ಧಿ ಕಾರ್ಯ ಮಾಡಲಿಲ್ಲ. ಎಚ್.ವೈ.ಮೇಟಿಯವರ ಒತ್ತಾಯದಂತೆ ಬಾಗಲಕೋಟೆಗೆ ಮೆಡಿಕಲ್ ಕಾಲೇಜು ತರಲು ಶಂಕುಸ್ಥಾಪನೆ ಮಾಡಿದ್ದೇವೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮತ್ತು ಟ್ರಾಮಾ ಸೆಂಟರನ್ನೂ ನಾವು ಮಾಡುತ್ತೇವೆ. ನುಡಿದಂತೆ ಮಾಡುವ ಸರ್ಕಾರ ನಮ್ಮದು ಎಂದರು. ಬಿಜೆಪಿಯವರು ನುಡಿದಂತೆ ನಡೆಯಲಿಲ್ಲ. ಒಂದೇ ಒಂದು ರೂಪಾಯಿ ರೈತರ ಸಾಲ ಮನ್ನಾ ಮಾಡಲಿಲ್ಲ. ಕೋವಿಡ್‌ನಿಂದ ಬಳಲಿದ್ದ ರಾಜ್ಯದ ಜನತೆಗೆ ಅನುಕೂಲ ಮಾಡಿಕೊಡಲು ಐದು ಗ್ಯಾರಂಟಿಗಳನ್ನು ತಂದು ಜನರಿಗೆ ನೆರವಾಗಿದ್ದು ನಮ್ಮ ಸರ್ಕಾರ ಎಂದಿಹ ನುಡಿದರು. ಸಚಿವ ಭೈರತಿ ಸುರೇಶ, ಆರ್.ಬಿ.ತಿಮ್ಮಾಪುರ, ಶಾಸಕ ವಿಜಯಾನಂದ ಕಾಶಪ್ಪನವರ, ಬಿ.ಬಿ.ಚಿಮ್ಮನಕಟ್ಟಿ, ಮಲ್ಲಿಕಾರ್ಜುನ ಚರಂತಿಮಠ, ಅಜಯಕುಮಾರ ಸರನಾಯಕ, ಆನಂದ ನ್ಯಾಮಗೌಡ, ನಜೀರ ಅಹ್ಮದ್, ವೀಣಾ ಕಾಶಪ್ಪನವರ, ಮಲ್ಲಿಕಾರ್ಜುನ ಮೇಟಿ, ಅಭ್ಯರ್ಥಿ ಉಮೇಶ ಮೇಟಿ, ಮಹಾದೇವಿ ಮೇಟಿ ಇದ್ದರು.

ಗ್ಯಾರಂಟಿ ಮುಂದುವರಿಕೆಗೆ ಕಾಂಗ್ರೆಸ್ ಬೆಂಬಲಿಸಿ
ಪುಟ ೧ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಪಂಚ ಗ್ಯಾರಂಟಿ ಯೋಜನೆಗೆ ಪ್ರತಿ ವರ್ಷ 52 ಸಾವಿರ ಕೋಟಿ ರೂ. ಖರ್ಚು ಮಾಡುತ್ತಿದ್ದೇವೆ. ಇದನ್ನು ಮಾಡಿದರೆ ಸರ್ಕಾರದ ಖಜಾನೆ ಖಾಲಿಯಾಗಲಿದೆ ಎಂದು ಬಿಜೆಪಿಯವರು ಆರೋಪ ಮಾಡುತ್ತಿದ್ದು ಗ್ಯಾರಂಟಿ ಜತೆಗೆ ರಾಜ್ಯದ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದರು. ನಾವು ಪ್ರತಿ ವರ್ಷ 52 ಸಾವಿರ ಕೋಟಿ ರೂಪಾಯಿಯನ್ನು ರಾಜ್ಯದ ಜನರ ಜೇಬಿಗೆ ಹಾಕುತ್ತಲೇ ಅಭಿವೃದ್ಧಿ ಕೆಲಸವನ್ನೂ ಮಾಡುತ್ತಿದ್ದೇವೆ ಎಂದು ಹೇಳಿದರು.

ಹಿಂದಿ ಭಾಷೆ ರದ್ದತಿ: ಕೈ ರಾಜಕಾರಣ

• **ಬೆಂಗಳೂರು:** ತೃತೀಯ ಭಾಷೆ ಹಿಂದಿಯನ್ನು ರದ್ದು ಮಾಡುವ ಮೂಲಕ ಕಾಂಗ್ರೆಸ್ ಸರ್ಕಾರ ಮಕ್ಕಳ ಬದುಕಿಗೆ ಕಲ್ಲು ಹಾಕಿದೆ. ಕನ್ನಡದ ಮೇಲಿನ ಪ್ರೀತಿಯಿಂದ ಸರ್ಕಾರ ಈ ತೀರ್ಮಾನ ಮಾಡಿಲ್ಲ. ಇದು ಕೇವಲ ರಾಜಕಾರಣ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಟೀಕಿಸಿದರು. ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಶಿಕ್ಷಣ ಇಲಾಖೆಯಿಂದ ಏಕಾಏಕಿ ತೃತೀಯ ಭಾಷೆ ಹಿಂದಿಯನ್ನು ತೆಗೆದುಹಾಕಲಾಗಿದೆ. ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿರುವ ಸಮಯದಲ್ಲೇ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಲಕ್ಷಾಂತರ ವಿದ್ಯಾರ್ಥಿಗಳು ಹಿಂದಿ ಪಾಠ ಓದಿ ಅಭ್ಯಾಸ ಮಾಡಿದ್ದಾರೆ. ಈಗ ದಿಢೀರನೆ ಈ ತೀರ್ಮಾನ ಕೈಗೊಂಡಿರುವುದು ದೊಡ್ಡ ಸಮಸ್ಯೆಯಾಗಿದೆ ಎಂದು ಗಮನಸೆಳೆದರು. ಮಹಾತ್ಮ ಗಾಂಧೀಜಿ 1918ರಲ್ಲಿ ಹಿಂದಿ ಪ್ರಚಾರ ಸಮಿತಿಯ ಅಧ್ಯಕ್ಷರಾಗಿದ್ದರು. ದಕ್ಷಿಣ ಭಾರತದಲ್ಲೂ ಅವರೇ ಈ ಸಮಿತಿ ಆರಂಭಿಸಿದರು. ಈ ಇತಿಹಾಸ ಗೊತ್ತಿಲ್ಲದ ಕಾಂಗ್ರೆಸ್ ನಾಯಕರು ಏಕಾಏಕಿ ಹಿಂದಿ ರದ್ದು ಮಾಡಿದ್ದಾರೆ. ಮಕ್ಕಳ ವಿಚಾರದಲ್ಲಿ ನಾವು ಸೂಕ್ಷ್ಮವಾಗಿರಬೇಕು ಎಂದು ಹೇಳಿದರು.

ಮುಸ್ಲಿಮರು ಕಾಂಗ್ರೆಸ್ ವಿರುದ್ಧವಾಗಿದ್ದಾರೆ : ಅಶೋಕ್ ಟೀಕೆ

• **ಬೆಂಗಳೂರು:** ದಾವಣಗೆರೆ ಹಾಗೂ ಬಾಗಲಕೋಟೆ ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲಲಿದೆ. ದಾವಣಗೆರೆಯಲ್ಲಿ ಮುಸ್ಲಿಮರು ಕಾಂಗ್ರೆಸ್‌ಗೆ ವಿರುದ್ಧವಾಗಿದ್ದರೆ, ಬಾಗಲಕೋಟೆಯಲ್ಲೂ ಜನರು ಕಾಂಗ್ರೆಸ್‌ಗೆ ವಿರುದ್ಧ ಇದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕುರ್ಚಿ ಭಯ ಇರುವುದರಿಂದ ಪ್ರಚಾರಕ್ಕೆ ಖುದ್ದಾಗಿ ಹೋಗುತ್ತಿದ್ದಾರೆ. ಸಚಿವ ಜಮೀರ್ ಪ್ರಚಾರದಲ್ಲಿ ಭಾಗವಹಿಸುತ್ತಿಲ್ಲ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಭಯದಲ್ಲಿದ್ದಾರೆ ಎಂದರು. ಶಾಮನೂರು ಶಿವಶಂಕರಪ್ಪ ಮುಸ್ಲಿಮರಿಗೆ ಟಿಕೆಟ್ ನೀಡುತ್ತೇನೆಂದು ಹೇಳಿದ್ದರು. ಆದರೆ, ಈಗ ಕುಟುಂಬದವರಿಗೆ ಟಿಕೆಟ್ ನೀಡಲಾಗಿದೆ.

ಪಂಚ ರಥೋತ್ಸವ



ನಂಜನಗೂಡಿನಲ್ಲಿ ಸೋಮವಾರ ನಡೆದ ಐತಿಹಾಸಿಕ ಗೌತಮ ಪಂಚ ರಥೋತ್ಸವದಲ್ಲಿ ಲಕ್ಷಾಂತರ ಜನ ಸಾಗರದ ಮಧ್ಯೆ ಶ್ರೀಕಂಠೇಶ್ವರ ಸ್ವಾಮಿರಥೋತ್ಸವದ(ಗೌತಮ ರಥ) ವಿಹಂಗಮ ನೋಟ.

ಶಾಸಕ, ಸಂಸದರಿಗೆ 3 ಐಪಿಎಲ್ ಟಿಕೆಟ್

• **ಬೆಂಗಳೂರು:** ಶಾಸಕರಿಗೆ ಐಪಿಎಲ್ ಟಿಕೆಟ್ ನೀಡಬೇಕೆನ್ನುವ ವಿಚಾರಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಹಾಗೂ ಕೆಎಸ್‌ಸಿಎ ಪದಾಧಿಕಾರಿಗಳ ನಡುವೆ ನಡೆದ ಸಭೆಯಲ್ಲಿ ಅಂತಿಮ ನಿರ್ಧಾರಕ್ಕೆ ಬರಲಾಗಿದ್ದು, ಪ್ರತಿ ಶಾಸಕ ಹಾಗೂ ಸಂಸದರಿಗೆ ಮೂರು ಐಪಿಎಲ್ ಟಿಕೆಟ್ ನೀಡಲು ಕ್ರಿಕೆಟ್ ಮಂಡಳಿ ಒಪ್ಪಿಗೆ ಸೂಚಿಸಿದೆ.

ಸದಾಶಿವನಗರ ಡಿಸನಿವಾಸದಲ್ಲಿ ಕೆಎಸ್‌ಸಿಎ ಪದಾಧಿಕಾರಿಗಳು, ಆರ್‌ಸಿಬಿ ಹಾಗೂ ಡಿಎನ್‌ಎ ಸಂಸ್ಥೆಯ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಐಪಿಎಲ್ ಮುಂಬರುವ ಐಪಿಎಲ್ ಹಾಗೂ ಅಂತಾರಾಷ್ಟ್ರೀಯ ಪಂದ್ಯಗಳಿಗೆ ಶಾಸಕರಿಗೆ ಉಚಿತ ಟಿಕೆಟ್ ನೀಡುವ ವಿಚಾರ ಕುರಿತ ಸುದೀರ್ಘ ಸಭೆ ನಡೆಸಿದರು. ಸಭೆ ಬಳಿಕ ಮಾಹಿತಿ ನಿಡಿದ ಡಿ.ಕೆ.ಶಿವಕುಮಾರ್ ಅವರು, ಶಾಸಕರಿಗೆ ಐಪಿಎಲ್ ಪಂದ್ಯಗಳ 3 ಟಿಕೆಟ್ ಹಾಗೂ ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 2 ಟಿಕೆಟ್ ಉಚಿತವಾಗಿ ನೀಡಲು ಒಪ್ಪಿದ್ದಾರೆ. ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ 2 ಹೆಚ್ಚುವರಿ ಟಿಕೆಟ್ ಅನ್ನು ಖರೀದಿಸಲು ಅವಕಾಶ ನೀಡಲಾಗಿದೆ ತಿಳಿಸಿದರು. ಈಗ ಮತ್ತೆ ಸಭೆ ಮಾಡಿದ್ದೇವೆ. ಕ್ರಿಕೆಟ್ ಸಂಸ್ಥೆಯವರು ಅನೇಕ ಒಪ್ಪಂದಗಳನ್ನು ಮಾಡಿಕೊಂಡಿರುತ್ತಾರೆ. ಹೀಗಾಗಿ ಈ ತೀರ್ಮಾನಕ್ಕೆ ಬರಲಾಗಿದೆ. ಇದರೊಂದಿಗೆ ಈ ವಿಚಾರ ಇಲ್ಲಿಗೆ ಅಂತ್ಯಗೊಳಿಸಲಾಗುತ್ತಿದೆ. ಯಾರಿಗಾದರೂ ಐಪಿಎಲ್ ಟಿಕೆಟ್ ಬಗ್ಗೆ ಆಸಕ್ತಿ ಇಲ್ಲವಾದರೆ, ಅವರು ಈ ಬಗ್ಗೆ ನಮಗೆ ಲಿಖಿತ ರೂಪದಲ್ಲಿ ನೀಡಲಿ, ನಾವು ಅವರಿಗೆ ಟಿಕೆಟ್ ನೀಡುವುದಿಲ್ಲ. ಇಲ್ಲಿ ಯಾರಿಗೂ ಬಲವಂತವಿಲ್ಲ ಎಂದರು.

ಇಂದಿನಿಂದ ಉಪಚುನಾವಣೆ ಪ್ರಚಾರದಲ್ಲಿ ಭಾಗಿ

ಉಪಚುನಾವಣೆ ಪ್ರಚಾರದ ಬಗ್ಗೆ ಕೇಳಿದಾಗ, ಹೋಗಲೇಬೇಕಲ್ಲವೇ, ಇಂದೇ ಹೋಗಬೇಕಿತ್ತು. ಮುಖ್ಯಮಂತ್ರಿಗಳು ಬಾಗಲಕೋಟೆಗೆ ತೆರಳಿದ್ದಾರೆ. ನಾನು ಹಾಗೂ ಸುರ್ಜೇವಾಲ ಅವರು ಮಂಗಳವಾರ ದಾವಣಗೆರೆ ಹೋಗುತ್ತಿದ್ದು, ಕೆಲವು ಸಭೆಗಳಿವೆ. ಬುಧವಾರ ಬಾಗಲಕೋಟೆಗೆ ತೆರಳಲಿದ್ದೇನೆ. ನಂತರ ಎರಡೂ ಕ್ಷೇತ್ರಗಳಿಗೆ ಮತ್ತೊಂದು ಸುತ್ತು ತೆರಳಿ ಪ್ರಚಾರ ಮಾಡುತ್ತೇನೆ. ಏ.5–6ರಂದು ಕೇರಳ ಚುನಾವಣೆ ಪ್ರಚಾರಕ್ಕೆ ತೆರಳುತ್ತಿದ್ದೇನೆ. ಈಸ್ಟರ್ ಹಾಗೂ ಗುಡ್ ಫ್ರೈಡೆ ಹಿನ್ನೆಲೆಯಲ್ಲಿ ಕೇರಳ ಪ್ರವಾಸವನ್ನು 5ಕ್ಕೆ ಮುಂದೂಡಲಾಗಿದೆ ಎಂದು ತಿಳಿಸಿದರು.

ಕಿರುಸುದ್ದಿ

ಏ.5ರಂದು ಮೂರು ಕೃತಿಗಳ ಲೋಕಾರ್ಪಣಾ ಸಮಾರಂಭ

• **ಬೆಂಗಳೂರು:** ಬೆರಗು ಪ್ರಕಾಶನ ವತಿಯಿಂದ ಏ.5 ರಂದು ಬೆಳಗ್ಗೆ 10.30ಕ್ಕೆ ಕೊಂಡಜ್ಜಿ ಬಸಪ್ಪ ಸಭಾ ಭವನದಲ್ಲಿ ಮೂರು ತಲೆಮಾರಿನವರು ಬರೆದ ಮೂರು ಲೇಖಕರು ಬರೆದ ಮೂರು ಕೃತಿ ಲೋಕಾರ್ಪಣಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.



ಲೇಖಕಿಯರಾದ ಭಾರತಿ ವಸ್ತದ ವಿರಚಿತ ಚೇತನ ಭಾರತಿ, ಸುಧಾ ವಾರಪತ್ರಿಕೆ ಸಂಪಾದಕಿ ರಶ್ಮಿ ಎಸ್. ಬರೆದ ಮಿದು ಮಾತು, ಅರ್ನಿ ನವೀನ್ ಬರೆದ ಲಿಖಿತ ಎಕ್ಸೋಸ್ ಫ್ರಮ್ ಮೈ ಜಾರ್ ಕೃತಿಯನ್ನು ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ಲೋಕಾರ್ಪಣೆಗೊಳಿಸಲಿದ್ದಾರೆ. ಅಂಕಣಕಾರ ಎನ್. ರವಿಶಂಕರ್ ಕೃತಿಪರಿಚಯ ಮಾಡಿ, ಲೇಖಕರೊಂದಿಗೆ ಸಂವಾದ ನಡೆಸಲಿದ್ದಾರೆ.

ತೃತೀಯ ಭಾಷೆಗೆ ಗ್ರೇಡಿಂಗ್ ಸಲ್ಲ: ಹೊರಟ್ಟಿ

• **ಹುಬ್ಬಳ್ಳಿ:** ರಾಜ್ಯ ಸರ್ಕಾರ ಹಿಂದಿ ಸೇರಿ ತೃತೀಯ ಭಾಷಾ ವಿಷಯಗಳಿಗೆ ಅಂಕದ ಬದಲು, ಗ್ರೇಡಿಂಗ್‌ಗೆ ಅವಕಾಶ ನೀಡಿದ್ದು ಸರಿಯಲ್ಲ. ಇದರ ಬಗ್ಗೆ ಮುಖ್ಯಮಂತ್ರಿ, ಶಾಲಾ ಶಿಕ್ಷಣ ಸಚಿವರ ಜೊತೆ ಚರ್ಚಿಸುವೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು. ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಗ್ರೇಡಿಂಗ್ ಬದಲು ಹಿಂದಿನ ವ್ಯವಸ್ಥೆ ಮುಂದುವರಿಸಬೇಕು. ಸರ್ಕಾರವು ಶಿಕ್ಷಕ ಪ್ರತಿನಿಧಿಗಳ ಜೊತೆ ಚರ್ಚಿಸಿಲ್ಲ. 1961ರಿಂದ ಇರುವ ಅಂಕ ಪದ್ಧತಿ ಬದಲಿಸಲು ನಿರ್ಧರಿಸಿದ್ದು ಸರಿಯಲ್ಲ ಎಂದರು. ಆಡಳಿತದಲ್ಲಿ ದ್ವಿಭಾಷಾ ನೀತಿ ಸರಿ. ಆದರೆ, ಶಾಲಾ–ಕಾಲೇಜುಗಳಲ್ಲಿ ಇದು ಸರಿಯಲ್ಲ. ಎಲ್ಲ ವಿಶ್ವವಿದ್ಯಾಲಯಗಳಲ್ಲಿಯೂ ಹಿಂದಿ ಅಧ್ಯಯನ ವಿಭಾಗ ಇದೆ. ಅವುಗಳನ್ನು ಮುಚ್ಚುತ್ತೀರಾ ಎಂದು ಪ್ರಶ್ನಿಸಿದರು. ದೈಹಿಕ ಶಿಕ್ಷಣ, ಚಿತ್ರಕಲೆಗೆ ಗ್ರೇಡಿಂಗ್ ಕೊಡಬಹುದು. ಸರ್ಕಾರದ ಗ್ರೇಡಿಂಗ್ ಕ್ರಮದಿಂದ ತೃತೀಯ ಭಾಷೆಯಾಗಿ ಓದುವ ಹಿಂದಿ ಅಲ್ಲದೇ ಕನ್ನಡ, ಸಂಸ್ಕೃತ, ಉರ್ದು, ತಮಿಳು ಸೇರಿ ಇತರ ವಿಷಯಗಳಿಗೂ ಸಮಸ್ಯೆ ಆಗುತ್ತದೆ. ಹಿಂದಿ ಬಾರದಿದ್ದರೆ ಸಂಸದರಿಗೆ ಸಮಸ್ಯೆ ಆಗುತ್ತದೆ. ದೇಶದ ವಿವಿಧ ರಾಜ್ಯಗಳಿಗೆ ಹೋದಾಗ ಸಂವಹನಕ್ಕೆ ಹಿಂದಿ ಅವಶ್ಯ ಎಂದರು.

ದಾಸವಾಳ ಹೂವಿನ ದಿಂಡು ನುಂಗಿ ಮಗು ಸಾವು

• **ಮೈಸೂರು:** ದಾಸವಾಳದ ಹೂವಿನ ದಿಂಡಿನ ಭಾಗವನ್ನು ನುಂಗಿದ ಆರೂವರೆ ತಿಂಗಳ ಮಗು ಉಸಿರಾಟದ ಸಮಸ್ಯೆಯಿಂದ ಬಳಲಿ ಮೃತಪಟ್ಟಿರುವ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನ ದೊಡ್ಡಹೆಜ್ಜೂರು ಗ್ರಾಮದಲ್ಲಿ ಸಂಭವಿಸಿದೆ. ಹುಣಸೂರು ತಾಲೂಕಿನ ದೊಡ್ಡ ಹೆಜ್ಜೂರು ಗ್ರಾಮದ ನಿವಾಸಿಗಳಾದ ಸುದರ್ಶನ್ ಹಾಗೂ ನವ್ಯ ದಂಪತಿಯ ಎರಡನೇ ಪುತ್ರ ಚಿನ್ಮಯ್ ಗೌಡ ಸಾವಿಗೀಡಾದ ಮಗು. ಮನೆಯ ಹೊಸ್ತಿಲಿಗೆ ಪೂಜೆ ಮಾಡಿ ದಾಸವಾಳದ ಹೂವುಗಳನ್ನು ಇಡಲಾಗಿತ್ತು. ಈ ವೇಳೆ ಮಗು ಚಿನ್ಮಯ್ ತನ್ನ ಅಣ್ಣನ ಜತೆ ಆಟವಾಡುತ್ತಿದ್ದ. ಪೂಜೆಗಾಗಿ ಇಟ್ಟಿದ್ದ ದಾಸವಾಳ ಹೂವಿನ ಹಸಿರು ದಿಂಡಿನ ಭಾಗವನ್ನು ಕಿತ್ತು ಬಾಯಿಗೆ ಹಾಕಿಕೊಂಡಿದ್ದ ಚಿನ್ಮಯ್, ಇದನ್ನು ಗಮನಿಸಿದ ಮಗುವಿನ ಅಣ್ಣ ಹೂ ಹೊರತೆಗೆಯಲು ಪ್ರಯತ್ನಿಸಿದ್ದನಾದರೂ, ಅಷ್ಟರಲ್ಲೇ ಮಗು ಆ ದಿಂಡನ್ನು ನುಂಗಿದೆ. ಮಗು ನುಂಗಿದ ಹೂವಿನ ಭಾಗವು ನೇರವಾಗಿ ಶ್ವಾಸಕೋಶಕ್ಕೆ ಹೋಗಿ ಸಿಲುಕಿಕೊಂಡು ಮೃತಪಟ್ಟಿದೆ.

ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಾಲೆ | ಜೂನ್‌ನಿಂದ ಪ್ರಾರಂಭ

ಆರ್‌ವಿಕೆ ಶಾಲೆ ಲೋಕಾರ್ಪಣೆ

• **ಬೆಂಗಳೂರು:** ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ (ಆರ್‌ವಿಕೆ) – ಹುರುಳಿಚಿಕ್ಕನಹಳ್ಳಿ ಸಿಬಿಎಸ್‌ಸಿ ಶಾಲೆಯನ್ನು ಶಬರಿ ನಗರದಲ್ಲಿ ಲೋಕಾರ್ಪಣೆ ಮಾಡಲಾಯಿತು. ಆರ್‌ವಿಕೆ ಸಮೂಹದ 18ನೇ ಶಾಲೆ ಇದಾಗಿದ್ದು, ಈ ಜೂನ್‌ನಿಂದ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲಿದೆ.

ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಅವರು ಮಾತನಾಡಿ, ಸಾಮಾನ್ಯಜ್ಞಾನ ಹೆಚ್ಚಾಗಿರುವ ದೇಶ ಬಹುಬೇಗ ಉದ್ಧಾರವಾಗುತ್ತದೆ ಎಂಬುದನ್ನು ತಾವು ವಿದೇಶ ಪ್ರವಾಸದಲ್ಲಿ ಕಂಡುಕೊಂಡ ಅಂಶವಾಗಿದೆ. ಒಳ್ಳೆಯ ವಿಚಾರವನ್ನು ಬಳಸದೇ ಇದ್ದರೆ, ನಾವು ಸೂಕ್ಷ್ಮಗ್ರಾಹಿಗಳಾಗದೇ ಇದ್ದರೆ, ಒಳ್ಳೆಯದು ಕೆಟ್ಟದ್ದರ ನಡುವಿನ ವ್ಯತ್ಯಾಸ ತಿಳಿಯದಿದ್ದರೆ ಅದು ಪ್ರಯೋಜನವಾಗದು ಎಂದರು.

ಶಿಕ್ಷಣ ಹಾಗೂ ಸಾಕ್ಷರತೆಯ ನಡುವಿನ ವ್ಯತ್ಯಾಸದ ಕುರಿತು ಹೇಳುತ್ತ, ಶಿಕ್ಷಣ ಏನನ್ನು ಮಾಡಬೇಕು ಮತ್ತು ಮಾಡಬಾರದು ಎಂಬುದನ್ನು ಕಲಿಸುತ್ತದೆ. ಆದರೆ ಇಂದು ಒಳ್ಳೆಯದು, ಕೆಟ್ಟದನ್ನು ನಿರ್ಧರಿಸುವುದೇ ಕಷ್ಟವಾಗುತ್ತಿದೆ. ಕತ್ತಲುಮಯ ಅಜ್ಞಾನದಿಂದ ಪಾರುಮಾಡುವ ಕಲಿಕೆಯನ್ನು ಸನಾತನವು ಶಿಕ್ಷಣ ಎಂದು ಕರೆಯಿತು. ಶಿಕ್ಷಣ ಚಾರಿತ್ರ್ಯವನ್ನು ನಿರ್ಮಿಸಬೇಕು, ಬೌದ್ಧಿಕ ಸಾಮರ್ಥ್ಯ ವಿಕಸಿಸಬೇಕು, ಸ್ವಾಭಿಮಾನಿ ಸ್ವಾವಲಂಬಿ ಜೀವನ ನೀಡಬೇಕು ಎಂದು ಹೇಳಿದರು.

ಅನ್ಯಾಯದ ಮಾರ್ಗದಲ್ಲಿ ಗೆಲ್ಲುವುದಕ್ಕಿಂತ ನ್ಯಾಯದ ಮಾರ್ಗದಲ್ಲಿ ಸೋತರೂ ಚಿಂತೆ ಇಲ್ಲ, ಅದನ್ನು ಪೋಷಕರು ಕಲಿಸಬೇಕು. ಶಿಕ್ಷಣವನ್ನು ಕಾಲುಭಾಗ ಶಿಕ್ಷಕರಿಂದ, ಕಾಲುಭಾಗ ಪರಿಶ್ರಮದಿಂದ, ಕಾಲು ಭಾಗ ಸ್ನೇಹಿತರಿಂದ, ಕಾಲುಭಾಗ ತನ್ನೊಳಗಿನ ಅರಿವಿನಿಂದ ಪಡೆಯಲಾಗುತ್ತದೆ. ಹಾಗಾಗಿ, ಶಿಕ್ಷಣ ಜೀವನಪರ್ಯಂತದ ಪ್ರಕ್ರಿಯೆಯಾಗಿದೆ. ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಂತಹ ಶಾಲೆ ಸಿಕ್ಕರೆ ಮಾನವ ಸಂಪನ್ಮೂಲ ಆಗುತ್ತಾರೆ, ದೇಶಭಕ್ತರಾಗುತ್ತಾರೆ. ಇನ್ನೊಬ್ಬರನ್ನು ಪ್ರೇರಿಸುವ ವ್ಯಕ್ತಿಗಳು ದೊರಕುತ್ತಾರೆ. ಇದರಿಂದ ಸಮಾಜದಲ್ಲಿ ಪೊಲೀಸರ ಅಗತ್ಯ ಕಡಿಮೆ ಆಗುತ್ತದೆ ಎಂದರು.



> ನಾವು ಮೆಕಾಲೆ ಶಿಕ್ಷಣವನ್ನು ಬದಲಾಯಿಸಲು ಸಾಧ್ಯವಾಗದು. ಆದರೆ ಶಿಕ್ಷಣದಲ್ಲಿ ಭಾರತೀಯತೆಯನ್ನು ತರಲು ಸಾಧ್ಯವಿದೆ. ನಾಡಿನ ಜ್ಞಾನ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಿಳಿಸುವ ದೃಢಸಂಕಲ್ಪದಿಂದ ಶಾಲೆಗಳನ್ನು ಆರಂಭಿಸಲಾಗಿದೆ.
> ■ ನಾ. ದಿನೇಶ್ ಹೆಗ್ಡೆ, ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ

> ಒಂದು ಶಾಲೆ ಅಕಾಡೆಮಿಕ್ ಎಕ್ಸರ್‌ಸೈಜ್ ಆಗದೇ ಸಂಸ್ಕೃತಿ, ಸಂಸ್ಕಾರ ಕೇಂದ್ರವಾಗಬೇಕು. ಮೊಬೈಲ್, ಸೋಷಿಯಲ್ ಮೀಡಿಯಾ, ಎಐನಿಂದ ಹುಟ್ಟಿದ ಸವಾಲುಗಳನ್ನು ನಿರ್ವಹಿಸುವಲ್ಲಿ ನಮ್ಮೆಲ್ಲರ ಜವಾಬ್ದಾರಿ ಇದೆ.
> ■ ಎಂ.ಪಿ. ಕುಮಾರ್, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ

ಮೊಬೈಲ್ ನಿಷೇಧಕ್ಕಿಂತ ವಿವೇಕದ ಬಳಕೆ ಅಗತ್ಯ: ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರದ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಅವರು, ಇಂದಿನ ಶಾಲಾ ಶಿಕ್ಷಣ ಅಂಕಗಳ ಮೇಲೆ ಅವಲಂಬಿತವಾಗಿದ್ದು, ಸಂಸ್ಕಾರ ಶಿಕ್ಷಣ ಬೇಕಾಗಿದೆ. ಉತ್ತಮ ವ್ಯಕ್ತಿಗಳು ತಯಾರಾದರೆ ಉತ್ತಮ ರಾಷ್ಟ್ರ ನಿರ್ಮಾಣವಾಗುತ್ತದೆ, ಇಲ್ಲವಾದರೆ ದೇಶಕ್ಕೆ ಭವಿಷ್ಯವಿರುವುದಿಲ್ಲ. ಶಾಲೆ, ಮನೆ ಸಾಮಾಜಿಕ ಪರಿವರ್ತನೆಯ ಕೇಂದ್ರಗಳು. ಮೊಬೈಲ್ ಬಳಕೆ ಯನ್ನು ನಿಷೇಧ ಮಾಡುವುದಕ್ಕಿಂತ ಅದರ ಬಳಕೆಯ ಬಗೆಗೆ ವಿವೇಕವನ್ನು ಕಲಿಸಬೇಕು. ಮನೆಯಲ್ಲಿ ಆ ಬಗ್ಗೆ ಯೋಚನೆ ಮಾಡಿದರೆ ಮಕ್ಕಳು ಚೆನ್ನಾಗಿ ಬೆಳೆಯುತ್ತಾರೆ. ಸಮಾಜಕ್ಕೆ ಉತ್ತಮ ವ್ಯಕ್ತಿಗಳು ಬರಬೇಕಾದರೆ ಮನೆ, ಮಂದಿರ, ಮಸೀದಿ, ಶಾಲೆಗಳಲ್ಲಿ ಕಲಿಸಬೇಕು. ಸಮಸ್ಯೆ, ಸವಾಲುಗಳನ್ನು ಸಂಘಟಿತರಾಗಿ ಕಂಡು ಕೊಳ್ಳಬೇಕು. ಈ ಶಾಲೆ ಈ ಭಾಗದ ಶಕ್ತಿಕೇಂದ್ರವಾಗಲಿ ಎಂದು ಹಾರೈಸಿದರು.

ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ.ಪಿ. ಕುಮಾರ್, ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಉಪಸ್ಥಿತರಿದ್ದರು. ಮಕ್ಕಳು ಪ್ರಸ್ತುಪಡಿಸಿದ ಸಮೂಹಗೀತೆ, ಪ್ರದರ್ಶಿಸಿದ ಅರ್ಧನಾರೀಶ್ವರ ನೃತ್ಯ ಹಾಗೂ ದಶಾವತಾರ ನೃತ್ಯರೂಪಕಗಳು ಎಲ್ಲರ ಗಮನ ಸೆಳೆದವು.

ಗ್ಯಾಸ್ ಬಳಕೆ ಇಳಿಕೆಗೆ ಒಕ್ಕೂಟಗಳಿಗೆ ಸೂಚನೆ

• **ಬೆಂಗಳೂರು:** ಗ್ಯಾಸ್ ಬಳಕೆ ಪ್ರಮಾಣವನ್ನು ಶೇ.55ರ ಒಳಗೆ ಇಳಿಸಿಕೊಳ್ಳಬೇಕು, ಶೇ.100ರಷ್ಟು ಬಳಸಿದರೆ ಶೇ.30ರಷ್ಟು ಹೆಚ್ಚುವರಿ ವೆಚ್ಚ ಮಾಡಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಗ್ಯಾಸ್ ಬಳಕೆ ಇಳಿಕೆಗೆ ಹಾಲು ಒಕ್ಕೂಟಗಳಿಗೂ ಸೂಚನೆ ನೀಡಲಾಗಿದೆ ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದ್ದಾರೆ.



ಸೋಮವಾರ ತಮ್ಮ ನಿವಾಸದ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಶೇ.100ರಷ್ಟು ಗ್ಯಾಸ್ ಬಳಸಿದರೆ ಉತ್ಪನ್ನಗಳ ಬೆಲೆ ಏರಿಕೆ ಮಾಡಬೇಕಾಗುತ್ತದೆ. ನಾವು ಕೂಡ ಅಗತ್ಯ ವಸ್ತುಗಳ ವ್ಯಾಪ್ತಿಯಲ್ಲಿ ಬರುತ್ತಿದ್ದು, ಇಂತಹ ಸಮಸ್ಯೆಗಳು ಎದುರಾಗಲಿವೆ. ಹೀಗಾಗಿ ಜನ ಈಗಲೇ ಎಚ್ಚೆತ್ತುಕೊಳ್ಳುವುದು ಉತ್ತಮ. ಸದ್ಯಕ್ಕೆ ಹಾಲು ಒಕ್ಕೂಟಕ್ಕೆ ಈ ಖರ್ಚು ವೆಚ್ಚದ ಸಮಸ್ಯೆ ಎದುರಾಗಿಲ್ಲ ಎಂದರು. ಈ ಮುನ್ನ ಫರ್ನೆಸ್ ಆಯಿಲ್, ಗ್ಯಾಸ್ ಬೆಲೆ ಕಡಿಮೆ ಇತ್ತು, ಈಗ ಬೆಲೆ ಹೆಚ್ಚಾಗಿರುವುದರಿಂದ ಸ್ಥಳೀಯವಾಗಿ ಸೌದೆ ಒಲೆಯನ್ನು ಒಂದು ಪ್ಲಾಂಟ್‌ನಲ್ಲಿ ಅಳವಡಿಸಿಕೊಂಡಿದ್ದೇವೆ ಎಂದು ಹೇಳಿದರು.

ಹಣ ಕೊಟ್ಟು ಪಂದ್ಯ ನೋಡಲಿ

ಉಚಿತವಾಗಿ ಟಿಕೆಟ್ ಕೇಳಿರುವುದು ತಪ್ಪು. ಪಂದ್ಯ ವೀಕ್ಷಣೆ ಮಾಡುವ ಆಸೆ ಇರುವವರು ವೈಯಕ್ತಿಕವಾಗಿ ಹಣ ಕೊಟ್ಟು ಹೋಗಿ ನೋಡಲಿ. ಐಪಿಎಲ್ ರಾಷ್ಟ್ರವನ್ನು ಪ್ರತಿನಿಧಿಸುವ ಪಂದ್ಯಾವಳಿ ಅಲ್ಲ. ವಾಣಿಜ್ಯ ಉದ್ದೇಶಿತ ಪಂದ್ಯಾವಳಿ. ಇವುಗಳ ಬಗ್ಗೆ ಜನಪ್ರತಿನಿಧಿಗಳು ಹೆಚ್ಚು ಗಮನಹರಿಸುವುದು ಒಳ್ಳೆಯದಲ್ಲ ಎಂದು ಡಿ.ಕೆ.ಸುರೇಶ್ ಹೇಳಿದರು.

ರಸಗೊಬ್ಬರ ಅಭಾವ ಸೃಷ್ಟಿ ಸಾಧ್ಯತೆ

ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅವಲಂಬಿತವಾಗಿರುವ ವಸ್ತುಗಳ ಉತ್ಪಾದನೆ ಕಡಿಮೆಯಾದರೆ ಬೆಲೆ ಏರಿಕೆಯಾಗುತ್ತದೆ.

ವಿಮಾನ ನಿಲ್ದಾಣಕ್ಕೆ ನುಗ್ಗಿದ ಕರಡಿ ಸೆರೆ

• **ಶಿವಮೊಗ್ಗ:** ಕಾಡಿನಿಂದ ಬಂದ ಕರಡಿಯೊಂದು ಸಮೀಪದ ಸೋಗಾನೆ ವಿಮಾನ ನಿಲ್ದಾಣದ ಕಾಂಪೌಂಡ್ ಹಾರಿ ಒಳಗೆ ಸೇರಿಕೊಂಡಿದ್ದು, ಆತಂಕ ಸೃಷ್ಟಿಸಿದ ಘಟನೆ ಸೋಮವಾರ ನಡೆಯಿತು.

ಸೋಮವಾರ ಬೆಳಗ್ಗೆ 9.30ರ ಸುಮಾರಿಗೆ ಕರಡಿ ಕಾಂಪೌಂಡ್ ಹಾರಿ ವಿಮಾನ ನಿಲ್ದಾಣದ ಒಳಗೆ ಹೋಗಿರುವುದನ್ನು ಕಂಡ ನಿವಾಸಿಗಳು ನಿಲ್ದಾಣದ ಸಿಬ್ಬಂದಿಗೆ ಮಾಹಿತಿ ನೀಡಿದರು. ತಕ್ಷಣ ಜಾಗೃತರಾದ ಅಧಿಕಾರಿಗಳು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ಕರಡಿ ಪತ್ತೆ ಕಾರ್ಯಕ್ಕೆ ಮುಂದಾದರು. ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವ ಊರಿನ ನಿವಾಸಿಗಳು ಕರಡಿ ಬಂದಿರುವುದನ್ನು ವಿಡಿಯೋ ಮಾಡಿಕೊಂಡಿದ್ದರಿಂದ ಕರಡಿ ನಿಲ್ದಾಣದ ಒಳಗೆ ಸೇರಿಕೊಂಡಿರುವುದು ಖಾತರಿಯಾಗಿತ್ತು. ನಿಲ್ದಾಣದ ಪ್ರದೇಶದ ಒಳಗೆ ಅಲ್ಲಲ್ಲಿ ಪೊದೆ ಬೆಳೆದಿರುವುದರಿಂದ ಕರಡಿ ಅಲ್ಲೆ ಅವಿತಿರಬಹುದೆಂಬ ಶಂಕೆಯಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಆಹಾರ ಅರಸುತ್ತಾ ವಿಮಾನ ನಿಲ್ದಾಣ ಪಕ್ಕದ ವಿನಾಯಕ ನಗರದ ಸುತ್ತಮುತ್ತ ಕರಡಿ ಸಂಚಾರ ನಡೆಸಿತ್ತು.

ಬಳಿಕ ಹರಸಾಹಸಪಟ್ಟು ಅರಣ್ಯ ಸಿಬ್ಬಂದಿ ಜ್ಯೋತಿನಗರದ ಅಂಗನವಾಡಿ ಬಳಿ ಕರಡಿಗೆ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆಹಿಡಿದು ವೈದ್ಯಕೀಯ ಚಿಕಿತ್ಸೆ ನೀಡಿ ಪುನರ್ವಸತಿ ವಿಭಾಗಕ್ಕೆ ಕಳುಹಿಸಿದರು. ಕರಡಿ ಸೆರೆಯ ಬಳಿಕ ಗ್ರಾಮಸ್ಥರು ನಿಟ್ಟುಸಿರು ಬಿಟ್ಟರು. ಸುಮಾರು 11.30ರವರೆಗೆ ಈ ಕಾರ್ಯಾಚರಣೆ ನಡೆಯಿತು. ಉಂಬ್ಳೆಬೈಲು ಅರಣ್ಯ ವಿಭಾಗದ ಅಧಿಕಾರಿಗಳು, ಸಿಬ್ಬಂದಿ ಮತ್ತು ತುಂಗಾನಗರ ಪೊಲೀಸರು ಈ ಸಂದರ್ಭದಲ್ಲಿದ್ದರು.

ಸೇತುವೆಯಿಂದ ಬಿದ್ದ ಬಸ್ 30 ಪ್ರಯಾಣಿಕರಿಗೆ ಗಾಯ



• **ಭದ್ರಾವತಿ:** ತಾಲೂಕಿನ ಕಾಗೇಹಳ್ಳ ಗ್ರಾಮದ ಸೇತುವೆಯಿಂದ ಖಾಸಗಿ ಬಸ್ ಉರುಳಿ ಬಿದ್ದ ಪರಿಣಾಮ ಸುಮಾರು 30ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿರುವ ಘಟನೆ ಸೋಮವಾರ ಮಧ್ಯಾಹ್ನ ನಡೆದಿದೆ.

ಶ್ರೀ ರೇಣುಕಾಂಬಾ ಟ್ರಾವೆಲ್ಸ್ ಮಾಲೀಕತ್ವದ ಖಾಸಗಿ ಬಸ್ ದಾವಣಗೆರೆಯಿಂದ ಭದ್ರಾವತಿ ನಗರಕ್ಕೆ ಆಗಮಿಸುತ್ತಿದ್ದಾಗ ಕಾಗೇಹಳ್ಳ ಗ್ರಾಮದ ಬಳಿ ಚಾಲಕನ ನಿಯಂತ್ರಣ ಕಳೆದುಕೊಂಡು ಮಧ್ಯಾಹ್ನ ಸುಮಾರು 1.30ರ ಸಮಯದಲ್ಲಿ ಉರುಳಿ ಬಿದ್ದಿದೆ. ಅಪಘಾತ ಸಂದರ್ಭದಲ್ಲಿ ಬಸ್ಸಿನಲ್ಲಿ ಒಟ್ಟು 35 ಪ್ರಯಾಣಿಕರಿದ್ದರು ಎಂದು ಹೇಳಲಾಗಿದೆ. ಅಪಘಾತದಲ್ಲಿ ಗಾಯಗೊಂಡ ಪ್ರಯಾಣಿಕರನ್ನು ಹಳೇನಗರದ ತಾಲೂಕು ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಈ ಪೈಕಿ ಗಂಭೀರವಾಗಿ ಗಾಯಗೊಂಡಿರುವ ಸುಮಾರು 17ಕ್ಕೂ ಹೆಚ್ಚು ಪ್ರಯಾಣಿಕರನ್ನು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ಮಾಹಿತಿ ತಿಳಿದ ತಕ್ಷಣ ಗ್ರಾಮಾಂತರ ಠಾಣೆ ಪೊಲೀಸರು ಹಾಗೂ ಅಗ್ನಿಶಾಮಕದಳ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಪೊಲೀಸ್ ಉಪಾಧೀಕ್ಷಕ ಪ್ರಕಾಶ್ ರಾಥೋಡ್, ಗ್ರಾಮಾಂತರ ಪೊಲೀಸ್ ಠಾಣೆ ಉಪ ನಿರೀಕ್ಷಕರು ಸೇರಿದಂತೆ ಇನ್ನಿತರ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ.

ಸಂತ್ರಸ್ತೆಗೆ ಆರೋಪಿ ವಿಡಿಯೋ ಕಾಲ್ ಬೆದರಿಕೆ

• **ಧಾರವಾಡ:** ಇಲ್ಲಿನ ಕೇಂದ್ರ ಕಾರಾಗೃಹದ ವಿಚಾರಣಾಧೀನ ಕೈದಿಯೊಬ್ಬ ಕಾನೂನು ಬಾಹಿರವಾಗಿ ಮೊಬೈಲ್ ಬಳಸಿ, ಪೋಕ್ಸೋ ಪ್ರಕರಣದ ಸಂತ್ರಸ್ತ ಅಪ್ರಾಪ್ತ ಬಾಲಕಿಗೆ ವಿಡಿಯೋ ಕಾಲ್ ಮಾಡಿ, ಬೆದರಿಕೆ ಹಾಕಿದ ಘಟನೆ ಬೆಳಕಿಗೆ ಬಂದಿದೆ.

ಬಾಲಕಿಯ ಮೇಲೆ ದೌರ್ಜನ್ಯ ಎಸಗಿದ ಆರೋಪದಡಿ ಜೈಲು ಪಾಲಾಗಿರುವ ಆರೋಪಿ, ಜೈಲಿನ ಒಳಗಿನಿಂದ ಬಾಲಕಿಯ ಮೊಬೈಲ್‌ಗೆ ವಿಡಿಯೋ ಕಾಲ್ ಮಾಡಿ, ನ್ಯಾಯಾಲಯದಲ್ಲಿ ತನ್ನ ಪರವಾಗಿ ಸಾಕ್ಷಿ ನುಡಿಯುವಂತೆ ಬೆದರಿಕೆ ಹಾಕಿದ್ದಾನೆ. ಆರೋಪಿ ಹುಬ್ಬಳ್ಳಿಯ ಫರವೇಜ್ ಬಾಲಕಿಗೆ ಕರೆ ಮಾಡಿ, ತಾನು ನಿರ್ದೋಷಿ ಎಂದು ಹೇಳಬೇಕು. ತನ್ನ ವಿರುದ್ಧ ಸಾಕ್ಷಿ ಹೇಳಿದರೆ, ತನ್ನ ಜೊತೆಗಿನ ಅಶ್ಲೀಲ ಖಾಸಗಿ ವಿಡಿಯೋ ವೈರಲ್ ಮಾಡುವುದಾಗಿಯೂ ಸಹ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ.

ಆತಂಕದಲ್ಲಿ ಬಾಲಕಿ

ಜೈಲಿನಿಂದ ಕರೆ ಬಂದ ಕಾರಣ ಸಂತ್ರಸ್ತ ಬಾಲಕಿ ಮತ್ತು ಆಕೆಯ ಪಾಲಕರು ಆತಂಕಕ್ಕೆ ಒಳಗಾಗಿದ್ದಾರೆ. ಆತ ಜೈಲಿನಲ್ಲಿದ್ದರೂ, ಸ್ಮಾರ್ಟ್‌ಫೋನ್ ಬಳಸಿ ಬಾಲಕಿ ಸಂಪರ್ಕ ಮಾಡಿರುವುದು ಕಾರಾಗೃಹದ ಭದ್ರತಾ ಲೋಪವನ್ನು ಎತ್ತಿ ತೋರಿಸುತ್ತದೆ. ಜೈಲಿನಲ್ಲಿ ಮೊಬೈಲ್ ಮತ್ತು ಇಂಟರ್‌ನೆಟ್ ಲಭಿಸಿದ್ದು ಹೇಗೆ? ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಹಿಂದೆ ಜೈಲಿನಲ್ಲಿ ಮೊಬೈಲ್ ಪತ್ತೆ ಆಗಿವೆ. ಈ ಘಟನೆ ಜೈಲು ಅಧಿಕಾರಿಗಳ ಕಾರ್ಯವೈಖರಿ ಮೇಲೆ ಸಂಶಯ ಮೂಡಿಸಿದೆ.

ನಾಳೆ ಸಿದ್ಧಗಂಗಾ ಮಠಕ್ಕೆ ರಾಷ್ಟ್ರಪತಿ ಮುರ್ಮು

• **ತುಮಕೂರು:** ಏಪ್ರಿಲ್ 1ರಂದು ಸಿದ್ಧಗಂಗಾ ಮಠದ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾಗವಹಿಸಲಿದ್ದು, ಅಂದು ತುಮಕೂರು ನಗರದಾದ್ಯಂತ ಪೊಲೀಸ್ ಬಂದೋಬಸ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಈ ಸಂಬಂಧ ಸಭೆ ನಡೆಸಿದರು.



ತುಮಕೂರು ಜಿಲ್ಲೆಗೆ ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಕೇಂದ್ರ ಗೃಹ ಸಚಿವರು, ರಾಜ್ಯಪಾಲರು ಸೇರಿದಂತೆ ಗಣ್ಯರು ಆಗಮಿಸುವ ಹಿನ್ನೆಲೆ ಲೋಪವಿಲ್ಲದೆ ಸೂಕ್ತ ಭದ್ರತೆ ಒದಗಿಸಲು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಜವಾಬ್ದಾರಿ ನೀಡಿ ನಿಯೋಜನೆ ಮಾಡಲಾಗಿದೆ ಎಂದು ಸಭೆಗೆ ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ಭದ್ರತೆ ಕುರಿತು ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ಅಧೀಕ್ಷಕ ಕೆ.ವಿ.ಅಶೋಕ್, ರಾಷ್ಟ್ರಪತಿ ಅವರ ಭದ್ರತೆಗೆ ಸುಮಾರು 15,000 ಪೊಲೀಸ್ ಸಿಬ್ಬಂದಿ ನಿಯೋಜಿಸಲು ಪೊಲೀಸ್ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ರಾಷ್ಟ್ರಪತಿ ಆಗಮಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮತ್ತೆ ನಿರ್ಗಮಿಸುವವರೆಗೆ ತುಮಕೂರು ನಗರದಾದ್ಯಂತ ಪೊಲೀಸ್ ಬಂದೋಬಸ್ತ್ ಇರಲಿದೆ. ತುಮಕೂರು ವಿಶ್ವವಿದ್ಯಾಲಯದಲ್ಲಿ ಹೆಲಿಪ್ಯಾಡ್, ವಾಹನ ಸಂಚರಿಸುವ ರಸ್ತೆ ಮಾರ್ಗಗಳು ಹಾಗೂ ಕಾರ್ಯ ಕ್ರಮ ನಡೆಯುವ ಜಾಗ ಸೇರಿದಂತೆ ಎಲ್ಲಾ ಪ್ರದೇಶಗಳಲ್ಲಿ ತಂಡಗಳನ್ನು ರಚಿಸಿ ಪೊಲೀಸ್ ಬಂದೋಬಸ್ತ್ ಮಾಡಲಾಗುತ್ತಿದೆ. ಅಲ್ಲದೆ, ಮಾ.31 ಪೂರ್ವ ತಾಲೀಮು ಪ್ರಕ್ರಿಯೆ ಹಮ್ಮಿಕೊಂಡಿರುವುದಾಗಿ ಮಾಹಿತಿ ನೀಡಿದರು.

ತೃತೀಯ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣತೆ ಕಡ್ಡಾಯವಲ್ಲ | ನಿಲುವಿಗೆ ಕನ್ನಡ ಸಂಘಟನೆಗಳ ಸ್ವಾಗತ

ಕೇವಲ ಗ್ರೇಡ್ ನೀಡುವುದರಿಂದ ಕನ್ನಡ ಭಾಷೆಗೂ ಕುತ್ತು?

▸ **ನಂದಿನಿ ಎನ್.**

• **ಬೆಂಗಳೂರು:** ರಾಜ್ಯ ಸರ್ಕಾರವು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ತೃತೀಯ ಭಾಷೆಯ ಕಲಿಕೆಯನ್ನು ಬೋಧನೆಗೆ ಮಾತ್ರ ಸೀಮಿತಗೊಳಿಸಿ, ಅಂಕಗಳನ್ನು ಪರಿಗಣಿಸದೆ ಕೇವಲ ಗ್ರೇಡ್ ನೀಡುವ ನಿರ್ಧಾರ ಕೈಗೊಂಡಿದೆ. ಆದರೆ, ಉರ್ದು ಶಾಲೆಗಳು ಸೇರಿದಂತೆ ತೃತೀಯ ಭಾಷೆಯಾಗಿ ಎಲ್ಲಿ ಕನ್ನಡ ಕಲಿಯುತ್ತಿದ್ದಾರೋ ಅಂತಹ ಶಾಲೆಯ ಕನ್ನಡ ಭಾಷೆಗೆ ಈ ನಿರ್ಧಾರ ಕುತ್ತು ತರುವಂತಾಗಿದೆ.

ರಾಜ್ಯ ಸರ್ಕಾರ ಇತ್ತೀಚೆಗೆ ಕೈಗೊಂಡಿರುವ ನಿರ್ಧಾರದಂತೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಭಾಷೆಯು ಸೇರಿದಂತೆ ತೃತೀಯ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಲ್ಲ ಎಂಬ ನಿಲುವನ್ನು ಹಲವು ಕನ್ನಡಪರ ಸಂಘಟನೆಗಳು ಸ್ವಾಗತಿಸಿವೆ. ಆದರೆ, ತೃತೀಯ ಭಾಷೆ ಕನ್ನಡ ಇರುವಲ್ಲಿ ಕನ್ನಡಕ್ಕೂ ಕೇವಲ ಗ್ರೇಡಿಂಗ್ ನೀಡುವಂತಾಗಿದೆ. ಕರ್ನಾಟಕದಲ್ಲಿ ಕನ್ನಡ ಕಲಿಯುವುದು ಕಡ್ಡಾಯ ಎಂದು ಸರ್ಕಾರದ ನಿಯಮವಿದೆ. ವಿಶೇಷವಾಗಿ ರಾಜ್ಯದಲ್ಲಿರುವ ಸುಮಾರು 4,300 ಉರ್ದು ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಕನ್ನಡವನ್ನು ಅಳವಡಿಸಲು ಕನ್ನಡ ಕಲಿಸುವಂತೆ ಸೂಚಿಸಲಾಗಿದೆ. ಆದರೆ, ಕನ್ನಡೇತರ ಮೀಡಿಯಂಗಳಲ್ಲಿ ಕನ್ನಡವನ್ನು ಮೊದಲ ಅಥವಾ ಎರಡನೇ ಭಾಷೆಯಾಗಿ ಅಲ್ಲ. ತೃತೀಯ ಭಾಷೆಯಾಗಿ ಮಾತ್ರ ಪರಿಗಣಿಸಿರುವುದು ವಿವಾದಕ್ಕೆ ಕಾರಣವಾಗಿದೆ.

ಅಂತಹ ಶಾಲೆಗಳಲ್ಲಿ ನಮ್ಮ ನಾಡಿನ ಜೀವ ಭಾಷೆ ಕನ್ನಡವಾಗಿರಲಿ ಇನ್ನೂ ಕೆಲವು ಕಡೆಗಳಲ್ಲಿ ಅಪರೂಪವಾಗಿ ಸಂಸ್ಕೃತ ಭಾಷೆ ತೃತೀಯ ಭಾಷೆಯಲ್ಲಿದ್ದರೆ, ಅದನ್ನು ಗ್ರೇಡಿಂಗ್ (ಎ,ಬಿ,ಸಿ ಮತ್ತು ಡಿ) ರೂಪದಲ್ಲಿ ನೀಡಲಾಗುತ್ತದೆ ಎಂಬುದೇ ಆತಂಕಕ್ಕೀಡು ಮಾಡಿದೆ. ಈ ತೃತೀಯ ಭಾಷೆಯಲ್ಲಿ ಯಾವುದೇ ಭಾಷೆಯಾಗಿದ್ದರೂ, ಕೇವಲ ಗ್ರೇಡಿಂಗ್‌ಗೆ ಮಾತ್ರ ಸೀಮಿತವಾಗಲಿದ್ದು, ವಾರ್ಷಿಕ ಅಂಕಗಳ ಪಟ್ಟಿಗೆ ಪರಿಗಣನೆಯಾಗುವುದಿಲ್ಲ. 525 ಅಂಕಗಳಿಗೆ ವಿದ್ಯಾರ್ಥಿಗಳು ಪರೀಕ್ಷೆ ಬರೆಯಬೇಕಿದೆ.



> ಎಲ್ಲ ತೃತೀಯ ಭಾಷೆಗಳಿಗೂ ಸರ್ಕಾರದ ಈ ನಿರ್ಧಾರ ಅನ್ವಯವಾಗಲಿದ್ದು, ಅಂಕಗಳ ಬದಲಾಗಿ ಎ,ಬಿ,ಸಿ ಮತ್ತು ಡಿ ಗ್ರೇಡಿಂಗ್ ನೀಡಲಾಗುತ್ತದೆ. ಆದರೆ, ಮುಂದಿನ ವರ್ಷದಿಂದ ದ್ವಿಭಾಷಾ ನೀತಿಯಂತೆ ಕನ್ನಡ ಕಡ್ಡಾಯಗೊಳಿಸಲಿದ್ದು, ಆಗ ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆಯಾಗಲಿದೆ.
> ■ ಸುರಳ್ಕರ್ ವಿಕಾಸ್ ಕಿಶೋರ್, ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ

ಮುಂದಿನ ವರ್ಷದಿಂದ ಕನ್ನಡ ಕಡ್ಡಾಯ

ದ್ವಿಭಾಷಾ ನೀತಿಯಂತೆ ಮುಂದಿನ ವರ್ಷದಿಂದ ಕನ್ನಡ ಕಡ್ಡಾಯಗೊಳಿಸಲು, ಸರ್ಕಾರ ನಿರ್ಧರಿಸಿದೆ. ಈ ನಿರ್ಧಾರದಿಂದ ಕನ್ನಡ ತೃತೀಯ ಭಾಷೆಯಿಂದ ಪ್ರಥಮ ಅಥವಾ ದ್ವಿತೀಯ ಭಾಷೆಯಾಗಲಿದೆ. ಆಗ, ಕನ್ನಡೇತರ ಮಾತೃಭಾಷೆಯಾಗಿರುವ ಶಾಲೆಗಳಲ್ಲೂ (ಉರ್ದು, ಮರಾಠಿ, ತಮಿಳು ಸೇರಿದಂತೆ ಇತರೆ ಶಾಲೆಗಳಲ್ಲಿ) ಕನ್ನಡ ಕಡ್ಡಾಯವಾಗಲಿದೆ.

ಹೋಟೇಲ್‌ಗಳಿಗೆ ಹೆಚ್ಚುವರಿ ಗ್ಯಾಸ್ ಸಿಲಿಂಡರ್ ವಿತರಣೆ

• **ಬೆಂಗಳೂರು:** ಹೊಟೇಲ್‌ಗಳಿಗೆ 17,500 ಹೆಚ್ಚುವರಿ ಗ್ಯಾಸ್ ಸಿಲಿಂಡರ್‌ಗಳನ್ನು ವಿತರಿಸಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಘೋಷಿಸಿದ್ದಾರೆ.



ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಹೊಟೇಲ್‌ಗಳಿಗೆ 17,500 ಹೆಚ್ಚುವರಿ ಗ್ಯಾಸ್ ಸಿಲಿಂಡರ್‌ಗಳನ್ನು ವಿತರಿಸಲಾಗುವುದು. ಮಾ.31ರಿಂದ ಹೋಟೆಲ್ ಮಾಲೀಕರಿಗೆ ಡಿಸೇಲ್ ವಿತರಣೆ ಆರಂಭವಾಗಲಿದೆ. ಈ ಪ್ರಕ್ರಿಯೆಯು ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಆದರೆ ಹೊಟೇಲ್ ಮಾಲೀಕರ ಆತಂಕ ನಾಳೆಯಿಂದ ಬಗೆಹರಿಯಲಿದೆ ಎಂದು ಹೇಳಿದರು.

ದೇಶೀಯ ಸಿಲಿಂಡರ್‌ಗಳ ವಿತರಣೆಯಲ್ಲೂ ವಿಳಂಬವಾಗುತ್ತಿದ್ದು, ಗ್ರಾಹಕರು ವಿನಾಕಾರಣ ವಿತರಕರ ಕಚೇರಿಗೆ ಹೋಗ ಬಾರದು. 25 ದಿನಗಳ ನಂತರ ಬುಕ್ ಮಾಡಿದರೆ ಸಿಲಿಂಡರ್ ಲಭ್ಯವಾಗುತ್ತದೆ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಇದು 45 ದಿನಗಳಿಗೆ ಅನ್ವಯಿಸಲಿದೆ ಎಂದು ತಿಳಿಸಿದ್ದಾರೆ.



ಸಂಪಾದಕೀಯ

ತಾಪಮಾನ: ಆತಂಕಕಾರಿ ವರದಿ

ವರುಷ ಕಳೆದಂತೆ ಭೂತಾಪಮಾನವು ಏರುತ್ತಾ ಬರುತ್ತಿರುವುದು ಅನುಭವಕ್ಕೆ ಬರುತ್ತಿರುವ ವಿದ್ಯಮಾನ. ಈ ವರ್ಷ ಕೂಡಾ ಭಾರತವು ಈಗಲೇ ಅತಿಯಾದ ಉಷ್ಣಹವೆಯನ್ನು ಎದುರಿಸುತ್ತಿದೆ. ಈಗಿನ್ನೂ ಬಿರುಬೇಸಿಗೆ ಕಾಲಿಟ್ಟಿಲ್ಲ. ಹಾಗಿದ್ದರೂ ತಾಪಮಾನ ಅಧಿಕವಾಗಿದೆ. ಇದರ ಮಧ್ಯೆಯೇ 'ಹವಾಮಾನ ಪರಿಣಾಮ ಪ್ರಯೋಗಾಲಯ'ದ ಸಂಶೋಧನಾ ವರದಿಯೊಂದು ಇನ್ನಷ್ಟು ಆತಂಕಕಾರಿ ವಿಷಯಗಳನ್ನು ಪ್ರತಿಪಾದಿಸಿದೆ.



2050ರ ವೇಳೆಗೆ ಭೂಮಿಯ ತಾಪಮಾನವು 1.5ರಿಂದ 2.0 ಡಿಗ್ರಿಯಷ್ಟು ಹೆಚ್ಚಲಿದೆ ಹಾಗೂ ಜಾಗತಿಕ ದಕ್ಷಿಣದ ದೇಶಗಳಲ್ಲಿ ಈಗಿನದ್ದಕ್ಕಿಂತ ಹತ್ತು ಪಟ್ಟು ಹೆಚ್ಚು ಜನರು ಉಷ್ಣಹವೆಯಿಂದಾಗಿ ಸಾವಿಗೀಡಾಗಲಿದ್ದಾರೆ ಎಂಬುದಾಗಿ ವರದಿಯು ಹೇಳಿದೆ. ಹವಾಮಾನ ಬದಲಾವಣೆಯಿಂದಾಗಿ ಉಂಟಾಗಬಹುದಾದ ಪ್ರವಾಹ ಹಾಗೂ ಮಳೆಗಿಂತಲೂ ಅಧಿಕವಾಗಿ ಉಷ್ಣಹವೆಯಿಂದಲೇ ಹೆಚ್ಚು ಸಾವು ಸಂಭವಿಸಬಹುದು ಎಂದು ಈ ವರದಿಯು ಹೇಳುತ್ತಿದೆ.

ಉಷ್ಣಹವೆಯ ಮಾರಣಾಂತಿಕ ಪರಿಣಾಮವು ಪಾಶ್ಚಿಮಾತ್ಯ ಸಂಪನ್ನ ದೇಶಗಳಲ್ಲಿ ಹೆಚ್ಚಿನ ಸಾವಿಗೆ ಕಾರಣವಾಗಲಾರದು ಎಂದೂ ವರದಿಯು ತಿಳಿಸುತ್ತದೆ. ಇದರರ್ಥವೆಂದರೆ ಅಭಿವೃದ್ಧಿಶೀಲ ಹಾಗೂ ಬಡ ದೇಶಗಳೇ ತಾಪಮಾನ ಏರಿಕೆಯ ದುಷ್ಪರಿಣಾಮಗಳನ್ನು ಅತಿಯಾಗಿ ಎದುರಿಸಲಿವೆ. ಅದರಲ್ಲಿಯೂ ದಕ್ಷಿಣ ಗೋಳಾರ್ಧದ ರಾಷ್ಟ್ರಗಳಿಗೆ ಈ ಅಪಾಯ ಹೆಚ್ಚು. ಇವುಗಳು ಉಷ್ಣ ವಲಯದಲ್ಲಿರುವುದು ಇದಕ್ಕೆ ಒಂದು ಕಾರಣವಾದರೆ, ಇನ್ನೂ ಅಭಿವೃದ್ಧಿ ಹೊಂದದಿರುವುದು ಮತ್ತೊಂದು ಕಾರಣವಾಗಿದೆ. ಬಯಲು ಗದ್ದೆಗಳಲ್ಲಿ ಕೆಲಸ ಮಾಡುವವರಿಗೆ, ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಹಾಗೂ ಉಷ್ಣತೆಗೆ ತಮ್ಮನ್ನು ತೆರೆದುಕೊಂಡು ಕೆಲಸ ಮಾಡುವವರಿಗೆ ಮುಂದಿನ ದಿನಗಳು ಹೆಚ್ಚು ಕಷ್ಟಕರವಾಗಲಿವೆ. ಬಡ ರಾಷ್ಟ್ರಗಳಲ್ಲಿ ಹವಾಮಾನ ಉಷ್ಣತೆಯಿಂದ ರಕ್ಷಣೆ ಪಡೆಯುವಂತಹ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲು ಸಾಮಾನ್ಯ ಜನರು ಅಸಮರ್ಥರಾಗಿರುವುದೂ ಈ ಪ್ರದೇಶಗಳ ಜನರನ್ನು ಹೆಚ್ಚು ಬಾಧಿಸುವಂತೆ ಮಾಡಲಿದೆ.

ಕಾಡುಗಳೆಲ್ಲ ಅಳಿದು ನಗರಗಳು ಬೆಳೆಯುತ್ತಿರುವುದು, ಕಾಂಕ್ರಿಟ್ ನಗರಗಳೇ ಎಲ್ಲೆಡೆ ತುಂಬುತ್ತಿರುವುದು, ವಾಯುಮಾಲಿನ್ಯ ಉಂಟು ಮಾಡುವಂತಹ ಮಾನವ ಚಟುವಟಿಕೆಗಳು ಭೂ ತಾಪಮಾನ ಏರಿಕೆಗೆ ಕೊಡುಗೆ ನೀಡುತ್ತಿರುವುದು ತಿಳಿದಿರುವುದೆ. ದುರಂತವೆಂದರೆ ಈ ತಾಪಮಾನ ಏರಿಕೆಯ ದುಷ್ಪರಿಣಾಮ ಎದುರಿಸುವ ಬಡ ದೇಶಗಳೆಲ್ಲ ಪರಿಸರ ನಾಶಕ್ಕೆ ಕೊಡುಗೆ ನೀಡಿದ ದೇಶಗಳಲ್ಲ. ವಾಸ್ತವದಲ್ಲಿ ಪರಿಸರ ನಾಶಕ್ಕೆ ಕಾರಣವಾಗುತ್ತಿರುವುದು ಸಿರಿವಂತ ದೇಶಗಳು. ಸಿರಿವಂತ ರಾಷ್ಟ್ರಗಳು ಕೆಡಿಸುತ್ತಿರುವ ಹವಾಮಾನದ ದುಷ್ಫಲವನ್ನು ಏನೂ ತಪ್ಪೆಸಗದ ರಾಷ್ಟ್ರಗಳು ಅನುಭವಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಯಲ್ಲಿ ಸಂಪನ್ನ ರಾಷ್ಟ್ರಗಳು ಹೆಚ್ಚು ಶ್ರಮ ವಹಿಸಬೇಕಾಗಿರುವುದು ಮತ್ತು ಹೆಚ್ಚು ಸಂಪನ್ಮೂಲ ವ್ಯಯಿಸಬೇಕಾಗಿರುವುದು ನ್ಯಾಯವಾಗಿದೆ. ಭೂಮಿಯು ಸಕಲರಿಗೂ ವಾಸಯೋಗ್ಯವಾಗುವಂತೆ ಮಾಡಲು ಪರಿಶ್ರಮಿಸಬೇಕಾಗಿದೆ.

ಮೋಸ ಹೋಗದಿರಲು...

ಪ್ರಜ್ಞಾವೃದ್ಧಂ ಧರ್ಮವೃದ್ಧಂ ಸ್ವಬಂಧುಂ ವಿದ್ಯಾವೃದ್ಧಂ ವಯಸಾ ಚಾಪಿ ವೃದ್ಧಮ್ ।
ಕಾರ್ಯಾಕಾರ್ಯೇ ಪೂಜಯಿತ್ವಾ ಪ್ರಸಾದ್ಯ ಯಃ ಸಂಪೃಚ್ಛೇನ್ನೈ ಸ ಮುಹ್ಯೇತ್ ಕದಾಚಿತ್ ॥

ಕೆಲಸವನ್ನು ಕೈಗೊಳ್ಳುವಾಗ ಅಥವಾ ಬಿಡುವಾಗ ಪ್ರಜ್ಞಾ ವೃದ್ಧರನ್ನೂ, ಧರ್ಮವೃದ್ಧರನ್ನೂ, ಸ್ವಬಂಧುಗಳನ್ನೂ, ವಿದ್ಯಾವೃದ್ಧರನ್ನೂ ಮತ್ತು ವಯೋವೃದ್ಧರನ್ನೂ ಗೌರವಿಸಿ, ಸಂತೋಷಗೊಳಿಸಿ, ವಿಚಾರಿಸಿ ತಿಳಿದುಕೊಳ್ಳುವವನು ಮೋಸ ಹೋಗುವುದಿಲ್ಲ – ಎಂಬುದು ಶ್ಲೋಕಾರ್ಥ.

ಜೀವನದಲ್ಲಿ ಎಲ್ಲರೂ ಕೂಡ ಒಂದಲ್ಲ ಒಂದು ವಿಧದಲ್ಲಿ ಮೋಸ ಹೋಗುತ್ತಾರೆ. ಎಲ್ಲಿಯವರೆಗೆ ಮೋಸ ಹೋಗುವವರಿರುತ್ತಾರೋ ಅಲ್ಲಿಯವರೆಗೆ ಮೋಸ ಮಾಡುವವರೂ ಇರುತ್ತಾರೆ. ಇದು ಜಗದ ನಿಯಮವಾಗಿಬಿಟ್ಟಿದೆ. ಇದಕ್ಕೆ ಪರಿಹಾರವೆಂದರೆ ಮೋಸ ಹೋಗದಿರುವುದು. ಸಾಕಷ್ಟು ವಿಚಾರ ವಿಮರ್ಶೆ ನಡೆಸಿ ವಿವೇಕದಿಂದ ವ್ಯವಹರಿಸಿದರೆ ಮೋಸ ಹೋಗದಿರಬಹುದು. ಈ ಹಂತಕ್ಕೆ ಏರಲು ನಿರಂತರ ಪ್ರಯತ್ನ ಹಾಗೂ ಎಚ್ಚರ ಬೇಕೇಬೇಕು.



ಅನುಭವಿಗಳ ಒಡನಾಟ, ವಿಚಾರಿಸಿ ನಡೆಸುವ ವ್ಯವಹಾರ ಇವುಗಳಿಂದ ಮೋಸಾದಿಗಳಿಂದ ದೂರವಿರಬಹುದು. ಅಂತಹ ಕೆಲವು ತಿಳುವಳಿಕೆಯನ್ನು ಕವಿಯು ಪ್ರಕೃತ ಶ್ಲೋಕದಲ್ಲಿ ನೀಡಿದ್ದಾನೆ. 'ಪ್ರಜ್ಞಾಬಲಂ ಚ ಸರ್ವೇಷು ಮುಖ್ಯಂ ಕಾರ್ಯೇಷು ಸಾಧನಮ್' ಎಲ್ಲ ಕೆಲಸಗಳಲ್ಲೂ ಸಾಧಕವಾದುದು ಉತ್ತಮ ಜ್ಞಾನದ ಬಲ ಎಂಬುದು ಸೂಕ್ತಿಯ ಅರ್ಥ. 'ಪ್ರಜ್ಞಾ ಹಿ ಅಮೋಘ ಶಸ್ತ್ರಮ್' ಎಲ್ಲ ತೊಂದರೆಗಳಿಂದ ಪಾರಾಗಲು ಪ್ರಜ್ಞೆಯೇ ಅಮೋಘವಾದ ಅಸ್ತ್ರ. ಇದನ್ನು ಸರಿಯಾಗಿ ಅರಿತಿರಬೇಕಷ್ಟೆ!

ಯಾವುದೇ ಕೆಲಸವನ್ನು ಆರಂಭಿಸುವಾಗ, ಸಾಹಸ ಮಾಡಲು ಮುಂದಾಗುವಾಗ ಅಥವಾ ಅದರಿಂದ ಹಿಂದೆ ಸರಿಯುವಾಗ ಯೋಗ್ಯರೊಡನೆ ವಿಚಾರ ವಿನಿಮಯ ನಡೆಸಿ ಮುಂದಾಗುವುದು ಒಳ್ಳೆಯ ಪರಿಪಾಠ. ಜ್ಞಾನವೃದ್ಧರೇ ಮೊದಲು ಸಂಪರ್ಕಿಸಬೇಕಾದವರು. ತಮ್ಮ ಅನುಭವ ಹಾಗೂ ಅರಿವಿನ ಆಧಾರದಿಂದ ಮಾರ್ಗದರ್ಶನ ಮಾಡುತ್ತಾರೆ. ಅದನ್ನು ಪಡೆದ ಮೇಲೆ ಧರ್ಮವೃದ್ಧರನ್ನು ಸಂಪರ್ಕಿಸಬೇಕು. ಅವರು ದೈವಾನುಗ್ರಹ, ಸಾಧಕ–ಬಾಧಕಗಳ ಬಗ್ಗೆ ತಿಳಿಸುತ್ತಾರೆ. ತಮ್ಮದೇ ಆದ ಆಧ್ಯಾತ್ಮದ ಜ್ಞಾನದ ಹಿನ್ನೆಲೆಯಲ್ಲಿ ಬೋಧಿಸುತ್ತಾರೆ.

ಯಾವಾಗಲೂ ಎಲ್ಲ ಸಂದರ್ಭಗಳಲ್ಲೂ ನಮ್ಮೊಂದಿಗಿರುವವರು ಬಂಧುಗಳು ಹಾಗೂ ಕುಟುಂಬದವರು. ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ನಮ್ಮ ಸೋಲು–ಗೆಲುವುಗಳನ್ನು ಹಂಚಿಕೊಳ್ಳುವವರು ಅವರೇ. ಆದ್ದರಿಂದ ಅವರನ್ನು ಮರೆಯಬಾರದು. ವಿದ್ಯಾವಂತರ ಸಲಹೆ ಪಡೆಯಬೇಕು. ವಿದ್ಯಾವಂತರ ಜ್ಞಾನ ಸಕಾಲದಲ್ಲಿ ಪ್ರಯೋಜನಕ್ಕೆ ಬರುತ್ತದೆ. ಇದರ ಜತೆಗೆ ಅನುಭವ ಪಕ್ವಗೊಂಡ ವಯೋವೃದ್ಧರ ಅನುಭವವನ್ನು ಸ್ವೀಕರಿಸಬೇಕು; ವಿಚಾರವನ್ನು ಹಂಚಿಕೊಳ್ಳಬೇಕು.

ತಮ್ಮ ತಮ್ಮ ರಂಗದಲ್ಲಿ ಪರಿಪಕ್ವತೆಯನ್ನು ಪಡೆದ ಇಂಥಹ ಅನುಭವಿಗಳನ್ನು ವಿಚಾರಿಸಿ, ಗೌರವಿಸಿ, ಸಂತೋಷಪಡಿಸಿ ಮುಂದುವರಿಯಬೇಕು.

ಕಾರ್ಯಾರಂಭದಲ್ಲೂ, ಕಾರ್ಯ ಬಿಡುವ ವಿಚಾರದಲ್ಲೂ ಈ ಬಗೆಯ ಜ್ಞಾನಿಗಳ ಯೋಗ್ಯ ಮಾರ್ಗ ದರ್ಶನ ಪಡೆದು, ಸರಿಯಾಗಿ ವ್ಯವಹರಿಸಿದರೆ ಮೋಸ ಹೋಗುವ ಪ್ರಮೇಯ ಬರುವುದಿಲ್ಲ.

ವಿದ್ಯುತ್ ಕ್ಷೇತ್ರದಲ್ಲಿ ಗೋಸಂಪತ್ತು



ಧರಣಿ ಮಂಡಲ
ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ದಿನದಿಂದ ದಿನಕ್ಕೆ ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧದ ತೀವ್ರತೆ ಹೆಚ್ಚಾಗುತ್ತಿದೆ. ಬಾಂಬ್ ದಾಳಿಗೆ ತೈಲ ಬಾವಿಗಳು ಹೊತ್ತಿ ಉರಿಯುತ್ತಿವೆ. ಇದರಿಂದ ಮುಂದಿನ ದಿನಗಳಲ್ಲಿ ಪೆಟ್ರೋಲ್, ಡೀಸೆಲ್, ಎಲ್.ಪಿ.ಜಿ. ಸೇರಿದಂತೆ ಎಲ್ಲಾ ತೈಲೋತ್ಪನ್ನಗಳ ಅಭಾವ ವಿಶ್ವವ್ಯಾಪಿ ತೀವ್ರವಾಗಿ ಕಾಡಲಿದೆ. ಹೀಗಾಗಿ ಜಗತ್ತಿನಾದ್ಯಂತ ತೈಲೋತ್ಪನ್ನಗಳಿಗೆ ಪರ್ಯಾಯದ ಹುಡುಕಾಟ ಹೆಚ್ಚಾಗಿದೆ. ಭಾರತವೂ ಇದರಿಂದ ಹೊರತಾಗಿಲ್ಲ. ಬೇರೆಲ್ಲಾ ದೇಶಗಳಿಗೆ ಹೋಲಿಸಿದಲ್ಲಿ ಭಾರತ ಪರ್ಯಾಯ ಮಾರ್ಗವನ್ನು ತನ್ನಲ್ಲೇ ಅಡಗಿಸಿಕೊಂಡಿರುವುದು ಕಾಣಿಸುತ್ತದೆ. ಆ ಮಾರ್ಗ ಬೇರ್ಯಾವುದು ಆಗದೇ ಗೋಸಂಪತ್ತಾಗಿರುವುದು ಬಹುತೇಕ ದೇಶಗಳಿಗೆ ನುಂಗಲಾರದ ತುತ್ತಾಗಿದೆ. ಹಾಗಾಗಿ ಆ ಸಂಪತ್ತನ್ನು ಇನ್ನಿಲ್ಲವಾಗಿಸುವ ಎಲ್ಲಾ ಷಡ್ಯಂತ್ರವನ್ನು ದೇಶದ ಒಳಗಿನ ಮತ್ತು ಹೊರಗಿನ ಶಕ್ತಿಗಳು ನಿರಂತರವಾಗಿ ಮಾಡುತ್ತಿರುವುದನ್ನು ಅವಲೋಕಿಸಿದಾಗ ಗೋಚರಿಸುತ್ತದೆ.

ಹಿತ್ತಲ ಗಿಡ ಮದ್ದಲ್ಲ ಎಂಬಂತೆ ಇಂಧನ ಮತ್ತು ವಿದ್ಯುತ್ತಿಗೆ ಪರ್ಯಾಯವಾಗಿ ಏನಾದರೊಂದು ಶಕ್ತಿಯನ್ನು ಭಾರತ ಬಹಳ ಹಿಂದಿನಿಂದ ಹುಡುಕುತ್ತಲೇ ಇದೆ. ಆದರೆ ತನ್ನ ಹತ್ತಿರವೇ ಇರುವ, ಕರಗುತ್ತಿರುವ ಗೋಸಂಪತ್ತಿನ ಕಡೆ ಗಮನ ಹರಿಸುತ್ತಲೇ ಇಲ್ಲದಿರುವುದು ದುರಂತವೇ ಸರಿ. ದೇಶದಲ್ಲಿ 2019ರ ಪ್ರಾಣಿ ಗಣತಿಯ ಪ್ರಕಾರ 535.78 ಮಿಲಿಯನ್ ಜಾನುವಾರುಗಳಿವೆ. ಅವುಗಳಲ್ಲಿ ದನಗಳ ಸಂಖ್ಯೆ 192.5 ಮಿಲಿಯನ್ ಆಗಿದ್ದರೆ, ಎಮ್ಮೆ ಮತ್ತು ಕೋಣಗಳ ಸಂಖ್ಯೆ 109.9 ಮಿಲಿಯನ್‌ನಷ್ಟಿದೆ. ಇವುಗಳಿಂದ ಉತ್ಪಾದನೆಯಾಗುವ ಸಗಣಿ ಮತ್ತು ಮೂತ್ರವನ್ನು ಸರಿಯಾಗಿ ಬಳಸಿಕೊಂಡಿದ್ದೇ ಆದಲ್ಲಿ ದೇಶದಲ್ಲಿರುವ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ನೀಡಬಹುದು. ಇವುಗಳ ಗೊಬ್ಬರದಿಂದ ಸಿಗುವ ಮಿಥೇನ್ ಅನಿಲದಿಂದ ಜಲಜನಕವನ್ನು ಬೇರ್ಪಡಿಸುವ ಘಟಕ ಸ್ಥಾಪಿಸಿದರೆ ಸಾಕು, ಸುಲಭವಾಗಿ ಎಲ್.ಪಿ.ಜಿ.ಗೆ ಪರ್ಯಾಯವಾದ ಕಡಿಮೆ ಖರ್ಚಿನ ದೇಶಿ ಅನಿಲವನ್ನು ಪಡೆಯಬಹುದು. ಇದರಲ್ಲಿರುವ ಜಲಜನಕವನ್ನು ಸಾಂದ್ರೀಕರಿಸಿದಾಗ ಅದು ದ್ರವ ರೂಪಕ್ಕೆ ಬರುತ್ತದೆ. ಇದನ್ನು ಎಲ್.ಎನ್.ಜಿ. ಹಾಗೂ ಸಿ.ಎನ್.ಜಿ. ಅನಿಲದೊಂದಿಗೆ ಮಿಶ್ರಣ ಮಾಡಿ ಬಳಸಬಹುದು. ಜಲಜನಕವನ್ನು ನೇರವಾಗಿ ಬಳಸುವ ಕಾರುಗಳು ಸಹ ಇವೆ. ಆದರೆ ಈ ತಂತ್ರಜ್ಞಾನ ಸ್ವಲ್ಪ ದುಬಾರಿ ಎನ್ನಲಾಗುತ್ತದೆ.

1981ರಲ್ಲಿ ಭಾರತದಲ್ಲಿನ ಪಶು ಶಕ್ತಿಯು ಒಟ್ಟು ದೇಶದಲ್ಲಿ ಉತ್ಪತ್ತಿಯಾಗುತ್ತಿದ್ದ ವಿದ್ಯುಚ್ಛಕ್ತಿಗಿಂತ ಹೆಚ್ಚಿನದನ್ನು ನೀಡುತ್ತಿತ್ತು. ಇದರಿಂದ ದೊರೆಯುವ ಗೋಬರ್ ಗ್ಯಾಸ್‌ನಿಂದ ವಿದ್ಯುತ್ ಉತ್ಪಾದನೆ ಮಾಡಬಹುದಾಗಿದೆ. ಹಾಗೆಯೇ ಗೋಬರ್ ಗ್ಯಾಸ್‌ನಿಂದ ನಡೆಸಬಹುದಾದ ಜನರೇಟರ್‌ನಿಂದ ಶೇಕಡಾ 20ರಷ್ಟು ಡೀಸೆಲ್‌ನ್ನು ಉಳಿಸಬಹುದಾಗಿದೆ. ಇದರಿಂದ ಪರಿಸರ ಮಾಲಿನ್ಯವಾಗುವ ಭಯ ಇರುವುದಿಲ್ಲ. ಗೋಬರ್ ಗ್ಯಾಸ್ ಜನರೇಟರ್‌ನಿಂದ ಉತ್ಪತ್ತಿಯಾದ ವಿದ್ಯುತ್‌ನಿಂದ ಫ್ಯಾನ್, ಟಿ.ವಿ. ಸೇರಿದಂತೆ ಬಹುತೇಕ ಮೋಟಾರ್‌ಗಳು ಕಾರ್ಯ ನಿರ್ವಹಿಸಬಲ್ಲವು. ಅಚ್ಚರಿ ಎಂದರೆ ಐದು ಹಾರ್ಸ್ ಪವರ್ ವಿದ್ಯುತ್ ಮೆಶಿನ್ ಮಾಡಿದಷ್ಟೇ ಕೆಲಸವನ್ನು ಒಂದು ಎತ್ತು 24 ಘಂಟೆಗಳಲ್ಲಿ ಮಾಡುವುದು ಸಾಬೀತಾಗಿದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ಟ್ರೈನಿಂಗ್ ಇನ್ ಇಂಡಸ್ಟ್ರಿಯಲ್ ಇಂಜಿನಿಯರಿಂಗ್ ಎಂಬ ಮುಂಬೈನಲ್ಲಿರುವ ಸಂಸ್ಥೆಯೊಂದು ಗೋವು ನಿಯಮಿತವಾಗಿ ಸುತ್ತುವುದರಿಂದ ವಿದ್ಯುತ್ ಉತ್ಪತ್ತಿಯಾಗುವುದನ್ನು ಮೊದಲಿಗೆ ಕಂಡು ಹಿಡಿದಿತ್ತು. ಅಲ್ಲಿ ಒಂದು ಗೋವು ಒಂದು ಹೆಚ್.ಪಿ ಅಂದರೆ 786 ವ್ಯಾಟ್ ವಿದ್ಯುತ್ತನ್ನು ನಿರಂತರವಾಗಿ ಉತ್ಪಾದಿಸುವುದು ಸಾಬೀತಾಗಿತ್ತು.

ಒಂದು ಸಮೀಕ್ಷೆಯ ಪ್ರಕಾರ 1050 ಮಿಲಿಯನ್ ಟನ್ ಗೊಬ್ಬರದಿಂದ 45 ಲಕ್ಷ ಕಿಲೋ ಕ್ಯಾಲರಿ ಶಕ್ತಿ ಲಭ್ಯವಾಗುತ್ತದೆ. ಮತ್ತೊಂದು ಹಿಂದಿನ ಸಮೀಕ್ಷೆಯ ವರದಿಯ ಪ್ರಕಾರ ಮಧ್ಯಪ್ರದೇಶದಲ್ಲಿದ್ದ ಸುಮಾರು 24 ಗೋಶಾಲೆಗಳು ಪ್ರತಿ ವರ್ಷ ಸಗಣಿ ಗೊಬ್ಬರದಿಂದ 6.63 ಲಕ್ಷ ಯೂನಿಟ್ ವಿದ್ಯುತ್ತನ್ನು ತಯಾರಿಸಿತ್ತು. ಗೋಶಾಲೆಗಳಲ್ಲಿ ಸಿಗುವ ಗೊಬ್ಬರದಿಂದ 25ರಿಂದ 85 ಮೀಟರ್ ಬಯೋಗ್ಯಾಸ್ ಯಂತ್ರವನ್ನು ನಿರ್ಮಾಣ ಮಾಡಲಾಗಿತ್ತು. ಈ 24 ಗೋಶಾಲೆಗಳಿಂದ ವಿದ್ಯುತ್ ತಯಾರಿಸಲು 10 ರಿಂದ 20 ಕೆ.ವಿ.ಎ.ಯ ಬಯೋಗ್ಯಾಸ್ ಜನರೇಟರ್ ಸಿದ್ಧಪಡಿಸಲಾಗಿತ್ತು.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಪ್ರಾಧಿಕಾರವು (K.R.E.D.L) ಬಹಳ ಹಿಂದೆಯೇ ಒಂದು ದೇಶಿ ತಳಿಗಳಿಗೆ ಪೂರಕವಾದ ಜನರೇಟರ್ ರೂಪಿಸಿದ್ದು ಜನಪ್ರಿಯವಾಗಿತ್ತು. ಅದರ ಪ್ರಕಾರ ಎರಡು ದೇಶಿ ತಳಿ ಗೋವು ಮತ್ತು ಈ ಜನರೇಟರ್ ಇದ್ದಲ್ಲಿ ಮನೆಗೆ ಬೆಳಕು ಖಂಡಿತ ದೊರೆಯುವಂತಾಗಿತ್ತು. ಈ ಜನರೇಟರ್ ತಿರುಗಿಸಲು ಎತ್ತು ಅಥವಾ ಕೋಣಗಳನ್ನು ಕಟ್ಟಿದರಾಯ್ತು. ಗಾಣದ ಮಾದರಿಯಲ್ಲಿ ಇವು ಜನರೇಟರ್‌ನ್ನು ತಿರುಗಿಸುತ್ತಿದ್ದವು. ಹೀಗೆ ಉತ್ಪಾದನೆಯಾಗುವ ಶಕ್ತಿಯನ್ನು ಬ್ಯಾಟರಿಗಳಲ್ಲಿ ಶೇಖರಿಸಿ ಬೇಕಾದಾಗ ಬಳಸಬಹುದಾಗಿತ್ತು. ಇದಕ್ಕೆ ಹೆಚ್ಚಿನ ನಿರ್ವಹಣೆ ಬೇಕಿರಲಿಲ್ಲ ಮತ್ತು ಬೇರೆ ಇಂಧನದ ಅಗತ್ಯವೂ ಬೇಕಾಗಿರಲಿಲ್ಲ. ಇದು ಸುಮಾರು ಗಂಟೆಗೆ 2 ಕೆ.ವಿ ವಿದ್ಯುತ್ ಉತ್ಪಾದಿಸಬಲ್ಲದಾಗಿತ್ತು. ಅಂದರೆ ಟ್ಯೂಬ್‌ಲೈಟ್‌ಗೆ 20 ವ್ಯಾಟ್, ಫ್ಯಾನ್‌ಗೆ 75 ವ್ಯಾಟ್ ಮತ್ತು ಟಿ.ವಿ.ಗೆ 100 ವ್ಯಾಟಿನಂತೆ ಅಂದಾಜಿಸಿದರೂ ಮನೆಯೊಂದಕ್ಕೆ ಬೇಕಾಗುವ ವಿದ್ಯುತ್ ಉತ್ಪಾದನೆಗೆ ಕಷ್ಟವಿರಲಿಲ್ಲ. ಮನೆಯೊಂದರಲ್ಲಿ ದಿನಕ್ಕೆ ಸುಮಾರು 16 ಯೂನಿಟ್ ವಿದ್ಯುತ್ ಖರ್ಚಾದರೆ ವರ್ಷಕ್ಕೆ 5760 ಯೂನಿಟ್‌ಗಳಾಗುತ್ತವೆ. ಇದರಿಂದ ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಉಳಿತಾಯವಾಗಲಿದೆ.

ಉತ್ತರ ಪ್ರದೇಶದ ಬುಲಂದಶಹರದ ಗಂಗಾವಡ ಗ್ರಾಮದ ನಿವಾಸಿಗಳಾದ ಹರಿವಂಶ ಯಾದವ್ ಮತ್ತು ನಿರುತ್ತಮ ಕುಮಾರ್‌ಸಿಂಗ್ ಎಂಬ ಇಬ್ಬರು ವ್ಯಕ್ತಿಗಳು ಬಹಳ ಹಿಂದೆಯೇ ಅಹಮದಾಬಾದಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಕಾರ್ಯಾಗಾರದಲ್ಲಿ, ಪ್ಲಾಸ್ಟಿಕ್ ಟ್ಯಾಂಕಿಗೆ ದನದ ಸಗಣಿಯನ್ನು ತುಂಬಿಸಿ ಅದಕ್ಕೆ ಎರಡು ಹಳೆಯ ಬ್ಯಾಟರಿಗಳನ್ನು ಹಾಕಿ, ಉಪ್ಪು ನೀರಿನ ದ್ರಾವಣ ಸುರಿದು, ನಂತರ ಧನ ಮತ್ತು ಋಣ ವಿದ್ಯುತ್ ವಾಹಕಗಳನ್ನು ಅದರಲ್ಲಿ ಅದ್ದಿ, ಅದರಿಂದ ವಿದ್ಯುತ್ ಉತ್ಪತ್ತಿ ಮಾಡಿ ವಿದ್ಯುತ್ ಬಲ್ಬ್‌ಗಳು ಉರಿಯುವಂತೆ ಮಾಡಿದ್ದರು. ಇದರಿಂದ ಉತ್ತರ ಪ್ರದೇಶದ ಗಂಗಾವಢ, ಕಮೋನಾಹ, ಜಿನಮಾಯಿ, ರಿಸೋಲ್ ಗಢದ 250 ಮನೆಗಳಲ್ಲಿ ಬಲ್ಬ್‌ಗಳು ಉರಿಯುವಂತಾಗಿತ್ತು. ಇದರೊಂದಿಗೆ ಆ ಸಮಯದಲ್ಲಿ ಅಲ್ಲಿನ ರೇಡಿಯೋಗಳು ಹಾಡುವಂತಾಗಿದ್ದವು. ಇಂದಿಗೂ ಅಲ್ಲಿರುವ ಜನರ ಮೊಬೈಲ್‌ಗಳು ಇದರಿಂದಲೇ ರಿಂಗಣಿಸುತ್ತಿವೆ ಎನ್ನಲಾಗಿದೆ. ಇಂದಿಗೂ ನಮ್ಮ ದೇಶದಲ್ಲಿ ವಿದ್ಯುತ್ತಿನ ಕೊರತೆ ಸಾಕಷ್ಟಿದ್ದು, ಎಷ್ಟೋ ಹಳ್ಳಿಗಳಲ್ಲಿ ವಿದ್ಯುತ್ತಿನ ಸಂಪರ್ಕವೇ ಇಲ್ಲ. ಆದರೆ ಜನರ ಬಳಿ ಗೋಸಂಪತ್ತಿದೆ. ಆದ್ದರಿಂದ ಪ್ರತಿಯೊಂದು ನಗರ ಮತ್ತು ಹಳ್ಳಿಗಳಲ್ಲಿ ಸಗಣಿ ಗೊಬ್ಬರದಿಂದ ಈ ರೀತಿಯ ವಿದ್ಯುತ್ ತಯಾರಿಸುವ ಸಣ್ಣ ಸಣ್ಣ ಪ್ಲಾಂಟನ್ನು ಅಳವಡಿಸುವ ಮೂಲಕ ಬೆಳಕನ್ನು ನೀಡಬಹುದಾಗಿದೆ. ಕೋಟ್ಯಾಂತರ ರೂಪಾಯಿ ಬೇರೆ ಬೇರೆ ರೀತಿಯಲ್ಲಿ ವಿದ್ಯುತ್ ತಯಾರಿಸುವುದನ್ನು ಉಳಿಸಬಹುದಾಗಿದೆ. ದೇಶ ಸ್ವಾವಲಂಬನೆಯತ್ತ ಸಾಗಬಹುದಾಗಿದೆ.

ಇನ್ನು ವಿದೇಶಗಳಲ್ಲೂ ಸಗಣಿಯಿಂದ ವಿದ್ಯುತ್ ತಯಾರಿಸುವ ಪ್ರಕ್ರಿಯೆ ಬಹು ಹಿಂದಿನಿಂದಲೇ ಪ್ರಾರಂಭವಾಗಿದೆ. ನಮಗಿಂತ ಒಂದು ಹೆಜ್ಜೆ ಮುಂದಿರುವ ಅವರುಗಳು ಈಗಾಗಲೇ ಸಗಣಿಯಿಂದ ಹಲವು ರೀತಿಯಲ್ಲಿ ವಿದ್ಯುತ್ ತಯಾರಿಸುವ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಇದರಂತೆ ಸಗಣಿ ಗೊಬ್ಬರದಿಂದ ವಿದ್ಯುತ್ ತಯಾರಿಸುವ ಮೊದಲ ಪ್ಲಾಂಟ್ ಬ್ರಿಟನ್‌ನಲ್ಲಿ ಬಹಳ ಹಿಂದೆಯೇ ಕೆಲಸವನ್ನು ಪ್ರಾರಂಭಿಸಿದೆ. ಇದರ ಡೈರೆಕ್ಟರ್ ಆಗಿದ್ದ ಚಾರ್ಲ್ಸ್ ಕ್ಲಾರ್ಕ್ ಎಂಬುವವರು ಇಲ್ಲಿ ಸಗಣಿಯಿಂದ ವಿದ್ಯುತ್ ತಯಾರಾಗುತ್ತಿದೆ ಎಂಬುದಾಗಿ ನೀಡಿದ್ದ ಹೇಳಿಕೆ ಸುದ್ದಿ ಮಾಡಿತ್ತು. ಅಂದ ಹಾಗೆ ಈ ಪ್ಲಾಂಟ್‌ನಿಂದ ಪ್ರತಿ ವರ್ಷ ಸುಮಾರು 16 ಲಕ್ಷ ಟನ್ ಯೂನಿಟ್‌ನಷ್ಟು ವಿದ್ಯುತ್ ಹಿಂದೆಯೇ ಉತ್ಪಾದಿಸಲಾಗುತ್ತಿತ್ತು. ಇದರಂತೆ ಲಂಡನ್‌ನಲ್ಲಿಯೂ ಸಹ ಒಂದು ದಶಮಾನದ ಹಿಂದೆಯೇ ಸಗಣಿಯಿಂದ ವಿದ್ಯುತ್ ತಯಾರಿಸುವ ಪ್ರಕ್ರಿಯೆಗೆ ಚಾಲನೆಯನ್ನು ನೀಡಲಾಗಿತ್ತು. ಇಲ್ಲಿಯ ಓಹಿಯೋ ಸ್ಟೇಟ್ ವಿಶ್ವವಿದ್ಯಾಲಯದ ಆಹಾರ, ಕೃಷಿ ಮತ್ತು ಜೈವಿಕ ಎಂಜಿನಿಯರಿಂಗ್ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಆ್ಯನ್‌ಕ್ರಿಸ್ಟಿ ಮತ್ತು ಅವರ ವಿದ್ಯಾರ್ಥಿಗಳು ದನ ಮೆಲುಕು ಹಾಕಿದ ಆಹಾರ ಹೊಟ್ಟೆಯಲ್ಲಿ ಪಚನ ಕ್ರಿಯೆಗೆ ಒಳಪಟ್ಟ ಬಳಿಕ ಅದನ್ನು ಹೊರ ತೆಗೆದು, ಅದರ ಅರ್ಧ ಲೀಟರ್‌ನಷ್ಟು ರಸದಿಂದ 600 ವೋಲ್ಟ್ ರೀಚಾರ್ಜ್ ಮಾಡಬಹುದಾದ ಬ್ಯಾಟರಿ ಚಲಾಯಿಸಲು ಸಾಧ್ಯವಾಗುವಷ್ಟು ವಿದ್ಯುತ್ ಉತ್ಪಾದಿಸಿ ತೋರಿಸಿದ್ದರು. ಇವರು ಕಂಡು ಹಿಡಿದ ಈ ಮಾಪನದಿಂದ ಸುಮಾರು 30 ದಿನಗಳವರೆಗೆ ವಿದ್ಯುತ್ತಿನ ವೋಲ್ಟೇಜ್‌ನಲ್ಲಿ ಇಳಿಕೆಯಾಗಿರಲಿಲ್ಲ. ಇಂದು ಕೊಲ್ಲಿ ರಾಷ್ಟ್ರಗಳಷ್ಟೇ ಅಲ್ಲದೆ ಬಹುತೇಕ ರಾಷ್ಟ್ರಗಳ ತಲೆಯ ಮೇಲೆ ಯುದ್ಧದ ಕಾರ್ಮೋಡ ಕವಿಯುತ್ತಿದ್ದು ತೈಲೋತ್ಪನ್ನಗಳಿಗೆ ಪರ್ಯಾಯದ ಹುಡುಕಾಟ ವಿಶ್ವದಾದ್ಯಂತ ನಡೆಯುತ್ತಿದೆ.

ಈ ಸಂದರ್ಭದಲ್ಲಿ ಸಗಣಿ ಎಂಬುದು ಎಲ್ಲದಕ್ಕೂ ಪರ್ಯಾಯವಾಗಿ ಕಂಡುಬಂದಿದೆ. ಗಮನಿಸಬೇಕಾದ್ದೇನೆಂದರೆ ಭಾರತದಲ್ಲಿ ಒಂದು ಅಂದಾಜಿನ ಪ್ರಕಾರ ಸುಮಾರು 5000ಕ್ಕೂ ಹೆಚ್ಚು ಗೋಶಾಲೆಗಳಿವೆ.

ಸದಾಚಾರವೇ ಜೀವನದ ಮೂಲ ಆಧಾರ

ಸಿ.ಪಿ. ರಾಧಾಕೃಷ್ಣನ್, ಉಪ-ರಾಷ್ಟ್ರಪತಿ



ಮಹಾವೀರ ಜಯಂತಿಯ ಈ ಪವಿತ್ರ ಸಂದರ್ಭದಲ್ಲಿ, ನಾವು ಇಂದು ಯಾರ ಜಯಂತಿಯನ್ನು ಆಚರಿಸುತ್ತಿದ್ದೇವೆಯೋ ಆ ಭಗವಾನ್ ಮಹಾವೀರರಿಗೆ ನಾನು ಮನಃಪೂರ್ವಕವಾಗಿ ಗೌರವವನ್ನು ಅರ್ಪಿಸುತ್ತೇನೆ. ಈ ಲೇಖನದ ಮೂಲಕ, ಮಾನವಕುಲಕ್ಕೆ ಸದಾಚಾರ, ಕರುಣೆ ಮತ್ತು ಸತ್ಯದ ಹಾದಿಯಲ್ಲಿ ಮಾರ್ಗದರ್ಶನ ನೀಡುತ್ತಿರುವ ಅವರ ಶಾಶ್ವತ ಬೋಧನೆಗಳಿಗೆ ಹಾಗೂ ಮೌಲ್ಯಗಳಿಗೆ ಗೌರವ ಸಲ್ಲಿಸಲು ನಾನು ಬಯಸುತ್ತೇನೆ. ತಮಿಳುನಾಡು ದೀರ್ಘಕಾಲದಿಂದಲೂ ಗಾಢ ಆಧ್ಯಾತ್ಮಿಕ ಭಕ್ತಿಯ ನಾಡಾಗಿದೆ. ಕಳೆದ ಹಲವು ಸಾವಿರ ವರ್ಷಗಳಿಂದ, ಈ ಪವಿತ್ರ ಭೂಮಿಯಲ್ಲಿ ಆಧ್ಯಾತ್ಮಿಕ ಚಿಂತನೆಗಳು ಮತ್ತು ತತ್ತ್ವಶಾಸ್ತ್ರಗಳ ಶ್ರೀಮಂತ ಪರಂಪರೆಯು ಪ್ರವರ್ಧಮಾನಕ್ಕೆ ಬಂದಿದೆ. ಪುರಾತನ ಸಾಂಸ್ಕೃತಿಕ ಪರಂಪರೆ, ಗಾಢವಾದ ಒಳಗೊಳ್ಳುವಿಕೆಯ ಮನೋಭಾವ ಮತ್ತು ಗಮನಾರ್ಹವಾದ ಬುದ್ಧಿವಂತಿಕೆಯನ್ನು ಹೊಂದಿರುವ ನಮ್ಮ ತಮಿಳು ಮಣ್ಣು, ದೇಶದಾದ್ಯಂತದ ಧರ್ಮಗಳನ್ನು ಯಾವುದೇ ತಾರತಮ್ಯವಿಲ್ಲದೆ ಮುಕ್ತವಾಗಿ ಸ್ವೀಕರಿಸಿದೆ ಮತ್ತು ಪೋಷಿಸಿದೆ. ಇದೇ ಕಾರಣಕ್ಕಾಗಿ ತಮಿಳುನಾಡಿನ ಜನರು ಇಂದಿನ ಬಿಹಾರದಲ್ಲಿ ಉದಯಿಸಿದ ಜೈನ ಧರ್ಮವನ್ನು ಸುಲಭವಾಗಿ ಅನುಸರಿಸುತ್ತಿದ್ದಾರೆ. ತಮಿಳರು ಸದಾ 'ಅರಮ್' (ಸದಾಚಾರ) ಅನ್ನು ಜೀವನದ ಮೂಲ ಆಧಾರವೆಂದು ಪರಿಗಣಿಸಿದ್ದಾರೆ ಮತ್ತು ಅದಕ್ಕೆ ಒತ್ತು ನೀಡುವ ಧರ್ಮಗಳನ್ನು ಸ್ವಾಗತಿಸಿ, ಸ್ವೀಕರಿಸಿದ್ದಾರೆ. ಜೀವನವನ್ನು ಅರಮ್ (ಧರ್ಮ), ಪೊರುಳ್ (ಸಂಪತ್ತು) ಮತ್ತು ಇನ್ಬಮ್ (ಸುಖ) ಗಳ ಸಾಮರಸ್ಯದ ಅನ್ವೇಷಣೆಯ ಮೂಲಕ ರೂಪಿಸಲಾಗಿದ್ದರೂ, ಸಂಪತ್ತು ಮತ್ತು ಸುಖ ಎರಡನ್ನೂ ಕೇವಲ ಸದಾಚಾರದ ಹಾದಿಯ ಮೂಲಕವೇ ಪಡೆಯಬೇಕು ಎಂಬುದು ಇಲ್ಲಿನ ಆಶಯ. 'ಅರತೋಡು ನಿಟ್ರಲ್'ಅಂದರೆ ಸದಾಚಾರಕ್ಕೆ ಅಚಲವಾಗಿ ಬದ್ಧವಾಗಿರುವುದು ಜೀವನದ ಮೂಲ ವ್ಯಾಕರಣವಾಗಿದೆ.



ಮಹಾವೀರ ಜಯಂತಿ

ತಮಿಳುನಾಡಿನ ಜನರು ಯಾವಾಗಲೂ ಸದಾಚಾರವಿಲ್ಲದ ಸಂಪತ್ತಿನ ಅನ್ವೇಷಣೆ ಮತ್ತು ಧರ್ಮವಿಲ್ಲದ ಸುಖದ ಅನುಭವವು ಅನುಚಿತವೆಂದು ಹಾಗೂ ಸಾಮಾಜಿಕ ಅಸಮ್ಮತಿ ಮತ್ತು ನೈತಿಕ ದಂಡನೆಗೆ ಅರ್ಹವೆಂದು ನಂಬುತ್ತಾ ಬಂದಿದ್ದಾರೆ. ಇಂತಹ ಆಚರಣೆಗಳು ಸಮಾಜದಲ್ಲಿ ಅಸ್ತಿತ್ವದಲ್ಲಿದ್ದಾಗಲೂ, ಅವುಗಳನ್ನು ಎಂದಿಗೂ ಸಂಪ್ರದಾಯದ ಭಾಗವಾಗಿ ಒಪ್ಪಿಕೊಳ್ಳಲಿಲ್ಲ. ಅಂತಹ ನಡವಳಿಕೆಯನ್ನು ಸಾಹಿತ್ಯದಲ್ಲೂ ಅನುಮೋದಿಸದಂತೆ ನಿಯಮಗಳನ್ನು ರೂಪಿಸಿದ ನಾಗರಿಕತೆ ನಮ್ಮದು.ಈ ತತ್ವವು ಪ್ರಾಚೀನ ಪಠ್ಯವಾದ 'ತೊಲ್ಕಾಪ್ಪಿಯಂ'ನಲ್ಲಿ ಪ್ರತಿಫಲಿಸುತ್ತದೆ.

ಸಮ್ಯಕ್ ದರ್ಶನ (ಸರಿಯಾದ ನಂಬಿಕೆ), ಸಮ್ಯಕ್ ಜ್ಞಾನ (ಸರಿಯಾದ ಜ್ಞಾನ) ಮತ್ತು ಸಮ್ಯಕ್ ಚಾರಿತ್ರ್ಯ (ಸರಿಯಾದ ನಡತೆ) ಎಂಬ ರತ್ನತ್ರಯಗಳು ಜೈನ ಧರ್ಮದ ಮೂಲ ಅಡಿಪಾಯವೆಂದು ಭಗವಾನ್ ಮಹಾವೀರರು ಬೋಧಿಸಿದರು. ಆದ್ದರಿಂದ, ಇಂತಹ ನೈತಿಕ ಆದರ್ಶಗಳನ್ನು ಪಾಲಿಸುತ್ತಿದ್ದ ತಮಿಳು ಜನರು, ದೇಶದ ಉತ್ತರದ ಭಾಗಗಳಿಂದ ಈ ಉನ್ನತ ಸಂಪ್ರದಾಯವು ವಿಸ್ತರಿಸಿದಾಗ ಅದನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿದ್ದರಲ್ಲಿ ಆಶ್ಚರ್ಯವೇನಿಲ್ಲ. ಜೈನ ಧರ್ಮವು ತಮಿಳುನಾಡಿನಲ್ಲಿ ವ್ಯಾಪಕವಾಗಿ ಪ್ರವರ್ಧಮಾನಕ್ಕೆ ಬಂದಿತು ಏಕೆಂದರೆ, ಅದರ ಬೋಧನೆಗಳನ್ನು ತಮಿಳು ಭಾಷೆಯಲ್ಲಿಯೇ ನೀಡಲಾಗಿತ್ತು. ಜೈನ ವಿದ್ವಾಂಸರು ತಾವು ಸೇವೆ ಸಲ್ಲಿಸಿದ ಪ್ರದೇಶಗಳ ಮಾತೃಭಾಷೆಗಳಲ್ಲಿಯೇ ತಮ್ಮ ಧರ್ಮಗ್ರಂಥಗಳನ್ನು ರಚಿಸಲು ಆರಿಸಿಕೊಂಡರು, ಆ ಮೂಲಕ ಸಾಮಾನ್ಯ ಜನರಿಗೆ ತಮ್ಮ ತತ್ತ್ವಶಾಸ್ತ್ರವು ಸುಲಭವಾಗಿ ಲಭ್ಯವಾಗುವಂತೆ ಮಾಡಿದರು. ತಮಿಳು ಸಾಹಿತ್ಯಕ್ಕೆ ಅವರ ಕೊಡುಗೆ ನಿಜಕ್ಕೂ ಅಪಾರವಾದುದು.

ಶಾಸ್ತ್ರೀಯ ತಮಿಳು ಸಾಹಿತ್ಯದಲ್ಲಿ ಜೈನ ಚಿಂತನೆಯ ಪ್ರಭಾವವು ಸ್ಪಷ್ಟವಾಗಿ ಗೋಚರಿಸುತ್ತದೆ. ಸಂಗಮ ಕಾಲದಲ್ಲಿ, ಪುರನಾನೂರು ಕವಿ ಪಕ್ಕುಡುಕ್ಕೈ ನಂಕನಿಯಾರ್ ಅವರು, ಜಗತ್ತು ದುಃಖ ಮತ್ತು ಸಂತೋಷದ ಅನಿರೀಕ್ಷಿತ ಸಂಯೋಜನೆಯಾಗಿದೆ ಆದರೂ, ಅದರ ಸ್ವರೂಪವನ್ನು ಅರ್ಥಮಾಡಿಕೊಂಡವರು ಅದರ ಮಾಧುರ್ಯವನ್ನು ಗ್ರಹಿಸುತ್ತಾರೆ ಎಂದು ಹೇಳುತ್ತಾರೆ. ಇದು ಸಂತೋಷ ಮತ್ತು ದುಃಖಗಳು ಜೀವನದ ಸಹಜ ಭಾಗಗಳಾಗಿವೆ ಮತ್ತು ಈ ವಾಸ್ತವವನ್ನು ಗುರುತಿಸುವುದರಲ್ಲಿ ನಿಜವಾದ ಬುದ್ಧಿವಂತಿಕೆ ಅಡಗಿದೆ ಎಂಬ ಜೈನ ದೃಷ್ಟಿಕೋನವನ್ನು ಪ್ರತಿಫಲಿಸುತ್ತದೆ. ಅಂತೆಯೇ, ಕನಿಯನ್ ಪೂಂಗುಂದ್ರನಾರ್ ಅವರ ಪ್ರಸಿದ್ಧ ಪದ್ಯ ಯಾದುಮ್ ಊರೇ, ಯಾವರುಮ್ ಕೇಳಿರ್ ಒಂದು ಸಾರ್ವತ್ರಿಕ ದೃಷ್ಟಿಕೋನವನ್ನು ವ್ಯಕ್ತಪಡಿಸುತ್ತದೆ. ಅಂದರೆ ಎಲ್ಲಾ ಸ್ಥಳಗಳು ಒಬ್ಬರ ಸ್ವಂತ ಮತ್ತು ಎಲ್ಲಾ ಜನರು ಬಂಧುಗಳಾಗಿದ್ದಾರೆ ಮತ್ತು ಒಳ್ಳೆಯದು ಹಾಗೂ ಕೆಟ್ಟದ್ದು ಇತರರಿಂದ ಉದ್ಭವಿಸುವುದಿಲ್ಲ ಆದರೆ, ಅವು ಒಬ್ಬರ ಸ್ವಂತ ಕ್ರಿಯೆಗಳಿಂದಲೇ ರೂಪಿತವಾಗುತ್ತವೆ. ಕರ್ಮ ಸಿದ್ಧಾಂತದಲ್ಲಿ ಬೇರೂರಿರುವ ಈ ಆಳವಾದ ಆಲೋಚನೆಯು ಜೈನ ತತ್ವಶಾಸ್ತ್ರದೊಂದಿಗೆ ನಿಕಟವಾಗಿ ಹೊಂದಿಕೊಂಡಿದೆ. ಈ ಕಾರಣದಿಂದಲೇ ಕನಿಯನ್ ಪೂಂಗುಂದ್ರನಾರ್ ಅವರನ್ನು ಅನೇಕ ಬಾರಿ ಜೈನ ಧರ್ಮೀಯರು ಎಂದು ಪರಿಗಣಿಸಲಾಗುತ್ತದೆ. ಸಿಲಪ್ಪತಿಕಾರಂ, ಜೀವಕ ಚಿಂತಾಮಣಿ, ವಲಯಾಪತಿ ಮತ್ತು ನಾಲಡಿಯಾರ್ ನಂತರ ಕಾಲಾತೀತ ಸಾಹಿತ್ಯಿಕ ಕೃತಿಗಳು ತಮಿಳು ಸಾಹಿತ್ಯಿಕ ಪರಂಪರೆಯ ಶಾಶ್ವತ ಸ್ತಂಭಗಳಾಗಿ ನಿಂತಿವೆ, ಇವು ಜೈನ ಚಿಂತನೆ ಮತ್ತು ನೈತಿಕ ಬುದ್ಧಿವಂತಿಕೆಯ ಅಳಿಸಲಾಗದ ಮುದ್ರೆಯನ್ನು ಹೊಂದಿವೆ. ತಮಿಳುನಾಡಿನಲ್ಲಿ ಜೈನ ಧರ್ಮದ ಪ್ರಸಾರದ ಕುರಿತು ವ್ಯಾಪಕವಾಗಿ ಅಂಗೀಕರಿಸಲ್ಪಟ್ಟ ಐತಿಹಾಸಿಕ ಸಂಪ್ರದಾಯವೊಂದು ಚಾಲ್ತಿಯಲ್ಲಿದೆ. ಪೂಜ್ಯ ಋಷಿ ಭದ್ರಬಾಹು ಅವರು ತಮ್ಮ ಆಧ್ಯಾತ್ಮಿಕ ಒಳನೋಟದ ಮೂಲಕ ಮಗಧದಲ್ಲಿ 12 ವರ್ಷಗಳ ಭೀಕರ ಕ್ಷಾಮವನ್ನು ಊಹಿಸಿ, 12,000 ಸನ್ಯಾಸಿ ಗಳನ್ನು ಅದರ ಪರಿಣಾಮಗಳಿಂದ ರಕ್ಷಿಸಲು ದಕ್ಷಿಣಾಭಿಮುಖವಾಗಿ ಪ್ರಯಾಣ ಬೆಳೆಸಿದರು. ಅವರ ಜೊತೆಯಲ್ಲಿ ಅಸಂಖ್ಯಾತ ಸುಖಭೋಗಗಳನ್ನು ತ್ಯಜಿಸಿ ಸನ್ಯಾಸತ್ವದ ಜೀವನವನ್ನು ಅರಸಿ ಬಂದಿದ್ದ ಚಂದ್ರಗುಪ್ತ ಮೌರ್ಯರೂ ಇದ್ದರು. ಅವರು ಅಂತಿಮವಾಗಿ ಇಂದಿನ ಕರ್ನಾಟಕದ ಶ್ರವಣಬೆಳಗೊಳದಲ್ಲಿ ನೆಲೆಸಿದರು.

ಅಲ್ಲಿಂದ, ಋಷಿ ಭದ್ರಬಾಹು ಅವರು ತಮ್ಮ ಶಿಷ್ಯ ವಿಶಾಖ ಮುನಿವರ್ ಅವರನ್ನು ಚೋಳ ಮತ್ತು ಪಾಂಡ್ಯ ಪ್ರಾಂತ್ಯಗಳಲ್ಲಿ ಜೈನ ತತ್ವಗಳನ್ನು ಪ್ರಚಾರ ಮಾಡಲು ಕಳುಹಿಸಿದರು ಎಂದು ಹೇಳಲಾಗುತ್ತದೆ. ಈ ಘಟನೆಗಳ ಉಲ್ಲೇಖಗಳು ಹರಿಸೇನನಿಗೆ ಸಂಬಂಧಿಸಿದ 'ಬೃಹತ್ಕಥಾ ಕೋಶ' ಮತ್ತು ದೇವಚಂದ್ರನ 'ರಾಜಾವಳಿ ಕಥೆ'ಯಂತಹ ಪಠ್ಯಗಳಲ್ಲಿ ಕಂಡುಬರುತ್ತವೆ. ಮಧುರೈ ಪ್ರದೇಶದಲ್ಲಿ ಪತ್ತೆಯಾದ ಬ್ರಾಹ್ಮಿ ಶಾಸನಗಳು, ಹಾಗೆಯೇ ಸುಮಾರು ಎರಡು ಸಹಸ್ರಮಾನಗಳಿಂದ ಸಂರಕ್ಷಿಸಲ್ಪಟ್ಟಿರುವ ಶಾಶ್ವತ ಮೌಖಿಕ ಸಂಪ್ರದಾಯಗಳು ಇದಕ್ಕೆ ಹೆಚ್ಚಿನ ಪುಷ್ಟಿ ನೀಡುತ್ತವೆ. ಇಂದು ಕೂಡ ತಮಿಳುನಾಡಿನಲ್ಲಿ ನಲವತ್ತು ಸಾವಿರಕ್ಕೂ ಹೆಚ್ಚು ತಮಿಳು ಮಾತನಾಡುವ ಜೈನರಿದ್ದಾರೆ, ಈ ಮೂಲಕ ಈ ಪುರಾತನ ಜೀವಂತ ಪರಂಪರೆಯೊಂದಿಗೆ ಅವರು, ತಮ್ಮ ಸಂಪರ್ಕವನ್ನು ಉಳಿಸಿಕೊಂಡಿದ್ದಾರೆ. ಜೈನರ ಉಪಸ್ಥಿತಿಯ ಪುರಾತತ್ವ ಕುರುಹುಗಳನ್ನು ಸಿದ್ದನವಾಸಲ್, ತಿರುಮಲೈ ಮತ್ತು ಅರವಕುರಿಚಿಯಂತಹ ಸ್ಥಳಗಳಲ್ಲಿ ಕಾಣಬಹುದು; ಅಲ್ಲಿನ ಬಂಡೆಗಳ ಮೇಲೆ ಕೆತ್ತಲಾದ ಕಲ್ಲಿನ ಹಾಸಿಗೆಗಳು ಜೈನ ಮುನಿಗಳ ತಪಸ್ವಿ ಜೀವನದ ಮೂಕ ಸಾಕ್ಷಿಗಳಾಗಿವೆ.

ದಕ್ಷಿಣದ ಕಾಶಿ ಎಂದು ಪೂಜಿಸಲ್ಪಡುವ ಕಾಂಚೀಪುರಂ ಅನ್ನು ಹೆಚ್ಚಾಗಿ ಶಿವ ಕಾಂಚಿ, ವಿಷ್ಣು ಕಾಂಚಿ ಮತ್ತು ಜೈನ ಕಾಂಚಿ ಎಂದು ಮೂರು ವಿಭಿನ್ನ ಪ್ರದೇಶಗಳಾಗಿ ವಿಂಗಡಿಸಲಾಗುತ್ತಿತ್ತು. ಜೈನ ಕಾಂಚಿ ಎಂಬುದು ತಿರುಪರುತ್ತಿಕುನ್ರಂ ಪ್ರದೇಶವನ್ನು ಸೂಚಿಸುತ್ತದೆ, ಇಲ್ಲಿ ಭಗವಾನ್ ಮಹಾವೀರ ಮತ್ತು ಭಗವಾನ್ ಚಂದ್ರಪ್ರಭರಿಗೆ ಅರ್ಪಿತವಾದ ದೇವಾಲಯಗಳಿವೆ. ಇಲ್ಲಿನ ಜೈನ ಮುನಿಗಳು ಧರ್ಮ, ಶಿಕ್ಷಣ ಮತ್ತು ಸಮಾಜದ ಕ್ಷೇತ್ರಗಳಲ್ಲಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಇದು ಕಾಂಚೀಪುರಂ ಅನ್ನು ಒಂದು ದೊಡ್ಡ ಕಲಿಕೆಯ ಕೇಂದ್ರವಾಗಿ ಪ್ರಸಿದ್ಧಿಗೊಳಿಸಲು ಮಹತ್ತರ ಕೊಡುಗೆ ನೀಡಿದೆ. ತಿರುಪುರ ಜಿಲ್ಲೆಯಲ್ಲಿ ಹುಟ್ಟಿ ಬೆಳೆದವನಾದ ನನಗೆ, ನನ್ನ ಪ್ರದೇಶದ ಜೈನ ಪರಂಪರೆಯೊಂದಿಗೆ ನಿಕಟ ಮತ್ತು ವೈಯಕ್ತಿಕ ಸಂಬಂಧವಿದೆ. ವಿಜಯಮಂಗಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಕೊಂಗು ವೇಲಿರ್ ಅರಸರು ಸಾಹಿತ್ಯ ಮತ್ತು ಧರ್ಮ ಎರಡಕ್ಕೂ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ಅವರು ಉದಯನನ ಕಥೆಯನ್ನು ವಿವರಿಸುವ 'ಬೃಹತ್ಕಥಾ'ದ ತಮಿಳು ಆವೃತ್ತಿಯಾದ 'ಪೆರುಂಕತೈ' ಎಂಬ ಮಹಾಕಾವ್ಯವನ್ನು ರಚಿಸಿದರು. ಅವರು ವಿಜಯಮಂಗಲದಲ್ಲಿ ಜೈನ ದೇವಾಲಯವೊಂದನ್ನು ಸ್ಥಾಪಿಸಿದರು, ಇದನ್ನು ಕೊಂಗು ಪ್ರದೇಶದ ಅತ್ಯಂತ ಪ್ರಾಚೀನ ದೇವಾಲಯಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ಈ ಪವಿತ್ರ ಸ್ಥಳದಲ್ಲಿ, ಅವರು ತಮಿಳು ಸಂಘವನ್ನು ಸ್ಥಾಪಿಸುವ ಮೂಲಕ ಮತ್ತು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸುವ ಮೂಲಕ ತಮಿಳು ಕಲಿಕೆಯನ್ನು ಪೋಷಿಸಿದರು ಎಂದು ನಂಬಲಾಗಿದೆ, ಆ ಮೂಲಕ ತಮಿಳು ಭಾಷೆ ಮತ್ತು ಪಾಂಡಿತ್ಯದ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡಿದ್ದಾರೆ. ತಿರುಪ್ಪರುತ್ತಿಕುನ್ರಂ ನಂತಹ ತಮಿಳುನಾಡಿನ ಜೈನ ದೇವಾಲಯಗಳು ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ಚಿತ್ರಕಲೆಯಲ್ಲಿನ ಶ್ರೇಷ್ಠತೆಗೆ ಗಮನಾರ್ಹ ಉದಾಹರಣೆಗಳಾಗಿ ನಿಂತಿವೆ. ಜೈನ ಧರ್ಮವು ಭಾರತದ ಉತ್ತರದ ಪ್ರದೇಶಗಳಲ್ಲಿ ಉದಯಿಸಿದರೂ, ಈ ದೇವಾಲಯಗಳು ತಮಿಳು ವಾಸ್ತುಶೈಲಿಯ ಸಾರವನ್ನು ಸುಂದರವಾಗಿ ಪ್ರತಿಫಲಿಸುತ್ತವೆ.

ಈ ಸಾಮರಸ್ಯದ ಏಕೀಕರಣವು ಜಿಂಝಿಯಲ್ಲಿನ ಜೈನ ಮಠ ಮತ್ತು ಅರಂತೈ ಹಾಗೂ ತಿರುಪ್ಪನ್ಮಲೈನಲ್ಲಿನ ದೇವಾಲಯಗಳಂತಹ ಕೇಂದ್ರಗಳಲ್ಲಿ ಹಬ್ಬಗಳ ರೋಮಾಂಚಕ ಆಚರಣೆಯಲ್ಲಿ ಮತ್ತಷ್ಟು ಸ್ಪಷ್ಟವಾಗಿ ಕಂಡುಬರುತ್ತದೆ, ಅಲ್ಲಿ ಹಳೆಯ ಸಂಪ್ರದಾಯಗಳನ್ನು ಭಕ್ತಿಯಿಂದ ಸಂರಕ್ಷಿಸಲಾಗಿದೆ. ಚೀನಾಪುರಂನಲ್ಲಿಯೂ ಸಹ, ಭಗವಾನ್ ಆದಿನಾಥರಿಗೆ (ಮೊದಲ ತೀರ್ಥಂಕರರು) ಅರ್ಪಿತವಾದ ಪ್ರಾಚೀನ ದೇವಾಲಯವು ಸಕ್ರಿಯ ಆರಾಧನೆಯ ಸ್ಥಳವಾಗಿ ಮುಂದುವರಿದಿದೆ, ಇದು ಅವಿಚ್ಛಿನ್ನ ಆಧ್ಯಾತ್ಮಿಕ ಸಂಪ್ರದಾಯವನ್ನು ಪ್ರತಿಫಲಿಸುತ್ತದೆ.

ವಿಧಾನಸಭಾ ಚುನಾವಣೆ: ಕುಸಿಯಲಿರುವ ಕೆಲವು ಕೋಟೆಗಳು

ರಾಮ್ ಮಾಧವ್

ಐದು ರಾಜ್ಯಗಳಿಗೆ ಈ ತಿಂಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ಎರಡು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ ಪಾಲಿಗೆ ಮಹತ್ವದ್ದಾಗಿದೆ. 2021ರಂತೆ ಈ ಬಾರಿಯೂ ಪ.ಬಂಗಾಳ ಚುನಾವಣೆಯ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. 2011ರಿಂದ ಆರಂಭಿಸಿ ತೃಣಮೂಲ ಕಾಂಗ್ರೆಸ್ ಮೂರು ಚುನಾವಣೆಗಳನ್ನೂ ಗೆದ್ದಿದೆ. 4ನೇ ಬಾರಿಗೆ ಅಧಿಕಾರ ಗಳಿಸಲು ಮಮತಾ ಬ್ಯಾನರ್ಜಿ ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದಾರೆ. ಇದೇವೇಳೆ 2011ರಲ್ಲಿ ಶೇ. 4 ಮತ ಗಳಿಕೆಯೊಂದಿಗೆ ಶೂನ್ಯ ಸ್ಥಾನ ಗಳಿಸಿದ್ದ ಬಿಜೆಪಿ 2021ರಲ್ಲಿ ಶೇ. 38 ಮತ ಗಳಿಕೆಯೊಂದಿಗೆ 77 ಸ್ಥಾನ ಗಳಿಸಿದ್ದು, ಈ ಬಾರಿ ತಾನೇ ಸರಕಾರ ರಚಿಸಬೇಕೆಂಬ ಇರಾದೆಯಲ್ಲಿದೆ.

ಪ.ಬಂಗಾಳದಲ್ಲಿ ಕಳೆದೊಂದು ದಶಕದಲ್ಲಿ ಬಿಜೆಪಿಯ ಪ್ರಗತಿ ಅಸಾಧಾರಣವಾದುದು. 2016ರ ಚುನಾವಣೆಯಲ್ಲಿ 3 ಸ್ಥಾನಗಳನ್ನು ಗೆದ್ದು ಶೇ. 10 ಮತ ಗಳಿಸಿದ್ದ ಬಿಜೆಪಿ ಬಳಿಕ ಅದ್ಭುತ ಪ್ರಗತಿ ಸಾಧಿಸಿತು. ಟಿಎಂಸಿಯ ಭಿನ್ನಮತೀಯರನ್ನು ತನ್ನೆಡೆಗೆ ಸೆಳೆದುದಷ್ಟೇ ಅಲ್ಲದೆ, ಕಾಂಗ್ರೆಸ್ ಮತ್ತು ಎಡಪಕ್ಷಗಳ ತಳಮಟ್ಟದ ಕಾರ್ಯಕರ್ತರನ್ನೂ ಸೆಳೆದುಕೊಂಡಿತು. ಇದರಿಂದಾಗಿ 2021ರ ಚುನಾವಣೆಯಲ್ಲಿ ಟಿಎಂಸಿಗೆ ಪ್ರಮುಖ ಪ್ರತಿಸ್ಪರ್ಧಿಯಾಗಿ ಮೂಡಿ ಬಂದಿತು. 2020ರಲ್ಲಿ ಟಿಎಂಸಿ ಮುಖಂಡ ಸುವೇಂದು ಅಧಿಕಾರಿ ಹಾಗೂ ಇನ್ನಿತರ 9 ಶಾಸಕರು ಕೂಡಾ ಬಿಜೆಪಿ ಸೇರಿದ್ದರು. ನಂದಿಗ್ರಾಮದಲ್ಲಿ ಮಮತಾ ವಿರುದ್ಧ ಸ್ಪರ್ಧಿಸಿದ್ದ ಸುವೇಂದು ಮಮತಾರನ್ನು ಸೋಲಿಸುವ ಮೂಲಕ ರಾಜಕೀಯ ಕೋಲಾಹಲ ಸೃಷ್ಟಿಸಿದ್ದರು. ಇದೀಗ 2026ರ ವೇಳೆಗೆ ಕಾಂಗ್ರೆಸ್ ಮತ್ತು ಟಿಎಂಸಿ ಮಧ್ಯೆ ನೇರ ಸ್ಪರ್ಧೆ ಏರ್ಪಟ್ಟಿದೆ.

ಕಳೆದ ಹದಿನೈದು ವರ್ಷಗಳಲ್ಲಿ ಮಮತಾ ಸರಕಾರವು ಪರಿಣಾಮಕಾರಿ ಆಡಳಿತ ನೀಡಲು ವಿಫಲವಾಗಿದೆ. ಮೂರು ದಶಕಗಳ ಕಾಲ ಆಳಿದ ಎಡಪಕ್ಷಗಳು ರಾಜ್ಯವನ್ನು ಅಧೋಗತಿಗೆ ತಳ್ಳಿದ್ದರೆ, ಮಮತಾ ಸರಕಾರ ಕೂಡಾ ರಾಜ್ಯವನ್ನು ಮೇಲೆತ್ತುವ ಪ್ರಯತ್ನ ನಡೆಸಲಿಲ್ಲ. ರಾಜ್ಯದಲ್ಲಿ ಕೈಗಾರಿಕೆ ಮತ್ತು ಆರ್ಥಿಕ ಅಭಿವೃದ್ಧಿ ಕಿಂಚಿತ್ತೂ ಆಗಿಲ್ಲ. ನಿರುದ್ಯೋಗ ಪ್ರಮಾಣವೂ ಅತ್ಯಧಿಕವಾಗಿದೆ. ಚುನಾವಣೆಗಿಂತ ಕೆಲವೇ ತಿಂಗಳ ಮೊದಲು ಪ್ರಕಟಿಸಿದ ಯುವ ಸಾಥಿ ಯೋಜನೆಯು ನಿರುದ್ಯೋಗಿ ಯುವಕರಿಗೆ ತಿಂಗಳಿಗೆ ಕೇವಲ 1500 ರೂ. ನೀಡುತ್ತಿದೆ. ಈ ಯೋಜನೆಗೆ ಅರ್ಜಿ ಹಾಕಲು ಲಕ್ಷಾಂತರ ಯುವಕರು ಧಾವಿಸಿರುವುದನ್ನು ಕಂಡಾಗ ರಾಜ್ಯ ಸರಕಾರವು ಉದ್ಯೋಗ ಸೃಷ್ಟಿಯಲ್ಲಿ ಹೇಗೆ ವೈಫಲ್ಯ ಕಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಮಮತಾ ಬ್ಯಾನರ್ಜಿ ಈಗ ಪ್ರಬಲ ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದಾರೆ. ಆಕೆಯ ಸಾಂಪ್ರದಾಯಿಕ ಬೆಂಬಲಿಗರಾದ ಮಹಿಳೆಯರು ಮತ್ತು ಮುಸ್ಲಿಮರು ಕೂಡಾ ಆಕೆಯಿಂದ ದೂರ ಸರಿಯುತ್ತಿದ್ದಾರೆ. ಆಶ್ವಾಸನೆಗಳನ್ನು ಈಡೇರಿಸದಿರುವುದು ಇದಕ್ಕೆ ಕಾರಣ. ರಾಜ್ಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿರುವುದು ಪ್ರಮುಖ ಚರ್ಚಾ ವಿಷಯವಾಗಿದೆ. ನಿರುದ್ಯೋಗವು ಮುಸ್ಲಿಮರಲ್ಲೇ ಅಧಿಕವಾಗಿದೆ. ಆಡಳಿತ ವಿರೋಧಿ ಅಲೆ ಗುಪ್ತಗಾಮಿನಿಯಾಗಿ ಹರಿಯುತ್ತಿರುವುದರಿಂದ ಮಮತಾ ಅವರಿಗೆ ಈ ಬಾರಿ ಗೆಲುವು ಕಷ್ಟಕರವೆನಿಸಿದೆ.

> 5 ರಾಜ್ಯಗಳ ಚುನಾವಣೆಯಲ್ಲಿ ಕೆಲವು ಪಕ್ಷಗಳ ಕೋಟೆಗಳು ಕುಸಿಯಲಿರುವುದು ಖಚಿತವಾಗಿದೆ.

ಹಾಗೆಂದು ಬಿಜೆಪಿಗೂ ಸವಾಲಿಲ್ಲದಿಲ್ಲ. ಅದು ಟಿಎಂಸಿಯನ್ನು ಒಂದಲ್ಲ, ಮೂರು ಹಂತಗಳಲ್ಲಿ ಎದುರಿಸಬೇಕಾಗಿದೆ. ಮೊದಲನೆಯದಾಗಿ ಮಮತಾ ಬ್ಯಾನರ್ಜಿ ಗ್ರಾಮ ಮಟ್ಟದಿಂದ ಹಿಡಿದು ಉನ್ನತ ಸ್ತರದವರೆಗೆ ಆಡಳಿತ ಯಂತ್ರವನ್ನು ತಮ್ಮ ಪಕ್ಷದ ಯಂತ್ರವನ್ನಾಗಿಸಿದ್ದಾರೆ. ಅಧಿಕಾರಶಾಹಿತ್ವವು ರಾಜಕೀಕರಣಗೊಂಡಿರುವುದರಲ್ಲಿ ಪ.ಬಂಗಾಳ ಅಗ್ರ ಸ್ಥಾನದಲ್ಲಿದೆ. ಎರಡನೆಯದಾಗಿ ಟಿಎಂಸಿಯು ಅಧಿಕ ತೋಳ್ಬಲ ಹೊಂದಿದೆ. ದೊಡ್ಡ ಗೂಂಡಾ ಪಡೆಯೇ ಅದರೊಂದಿಗಿದೆ. ಮೂರನೆಯದಾಗಿ ಮಮತಾ ರಾಜಕೀಯ ಏಜೆನ್ಸಿಯನ್ನು ಬಾಡಿಗೆಗೆ ಪಡೆದಿದ್ದಾರೆ. ಚುನಾವಣೆ ವೇಳೆ ಸಾವಿರಾರು ಬಾಡಿಗೆ ಕಾರ್ಯಕರ್ತರನ್ನು ಆಕೆ ಬಳಸಿಕೊಳ್ಳುತ್ತಾರೆ.

ಪ.ಬಂಗಾಳವು ಬಿಜೆಪಿಗಷ್ಟೇ ಸವಾಲು ಒಡ್ಡಿರುವುದಲ್ಲ. ಚುನಾವಣಾ ಆಯೋಗಕ್ಕೂ ನ್ಯಾಯಯುತ ಚುನಾವಣೆ ನಡೆಸುವುದಕ್ಕೆ ಸವಾಲೊಡ್ಡಿದೆ. ಅಲ್ಲಿ ಶಾಂತಿಯುತವಾಗಿ ಮತ್ತು ಸುವ್ಯವಸ್ಥಿತವಾಗಿ ಮತದಾನ ನಡೆಸುವುದು ಕಷ್ಟದ ಕೆಲಸ. ಚುನಾವಣಾ ಆಯೋಗವು ಮತಪಟ್ಟಿ ಪರಿಷ್ಕರಣೆಯನ್ನು ಸಮರ್ಥವಾಗಿ ಮಾಡಿದ್ದು 61 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಗಿದೆ. ಇನ್ನೂ 60 ಲಕ್ಷ ಮತದಾರರ ಮೇಲೆ ಸಂದೇಹ ಉಂಟಾಗಿದ್ದು ಅವರು ತಮ್ಮ ದಾಖಲೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ. ಟಿಎಂಸಿಯ ಗೂಂಡಾಗಳು ಮತದಾರರನ್ನು ಬೆದರಿಸುವ ಪ್ರಕ್ರಿಯೆ ಸಾಮಾನ್ಯವಾಗಿದ್ದು, ಅದನ್ನು ತಡೆಯಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕಾಗಿದೆ.

ಅಸ್ಸಾಂ ಕುರಿತು ಹೇಳುವುದಾದರೆ ಅಲ್ಲಿ ಬಿಜೆಪಿ ಜಯ ಗಳಿಸುವುದು ಬಹುತೇಕ ಖಚಿತವಾಗಿದೆ.ಮುಖ್ಯಮಂತ್ರಿ ಹಿಮಂತ ಬಿಸ್ವಾ ಸಮರ್ಥ ಆಡಳಿತಗಾರರಾಗಿ ಮೂಡಿಬಂದಿದ್ದಾರೆ. ಅವರ ನಾಯಕತ್ವದಲ್ಲಿ ಅಸ್ಸಾಂ ಬಹಳಷ್ಟು ಪ್ರಗತಿ ಸಾಧಿಸಿದೆ.

ಕೇರಳದಲ್ಲಿ ಕದನ ಕುತೂಹಲ ಮೂಡಿದೆ. ಕಾಂಗ್ರೆಸ್‌ನಲ್ಲಿ ರಾಹುಲ್ ಗಾಂಧಿಯ ಉನ್ನತಿ ಮತ್ತು ಪಕ್ಷದ ರಾಜಕೀಯ ಅವನತಿಗೆ ಕೇರಳ ಕೂಡಾ ಒಂದು ಉತ್ತಮ ಉದಾಹರಣೆಯಾಗಿದೆ. 1990ರಿಂದ ಕೇರಳದಲ್ಲಿ ಅಧಿಕಾರವು ಎಲ್‌ಡಿಎಫ್ ಮತ್ತು ಯುಡಿಎಫ್ ನಡುವೆ ಪರ್ಯಾಯವಾಗಿ ಹಂಚಿಕೆಯಾಗಿದೆ. 2021ರಲ್ಲಿ ಎಲ್‌ಡಿಎಫ್ ಈ ಪದ್ಧತಿಯನ್ನು ಮುರಿದು 2ನೇ ಬಾರಿ ಅಧಿಕಾರ ಹಿಡಿದಿತ್ತು. ಕಾಂಗ್ರೆಸ್ ಸ್ಥಾನಮಾನದಲ್ಲಿ ಅತ್ಯಂತ ಕೆಳಮಟ್ಟಕ್ಕೆ ಕುಸಿದಿತ್ತು. ಕೇರಳದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಗೊಂದಲಭರಿತವಾಗಿದೆ. ಭಿನ್ನಮತ ಹೆಚ್ಚಿದೆ. ಕೇರಳದಲ್ಲಿ ಅತಂತ್ರ ವಿಧಾನಸಭೆ ರೂಪುಗೊಂಡು ಬಿಜೆಪಿ 'ಕರಿಗುದುರೆ'ಯಾಗಿ ಮೂಡಿಬಂದರೆ ಅಚ್ಚರಿಪಡಬೇಕಾಗಿಲ್ಲ.

ತಮಿಳ್ನಾಡು ಮತ್ತು ಪುದುಚೇರಿಗಳಲ್ಲಿ ಪ್ರಾದೇಶಿಕ ಪಕ್ಷಗಳದ್ದೇ ಪ್ರಭುತ್ವ. ಈ ಬಾರಿಯೂ ಅದೇ ಪರಿಸ್ಥಿತಿ ಮುಂದುವರಿಯಲಿದೆ. ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ತಮ್ಮ ಸ್ಥಾನಗಳನ್ನು ಹೆಚ್ಚಿಸಿಕೊಳ್ಳಲು ನೋಡಬಹುದಷ್ಟೆ.

ಬಿಜೆಪಿ ಪಾಲಿಗೆ ಈ ಬಾರಿಯ ಚುನಾವಣೆ ಐದೂ ರಾಜ್ಯಗಳಲ್ಲಿ ಪ್ರಗತಿಯ ಪ್ರಮಾಣ ನಿರ್ಧರಿಸಬಲ್ಲುದು. ಇಲ್ಲಿ ನಿಜವಾದ ಸವಾಲಿರುವುದು ಕಾಂಗ್ರೆಸ್‌ಗೆ. ಈಗಾಗಲೆ ಪತನದ ಹಾದಿಯಲ್ಲಿರುವ ಕಾಂಗ್ರೆಸ್ ಮುಂದೆ ಯಾವ ಸ್ಥಿತಿಗೆ ತಲುಪುವುದು ಎಂದು ಕಾದು ನೋಡಬೇಕು. ಕಾಂಗ್ರೆಸ್‌ನ ನಿಜವಾದ ಅಗ್ನಿಪರೀಕ್ಷೆಯು ಕೇರಳದಲ್ಲಿ ಆಗಲಿದೆ. ಅಲ್ಲಿ ಅಧಿಕಾರ ಹಿಡಿಯಲು ಸೋತರೆ ಪಕ್ಷವು ಇನ್ನಷ್ಟು ವಿಚ್ಛಿದ್ರಗೊಳ್ಳಲಿದೆ. ಇದು ಕಾಂಗ್ರೆಸ್‌ನ ವಂಶವಾದಿ ರಾಜಕೀಯಕ್ಕೂ ಸವಾಲೊಡ್ಡಲಿದೆ.

ಕಿರುಸುದ್ದಿ

ಏ.4: ಆಲಂಕಾರಿನಲ್ಲಿ ಕಾಲೇಜ್ ವಿದ್ಯಾರ್ಥಿಗಳ ಪಂಚ ಕೃತಿ ಬಿಡುಗಡೆ

ಕಡಬ: ಕಡಬ ತಾಲೂಕು ಆಲಂಕಾರಿನ ಶ್ರೀ ದುರ್ಗಾಂಬಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ರಚಿಸಿರುವ ಪಂಚ ಕೃತಿಗಳ ಬಿಡುಗಡೆ ಸಮಾರಂಭವು ಏ.4ರಂದು ಕಾಲೇಜಿನ ಸಭಾಂಗಣದಲ್ಲಿ ಜರಗಿಲಿದೆ. ಶ್ರೀ ದುರ್ಗಾಂಬಾ ಪದವಿ ಪೂರ್ವ ಕಾಲೇಜ್ ಹಾಗೂ ಭಾವಾಂಕುರ ಕನ್ನಡ ಸಂಘದ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಒಂದು ಶಿಕ್ಷಣ ಸಂಸ್ಥೆಯಲ್ಲಿಯೇ ಏಕಕಾಲದಲ್ಲಿ 9 ಹಾಗೂ 10ನೇ ತರಗತಿಯಲ್ಲಿ ಅಧ್ಯಯನ ಮಾಡುತ್ತಿರುವ 5 ಮಂದಿ ವಿದ್ಯಾರ್ಥಿಗಳು ಸ್ವರಚಿತ ಕವನ ಸಂಕಲನಗಳನ್ನು ಬಿಡುಗಡೆಗೊಳಿಸುತ್ತಿರುವುದು ಉಲ್ಲೇಖನೀಯವಾಗಿದೆ. ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿ ಬೆಳೆಸಿ, ಅವರ ಸೃಜನ ಶೀಲತೆಯನ್ನು ಉತ್ತೇಜಿಸಿ, ಕನ್ನಡ ಸಾಹಿತ್ಯ ಲೋಕಕ್ಕೆ ಹೊಸ ಪ್ರತಿಭೆಗಳನ್ನು ಪರಿಚಯಿಸುವ ಮಹತ್ತರ ಉದ್ದೇಶವನ್ನು ಈ ಕಾರ್ಯಕ್ರಮ ಹೊಂದಿದೆ. ಕಾರ್ಯಕ್ರಮದಲ್ಲಿ ಲಕ್ಷ್ಮಿ ಅವರ 'ಶ್ರೀಲೇಖ', ಪಲ್ಲವಿ ಕೆ. ಅವರ 'ತಿರುವು', ಲಿಖಿತಾ ಅವರ 'ಕನಸುಗಳ ಹಾರಾಟ', ದೀಪಿಕಾ ಅವರ 'ಮನದಾಳದ ರಸಮಂಜರಿ', ಇಂಚರ ಅವರ 'ಹನಿ ಹೆಜ್ಜೆ' ಕೃತಿಗಳ ಲೋಕಾರ್ಪಣೆ ನಡೆಯಲಿದೆ. ಹಿರಿಯ ಸಾಹಿತಿ ಪರ್ತಕರ್ತ ಪ್ರೊ.ವಿ.ಬಿ. ಅರ್ತಿಕಜೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ದಯಾನಂದ ರೈ ಮನವಳಿಕೆ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಡಬ ತಾಲೂಕು ಘಟಕದ ಅಧ್ಯಕ್ಷ ಸೇಸಪ್ಪ ರೈ ರಾಮಕುಂಜ, ಪುತ್ತೂರು ತಾಲೂಕು ಘಟಕದ ಅಧ್ಯಕ್ಷ ಉಮೇಶ್ ನಾಯಕ್, ಸಾಹಿತಿ ಜ್ಯೋತಿ ಶೈಲೇಶ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಪ್ರಕಟನೆ ತಿಳಿಸಿದೆ.

ಮೀನುಗಾರರ ಸೇವಾ ಸಮಿತಿಯಿಂದ ಶ್ರೀರಾಮ ನವಮಿ

ಕುಂದಾಪುರ: ಶ್ರೀರಾಮ ಮಂದಿರ ಮರವಂತೆ, ಮೀನುಗಾರರ ಸೇವಾ ಸಮಿತಿ ಇದರ ವತಿಯಿಂದ ಶ್ರೀರಾಮ ದೇವರ ವರ್ಧಂತ್ಯೋತ್ಸವ ಸಮಾರಂಭ ಹಾಗೂ ಶ್ರೀರಾಮ ನವಮಿ ಉತ್ಸವ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಂಡಿತು. ಮಾ.18ರಂದು ಶ್ರೀರಾಮ ದೇವರ ವರ್ಧಂತ್ಯೋತ್ಸವ ಸಮಾರಂಭ ವಿಜೃಂಭಣೆಯಿಂದ ಜರಗಿತು. 21ರಂದು ಬೆಳಿಗ್ಗೆ 6.15ಕ್ಕೆ ಶ್ರೀರಾಮ ಭಜನಾ ದೀಪ ಸ್ಥಾಪನೆಯೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಪ್ರಾರಂಭಗೊಂಡಿತು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು. 27ರಂದು ಬೆಳಗ್ಗೆಯಿಂದ ಅಖಂಡ ಏಕಾಹ ಭಜನೆ, ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ ಪುರಮೆರವಣಿಗೆ, 28ರಂದು ಬೆಳಿಗ್ಗೆ ಭಜನಾ ಮಂಗಲೋತ್ಸವ ಸಂಪನ್ನಗೊಂಡಿತು. ಶ್ರೀರಾಮ ಮಂದಿರ ಮೀನುಗಾರರ ಸೇವಾ ಸಮಿತಿ ಅಧ್ಯಕ್ಷ ಸುರೇಶ ಖಾರ್ವಿ, ಕಾರ್ಯದರ್ಶಿ ಶೇಖರ ಖಾರ್ವಿ, ಮೀನುಗಾರ ಮುಖಂಡರಾದ ವಾಸುದೇವ ಖಾರ್ವಿ, ವೆಂಕಟರಮಣ ಖಾರ್ವಿ, ಚಂದ್ರ ಖಾರ್ವಿ, ಸೋಮಯ್ಯ ಖಾರ್ವಿ, ಜಿ.ಹೊನ್ನ ಖಾರ್ವಿ, ಮೊದಲಾದವರು ಉಪಸ್ಥಿತರಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಕೆ.ಎಸ್. ಪಂಡಿತ್, ಗಾಯತ್ರಿ ದೇವಿ ದೇವಸ್ಥಾನ, ಪಿಲ್ಲಿಂಗಾಲು, ಕಾಡಬೆಟ್ಟು, ಬಂಟ್ವಾಳ (ತಾ).
2. ಶ್ರೀ ಸಾಯಿ ದತ್ತಾ ರಿಫ್ರೆಶ್‌ಮೆಂಟ್, ಪುತ್ರೋಟಿ ಬೈಲು, ಪಾಣೆಮಂಗಳೂರು, ಬಂಟ್ವಾಳ (ತಾ).
3. ದಿ| ಸಂಕಪ್ಪ ಸ್ಮರಣಾರ್ಥ ಪತ್ನಿ ಗುಲಾಬಿ ಮತ್ತು ಮಕ್ಕಳು, ಮುಗುಳಿ ಮನೆ, ಐಕಳ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
4. ಮೋಹನದಾಸ ಶೆಟ್ಟಿ ಮತ್ತು ಪತ್ನಿ, ಮಕ್ಕಳು, ಶ್ರೀ ಸೋಮನಾಥ ಧಾಮ, ಪೆರ್ಮುದೆ ವಯಾ ಬಜಪೆ.
5. ಶ್ರೀ ಕಟೀಲಮ್ಮನ ಭಕ್ತರು ಕುಮಾರಸ್ವಾಮಿ ಲೇಔಟ್ ವಾಟರ್ ಟ್ಯಾಂಕ್ ಮುಂಭಾಗ ಬೆಂಗಳೂರು.
6. ನಿರ್ಮಲಾ, ಶ್ರೀನಿವಾಸ್ ಮತ್ತು ಮಕ್ಕಳು, ಕೇರಿಹಕ್ಕಲು ಮನೆ, ರಾಯರಬೆಟ್ಟು, ಕಂಚಿಕಾನ್, ಕೆರ್ಗಾಲ್, ಬಿಜೂರು, ಕುಂದಾಪುರ (ತಾ).
7. ಮುದರ ಪೂಜಾರಿ, ಮಂಜಲ್ ತೋಟ ಹೌಸ್, ಶ್ರೀ ಅಮೃತೇಶ್ವರ ದೇವಸ್ಥಾನದ ಬಳಿ, ತಿರುವೈಲು, ವಾಮಂಜೂರು.

ಶ್ರೀ ಧರ್ಮಸ್ಥಳ ಮೇಳ
ಬೆದ್ರಡ್ಕದಲ್ಲಿ
ಶ್ರೀರಾಮ ಯಕ್ಷಗಾನ ಕಲಾ ಸಂಘ, ಬೆದ್ರಡ್ಕ

ಶ್ರೀ ಸಾಲಿಗ್ರಾಮ ಮೇಳ
ಸೂರ್ಯ ದೇವಸ್ಥಾನದಲ್ಲಿ-**ಸ್ವಪ್ನ ಮಂಟಪ**

ಶ್ರೀ ಪೆರ್ಡೂರು ಮೇಳ
ಸಂತೇಗುಳಿಯಲ್ಲಿ-**ಚದುರಂಗ**

ಶ್ರೀ ಹನುಮಗಿರಿ ಮೇಳ
ಬೆಣ್ಣೆಕುದ್ರುನಲ್ಲಿ

ಶ್ರೀ ಪಾವಂಜೆ ಮೇಳ
ಯಕ್ಷಪ್ರಿಯರು, ಕಾವೂರಿನಲ್ಲಿ
ಪಾಪಣ್ಣ ವಿಜಯ-ಗುಣಸುಂದರಿ



ಕಿನ್ನಿಗೋಳಿಯ ರೋಟರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ನಡೆಯಿತು. ಐಕಳ ಪೊಂಪೈ ಕಾಲೇಜಿನ ಪ್ರಾಂಶುಪಾಲ ಡಾ. ಪುರುಷೋತ್ತಮ ಕೆ. ವಿ., ರೋಟರಿ ಕ್ಲಬ್ ಕಿನ್ನಿಗೋಳಿಯ ಅಧ್ಯಕ್ಷ ಸಾಯಿನಾಥ್ ಶೆಟ್ಟಿ, ಶಾಲೆಯ ಕಾರ್ಯದರ್ಶಿ ವಿಲಿಯಂ ಸಿಕ್ವೇರಾ, ಜೊತೆ ಕಾರ್ಯದರ್ಶಿ ವಿಲಿಯಂ ಕಾರ್ಡೋಜಾ, ಕೋಶಾಧಿಕಾರಿ ಶರತ್ ಶೆಟ್ಟಿ, ಪ್ರವೀಣ್ ಸಾಲ್ಯಾನ್, ರೋಟರಿ ಸದಸ್ಯರಾದ ಟಿ. ಹೆಚ್. ಮಯ್ಯದಿ, ಹೆರಿಕ್ ಪಾಯಸ್, ವಿದ್ಯಾರ್ಥಿನಿ ಅನ್ವಿ ಎಸ್. ಶೆಟ್ಟಿ, ಮುಖ್ಯೋಪಾಧ್ಯಾಯರಾದ ಸುನೀತಾ ಗುರುರಾಜ್, ಅಮೋಘ್, ಪ್ರಜನ್ ಮೊದಲಾದವರು ಉಪಸ್ಥಿತರಿದ್ದರು.

ಮಡಿಕೇರಿಯಲ್ಲಿ ಡಾ.ಜಗಜೀವನ್ ರಾಂ, ಡಾ. ಅಂಬೇಡ್ಕರ್ ಜನ್ಮದಿನೋತ್ಸವಕ್ಕೆ ಸಿದ್ಧತೆ

ಮಡಿಕೇರಿ: ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನ್ ರಾಂ ಅವರ 119ನೇ ಜನ್ಮ ದಿನವನ್ನು ಏಪ್ರಿಲ್ 5ರಂದು ಮತ್ತು ಸಂವಿಧಾನ ಶಿಲ್ಪಿ, ಭಾರತರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನವನ್ನು ಏ.14ರಂದು ನಗರದ ಗಾಂಧಿ ಭವನದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಯಿತು. ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಏ. 14ರ ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯಂದು ನಗರದ ಕಾವೇರಿ ಕಲಾಕ್ಷೇತ್ರ ಬಳಿಯಿಂದ ಗಾಂಧಿಭವನದವರೆಗೆ ಅಂಬೇಡ್ಕರ್ ಅವರ ಭಾವಚಿತ್ರದೊಂದಿಗೆ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸುವುದು, ನೀಟ್, ಸಿಇಟಿ ಹಾಗೆಯೇ ನಾಗರಿಕ ಸೇವೆ ಜೊತೆಗೆ ಕ್ರೀಡಾ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸುವಂತಾಗಬೇಕು. ಇದರಿಂದ ಇತರರಿಗೂ ಪ್ರೇರಣೆಯಾಗಲಿದೆ ಎಂದು ಜಿಲ್ಲಾಧಿಕಾರಿ ಸಲಹೆ ಮಾಡಿದರು.

ನಗರಸಭೆ ಸದಸ್ಯ ಎಸ್.ಸಿ.ಸತೀಶ್, ಮೋಹನ್ ಮೌರ್ಯ, ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಎಚ್.ಎಲ್ .ದಿವಾಕರ, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಶೇಖರ್, ಪ್ರಮುಖರಾದ ಪಾಲಾಕ್ಷ, ಪಾವು ಸಣ್ಣಯ್ಯ, ಗಾಯತ್ರಿ ನರಸಿಂಹ, ಪ್ರೇಮಾ ಕೃಷ್ಣಪ್ಪ, ಮಹದೇವ, ಎಚ್.ಎಲ್.ಕುಮಾರ, ಜಯಪ್ಪ ಹಾನಗಲ್ಲು, ಸಿ.ಪಿ.ಸಿದ್ದೇಶ್ವರ, ಜಗದೀಶ ಎಚ್. ಆರ್., ಪಿ.ಪಿ.ಸುಕುಮಾರ್, ಐಟಿಡಿಪಿ ಇಲಾಖಾ ಅಧಿಕಾರಿ ಎಸ್.ಹೊನ್ನೇಗೌಡ, ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕ ಬಿ.ಬಸಪ್ಪ, ನಗರಸಭೆ ಪೌರಾಯುಕ್ತ ಎಚ್.ಆರ್.ರಮೇಶ್, ತಹಶೀಲ್ದಾರರಾದ ಶ್ರೀಧರ, ಕೃಷ್ಣಮೂರ್ತಿ, ಪ್ರವೀಣ್ ಕುಮಾರ್, ತಾ.ಪಂ.ಇಒಗಳು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು, ಪುರಸಭೆ ಮತ್ತು ಪ.ಪಂ. ಮುಖ್ಯಾಧಿಕಾರಿಗಳಿದ್ದರು.

ಶ್ರೀ ಕ್ಷೇತ್ರ ಕಟೀಲಿನ ಅನುವಂಶಿಕ ಅರ್ಚಕ ವೇ. ಮೂ. ಲಕ್ಷ್ಮೀನಾರಾಯಣ ಆಸ್ರಣ್ಣರಿಗೆ ಶ್ರೀ ರಾಜರಾಜೇಶ್ವರ ಪ್ರಶಸ್ತಿ ಪ್ರದಾನ

ದೇಶಕ್ಕೆ ಭಾರವಾಗದೆ ಆಭಾರಿಗಳಾಗಿರೋಣ

ಪಡುಬಿದ್ರಿ : ಸಮಗ್ರ ಹಿಂದು ಸಮಾಜದ ಜವಾಬ್ದಾರಿ ಅರಿತಿರುವ, ಪ್ರಾಮಾಣಿಕತೆಯಿಂದ ಬದುಕು ಕಟ್ಟುವ ಪುರೋಹಿತ ವರ್ಗದವರು ಹಿಂದೂ ಸಮಾಜದ ಆಧಾರಸ್ತಂಭವಾಗಿದ್ದಾರೆ. ದೇವರ ಭಯ, ಆಶೀರ್ವಾದಗಳೇ ಬದುಕಿನ ದಾರಿದೀಪವಾಗಬಲ್ಲದು. ರಾಷ್ಟ್ರಹಿತಕ್ಕಾಗಿ, ಸನಾತನ ಹಿಂದೂ ಧರ್ಮದ ರಕ್ಷಣೆಗಾಗಿ ಮಾತೆಯರು ಒಂದು ವಟುವನ್ನಾದರೂ ಯೋಗದೀಪಿಕಾದಂತಹಾ ಗುರುಕುಲಕ್ಕೆ ಕಳುಹಿಸಬೇಕು. ನಾವು ದೇಶಕ್ಕೆ ಭಾರವಾಗದೆ ಆಭಾರಿಗಳಾಗಿರೋಣ. ಎಂದು ಶ್ರೀ ಅದಮಾರು ಮಠಾಧೀಶರಾದ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀಪಾದರು ಹೇಳಿದರು.

ಅವರು ಸೋಮವಾರ ಹನುಮಜ್ಜಯಂತಿಯ ಪರ್ವಕಾಲದಲ್ ಪಲಿಮಾರು ಯೋಗದೀಪಿಕಾ ಗುರುಕುಲದ ಘಟಿಕೋತ್ಸವ – ವೇದ ಮಂಗಲೋತ್ಸವದ ಸಂದರ್ಭದಲ್ಲಿನ ಪಾಲ್ಗೊಂಡು ತಮ್ಮ ಆಶೀರ್ವಚನ ನುಡಿಗಳಲ್ಲಿ ಸಂದೇಶ ನೀಡಿದರು.

ಯೋಗದೀಪಿಕಾ ಗುರುಕುಲದ ಕುಲಪತಿಗಳು, ಶ್ರೀ ಪಲಿಮಾರು ಮಠಾಧೀಶರಾದ ಡಾ. ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು, ವೇದಮಂತ್ರಗಳು, ವೇದಾಂಗಗಳು ಹಾಗೂ ಅದರ ಚಿಂತನೆಗಳು ಅವಶ್ಯಕ. ಘಟಿಕೋತ್ಸವವೇ ಮಂಗಲವಲ್ಲ. ಸುಧಾ ಮಂಗಲವು ನಮ್ಮೆಲ್ಲಾ ವಿದ್ಯಾರ್ಥಿಗಳಿಗಾಗಲಿ. ವೇದ ಪಾರಾಯಣವು ನಿಮ್ಮಲ್ಲಿ ನಿರಂತರವಾಗಿರಲಿ. ವೇದ ರಕ್ಷಣೆಯೂ ನಿಮ್ಮ ಗುರಿಯಾಗಿರಲಿ. ಪುರೋಹಿತರಾಗಿ ನಿಷ್ಕಾಮ ಕರ್ಮವನ್ನು ನಿರಂತರ ಮುಂದುವರಿಸಿರಿ ಎಂದು ಹೇಳಿದರು.



ವಿದ್ಯಾನಿಧಿಗೆ ದೇಣಿಗೆ

ಯೋಗದೀಪಿಕಾ ಗುರುಕುಲದ ವಿದ್ಯಾರ್ಥಿಗಳಿಂದ ಶಾಸ್ತ್ರಾನುವಾದವು ನಡೆಯಿತು. ವಿದ್ಯಾರ್ಥಿಗಳು 70000 ರೂ.ಗಳನ್ನು ಮೂಲಧನವಾಗಿ ಯೋಗದೀಪಿಕಾ ವಿದ್ಯಾನಿಧಿಗಾಗಿ ಶ್ರೀಪಾದರಿಗೆ ಅರ್ಪಿಸಿದರು. ವಿದ್ಯಾರ್ಥಿಗಳ ವಿಶೇಷ ಲೇಖನಗಳುಳ್ಳ ಸುಯೋಗದೀಪಿಕಾ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು. ಈ ಸಂದರ್ಭ ಶ್ರೀ ಮಠದ ಯೋಗದೀಪಿಕಾ ಗುರುಕುಲದಲ್ಲಿ 8 ವರ್ಷಗಳ ಅಧ್ಯಯನ ಮಾಡಿದ 8 ವಿದ್ಯಾರ್ಥಿಗಳಿಗೆ ವೇದಮಂಗಳ ಘಟಿಕೋತ್ಸವ ನಡೆಯಿತು.

ಶ್ರೀ ಕಾಣಿಯೂರು ಮಠಾಧೀಶರಾದ ಶ್ರೀ ವಿದ್ಯಾವಲ್ಲಭ ತೀರ್ಥ ಶ್ರೀಪಾದರು ಮಾತನಾಡಿ, ಭಗವಂತನ ಸರ್ವೋತ್ತಮತ್ವದ ಉಪಾಸನೆಯಿಂದ ಭಗವಂತನಪ್ರೀತಿಪಾತ್ರರಾಗೋಣ.ಸಂಕಟದಲ್ಲಿರುವ ಹಿಂದು ಧರ್ಮದ ಹೆಣ್ಣು ಮಕ್ಕಳನ್ನೂ ಒಗ್ಗೂಡಿಸ ಬೇಕಿದೆ. ಯುವಕ-ಯುವತಿಯರಿಗೆ ಸರಿಯಾದ ಮಾರ್ಗದರ್ಶನ, ಚಿಂತನೆ ನೀಡುವ ಜವಾಬ್ದಾರಿಯನ್ನು ನೀಡುವಲ್ಲಿ ಪುರೋಹಿತರು ವಿಶಾಲವಾದ ಚಿಂತನೆಯನ್ನು ಹೊಂದಿರಬೇಕು. ಹಿಂದೂ ಧರ್ಮವನ್ನು ಉಳಿಸಿ ಒಗ್ಗೂಡಿಸಿಕೊಳ್ಳುವ ಕಾರ್ಯವನ್ನು ಸಮಾಜಮುಖಿಗಳಾಗಿ ತೆರಳುವ ಯೋಗದೀಪಿಕಾ ವಿದ್ಯಾರ್ಥಿಗಳು ಮಾಡಬೇಕೆಂದರು.

ಶ್ರೀ ಸುಬ್ರಹ್ಮಣ್ಯ ಮಠಾಧೀಶರಾದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ಮಾತನಾಡಿ, ನಿರಂತರ ವೇದ ಅಧ್ಯಯನದಿಂದ ವೇದದ ಅರಿವು – ಬೆಳವಣಿಗೆ-ಶಾಶ್ವತ ಉಳಿವು ಸಾಧ್ಯವಾಗಲಿದೆ. ನಾಸ್ತಿಕರಿಂದ, ಚಾರ್ವಾಕ ಸಿದ್ಧಾಂತಗಳಿಂದ ಪ್ರಾಪಂಚಿಕ ಬದುಕು ಕ್ಷೇಮವಾಗದು. ಹಾಗಾಗಿ ಅಪೌರುಷೇಯವಾದ ವೇದಗಳ ಅಧ್ಯಯನದ ಮೂಲಕ ನಾವೆಲ್ಲರೂ ಆಸ್ತಿಕತೆಯು ಪ್ರಪಂಚದಲ್ಲಿ ಉಳಿಯುವಂತಾಯಿತು. ಯೋಗದೀಪಿಕಾ ಗುರುಕುಲದ ಮೂಲಕ ವೇದ, ಶಾಸ್ತ್ರಗಳ ಅಧ್ಯಯನವು ಆಚರಣೆ ಸಂಸ್ಕಾರ ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರವಾಗಿದೆ. ಹಾಗಾಗಿ ನಮ್ಮ ಆಚಾರ, ವಿಚಾರ, ಸಂಸ್ಕಾರಗಳು ಇಂದೂ ನಮ್ಮ ನಡುವೆ ಉಳಿಯುವಂತಾಗಿದೆ ಎಂದರು.

ಆಸ್ರಣ್ಣರಿಗೆ ಪ್ರಶಸ್ತಿ ಪ್ರದಾನ

ಶ್ರೀ ಕ್ಷೇತ್ರ ಕಟೀಲಿನ ಅನುವಂಶಿಕ ಅರ್ಚಕರಾದ ವೇ. ಮೂ. ಕಟೀಲು ಲಕ್ಷ್ಮೀನಾರಾಯಣ ಆಸ್ರಣ್ಣ ಅವರಿಗೆ ಶ್ರೀ ರಾಜರಾಜೇಶ್ವರ ಪ್ರಶಸ್ತಿಯನ್ನು ಪತ್ನಿ ಜಯಂತಿ ಆಸ್ರಣ್ಣ ಸಹಿತರಾಗಿ ಪ್ರಧಾನಿಸಿದ್ದು, ಬೆಳ್ಳಿಯ ಫಲಕ ಹಾಗೂ 50000 ರೂ. ನಗದು ಸಹಿತವಾಗಿ ಶ್ರೀ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಪ್ರದಾನಿಸಿ ಆಶೀರ್ವದಿಸಿದರು. ವೇದ ವಿದ್ವಾನ್ ಪಂಜ ಭಾಸ್ಕರ ಭಟ್ ಅವರು ಕಟೀಲು ಆಸ್ರಣ್ಣ ಅವರ ಅಭಿನಂದನಾ ಭಾಷಣ ನಡೆಸಿದರು. ಕಟೀಲು ಲಕ್ಷ್ಮೀನಾರಾಯಣ ಆಸ್ರಣ್ಣ ಅವರು ಸನ್ಮಾನಕ್ಕುತ್ತರಿಸಿದರು.

ಶ್ರೀ ಅದಮಾರು ಕಿರಿಯ ಶ್ರೀಪಾದರಾದ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದರು ಮಾತನಾಡಿ, ಕೇಡನ್ನೇ ಬಯಸದ ಭಗವಂತನಿಗೆ ನಮ್ಮ ಮನಸ್ಸನ್ನು ಅರ್ಪಿಸೋಣ. ವೇದ ಪ್ರತಿಪಾದ್ಯ ದೇವತೆಗಳನ್ನು ಸದಾ ಪ್ರಾರ್ಥಿಸಿದಾಗ ಅವರು ನಮ್ಮನ್ನು ಸಂಸಾರ ಸಾಗರವನ್ನೇ ದಾಟಿಸಬಲ್ಲರು. ಮನಸಾರೆ ವೇದರೂಪಿ ಭಗವಂತನಿಗೆ ಸದ್ವಿಪ್ರ ಬಲು ಹತ್ತಿರವಾದರೆ ಆತ ಸಮಾಜದವರೆಲ್ಲರಿಗೂ ಮಾರ್ಗದರ್ಶನ ಮಾಡಬಲ್ಲ ಎಂದರು.

ಶ್ರೀ ಪಲಿಮಾರು ಮಠದ ಕಿರಿಯ ಶ್ರೀಪಾದರಾದ ಶ್ರೀ ವಿದ್ಯಾರಾಜೇಶ್ವರ ತೀರ್ಥ ಶ್ರೀಪಾದರು ಮಾತನಾಡಿ, ಭಗವಂತನ ವೇದಗಳು ಸನಾತನ ಹಿಂದೂ ಧರ್ಮದ ಭದ್ರ ಬುನಾದಿಯಾಗಿವೆ. ಇವುಗಳ ರಕ್ಷಣೆ ನಮ್ಮ ಕರ್ತವ್ಯವಾಗಿದೆ ಎಂದರು.

ಯೋಗದೀಪಿಕಾ ಗುರುಕುಲದ ಪ್ರಾಂಶುಪಾಲರಾದ ಡಾ. ಶಂಕರನಾರಾಯಣ ಭಟ್ ಪ್ರಸ್ತಾವನೆಯೊಂದಿಗೆ ಸ್ವಾಗತಿಸಿದರು. ಶ್ರೀರಮಣ ಕಲ್ಲೂರ ಕಾರ್ಯಕ್ರಮ ನಿರ್ವಹಿಸಿದರು. ವಿದ್ಯಾರ್ಥಿಗಳಿಗೆ ದೇವತಾರ್ಚನೆ ಪೆಟ್ಟಿಗೆಯ ಸಹಿತ ಫಲ ಮಂತ್ರಾಕ್ಷತೆಯನ್ನು ನೀಡಿ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು ಹರಸಿದರು.

ಸನಾತನ ಧರ್ಮ ರಕ್ಷಣೆಯಾದರೆ ವಿಶ್ವಕ್ಕೆ ಶಾಂತಿ ಸಾಧ್ಯ: ಪ್ರಭೂಜಿ



ಬಂಟ್ವಾಳ: ಎಲ್ಲಾ ಧರ್ಮಗಳ ಮೂಲವಾಗಿರುವ ಸನಾತನ ಧರ್ಮದ ರಕ್ಷಣೆಯಾದರೆ ವಿಶ್ವಕ್ಕೆ ಶಾಂತಿ ಸಾಧ್ಯ ಎಂದು ಪುದು ಶ್ರೀ ರಾಧಾ ಸುರಭಿ ಗೋ ಮಂದಿರದ ಶ್ರೀ ಭಕ್ತಿಭೂಷಣದಾಸ ಪ್ರಭೂಜೀ ಹೇಳಿದ್ದಾರೆ.

ಬಂಟ್ವಾಳ ತಾಲೂಕಿನ ಅಮ್ಟಾಡಿ ಗ್ರಾಮದ ತಲೆಂಬಿಲ ಯುವಕೇಸರಿ ಗೆಳೆಯರ ಬಳಗ 12ನೇ ವಾರ್ಷಿಕೋತ್ಸವ ಸಮಾರಂಭದ ಸಭಾಕಾರ್ಯಕ್ರಮದಲ್ಲಿ ಅವರು ಆಶೀರ್ವಚನಗೈದರು.

ನಮ್ಮ ಯುವಜನಾಂಗ ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸಿ ನಮ್ಮ ಧರ್ಮದ ಆಚರಣಾ ಪದ್ಧತಿಯನ್ನು ಮರೆಯುತ್ತಿದೆ ಎಂದು ಖೇದ ವ್ಯಕ್ತಪಡಿಸಿದ ಅವರು ಇದರ ಪರಿಣಾಮವಾಗಿ ಜೀವನದಲ್ಲಿ ಆತಂಕ, ಒತ್ತಡ, ದುಷ್ಚಟ, ಮೊಬೈಲ್ ಗೀಳಿಗೆ ಬಲಿಯಾಗುತ್ತಿದ್ದಾರೆ. ಮಕ್ಕಳಿಗೆ ಎಳೆಯದರಲ್ಲೇ ಕಡ್ಡಾಯವಾಗಿ ಮಹಾಭಾರತ, ಭಾಗವತ ಪಾರಾಯಣ ಪಠಿಸಬೇಕು, ಸಂಸ್ಕೃತಿ, ಸಂಸ್ಕಾರವನ್ನು ಕಲಿಸಿ ಧರ್ಮದ ಹಾದಿಯಲ್ಲಿ ಸಾಗಲು ಪ್ರೇರೇಪಿಸಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ನಿವೃತ್ತ ಸೈನಿಕ ಪ್ರಕಾಶ್ ಸಿ. ಪೂಜಾರಿ ಹಾಗೂ ಸೇವಾ ಜಾಗರಣ ಪ್ರಮುಖ ಜಗದೀಶ್ ನೆತ್ತರಕೆರೆ ಮಾತನಾಡಿದರು. ಈ ಸಂದರ್ಭದಲ್ಲಿ ಸಾಧಕರಾದ ನಿವೃತ್ತ ಸೈನಿಕ ಪ್ರಕಾಶ್ ಸಿ. ಪೂಜಾರಿ, ಉದ್ಯಮಿ ರಾಜೀವ ಕೈಕಂಬ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಪ್ರಮುಖರಾದ ಸಂತೋಷ್ ಪಚ್ಚಿನಡ್ಕ, ಹರಿಯಪ್ಪ ಕುಲಾಲ್, ಹರೀಶ್ ತಲೆಂಬಿಲ ಉಪಸ್ಥಿತರಿದ್ದರು. ಕುಮಾರಿ ಹರ್ಷ ಸ್ವಾಗತಿಸಿದರು. ಪುರುಷೋತ್ತಮ್ ಕೊಯಿಲ ಕಾರ್ಯಕ್ರಮ ನಿರೂಪಿಸಿದರು. ಬಳಿಕ ಸ್ಥಳೀಯ ಪ್ರತಿಭೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ತುಳು ಹಾಸ್ಯ ನಾಟಕ ಪ್ರದರ್ಶನಗೊಂಡಿತು.

ಕೊಂಗಿರ್ಬೈಲ್ ಅರ್ತಿಪೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನ

ಏ.6ರಿಂದ 12ರ ವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಂಭ್ರಮ

ಮಂಗಳೂರು: ಸುಮಾರು 800 ವರ್ಷಗಳ ಇತಿಹಾಸವಿರುವ ಮಂಗಳೂರಿನ ಕುಂಜತ್ತಬೈಲ್ ಕೊಂಗಿರ್ಬೈಲ್ ಅರ್ತಿಪೊಡಲು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಏ.6 ರಿಂದ 12ರವರೆಗೆ ಅಷ್ಟಬಂಧ ಬ್ರಹ್ಮಕಲಶೋತ್ಸವ ನಡೆಯಲಿದೆ.

ಏ.6ರಂದು ಬೆಳಗ್ಗೆ 10ರಿಂದ ದೇವತಾ ಪ್ರಾರ್ಥನೆ, ಗಣಪತಿ ಹೋಮ, ತೋರಣ, ಉಗ್ರಾಣ ಮುಹೂರ್ತ ನಡೆಯಲಿದೆ. ಸಂಜೆ 5ರಿಂದ ವಾಸ್ತುಕಲಶಾಭಿಷೇಕ, 6.30ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಏ.8ರಂದು ಬೆಳಗ್ಗೆ ಗಣಪತಿ ಹೋಮ, ಅಷ್ಟಬಂಧ ಕ್ರಿಯೆ, ನಾಗಾಲಯದಲ್ಲಿ ವಾಸ್ತರಕ್ಷೋಘ್ನ ಹಾಗೂ ಸಂಜೆ 6ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ಜರಗಲಿದೆ ಎಂದು ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಆಶಿಕ್ ಬಲ್ಲಾಳ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಏ.9ರಂದು ಬೆಳಗ್ಗೆ 8ರಿಂದ ಗಣಪತಿ ದೇವರಿಗೆ ಪಂಚವಿಂಶತಿ ಕಲಶ, ಪ್ರಧಾನ ಹೋಮ, ನಾಗದೇವರ ಪುನಃ ಪ್ರತಿಷ್ಠೆ, ಕಲಶಾಭಿಷೇಕ, ಶಾಂತಿ ಹೋಮಗಳು ಜರಗಲಿವೆ. ಏ.10ರಂದು ಬೆಳಗ್ಗೆ 7 ರಿಂದ ಶಾಂತಿಹೋಮಗಳು, ನವಗ್ರಹ ಶಾಂತಿ ಹೋಮ, ಗಣಪತಿ ಹೋಮ, ದುರ್ಗಾಪೂಜೆ ನಡೆಯಲಿದೆ. ಸಂಜೆ 6 ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ಹಾಗೂ ಏ.11ರಂದು ಬೆಳಗ್ಗೆ 7 ರಿಂದ ಕಲಶ ಮಂಟಪ ಸಂಸ್ಕಾರ, ಬ್ರಹ್ಮಕಲಶ ಮಂಡಲ ರಚನೆ, ಸಂಜೆ 6 ರಿಂದ ಬ್ರಹ್ಮಕಲಶ ಪೂರಣ, ಕಲಶಾಧಿವಾಸ ಸಂಜೆ 6 ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ ಎಂದರು.

> ಏ.6ರಂದು ಸಂಜೆ 4 ರಿಂದ ಕಾವೂರು ವ್ಯವಸಾಯ ಬ್ಯಾಂಕ್‌ನ ಬಳಿಯಿಂದ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ನಡೆಯಲಿದೆ. ಮರಕಡ, ಕುಂಜತ್ತಬೈಲು ಮಾರ್ಗವಾಗಿ ಶ್ರೀ ಕ್ಷೇತ್ರಕ್ಕೆ ತಲುಪಲಿದೆ. ಕ್ಷೇತ್ರದಲ್ಲಿ ಸಭಾ ಭವನ ಹಾಗೂ ಅನ್ನಛತ್ರ ಸಂಕೀರ್ಣ ನಿರ್ಮಾಣವಾಗುತ್ತಿದೆ.

ಏ.12 ರಂದು ಬೆಳಗ್ಗೆ 7.30 ರಿಂದ ಶ್ರೀ ವಿಷ್ಣುಮೂರ್ತಿ ದೇವರಿಗೆ ಕಲಶಾಭಿಷೇಕ ಪ್ರಾರಂಭವಾಗಲಿದೆ. ಬೆಳಗ್ಗೆ 8.20 ರಿಂದ 10ರ ಸಮಯದಲ್ಲಿ ಶ್ರೀ ವಿಷ್ಣುಮೂರ್ತಿ ದೇವರಿಗೆ ಬ್ರಹ್ಮಕಲಶಾಭಿಷೇಕನೆರವೇರಲಿದೆ.ಮಧ್ಯಾಹ್ನಮಹಾ ಅನ್ನಸಂತರ್ಪಣೆ, ಸಂಜೆ 7ಕ್ಕೆ ಶ್ರೀ ವಿಷ್ಣುಮೂರ್ತಿ ದೇವರಿಗೆ ರಂಗಪೂಜೆ, ಶ್ರೀದೇವರ ಬಲಿ ಉತ್ಸವ, ರಾತ್ರಿ 10 ಕ್ಕೆ ಶ್ರೀ ಜಾರಂದಾಯ ಬಂಟ ದೈವದ ಗಗ್ಗರ ಸೇವೆ, ನೇಮೋತ್ಸವ ಹಾಗೂ ಸಂಜೆ 5ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಏ.7ರಿಂದ 12ರವರೆಗೆ ಪ್ರತೀ ದಿನ ಸಂಜೆ ಸಾಂಸ್ಕೃತಿಕ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿದೆ ಎಂದು ವಿವರಿಸಿದರು.

ಕ್ಷೇತ್ರದ ಆಡಳಿತ ಮೊಕ್ತೇಸರ ಡಾ. ನರೇಶ್ ರೈ ದೆಪ್ಪುಣಿಗುತ್ತು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವಿಠಲ ಆಳ್ವ ಹಳೆಮೊಗರು, ಕ್ಷೇತ್ರದ ಮೊಕ್ತೇಸರ ಜಗದೀಶ್ ಶೆಟ್ಟಿ ಮುರ, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ದೀಪಕ್ ಪೂಜಾರಿ ಮುಲ್ಲಕಾಡು ಉಪಸ್ಥಿತರಿದ್ದರು.

ಅಖಿಲ ಭಾರತ ರಾಷ್ಟ್ರೀಯ ಯೊನೆಕ್ಸ್ ಸನ್ ರೈಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಸ್ಪಧಾಕೂಟ

ರೋಶನ್ ಮರೋಲ್ ಕೆ.ಜೆ. ರೋಯ್ ತಂಡಕ್ಕೆ ಪ್ರಶಸ್ತಿ



ಮಂಗಳೂರು: ಗೋವಾದ ಮಡಗಾಂವ್‌ನಲ್ಲಿ ಇತ್ತೀಚೆಗೆ ಭಾರತೀಯ ಬ್ಯಾಡ್ಮಿಂಟನ್ ಸಂಸ್ಥೆಯ ಆಶ್ರಯದಲ್ಲಿ ನಡೆದ 48ನೇ ವಾರ್ಷಿಕ ಅಖಿಲ ಭಾರತ ರಾಷ್ಟ್ರೀಯ ಯೊನೆಕ್ಸ್ ಸನ್ ರೈಸ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಸ್ಪರ್ಧಾಕೂಟದ ಹಿರಿಯರ ವಿಭಾಗದಲ್ಲಿ ಮಿಶ್ರ ಜೋಡಿ ವರ್ಗದಲ್ಲಿ ನಗರದ ಕೆನರಾ ಕ್ಲಬ್‌ನ್ನು ಪ್ರತಿನಿಧಿಸಿದ ರೋಶನ್ ಮರೋಲ್ ಮತ್ತು ಕೆ.ಜೆ. ರೋಯ್ ತಂಡವು ಪ್ರಥಮ ಸ್ಥಾನ ಪಡೆದಿದೆ.

ಅಂತಿಮ ಮತ್ತು ನಿರ್ಣಾಯಕ ಪಂದ್ಯಾಟದಲ್ಲಿ ಬಂಟ್ವಾಳ್ ಸುನೀಲ್ ಪೈ ಮತ್ತು ಶೋಭಾ ವಿಜಯನ್ ತಂಡವನ್ನು ನೇರ ಸೆಟ್‌ನಲ್ಲಿ 21–11, 21–09 ಅಂಕಗಳಿಂದ ಸೋಲಿಸಿ ಪ್ರಥಮ ಸ್ಥಾನ ಪಡೆದು, ಪ್ರತಿಷ್ಠಿತ ಆಕರ್ಷಕ ಪ್ರಶಸ್ತಿ ಮತ್ತು ಪ್ರಮಾಣ ಪತ್ರ ವಿಜೇತರಾದರು. ಈ ಸ್ಪರ್ಧಾಕೂಟದಲ್ಲಿ ವಿವಿಧ ರಾಜ್ಯಗಳಿಂದ ಸುಮಾರು 16 ತಂಡಗಳು ಭಾಗವಹಿಸಿದ್ದವು. ಕೆನರಾ ಕ್ಲಬ್‌ನ ಸಹ ಆಟಗಾರರು ರೋಶನ್ ಮರೋಲ್ ಅವರ ವಿಶಿಷ್ಟ ಸಾಧನೆಯನ್ನು ಅಭಿನಂದಿಸಿದ್ದಾರೆ.

ಕಿಲೆಂಜಾರು ಊದುಗುಡ್ಡೆ ಶ್ರೀ ಕೊಡಮಣಿತ್ತಾಯ ದೈವಸ್ಥಾನ

ಜೀರ್ಣೋದ್ಧಾರ ಕುರಿತ ವಿಜ್ಞಾಪನಾ ಪತ್ರ ಬಿಡುಗಡೆ

ಕೈಕಂಬ: ಕಿಲೆಂಜಾರು ಗ್ರಾಮ ದೈವ ಶ್ರೀ ಕೊಡಮಣಿತ್ತಾಯ ದೈವದ ಊದುಗುಡ್ಡೆ ದೈವಸ್ಥಾನದಲ್ಲಿ ಜ್ಯೋತಿಷಿ ಉಪ್ಪಿನಂಗಡಿ ಮಹೇಶ್ ಪೊದುವಾಲರ ನೇತೃತ್ವದಲ್ಲಿ ನಡೆದ ಪ್ರಶ್ನಾ ಚಿಂತನೆಯಲ್ಲಿ ಬಂದ ಸಲಹೆಯಂತೆ ನಡೆಯಲಿರುವ ಜೀರ್ಣೋದ್ಧಾರದ ಪ್ರಯುಕ್ತ ಕಿಲೆಂಜಾರು ಊದುಗುಡ್ಡೆ ಶ್ರೀ ಕೊಡಮಣಿತ್ತಾಯ ದೈವಸ್ಥಾನದಲ್ಲಿ ಶ್ರೀ ದೈವಗಳಿಗೆ ಪರ್ವ ಸೇವೆ, ಸಾಮೂಹಿಕ ಪ್ರಾರ್ಥನೆ ಹಾಗೂ ವಿಜ್ಞಾಪನಾ ಪತ್ರ ಬಿಡುಗಡೆ ಭಾನುವಾರ ನಡೆಯಿತು.

ಬೆಳಿಗ್ಗೆ ಕಿಲೆಂಜಾರು ಅರಮನೆಯಲ್ಲಿ ಕೊಡಮಣಿತ್ತಾಯ ಮತ್ತು ಪರಿವಾರ ದೈವಗಳಿಗೆ ಪರ್ವ ಸೇವೆ ನಡೆಯಿತು. ಬಳಿಕ ಊದುಗುಡ್ಡೆ ದೈವಸ್ಥಾನದಲ್ಲಿ ಪರ್ವ ಸೇವೆ, ಸಾಮೂಹಿಕ ಪ್ರಾರ್ಥನೆ ನಡೆಸಲಾಯಿತು.

ದೈವಸ್ಥಾನ ಜೀರ್ಣೋದ್ಧಾರ ಕುರಿತಂತೆ ವಿಜ್ಞಾಪನಾ ಪತ್ರವನ್ನು ಬಿಡುಗಡೆ ಬಳಿಕ ನಡೆದ ಜೀರ್ಣೋದ್ಧಾರದ ಬಗ್ಗೆ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಕಿಲೆಂಜಾರು ಅರಮನೆ ಮುಖ್ಯಸ್ಥರಾದ ದಿನೇಶ್ ಕುಮಾರ್ ಬಳ್ಳಾಲ್ ಮತ್ತು ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಜಗದೀಶ್ ಕುಲಾಲ್ ಪಾಕಜೆ, ಊದುಗುಡ್ಡೆ ದೈವಸ್ಥಾನದ ಜೀರ್ಣೋದ್ಧಾರ, ಶ್ರೀ ಉಳ್ಳಾಯ ದೈವದ ನೂತನ ಮಾಡ ನಿರ್ಮಾಣ, ಪಂಜುರ್ಲಿ ದೈವದ ಕಟ್ಟೆ ನಿರ್ಮಾಣ, ಶ್ರೀ ಉಳ್ಳಾಯ ದೈವ ನೆಲೆ ನಿಂತ ಸ್ಥಳಕ್ಕೆ ವ್ಯವಸ್ಥಿತವಾದ ಮೆಟ್ಟಿಲು ನಿರ್ಮಾಣ ಹಾಗೂ ಸುತ್ತಲು ನೆಲಹಾಸು, ಆವರಣಗೋಡೆ, ಅಲ್ಲದೆ ನೈವೇದ್ಯ ಕೋಣೆ, ದೈವಸ್ಥಾನ ಕಛೇರಿ ನಿರ್ಮಾಣ ಸರಿದಂತೆ ಇನ್ನಿತರ ಅಭಿವೃದ್ಧಿ ಕಾರ್ಯ ಅದಲ್ಲದೆ ಕಂಬಳಕೋಡಿ ಪ್ರದೇಶದಲ್ಲಿ ಅರಮನೆ ಕಂಬಳಗದ್ದೆಯ ಎಡ ಪಾರ್ಶ್ವದಲ್ಲಿರುವ ಅಜೀರ್ಣಗೊಂಡ ಪಂಜುರ್ಲಿ ಮಾಡ ಪುನರ್ ನಿರ್ಮಾಣ ಹಾಗೂ ಅರಮನೆಯ ಎದುರು ಬಾಕಿಮಾರುಗದ್ದೆ ಸಮೀಪವಿರುವ ಕೊಳದ ಬಳಿ ಮಾಯವಾಗಿ ದೈವತ್ವ ಪಡೆದಿರುವ ಬೊಲರಾಯ ದೈವದ ಕಲ್ಲಿನ ಸುತ್ತಲು ಕಂಪೌಂಡ್ ನಿರ್ಮಾಣ ಸಹಿತ ಒಟ್ಟು ಅಂದಾಜು 50 ಲಕ್ಷ ರೂಪಾಯಿ ವೆಚ್ಚದ ಜೀರ್ಣೋದ್ಧಾರದ ಬಗ್ಗೆ ಮಾಹಿತಿ ನೀಡಿದರು.ಅರ್ಚಕ ವಿನಯಾ ಕಾರಂತ ಕುಪ್ಪೆಪದವು, ವಿಕ್ರಂ ಭಟ್ ಕುಪ್ಪೆಪದವು, ಅರಮನೆಗೆ ಸಂಭಂದಪಟ್ಟ ಗುತ್ತು, ಬಾಳಿಕೆಗಳ ಮುಖ್ಯಸ್ಥರುಗಳು, ಊದುಗುಡ್ಡೆ ದೈವಸ್ಥಾನ ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿ ಚೇತನ್ ಸುವರ್ಣ ಅಂಬೆಲೊಟ್ಟು, ಕೋಶಾಧಿಕಾರಿ ಗಣೇಶ್ ನಾಯ್ಕ್ ಮಾಣೆಪಲ್ಲ ಮತ್ತು ಪದಾಧಿಕಾರಿಗಳು, ಸದಸ್ಯರು ಮತ್ತು ಸ್ಥಳೀಯ ಸಂಘಟನೆಗಳ ಪ್ರಮುಖರು, ಗ್ರಾಮದ ಮುಖಂಡರುಗಳು, ಗ್ರಾಮಸ್ಥರು ಇದ್ದರು.



ತನಲ್ ಕೂರ್ಗ್ ಆಶ್ರಮಕ್ಕೆ ಮೂರ್ನಾಡಿನ ಮಾರುತಿ ಶಾಲಾ ವಿದ್ಯಾರ್ಥಿಗಳು, ಶಿಕ್ಷಕರ ಭೇಟಿ

ನಾಪೋಕ್ಲು: ಸಮೀಪದ ಮೂರ್ನಾಡಿನ ಮಾರುತಿ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು ತನಲ್ ಕೂರ್ಗ್ ಆಶ್ರಮಕ್ಕೆ ಭೇಟಿ ಕೊಟ್ಟು ಆಶ್ರಮವಾಸಿ ಹಿರಿಯರನ್ನು ಮನರಂಜಿಸಿದರು.

ಮೂರ್ನಾಡಿನ ಮಾರುತಿ ಶಾಲೆಯ 111 ವಿದ್ಯಾರ್ಥಿಗಳು ತಮ್ಮ ಶಿಕ್ಷಕ ವೃಂದ ಮಡಿಕೇರಿಯಲ್ಲಿರುವ ತನಲ್ ಕೂರ್ಗ್ ಆಶ್ರಮಕ್ಕೆ ಭೇಟಿ ಕೊಟ್ಟು ಆಶ್ರಮವಾಸಿಗಳಿಗೆ ಬೇಕಾದ ತಿಂಡಿ-ತಿನಿಸು, ರೇಷನ್‌ಗಳನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಖರೀದಿಸಿ ಆಶ್ರಮಕ್ಕೆ ನೀಡಿದರು.

ಆಶ್ರಮವಾಸಿಗಳಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆ ಕೂಡ ಶಾಲೆಯ ವತಿಯಿಂದ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಾಡು, ನೃತ್ಯ ಇನ್ನಿತರ ಮನೋರಂಜನ ಕಾರ್ಯಕ್ರಮ ನೀಡಿ ಹಿರಿಯರನ್ನು ಮನರಂಜಿಸಿದರು. ಈ ಸಂದರ್ಭದಲ್ಲಿ ಶಿಕ್ಷಕರು ಮಾತನಾಡಿ ನಾವು ಅನಾವಶ್ಯಕವಾಗಿ ಪೋಲು ಮಾಡುವ ಹಣವನ್ನು ಹಿರಿಯ ಜೀವಿಗಳ ಆರೈಕೆಗೆ ಮೀಸಲಿಟ್ಟರೆ ಅನೇಕ ಜೀವಗಳ ಸಂರಕ್ಷಣೆ ಮಾಡಬಹುದು ಎಂದರು. ಮುಂದಿನ ದಿನಗಳಲ್ಲಿ ತನಲ್ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ತನಲ್ ಕೂರ್ಗ್ ಆಶ್ರಮದ ಅಧ್ಯಕ್ಷ ಮೊಹಮ್ಮದ್ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ವಿದ್ಯಾರ್ಥಿಗಳು. ಉತ್ತಮ ಪ್ರಜೆಗಳಾಗಿ ದೇಶಕ್ಕೆ ಏನಾದರೂ ಕೊಡುಗೆ ಕೊಡಬೇಕು ಎಂಬ ಹಿತ ವಚನ ನುಡಿದರು. ತನಲ್ ಆಶ್ರಮದಲ್ಲಿ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಕಲರವ ಮೂಡಿ ಬಂತು. ಹಿರಿಯರನ್ನು ಕಂಡ ಮಕ್ಕಳು ಮತ್ತು ಶಿಕ್ಷಕರು ಭಾವುಕರಾದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ಸರಳ, ಸಾಜಿದಾ, ದಮಯಂತಿ, ಪ್ರಿಯಾಂಕಾ, ಮತ್ತು ದಿವ್ಯಾ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ನೇಮೋತ್ಸವಕ್ಕೆ ಭರದಿಂದ ಸಿದ್ಧಗೊಳ್ಳುತಿದೆ ಐತಿಹಾಸಿಕ, ಮಹಿಮಾತ್ಮಕ ಪುರುಷರ ಗರಡಿ

ಏ.1: ಎಣ್ಮೂರು ಕೋಟಿ-ಚೆನ್ನಯ ಆದಿಗರಡಿಯಲ್ಲಿ ನೇಮೋತ್ಸವ





ಸುಬ್ರಹ್ಮಣ್ಯ: ಅಮರವೀರರಾದ ಕೋಟಿ ಚೆನ್ನಯರ ಆರಾಧನಾ ತಾಣವಾದ ಎಣ್ಮೂರಿನ ಶ್ರೀ ನಾಗಬ್ರಹ್ಮ ಕೋಟಿ-ಚೆನ್ನಯ ಆದಿ ಬೈದೇರುಗಳ ಗರಡಿಯಲ್ಲಿ ಏ.1ರಂದು ನೇಮೋತ್ಸವ ನೆರವೇರಲಿದೆ. ದೇಶ ವಿದೇಶಗಳಿಂದ ಈ ಕಾರಣಿಕ ಸ್ಥಳಕ್ಕೆ ಲಕ್ಷಾಂತರ ಭಕ್ತರು ಈ ದಿನ ಭೇಟಿ ನೀಡುತ್ತಾರೆ. ಮಹಿಮಾತ್ಮಕ ಪುರುಷರ ನೇಮೋತ್ಸವ ವೀಕ್ಷಿಸಿ ಗರಡಿಯಲ್ಲಿ ಪ್ರಸಾದ ಸ್ವೀಕರಿಸಿ ಕೃತಾರ್ಥರಾಗುತ್ತಾರೆ. ನೇಮೋತ್ಸವಕ್ಕಾಗಿ ಆದಿ ಗರಡಿಯಲ್ಲಿ ಸಕಲ ಸಿದ್ಧತೆಗಳು ನೆರವೇರುತ್ತಿದೆ. ಅಲ್ಲದೆ ಸೂಕ್ತ ವ್ಯವಸ್ಥೆಗಳು ಭರದಿಂದ ನಡೆಯುತ್ತಿದೆ.

ಮಾ. 30ರಂದು ಶ್ರೀ ಉಳ್ಳಾಕುಲ ಮತ್ತು ಕಾಚುಕುಜುಂಬ ದೈವದ ನೇಮ, ಮಾ.31ರಂದು ಇಷ್ಟದೇವತೆ ನೇಮೋತ್ಸವ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ಏ.1ರಂದು ಬೆಳಗ್ಗೆ ನಾಗ ತಂಬಿಲ, ಬಳಿಕ ಮುಹೂರ್ತ ತೋರಣ ನೆರವೇರಲಿದೆ. ಮಧ್ಯಾಹ್ನ ಕಟ್ಟಬೀಡಿನಿಂದ ಪೂರ್ವ ಸಂಪ್ರದಾಯದಂತೆ ಭಂಡಾರ ಹೊರಟು, ನೇತ್ರಾದಿ ಗರಡಿಯಲ್ಲಿ ದರ್ಶನ ನಡೆಯಲಿದೆ. ರಾತ್ರಿ ಬೈದೇರುಗಳು ಗರಡಿ ಇಳಿಯುವುದು, ಬಳಿಕ ಕಿನ್ನಿದಾರು ಗರಡಿ ಇಳಿದು ರಂಗಪ್ರವೇಶ ನಡೆಯಲಿದೆ. ಈ ದಿನ ಮಧ್ಯಾಹ್ನ ಮತ್ತು ರಾತ್ರಿ ಮಹಾ ಅನ್ನ ಸಂತರ್ಪಣೆ ನೆರವೇರಲಿದೆ. ಏ.2ರಂದು ಗುರುವಾರ ಪ್ರಾತ:ಕಾಲ ಬೈದೇರುಗಳು ಎಣ್ಮೂರು ಕಟ್ಟಬೀಡಿಗೆ ಹಾಲು ಕುಡಿಯಲು ಬಂದು ಬೀಡಿಗೆ ಕಾಣಿಕೆ ಅರ್ಪಿಸುವುದು, ಬಳಿಕ ರಂಗಸ್ಥಳದಲ್ಲಿ ಕೋಟಿ ಚೆನ್ನಯರ ದರ್ಶನ. ತದನಂತರ ಬೈದೇರುಗಳಲ್ಲಿ ಅರಿಕೆ ಮತ್ತು ಪ್ರಸಾದ ವಿತರಣೆ ನಡೆಯಲಿದೆ.

ಮಹಾತ್ಮೆ

ಅಮರ ವೀರರಾದ ಕೋಟಿ-ಚೆನ್ನಯರು ನ್ಯಾಯ, ಧರ್ಮದಲ್ಲಿ ನಡೆದು ಕಾರಣೀಕ ಪುರುಷರಾದರು. ಇವರಲ್ಲಿ ಸತ್ಯ, ನ್ಯಾಯ ಧರ್ಮದಿಂದ ಯಾವ ಕಾರ್ಯವನ್ನು ಅರಿಕೆ ಮಾಡಿದರೂ ಫಲಪ್ರದವಾಗುತ್ತದೆ. ಗರಡಿಯಲ್ಲಿ ಪ್ರಾರ್ಥಿಸಿದರೆ ಕಂಕಣ ಭಾಗ್ಯ, ಸಂತಾನಪ್ರಾಪ್ತಿ, ಉದ್ಯೋಗ, ಆರೋಗ್ಯ ಭಾಗ್ಯಗಳು ಪ್ರಾಪ್ತವಾಗುತ್ತದೆ. ಅದೇ ರೀತಿ ಆಸ್ತಿ ನ್ಯಾಯ, ಕೌಟುಂಬಿಕ ಸಮಸ್ಯೆಗಳ ನಿವಾರಣೆಯಾಗುತ್ತದೆ. ಸಂಕಷ್ಟಗಳಿಂದ ಪರಿಹಾರ ಕಂಡುಕೊಂಡ ಅಸಂಖ್ಯಾತರು ತಪ್ಪದೆ ನೇಮೋತ್ಸವದ ಸಂದರ್ಭದಲ್ಲಿ ಬಂದು ಬೈದೆರುಗಳಿಗೆ ಹರಕೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಕೆಲವರು ತಮ್ಮ ಸಂಕಷ್ಟವನ್ನು ಬೈದೆರುಗಳಲ್ಲಿ ಅರಿಕೆ ಮಾಡುತ್ತಾರೆ. ಪ್ರತಿ ವರ್ಷ ಆದಿ ಗರಡಿಯ ನೇಮೋತ್ಸವದ ಸಂದರ್ಭದಲ್ಲಿ ಆಗಮಿಸುವ ಭಕ್ತಾದಿಗಳೇ ಇದಕ್ಕೆ ಸಾಕ್ಷಿ. ವರ್ಷದಿಂದ ವರ್ಷಕ್ಕೆ ಈ ಮಹೋತ್ಸವಕ್ಕೆ ಭಕ್ತಾದಿಗಳ ಬರೋಣ ಅಧಿಕವಾಗುತ್ತಾ ಸಾಗುತ್ತಿದೆ.

ಅಮೃತ ಭಾರತಿ ವಿದ್ಯಾಲಯದಲ್ಲಿ ಕಲಾ ಸೌರಭ ಕಾರ್ಯಕ್ರಮ

ಹೆಬ್ರಿ : ಪಿ ಆರ್ ಎನ್ ಅಮೃತಭಾರತಿ ವಿದ್ಯಾಲಯ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಕಲಾ ಸೌರಭ ಕಾರ್ಯಕ್ರಮ ನಡೆಯಿತು.

ಬಹುಮಾನ ವಿತರಣೆ

ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಪ್ರತಿಭೆಯನ್ನು ಪ್ರದರ್ಶಿಸಲು ವಿವಿಧ ವಿಚಾರಗಳನ್ನು ನೀಡಿ ಪ್ರಸ್ತುತಪಡಿಸಲು ಅವಕಾಶ ಕಲ್ಪಿಸಿ, ಉತ್ತಮವಾಗಿ ಪ್ರದರ್ಶನವನ್ನು ನೀಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥೆ ಅಪರ್ಣಾ ಆಚಾರ್, ಬೋಧಕ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಆಂಗ್ಲ ಭಾಷಾ ಶಿಕ್ಷಕಿ ಸಾವಿತ್ರಿ ಕಿಣಿ ಬಹುಮಾನ ಪಟ್ಟಿ ವಾಚಿಸಿದರು.

ಅಂತೆಯೇ ಭಗವಾನ್ ಮಹಾವೀರ ಜಯಂತಿಯ ಅಂಗವಾಗಿ ಮಹಾವೀರರ ತತ್ವಗಳ ಚಿಂತನೆಯ ಬಗ್ಗೆ ಶಿಕ್ಷಕ ವಿದ್ವಾನ್ ವೇದವ್ಯಾಸ ತಂತ್ರಿ ಮಡಾಮಕ್ಕಿ ಮಾಹಿತಿ ನೀಡಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-47) ಡ್ರಾ ಮಾರ್ಚ್ 30ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BD 574710 (KOTTAYAM)

Consolation Prize Rs.5,000/-
BA 574710 BB 574710 BC 574710 BE 574710
BF 574710 BG 574710 BH 574710 BJ 574710
BK 574710 BL 574710 BM 574710

2nd Prize Rs.30,00,000/- [30 Lakhs]
BG 816240 (KOLLAM)

3rd Prize Rs.5,00,000/- [5 Lakhs]
BG 897500 (KOZHIKKODE)

FOR THE TICKETS ENDING WITH THE FOLLOWING NUMBERS

4th Prize Rs.5,000/-
0591 0820 1439 1756 2339 3793 4283 5101 5278 5627
5655 6191 6734 6830 7105 7809 8423 9441 9775

5th Prize Rs.2,000/-
1208 1907 3499 6023 6811 7208

6th Prize Rs.1,000/-
0007 0015 0846 1226 1358 1422 1637 1803 2021 2618
3617 4915 5073 5226 5890 5960 6264 6500 6903 7409
8484 8633 8949 9311 9313

7th Prize Rs.500/-
0238 0264 0773 0819 0845 0883 1109 1237 1309 1381
1388 1638 1662 1773 1786 2172 2431 2511 2519 2883
3029 3247 3271 3429 3821 3840 4008 4090 4122 4176
4316 4362 4851 5142 5204 5222 5277 5288 5485 5717
6010 6065 6079 6282 6304 6501 6644 6954 7005 7046
7060 7180 7212 7329 7372 7466 7629 7667 7984 8089
8258 8581 8643 8652 8749 8771 8819 9034 9156 9349
9421 9529 9639 9782 9852 9987

8th Prize Rs.200/-
0023 0137 0322 0380 0506 0672 0816 0832 0892 1090
1153 1314 1332 1674 1794 1880 2055 2153 2164 2179
2214 2291 2420 2591 2673 2698 2952 2989 2998 3268
3282 3300 3353 3510 3675 3687 3757 3934 3947 3977
4087 4104 4303 4304 4390 4457 4459 4487 4600 4728
4847 5610 5635 5649 5796 5998 6110 6178 6286 6373
6399 6437 6709 6816 7026 7095 7115 7282 7447 7542
7934 8013 8024 8102 8103 8332 8335 8342 8383 8499
8545 8564 8610 8702 8707 8826 8937 8963 9004 9183
9265 9560 9637 9930

9th Prize Rs.100/-
0020 0145 0228 0346 0683 0724 0790 0813 0822 1000
1013 1150 1276 1500 1580 1589 1608 1654 1688 1902
1989 2084 2140 2160 2377 2399 2543 2633 2734 2795
2907 3032 3098 3127 3147 3156 3158 3334 3461 3471
3627 3657 3709 3797 3844 3850 3893 3968 4010 4013
4019 4092 4113 4156 4277 4397 4572 4575 4621 4629
4634 4735 4802 4833 4890 4912 4925 4950 5043 5057
5106 5138 5195 5242 5265 5295 5490 5598 5755 5828
5980 6087 6115 6140 6387 6409 6457 6482 6517 6551
6632 6763 6819 6889 6894 6956 6993 7104 7106 7128
7136 7167 7182 7243 7250 7307 7323 7436 7509 7708
7739 7798 7875 8151 8218 8237 8260 8310 8336 8347
8386 8429 8614 8663 8698 8784 8875 8900 8968 9048
9104 9110 9250 9324 9359 9377 9399 9447 9500 9615
9650 9741 9752 9763

ಹನುಮಗಿರಿ ಬ್ರಹ್ಮಕಲಶೋತ್ಸವ: ಕಾರ್ಯಾಲಯ ಉದ್ಘಾಟನೆ



ಪುತ್ತೂರು: ಹನುಮಗಿರಿಕ್ಷೇತ್ರದ ಬ್ರಹ್ಮಕಲಶವು ಹಿಂದೂ ಸಮಾಜಕ್ಕೆ ಪ್ರೇರಣೆಯಾಗುವ ಜತೆಗೆ ಮಾದರಿಯಾಗಿ ಮೂಡಿಬರಲಿ ಎಂದು ಪುತ್ತೂರು ದ್ವಾರಕಾ ಪ್ರತಿಷ್ಠಾನದ ಅಧ್ಯಕ್ಷ ಗೋಪಾಲಕೃಷ್ಣ ಭಟ್ ಹೇಳಿದರು.

ಅವರು ಹನುಮಗಿರಿಯ ಶ್ರೀ ಕೋದಂಡರಾಮ ಹಾಗೂ ಆಂಜನೇಯ ಕ್ಷೇತ್ರದ ಬ್ರಹ್ಮಕಲಶೋತ್ಸವ ಕಾರ್ಯಾಲಯವನ್ನು ಉದ್ಘಾಟಿಸಿ ಮಾತನಾಡಿದರು. ಎ.9ರಿಂದ 12ರ ವರೆಗೆ ಬ್ರಹ್ಮಕಲಶೋತ್ಸವ ನಡೆಯಲಿದೆ.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲು ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕಲಶ ಸೇವೆ, ದೇಣಿಗೆ ನೀಡಿದವರಿಗೆ ರಶೀದಿ ನೀಡಲಾಯಿತು. ಬ್ರಹ್ಮಕಲಶೋತ್ಸವದ ಕಾರ್ಯಾಲಯದ ಜವಾಬ್ದಾರಿಯನ್ನು ಗಜಾನನ ಶಾಲೆಯ ಶಿಕ್ಷಕಿ ಸೌಮ್ಯ ಅವರಿಗೆ ಹಸ್ತಾಂತರ ಮಾಡಲಾಯಿತು.

ಸಮಿತಿಯ ಪದಾಧಿಕಾರಿಗಳಾದ ಸಾಜ ರಾಧಾಕೃಷ್ಣ ಆಳ್ವ, ಅರುಣ್ ಕುಮಾರ್ ಪುತ್ತಿಲ, ಸೀತಾರಾಮ ರೈ ಕೆದಂಬಾಡಿಗುತ್ತು, ಶ್ರೀಕೃಷ್ಣಭಟ್ ಮುಂಡ್ಯ, ರವಿಕಿರಣ್ ಶೆಟ್ಟಿ ಬೆದ್ರಾಡಿ, ನಹುಷ ಭಟ್, ಶಿವರಾಮ ಶರ್ಮ ಕತ್ರಿಬೈಲು, ರಮೇಶ್ ಪೂಜಾರಿ ಮುಂಡ್ಯ, ಆನಂದ ರೈ ಸಾಂತ್ಯ, ಜತ್ತಪ್ಪ ಗೌಡ ಕೊಂಕಣಿಗುಂಡಿ, ಪದ್ಮನಾಭ ಗೌಡ ಮಡ್ಯಲಮಜಲು, ಸತ್ಯಪ್ರಕಾಶ್ ಕುಂಟಿಕಾನ, ಚಂದ್ರಶೇಖರ ಆಳ್ವ, ಸುಬ್ಬಪ್ಪ ಪಾಟಾಳಿ, ಶೇಖರ ಮುಂಡ್ಯ, ಅಚ್ಯುತ ಮಣಿಯಾಣಿ, ರಾಮಣ್ಣ ನಾಯ್ಕ, ರವಿಪ್ರಸಾದ್ ರೈ ಕಾವು, ಯೋಗೀಶ್ ಕಾವು, ಗಜಾನನ ಶಾಲೆಯ ಶಿಕ್ಷಕಿಯರು ಮತ್ತು ಭಕ್ತರು ಉಪಸ್ಥಿತರಿದ್ದರು.

ಶ್ರೀಕ್ಷೇತ್ರ ಹನುಮಗಿರಿಯ ಆಡಳಿತ ಧರ್ಮದರ್ಶಿ ನನ್ಯ ಅಚ್ಯುತ ಮೂಡೆತ್ತಾಯ ಸ್ವಾಗತಿಸಿ, ಧರ್ಮದರ್ಶಿ ಶಿವರಾಮ ಪಿ. ವಂದಿಸಿದರು.

ಡಾ. ಕದ್ರಿ ಪ್ರಭಾಕರ ಅಡಿಗರಿಗೆ ಶರವು ರಾಮಕೃಷ್ಣ ಶಾಸ್ತ್ರಿ ಪ್ರಶಸ್ತಿ ಪ್ರದಾನ



ಮಂಗಳೂರು: ಚತುರ್ವೇದಿ ಡಾ. ಕದ್ರಿ ಪ್ರಭಾಕರ ಅಡಿಗ ಅವರಿಗೆ 2026ನೇ ಸಾಲಿನ ಶರವು ರಾಮಕೃಷ್ಣ ಶಾಸ್ತ್ರಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಶರವು ಶ್ರೀ ಮಹಾಗಣಪತಿ ದೇವಸ್ಥಾನದ ಶಿಲೆ ಶಿಲೆ ಮೊಕ್ತೇಸರ ಶರವು ರಾಘವೇಂದ್ರ ಶಾಸ್ತ್ರಿ ಅವರ ಅಧ್ಯಕ್ಷತೆಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ಹಿರಿಯ ಲೆಕ್ಕಪರಿಶೋಧಕ ಸಿ.ಎ.ಕೃಷ್ಣಮೂರ್ತಿ ರಾವ್ ಮುಖ್ಯ ಅತಿಥಿಯಾಗಿದ್ದರು. ಸುಧಾಕರ್ ರಾವ್ ಪೇಜಾವರ ಅಭಿನಂದನಾ ಭಾಷಣ ಮಾಡಿದರು.

» 12 ಜನ ವೇದ ವಿದ್ವಾಂಸರಿಂದ ವೇದಘೋಷ ರುದ್ರ ಪಠಣ ನಡೆಯಿತು.

ಡಾ. ಸುರೇಶ್ ಶಾಸ್ತ್ರಿ, ರಾಹುಲ್ ಶಾಸ್ತ್ರಿ, ವಿಶ್ವಂಭರ ಶಾಸ್ತ್ರಿ, ಪ್ರದೀಪ ಕುಮಾರ ಕಲ್ಕೂರ ಉಪಸ್ಥಿತರಿದ್ದರು.

ಪ್ರಕಾಶ್ ಚಂದ್ರ ಶರವು ಸ್ವಾಗತಿಸಿದರು. ಶರವು ಅನಂತ ರಾವ್ ವಂದಿಸಿದರು. 12 ಜನ ವೇದ ವಿದ್ವಾಂಸರಿಂದ ವೇದಘೋಷ ರುದ್ರ ಪಠಣ ನಡೆಯಿತು. ಪ್ರಶಸ್ತಿ ಚಿನ್ನದ ಪದಕ, ಗೌರವ ನಿಧಿ ಒಳಗೊಂಡಿತ್ತು.

ವಿದ್ಯಾರ್ಥಿಗಳಲ್ಲಿ ನೈತಿಕತೆ, ಚಾರಿತ್ರ್ಯ ನಿರ್ಮಾಣ: ಮೌಲ್ಯ ಶಿಕ್ಷಣ ಸ್ಪರ್ಧೆ: ಅಮೃತ ಭಾರತಿ ಮೇಲುಗೈ



ಹೆಬ್ರಿ : ಇಸ್ಕಾನ್ ಆಯೋಜಿಸಿದ ಭಗವದ್ಗೀತಾ ಆಧಾರದ ಮೇಲೆ ನಡೆಸಿದ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಅಮೃತಭಾರತಿ ವಿದ್ಯಾ ಕೇಂದ್ರದ ಪ್ರಣಮ್ಯ ಹೆಬ್ಬಾರ್ ಅವರು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದರು. ಅಮೃತಭಾರತಿ ವಿದ್ಯಾ ಕೇಂದ್ರಕ್ಕೆ ಆಗಮಿಸಿದ ಇಸ್ಕಾನಿನ ವಿಜಯ ಅಚ್ಯುತಾದಾಸರವರು ವಿದ್ಯಾರ್ಥಿನಿಗೆ ಪ್ರಶಸ್ತಿ ಪತ್ರದೊಂದಿಗೆ ಸೈಕಲನ್ನು ಉಡುಗೊರೆಯಾಗಿ ಹಸ್ತಾಂತರಿಸಿದರು. ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಶಾಲಾ ಪ್ರಾಂಶುಪಾಲರಾದ ಅರುಣ್ ಎಚ್ ಮತ್ತು ಮುಖ್ಯ ಶಿಕ್ಷಕಿ ಅನಿತಾ ಉಪಸ್ಥಿತರಿದ್ದರು.

ಧರ್ಮಸ್ಥಳ ಯೋಜನೆಯಡಿ ಮನೆ ನಿರ್ಮಾಣ | ದೇವಲ್ಕುಂದ ಗ್ರಾಮದ ಬಡ ಕುಟುಂಬಕ್ಕೀಗ ಸಂತಸದ ಕ್ಷಣ

ರಾಜು-ಲಕ್ಷ್ಮೀ ದಂಪತಿಗೆ 'ವಾತ್ಸಲ್ಯ' ಮನೆ



ಕುಂದಾಪುರ : ಅನಾರೋಗ್ಯದಿಂದ ಬಳಲುತ್ತಿರುವ ಪತಿ. ಕುಟುಂಬ ನಿರ್ವಹಣೆಗೆ ನಿಂತ ಸತಿ. ಮತ್ತೊಂದೆಡೆ ಮುರಿದು ಬೀಳುತ್ತಿರುವ ವಾಸಕ್ಕಿರುವ ಚಿಕ್ಕ ಜೋಪಡಿ. ಮಳೆ ಬಂದರೆ ಮನೆಯೊಳಗೆ ನೀರು, ಗಾಳಿಗೆ ಭೀತಿಯಲ್ಲಿಯೇ ಇರಬೇಕಾದ ಅನಿವಾರ್ಯತೆ. ಸಂಕಷ್ಟದ ಜೀವನ ನಡೆಸುತ್ತಿರುವ ಈ ಬಡ ಕುಟುಂಬದಲ್ಲಿ ಈಗ ಸಣ್ಣದೊಂದು ನಗು ಮೂಡಿದೆ.

ಕಟ್‌ಬೇಲ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ದೇವಲ್ಕುಂದ ಗ್ರಾಮದ ಕೊಲ್ಲೂರು ಮುಖ್ಯ ರಸ್ತೆಯ ಹತ್ತಿರದಲ್ಲೇ ಇರುವ ಪುಟ್ಟ ಗುಡಿಸಲಲ್ಲಿ ಇರುವ ರಾಜು ಹಾಗೂ ಲಕ್ಷ್ಮೀ ದಂಪತಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ನೇತೃತ್ವದಲ್ಲಿ ಜ್ಞಾನವಿಕಾಸ ಕಾರ್ಯಕ್ರಮದ ಮೂಲಕ 'ವಾತ್ಸಲ್ಯ' ಮನೆ ನಿರ್ಮಾಣ ಮಾಡಿದೆ.

ಧರ್ಮಸ್ಥಳದ ಡಾ. ಡಿ.ವೀರೇಂದ್ರ ಹೆಗ್ಗಡೆ, ಹೇಮಾವತಿ ಹೆಗ್ಗಡೆಯವರ ಮಹತ್ವಾಕಾಂಕ್ಷೆಯ ಯೋಜನೆ ಇದಾಗಿದ್ದು, ತೀರಾ ಅಶಕ್ತರಿಗೆ, ಅತೀ ಅಗತ್ಯ ಇರುವವರಿಗೆ, ನೋಡಿಕೊಳ್ಳುವ ಬಂಧುಗಳಿಲ್ಲದ ಕುಟುಂಬಕ್ಕೆ ವಾತ್ಸಲ್ಯ ಯೋಜನೆಯಡಿ ಮನೆ ನಿರ್ಮಾಣ ಮಾಡಿಕೊಡಲಾಗುತ್ತಿದ್ದು ಈ ಪುಟ್ಟ ಕುಟುಂಬಕ್ಕೆ ತಕ್ಕುದಾದ ಮನೆಯನ್ನು ನಿರ್ಮಾಣ ಮಾಡಿದೆ.

ರಾಜು ಅವರು ಹೃದಯ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿದ್ದು, ಪತ್ನಿ ಲಕ್ಷ್ಮೀ ಅವರೇ ಈಗ ಕುಟುಂಬ ನಿರ್ವಹಣೆ ಹೊಣೆ ಹೊತ್ತಿದ್ದಾರೆ. ಇವರ ಈ ಸ್ಥಿತಿಯನ್ನು ಕಂಡ ಸೇವಾಪ್ರತಿನಿಧಿ ಮತ್ತು ಒಕ್ಕೂಟದಸದಸ್ಯರು, ಜನಜಾಗೃತಿವೇದಿಕೆಯವರು 'ವಾತ್ಸಲ್ಯ ಮನೆ ನಿರ್ಮಾಣಕ್ಕೆ ಮುಂದಾದರು. ಯೋಜನೆಯ ತಾಲೂಕು ಯೋಜನಾಧಿಕಾರಿ ಉಮೇಶ ಶೆಟ್ಟಿ, ವಲಯ ಮೇಲ್ವಿಚಾರಕ ಚಂದ್ರ ಮಧುವನ, ಜ್ಞಾನವಿಕಾಸ ಸಮನ್ವಯಾಧಿಕಾರಿ ರೇಣುಕಾ ಎಲ್ಲ ರೀತಿಯಿಂದಲೂ ಪರಿಶೀಲನೆ ನಡೆಸಿ, ಈ ಕುಟುಂಬಕ್ಕೆ ವಾತ್ಸಲ್ಯ ನಿರ್ಮಾಣ ಮಾಡಿಕೊಡುವ ಬಗ್ಗೆ ಕಾರ್ಯಪ್ರವೃತ್ತರಾದರು. ಕೂಡಲೇ ಯೋಜನೆಯ ತಂಡ, ಒಕ್ಕೂಟದವರು, ಜನಜಾಗೃತಿ ಸದಸ್ಯರು ಮನೆ ನಿರ್ಮಾಣದ ಭೂಮಿ ಪೂಜೆ ನೆರವೇರಿಸಿ, ಶೌರ್ಯ ವಿಪತ್ತು ತಂಡದವರು ಕರಸೇವೆಯ ಮೂಲಕ ಸಹಕರಿಸಿದರು. ಗ್ರಾಮ ಪಂಚಾಯತ್ ಕೂಡ ಮಾನವೀಯ ನೆಲೆಯಲ್ಲಿ ಸಹಕಾರ ನೀಡಿದ್ದು, ಈಗ ಮನೆ ಪೂರ್ಣಗೊಂಡಿದೆ.

1.35 ಲಕ್ಷ ರೂ. ವೆಚ್ಚದಲ್ಲಿ ಸರಳ, ಸುಂದರ ಮನೆ ನಿರ್ಮಾಣವಾಗಿದೆ. ಚೆಂದದ ಬಣ್ಣ ಬಳಿಯಲಾಗಿದೆ. ಅಡುಗೆ ಮನೆ, ಪುಟ್ಟ ಹಾಲ್, ಎರಡು ಕಡೆ ಜಗಲಿ, ವ್ಯವಸ್ಥಿತವಾಗಿ ಮನೆ ನಿರ್ಮಾಣವಾಗಿದೆ. ದಾನಿಗಳು ಸಹಕಾರ ನೀಡಿದರೆ ಮನೆಯ ಮೂಲಭೂತ ಆವಶ್ಯಕತೆಗಳನ್ನು ಒದಗಿಸಲು ಸಾಧ್ಯವಿದೆ. ಸಂಕಷ್ಟದ ಜೀವನ ನಡೆಸುತ್ತಿರುವ ಅಶಕ್ತ ಕುಟುಂಬಕ್ಕೆ ಬೆಚ್ಚಗಿನ ಸೂರೊಂದು ದೊರಕಿದೆ.

ಕುಂದಾಪುರದಲ್ಲಿ 2 ಮನೆ ಹಸ್ತಾಂತರ

ಧರ್ಮಸ್ಥಳದ ಜ್ಞಾನವಿಕಾಸದಡಿ ವಾತ್ಸಲ್ಯ ಯೋಜನೆಯೂ ಪ್ರಮುಖವಾಗಿದೆ. ಮಾಸಾಸನ, ಪೌಷ್ಟಿಕ ಆಹಾರ ಕಿಟ್, ಅಡುಗೆ ತಯಾರಿ ಪರಿಕರ ವಿತರಣೆ ಜತೆಗೆ ಅಶಕ್ತರು, ನೋಡಿಕೊಳ್ಳುವವರು ಇಲ್ಲದ ಕುಟುಂಬಗಳಿಗೆ ಸೂರು ನಿರ್ಮಿಸುವ ಯೋಜನೆಯಡಿ ಈ ವರ್ಷ ಎಲ್ಲೆಡೆ ಒಂದು ಸಾವಿರ ಮನೆ ನಿರ್ಮಿಸುವ ಗುರಿಯಿದ್ದು, ದೇವಲ್ಕುಂದದ ರಾಜು ಅವರಿಗೆ ವಾತ್ಸಲ್ಯದಡಿ ಮನೆ ನಿರ್ಮಾಣ ಮಾಡಲಾಗಿದೆ. ಇದು ಕುಂದಾಪುರದಲ್ಲಿ 2 ನೇ ಮನೆ ಆಗಿದೆ. ಹಟ್ಟಿಯಂಗಡಿಯಲ್ಲಿ ಕಳೆದ ವರ್ಷ 1 ಮನೆ ನಿರ್ಮಿಸಲಾಗಿತ್ತು

■ ಉಮೇಶ ಶೆಟ್ಟಿ, ಯೋಜನಾಧಿಕಾರಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಕುಂದಾಪುರ

ಎಲ್ಲರೂ ಮಾತೃಭಾಷೆ ಗೌರವಿಸಲಿ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಸೂಚನೆ

◆ **ಬೆಂಗಳೂರು:** ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಿದೆ. ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ಕನ್ನಡ ಭಾಷೆಗೆ ಅಗೌರವ ಉಂಟಾಗದಂತೆ ಎಲ್ಲರೂ ಎಚ್ಚರವಹಿಸಬೇಕು ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಸೂಚನೆ ನೀಡಿದೆ.

ಕನ್ನಡವು ಕರ್ನಾಟಕ ರಾಜ್ಯದ ಅಧಿಕೃತ ಭಾಷೆಯಾಗಿದ್ದು, ಇದಕ್ಕೆ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಗೌರವಿದೆ. ಕನ್ನಡ ಭಾಷೆಯ ಬಗ್ಗೆ ಗೌರವ ಮತ್ತು ಘನತೆಯನ್ನು ಕಾಪಾಡುವುದು ಎಲ್ಲ ಶಿಕ್ಷಣ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ. ಯಾವುದೇ ಸಂದರ್ಭದಲ್ಲಿಯೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಅವಮಾನವಾಗುವ ರೀತಿಯಲ್ಲಿ ವರ್ತನೆಗಳು ನಡೆಯುವುದನ್ನು ಸಂಪೂರ್ಣವಾಗಿ ಖಂಡಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಗೆ ಅಗೌರವ ಆಗದಂತೆ ಎಚ್ಚರವಹಿಸಬೇಕೆಂದು ಸೂಚಿಸಿದೆ. ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು, ಮುಖ್ಯಸ್ಥರು ಕನ್ನಡ ಭಾಷೆಗೆ ದಕ್ಕೆ ಬಾರದಂತೆ ವೈಯಕ್ತಿಕ ಹೊಣೆಗಾರಿಕೆ ವಹಿಸಿ ಕಾಲೇಜುಗಳಲ್ಲಿ ಭಾಷಾ ಗೌರವ ಮತ್ತು ಸೌಹಾರ್ದತೆಯನ್ನು ಕಾಪಾಡಕೊಳ್ಳಬೇಕು. ಒಂದು ವೇಳೆ ಯಾವುದೇ ಉಲ್ಲಂಘನೆ ಕಂಡುಬಂದಲ್ಲಿ, ಸಂಬಂಧಪಟ್ಟ ಸಿಬ್ಬಂದಿಯ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು. ಯಾವುದೇ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳೊಂದಿಗೆ ಹಾಗೂ ಇತರರೊಂದಿಗೆ ಸಂವಹನ ಮಾಡುವ ವೇಳೆ ಕನ್ನಡ ಭಾಷೆಯ ಬಗ್ಗೆ ಅವಹೇಳನಕಾರಿ ಹಾಗೂ ಅಸಮಂಜಸ ಪದಗಳನ್ನು ಬಳಸಬಾರದು. ಈ ಸೂಚನೆಗಳನ್ನು ಎಲ್ಲ ಸಿಬ್ಬಂದಿಗಳಿಗೆ ತಕ್ಷಣ ತಿಳಿಸಿ ಕಡ್ಡಾಯವಾಗಿ ಪಾಲನೆ ಮಾಡುವುದನ್ನು ಖಚಿತಪಡಿಸಕೊಳ್ಳಬೇಕೆಂದು ವಿಟಿಯು ತನ್ನ ವ್ಯಾಪ್ತಿಯಲ್ಲಿರುವ ಕಾಲೇಜು ಆಡಳಿತ ಮಂಡಳಿಗಳಿಗೆ ಸೂಚಿಸಿದೆ. ಈ ಕುರಿತು ಮಾತನಾಡಿದ ವಿಟಿಯು ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್, ಕನ್ನಡ ಭಾಷೆ ನಮ್ಮ ನೆಲದ ಭಾಷೆ. ಇದಕ್ಕೆ ಗೌರವ ಸೂಚಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ವಿಟಿಯು ವ್ಯಾಪ್ತಿಯಲ್ಲಿ 220 ಸಂಯೋಜಿತ ಕಾಲೇಜುಗಳಿವೆ. 3 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ವಿವಿಧ ರಾಜ್ಯ, ರಾಷ್ಟ್ರಗಳ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ನಾವು ಕನ್ನಡ ಭಾಷೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳುತ್ತಿದ್ದೇವೆ. ಆದರೂ, ಕೆಲವು ವೇಳೆ ಅಹಿತಕರ ಘಟನೆ ನಡೆಯುವುದರಿಂದ ಇದನ್ನು ತಪ್ಪಿಸುವ ಸಲುವಾಗಿ ಮುನ್ನೆಚ್ಚರಿಕೆ ಕ್ರಮವಾಗಿ ಕೆಲವು ಮಾರ್ಗಸೂಚಿಗಳನ್ನು ಹೊರಡಿಸಿದ್ದೇವೆ ಎಂದು ತಿಳಿಸಿದರು.

ಏ.15ರಿಂದ ಕಲೆ, ಸಂಸ್ಕೃತಿ, ಕೌಶಲ ತರಬೇತಿ ಶಿಬಿರ

◆ **ಬೆಂಗಳೂರು:** ಸಮನ್ವಿತ ಸಂಸ್ಥೆಯು ಹದಿನೈದನೆ ವಾರ್ಷಿಕೋತ್ಸವ ಪೂರೈಸಿರುವ ಅಂಗವಾಗಿ ಏ.15 ರಂದು 10 ರಿಂದ 16 ವರ್ಷ ಮಕ್ಕಳಿಗೆ ಹದಿನೈದು ದಿನಗಳ ನವಪಲ್ಲವ ಎಂಬ ಕಲೆ– ಸಂಸ್ಕೃತಿ ಮತ್ತು ಕೌಶಲ್ಯ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಅರಕೆರೆ ಮೈಕೋ ಲೇಔಟ್‌ನಲ್ಲಿ ಏ.15 ರಿಂದ 30ರವರೆಗೆ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಶಿಬಿರ ನಡೆಯಲಿದ್ದು, 10ರಿಂದ 16 ವರ್ಷ ಪ್ರಾಯದ ಮಕ್ಕಳು ಶಿಬಿರದಲ್ಲಿ ನೋಂದಾಯಿಸಿ ಪ್ರವೇಶವನ್ನು ಪಡೆಯಬಹುದಾಗಿದೆ. ಈ ಕಲೆ–ಸಂಸ್ಕೃತಿ, ಕೌಶಲ ಶಿಬಿರದಲ್ಲಿ ವಿವಿಧ ಕ್ಷೇತ್ರಗಳ ತಜ್ಞರು ಭಾಗವಹಿಸಿ ಶಿಬಿರಾರ್ಥಿಗಳಿಗೆ ವ್ಯಾಯಾಮ, ಯೋಗ – ಧ್ಯಾನ, ಪ್ರಾರ್ಥನೆ, ಗೀತಗಾಯನ, ಚಿತ್ರಕಲೆ, ಕ್ರಾಫ್ಟ್, ಪ್ರಾಣಿ–ಪಕ್ಷಿಗಳ ಅರಿವು, ಪರಿಸರ, ನೃತ್ಯ, ಪುಸ್ತಕ ವಾಚನ, ಸಾಮರಸ್ಯ, ಮೌಲ್ಯ ಶಿಕ್ಷಣ, ನಾಟಕ, ಸಂವಹನ ಕಲೆ ಸೇರಿದಂತೆ ವಿವಿಧ ಕೌಶಲ್ಯ ಪರಿಚಯ ತರಬೇತಿಯನ್ನು ನೀಡಲಿದ್ದಾರೆ. ಅಗತ್ಯ ಸಾಮಗ್ರಿಗಳನ್ನು ಸಾಮಾನ್ಯವಾಗಿ ಸಮನ್ವಿತದ ವತಿಯಿಂದ ಒದಗಿಸಲಾಗುವುದು. ವನ ಚಾರಣ, ಪ್ರಾಣಿ ಪಕ್ಷಿಗಳ ಅರಿವು, ವಿಜ್ಞಾನ ಮತ್ತು ಗಣಿತದ ಅರಿವು ಸೇರಿದಂತೆ ವಿನೂತನ ಪರಿಕಲ್ಪನೆಯೊಂದಿಗೆ ಮಕ್ಕಳು ರಜೆಯ ಮಜಾ ಅನುಭವಿಸಲು ವೇದಿಕೆಯನ್ನು ಕಲ್ಪಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ 98441 92952ಗೆ ಸಂಪರ್ಕಿಸಬಹುದಾಗಿದೆ.

ತಪಾಸಣಾ ಶಿಬಿರ



ವಿಶ್ವ ಮಹಿಳಾ ದಿನಾಚರಣೆ ಪ್ರಯುಕ್ತ ಇನ್ನರ್ ವೀಲ್ ಕ್ಲಬ್ ಬೆಂಗಳೂರಿಂದ ಮಲ್ಲೇಶ್ವರಂನಲ್ಲಿರುವ ಲಕ್ಷ್ಮಿ ಆಸ್ಪತ್ರೆಯಲ್ಲಿ ಸ್ತ್ರೀರೋಗಗಳ ಕುರಿತು ತಪಾಸಣಾ ಉಚಿತ ಶಿಬಿರ ಏರ್ಪಡಿಸಲಾಗಿತ್ತು. ವೀಲ್ ಕ್ಲಬ್ ಬೆಂಗಳೂರು ಬ್ಲಾಸಮ್ ಅಧ್ಯಕ್ಷೆ ಸಚಿನ ಮೋಹನ್ , ಸ್ತ್ರೀರೋಗ ತಜ್ಞೆ ಡಾ.ನಿಶಿತಾ ರಾವ್ ಪಾಲ್ಗೊಂಡಿದ್ದರು.

ಕಿರುಸುದ್ದಿ

ಯಲಹಂಕ ಕ್ಷೇತ್ರಕ್ಕೆ ಪ್ರಥಮ ಸ್ಥಾನ

◆ **ಯಲಹಂಕ:** ಪ್ರತಿ ತಿಂಗಳ ಕೊನೆಯ ಭಾನುವಾರ ಪ್ರಸಾರವಾಗುವ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಮನ್ ಕಿ ಬಾತ್ ಕಾರ್ಯಕ್ರಮ ವೀಕ್ಷಣೆಯಲ್ಲಿ, ಯಲಹಂಕ ಕ್ಷೇತ್ರ ಸತತ ಆರನೇ ಬಾರಿಗೆ ರಾಜ್ಯದಲ್ಲಿ ಪ್ರಥಮ ಸ್ಥಾನ ಗಳಿಸುವ ಮೂಲಕ ಹೊಸ ಮೈಲಿಗಲ್ಲು ಸಾಧಿಸಿದೆ. ಭಾನುವಾರ ಪ್ರಸಾರವಾದ ಪ್ರಧಾನ ಮಂತ್ರಿಗಳ ಮನ್ ಕಿ ಬಾತ್ ಕಾರ್ಯಕ್ರಮವನ್ನು ಜಪಾನ್ ಪ್ರವಾಸದಲ್ಲಿರುವ ಯಲಹಂಕ ಶಾಸಕ ಎಸ್. ಆರ್.ವಿಶ್ವನಾಥ್ ಹಾಗೂ 35 ಬಿಜೆಪಿ ಮುಖಂಡರು ಭಾರತದ ರಾಷ್ಟ್ರಧ್ವಜ ಹಿಡಿದು ಜಪಾನ್ ನಲ್ಲಿಯೇ ವೀಕ್ಷಿಸಿ, ಸರಲ್ ಆಪ್‌ನಲ್ಲಿ ಅಪ್ಲೋಡ್ ಮಾಡಿದರು. ಇದೇ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಂ.ಜಿ.ರಾಮಮೂರ್ತಿ, ವಿಶ್ವನಾಥಪುರ ಮಂಜುನಾಥ್, ಚೊಕ್ಕನಹಳ್ಳಿ ವೆಂಕಟೇಶ್, ಎಸ್ .ಜಿ.ನರಸಿಂಹಮೂರ್ತಿ ಸೇರಿದಂತೆ ಇತರರಿದ್ದರು.

ಸತತ ಆರನೇ ಬಾರಿ ಯಲಹಂಕ ಕ್ಷೇತ್ರದ ಒಟ್ಟು 411ಬೂತ್‌ಗಳಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಜನ ಮನ್ ಕಿ ಬಾತ್ ಕಾರ್ಯಕ್ರಮ ವೀಕ್ಷಿಸಿ ಸರಲ್ ಆಪ್‌ನಲ್ಲಿ ಅಪ್ಲೋಡ್ ಮಾಡಿದ್ದಾರೆ. ಮನ್ ಕಿ ಬಾತ್ ಕಾರ್ಯಕ್ರಮವನ್ನು ಸತತ ಆರನೆಯ ಬಾರಿಗೆ ರಾಜ್ಯದಲ್ಲಿಯೇ ಅತಿ ಹೆಚ್ಚು ವೀಕ್ಷಿಸಿದ ವಿಧಾನಸಭಾ ಕ್ಷೇತ್ರ ಎನ್ನುವ ಹೆಗ್ಗಳಿಕೆಗೆ ಭಾಜನವಾಗಿದೆ ಎಂದು ಯಲಹಂಕ ನಗರ ಮಂಡಲ ಅಧ್ಯಕ್ಷ ಎಂ.ಮುನಿರಾಜು ಮಾಹಿತಿ ನೀಡಿದ್ದಾರೆ.

ಬಿಡಿಎಯಿಂದ ಟೆಂಡರ್ ಆಹ್ವಾನ

ಪೆರಿಫೆರಲ್ ರಿಂಗ್ ರಸ್ತೆ ಕಾಮಗಾರಿಗೆ ವೇಗ

◆ **ಬೆಂಗಳೂರು:** ಬಹಳ ದಿನದಿಂದ ವಿಳಂಬವಾಗಿದ್ದ ಬೆಂಗಳೂರು ಬಿಸಿನೆಸ್ ಕಾರಿಡಾರ್(ಬಿಬಿಸಿ) ಪೆರಿಫೆರಲ್ ರಿಂಗ್ ರಸ್ತೆ (ಪಿಆರ್‌ಆರ್)ಯೋಜನೆಯು ವೇಗ ಪಡೆಯಲಿದೆ. ಮೊದಲ ಹಂತದಲ್ಲಿ 20 ಕಿ.ಮೀ.ಉದ್ದದ ಕಾಮಗಾರಿಗೆ 3,348 ಕೋಟಿ ರೂ. ಮೊತ್ತದ ಟೆಂಡರ್‌ನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಕರೆದಿದೆ. ತುಮಕೂರು ರಸ್ತೆಯನ್ನು ಬಳ್ಳಾರಿ ರಸ್ತೆಗೆ ಸಂಪರ್ಕಿಸುವ ದೀರ್ಘಕಾಲದಿಂದ ಬಾಕಿ ಉಳಿದಿರುವ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣಕ್ಕಾಗಿ ಮೊದಲ ಪ್ಯಾಕೇಜ್ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಮಾರ್ಚ್ 30 ರಂದು ಬಿಡಿಎ ಯೋಜನೆಯ ಪ್ಯಾಕೇಜ್ 1 ರ ಅಡಿಯಲ್ಲಿ ಸಿವಿಲ್ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. ಈ ಮಾರ್ಗವು ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆಯವರೆಗೆ ಸುಮಾರು 20 ಕಿ.ಮೀ. ಉದ್ದವನ್ನು ಒಳಗೊಂಡಿದ್ದು,3,348 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ.

ಈ ಕೆಲಸವನ್ನು ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಬಿಒಟಿ) ಮಾದರಿಯಡಿಯಲ್ಲಿ ಕೈಗೊಳ್ಳಲಾಗುವುದು, ಇದರಲ್ಲಿ 10 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯೂ ಸೇರಿದೆ.ನಿರ್ಮಾಣ ಗಡುವನ್ನು 36 ತಿಂಗಳುಗಳಿಗೆ ನಿಗದಿಪಡಿಸಲಾಗಿದೆ. ಟೆಂಡರ್ ಪ್ರಕ್ರಿಯೆಯು ಮೇ 2026 ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಬಿಬಿಸಿಯ ಸಂಪೂರ್ಣ ಹಂತ 173.4 ಕಿ.ಮೀ. ಉದ್ದವಾಗಿದೆ. ಇದನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಪ್ಯಾಕೇಜ್ 1ತುಮಕೂರು ರಸ್ತೆಯಿಂದ ಬಳ್ಳಾರಿ ರಸ್ತೆಗೆ (19.8 ಕಿ.ಮೀ.), ಪ್ಯಾಕೇಜ್ 2 ಬಳ್ಳಾರಿ ರಸ್ತೆಯಿಂದ ಹಳೆ ಮದ್ರಾಸ್ ರಸ್ತೆಗೆ (18 ಕಿ.ಮೀ.) ವಿಸ್ತರಿಸಿದೆ ಮತ್ತು ಪ್ಯಾಕೇಜ್ 3ಹಳೆಯ ಮದ್ರಾಸ್ ರಸ್ತೆಯಿಂದ ಹೊಸೂರು ರಸ್ತೆಗೆ (27.75 ಕಿ.ಮೀ.) ಸಂಪರ್ಕಿಸುತ್ತದೆ.

ತ್ಯಾಜ್ಯ ವಿಲೇವಾರಿ ನಿಯಮ ತಪ್ಪಿದರೆ ಭಾರೀ ದಂಡ ನಿಶ್ಚಿತ | ಜಿಬಿಎಯಿಂದ ಶೀಘ್ರ ಅಧಿಸೂಚನೆ

ಏ.1ರಿಂದ ಘನ ತ್ಯಾಜ್ಯ ನಿರ್ವಹಣೆ ಜಾರಿ

◆ **ಬೆಂಗಳೂರು:** ಕಸ ಮುಕ್ತ ಭಾರತದ ಸಂಕಲ್ಪದೊಂದಿಗೆ 2016ರ ನಿಯಮದ ಬದಲಾಗಿ ಏಪ್ರಿಲ್ 1ರಿಂದ ದೇಶಾದ್ಯಂತ ನೂತನ ಘನತ್ಯಾಜ್ಯ ನಿರ್ವಹಣೆ (ಎಸ್‌ಡಬ್ಲ್ಯುಎಂ) ನಿಯಮ–2026 ಜಾರಿಗೆ ಬರಲಿದೆ. ನಿಯಮ ತಪ್ಪಿದರೆ ಭಾರಿ ದಂಡ ಹಾಕಲು ಅವಕಾಶ ನೀಡಲಾಗಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯಲ್ಲಿ ನೂತನ ನಿಯಮದ ವಿಚಾರವಾಗಿ ಶ್ರೀಘ್ರ ಅಧಿಸೂಚನೆ ಹೊರಡಿಸಲಾಗುವುದೆಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ(ಬಿಎಸ್‌ಡಬ್ಲ್ಯೂಎಂಎಲ್) ಅಧಿಕಾರಿಗಳು ತಿಳಿಸಿದ್ದಾರೆ. ಕೇಂದ್ರ ಸರ್ಕಾರ ಈಗಾಗಲೇ ನೂತನ ನೀತಿಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಿದ್ದು, ಭೂ ಭರ್ತಿ ಕೇಂದ್ರಗಳಿಗೆ ಕಸ ಕಳುಹಿಸುವುದನ್ನು ಕಡಿಮೆ ಮಾಡಿ, ಮರುಬಳಕೆ ಮತ್ತು ಮರು ಸಂಸ್ಕರಣೆಗೆ ಒತ್ತು ನೀಡುವ ಗುರಿಯನ್ನು ಇಟ್ಟುಕೊಂಡಿದೆ. ಅಲ್ಲದೆ ಸಂಪನ್ಮೂಲವಾಗಿ ಬಳಸುವ ವೃತ್ತಾಕಾರದ ಆರ್ಥಿಕತೆಗೆ ಹೆಚ್ಚಿನ ಗಮನ ಹರಿಸಿವೆ.

ನಾಲ್ಕು ಹಂತದ ತ್ಯಾಜ್ಯ ವಿಂಗಡಣೆ: ಹಸಿ ಕಸ ಮತ್ತು ಒಣ ಕಸ ಎಂಬ ಎರಡು ವಿಭಾಗಗಳಿದ್ದವು. ಹೊಸ ನಿಯಮದ ಪ್ರಕಾರ ತ್ಯಾಜ್ಯವನ್ನು ಮೂಲದಲ್ಲೇ ನಾಲ್ಕು ಭಾಗಗಳಾಗಿ ವಿಂಗಡಿಸುವುದು ಕಡ್ಡಾಯ. ಅಡುಗೆಮನೆಯ ತ್ಯಾಜ್ಯ, ಆಹಾರ ಪದಾರ್ಥಗಳನ್ನು ಹಸಿ ತ್ಯಾಜ್ಯವಾಗಿ, ಪ್ಲಾಸ್ಟಿಕ್ ಕಾಗದ, ಗಾಜು, ಲೋಹ ಇತ್ಯಾದಿಗಳನ್ನು ಒಣ ತ್ಯಾಜ್ಯವನ್ನಾಗಿ, ಡೈಪರ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ನೈರ್ಮಲ್ಯ ತ್ಯಾಜ್ಯವನ್ನಾಗಿ, ಬ್ಯಾಟರಿ, ಬಲ್ಬ್, ಇ–ತ್ಯಾಜ್ಯ, ಹಳೆಯ ಔಷಧಗಳನ್ನು ವಿಶೇಷ ಕಾಳಜಿಯ ತ್ಯಾಜ್ಯವನ್ನಾಗಿ ವಿಂಗಡಿಸಲು ನಿಯಮ ರೂಪಿಸಲಾಗಿದೆ.



ಭಾರೀ ದಂಡ ವಿಧಿಸಲು ಅವಕಾಶ

ಹೊಸ ನಿಯಮಗಳ ಪ್ರಕಾರ, ಮನೆಗಳಲ್ಲಿ ಕಸ ವಿಂಗಡಣೆ ಮಾಡದಿದ್ದರೆ ಮೊದಲ ಬಾರಿ ಎಚ್ಚರಿಕೆ ನೀಡಲಾಗುತ್ತದೆ. ಎರಡನೇ ಬಾರಿ 500 ರಿಂದ ರೂ.1,000 ವರೆಗೆ ದಂಡ ವಿಧಿಸಬಹುದಾಗಿದೆ.ದಂಡದ ಮೊತ್ತ ಸ್ಥಳೀಯ ಪಾಲಿಕೆಗಳ ನಿರ್ಧಾರದಂತೆ ಬದಲಾಗಬಹುದು.ಬೃಹತ್ ತ್ಯಾಜ್ಯ ಉತ್ಪಾದಕರು ಹಸಿ ಕಸವನ್ನು ತಮ್ಮ ಆವರಣದಲ್ಲೇ ಸಂಸ್ಕರಿಸದಿದ್ದರೆ, ಪ್ರತಿ ದಿನಕ್ಕೆ 5,000 ದಿಂದ 25,000 ರೂ.ವರೆಗೆ ಭಾರೀ ದಂಡ ವಿಧಿಸಲು ಅವಕಾಶವಿದೆ. ರಸ್ತೆ ಅಥವಾ ಚರಂಡಿಗಳಿಗೆ ಕಸ ಎಸೆದರೆ ತಕ್ಷಣವೇ (ಸ್ಪಾಟ್‌ಫೈನ್) 1,000 ರೂ. ದಂಡ ವಿಧಿಸಲು ಅವಕಾಶವಿದೆ. ನಿಯಮ ಜಾರಿಗೆ ತರಲು ವಿಫಲರಾದ ಅಧಿಕಾರಿಗಳ ಮೇಲೂ ಸುಪ್ರೀಂ ಸೂಚನೆಯಂತೆ ಶಿಸ್ತು ಕ್ರಮ ಜರುಗಿಸುವ ಅವಕಾಶವಿದೆ.

ಬೃಹತ್ ತ್ಯಾಜ್ಯ ಉತ್ಪಾದಕರಿಗೆ ಹೆಚ್ಚಿನ ಜವಾಬ್ದಾರಿ:ವಸತಿ ಸಮುಚ್ಚಯಗಳು ಸರ್ಕಾರಿ ಕಟ್ಟಡಗಳು ಮತ್ತು ವಿಶ್ವವಿದ್ಯಾಲಯಗಳಂತಹ ಬೃಹತ್ ತ್ಯಾಜ್ಯ ಉತ್ಪಾದಕರಿಗೆ ಕಟ್ಟುನಿಟ್ಟಿನ ನಿಯಮ ಮಾಡಲಾಗಿದೆ. ದಿನಕ್ಕೆ 100 ಕೆ.ಜಿ.ಗಿಂತ ಹೆಚ್ಚು ತ್ಯಾಜ್ಯ ಉತ್ಪಾದಿಸುವ ಅಥವಾ 20 ಸಾವಿರ ಚದರ ಮೀಟರ್‌ಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ ಅಥವಾ 40 ಸಾವಿರ ಲೀಟರ್‌ಗಿಂತ ಹೆಚ್ಚು ನೀರು ಬಳಸುವ ಸಂಸ್ಥೆಗಳು ತಮ್ಮ ಆವರಣದಲ್ಲೇ ಹಸಿ ತ್ಯಾಜ್ಯವನ್ನು ಸಂಸ್ಕರಿಸಬೇಕು. ಒಂದು ವೇಳೆ ಇದು ಸಾಧ್ಯವಾಗದಿದ್ದರೆ ಅಧಿಕೃತ ಸಂಸ್ಥೆಗಳಿಂದ ಜವಾಬ್ದಾರಿ ಪ್ರಮಾಣಪತ್ರ ಪಡೆಯುವುದು ಅವಶ್ಯಕವಾಗಿದೆ.



ನೂತನ ಘನತ್ಯಾಜ್ಯ ನೀತಿಯನ್ನು ಬೆಂಗಳೂರು ವ್ಯಾಪ್ತಿಯಲ್ಲೂ ಜಾರಿಗೆ ತರಲಾಗುವುದು. ಈ ಬಗ್ಗೆ ಶ್ರೀಘ್ರದಲ್ಲಿ ಅಧಿಸೂಚನೆ ಹೊರಡಿಸಲಾಗುವುದು.
■ **ಕರೀಗೌಡ, ಬಿಎಸ್‌ಡಬ್ಲ್ಯುಎಂಎಲ್ ಸಿಇಒ**

- ಮರುಬಳಕೆ ಮಾಡಲು ಅಸಾಧ್ಯವಾದ ಮತ್ತು ದಹಿಸಲಾಗದ ಕಸವನ್ನು ಮಾತ್ರ ಭೂಭರ್ತಿ ಕೇಂದ್ರಗಳಿಗೆ ಹಾಕಲು ಅವಕಾಶ.
- ಸಿಮೆಂಟ್ ಕಾರ್ಖಾನೆಗಳು,ಉಷ್ಣ ವಿದ್ಯುತ್ ಸ್ಥಾವರಗಳು ತಮ್ಮ ಇಂಧನ ಬಳಕೆಯಲ್ಲಿ ಶೇ.5 ರಿಂದ 15 ರವರೆಗೆ ಘನತ್ಯಾಜ್ಯದಿಂದ ತಯಾರಿಸಿದ ಇಂಧನವನ್ನು ಬಳಸುವುದು ಕಡ್ಡಾಯ .
- ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿಗರಿಂದ ತ್ಯಾಜ್ಯ ನಿರ್ವಹಣಾ ಶುಲ್ಕವನ್ನು ವಸೂಲಿ ಮಾಡಲು ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ .
- ತ್ಯಾಜ್ಯ ನಿರ್ವಹಣೆಯ ಸಂಪೂರ್ಣ ಪ್ರಕ್ರಿಯೆಯನ್ನು ಮೇಲ್ವಿಚಾರಣೆಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕೇಂದ್ರೀಕೃತ ಆನ್‌ಲೈನ್ ಪೋರ್ಟಲ್ ಅಭಿವೃದ್ಧಿ .

ಸಾರಿಗೆ ನಿಗಮಕ್ಕೆ ರಾಷ್ಟ್ರೀಯ ಪ್ರಶಸ್ತಿ

◆ **ಬೆಂಗಳೂರು:** ಕೆಎಸ್‌ಆರ್‌ಟಿಸಿ ನಿಗಮದಲ್ಲಿನ ಪಾರದರ್ಶಕ ನೇಮಕಾತಿ ಮತ್ತು ಪರಿಣಾಮಕಾರಿ ತರಬೇತಿ ಕಾರ್ಯಕ್ರಮಕ್ಕೆ ಸ್ಕೋಚ್ ಸಂಸ್ಥೆಯು ಕೆಎಸ್‌ಆರ್‌ಟಿಸಿಗೆ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ನಿಗಮವು ಅರ್ಜಿ ಸಲ್ಲಿಕೆಯಿಂದ ಆಯ್ಕೆ ಪ್ರಕ್ರಿಯೆಯವರೆಗೆ, ಘಟಕ ನಿಯೋಜನೆವರೆಗೆ ನೇಮಕಾತಿಯಲ್ಲಿ ಪಾರದರ್ಶಕತೆ ಮತ್ತು ಏಕರೂಪತೆಯನ್ನು ಕಾಪಾಡಿಕೊಂಡು ಮೂಲಕ ಮಾನವ ಹಸ್ತಕ್ಷೇಪವನ್ನು ನಿಲ್ಲಿಸಲಾಗಿದೆ. ತಂತ್ರಜ್ಞಾನ ಆಧಾರಿತ ನೇಮಕಾತಿ ವ್ಯವಸ್ಥೆ, ಸ್ವಯಂ ಚಾಲಿತ ಚಾಲನಾ ಪರೀಕ್ಷೆ, ಆನ್‌ಲೈನ್ ಪರೀಕ್ಷೆ, ದಾಖಲೆಗಳ ಡಿಜಿಟಲ್ ಪರಿಶೀಲನೆ, ವೆಬ್ ಕ್ಯಾಸ್ಟಿಂಗ್, ಆಟೋ ಜನರೇಟಡ್ ಅಂಕಪಟ್ಟಿ ನೀಡುವ ಮೂಲಕ 2000 ಚಾಲಕ, ನಿರ್ವಾಹಕರು, 300 ತಾಂತ್ರಿಕ ಸಿಬ್ಬಂದಿಗಳು, 441 ಅನುಕಂಪ ಆಧಾರದಲ್ಲಿ ಹುದ್ದೆಗಳನ್ನು ನೇಮಕಾತಿ ಮಾಡಲಾಗಿದೆ. ಇದಲ್ಲದೆ, ಕಳೆದ ಆರು ತಿಂಗಳಲ್ಲಿ ಸುಮಾರು 12,000ಕ್ಕೂ ಹೆಚ್ಚು ಸಿಬ್ಬಂದಿಗೆ ಪರಿಣಾಮಕಾರಿ ತರಬೇತಿ ನೀಡಲಾಗಿದ್ದು, ನಿಗಮದ ಸಮಗ್ರ ವಿಷಯ ನಿರೂಪಣೆಯಲ್ಲಿನ ಬದಲಾವಣೆಗೆ ಸಹಕಾರಿಯಾಗಿದೆ. ಇದನ್ನು ಗುರುತಿಸಿದ ಸ್ಕಾಚ್ ಸಂಸ್ಥೆಯು ಕೆಎಸ್‌ಆರ್‌ಟಿಸಿಗೆ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿದೆ. ಇಂಡಿಯಾ ಹ್ಯಾಬಿಟೇಟ್ ಸೆಂಟರ್‌ನಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸ್ಕಾಚ್ ಫೌಂಡೇಶನ್ ಅಧ್ಯಕ್ಷ ಸಮೀರ್ ಕೊಚ್ಚರ್, ಸ್ಕಾಚ್ ಗ್ರೂಪ್ ಉಪಾಧ್ಯಕ್ಷ ಡಾ.ಗುರುಚರಣ್ ಧನ್ಜಾಲ್ ಅವರಿಂದ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.



ಹಿರಿಯರ ಆರೈಕೆಯೂ ಹೆಚ್ಚು ಮುಖ್ಯ

◆ **ಬೆಂಗಳೂರು:** ನಮ್ಮ ನಗರಗಳು ಬೆಳೆದಂತೆ ಮತ್ತು ಜನಸಂಖ್ಯಾಶಾಸ್ತ್ರ ಬದಲಾದಂತೆ ರಚನಾತ್ಮಕ, ವಿಶೇಷ ಹಿರಿಯರ ಆರೈಕೆಯ ಅಗತ್ಯವು ಹೆಚ್ಚು ಮಹತ್ವದ್ದಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಸರ್ಜಾಪುರದಲ್ಲಿ ಚೆರಿ ಕೇರ್ ವತಿಯಿಂದ ಹಿರಿಯ ನಾಗರಿಕರಿಗಾಗಿ ಹೊಸ ಕೌಶಲ್ಯಪೂರ್ಣ ನರ್ಸಿಂಗ್ ಸೌಲಭ್ಯ ಮತ್ತು ಚಿಕಿತ್ಸಾಲಯವನ್ನು ಉದ್ಘಾಟಿಸಿ ಮಾತನಾಡಿ, ಚೆರಿ ಕೇರ್‌ನಂತಹ ಸಂಸ್ಥೆಗಳು ನಮ್ಮ ಹಿರಿಯ ನಾಗರಿಕರಿಗೆ ಆರೋಗ್ಯ ರಕ್ಷಣಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹಿರಿಯರು ತಮ್ಮ ಮನೆಗಳು ಮತ್ತು ಸಮುದಾಯಗಳಿಗೆ ಹತ್ತಿರದಲ್ಲಿ ನಿರಂತರ, ಆರೈಕೆಯನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ಈ ರೀತಿಯ ಸೌಲಭ್ಯಗಳು ನಿರ್ಣಾಯಕವಾಗಿವೆ ಎಂದು ಹೇಳಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ ಮಾತನಾಡಿ, ಎಲ್ಡರ್‌ಕೇರ್ ಕೇವಲ ವೈದ್ಯಕೀಯ ಅಗತ್ಯವಲ್ಲ, ಆದರೆ, ಸಾಮಾಜಿಕ ಜವಾಬ್ದಾರಿಯಾಗಿದೆಂದರು.

ಚೆರಿ ಕೇರ್‌ನಂತಹ ಸಂಸ್ಥೆಗಳು ನಮ್ಮ ಹಿರಿಯರು ನಿಜವಾಗಿಯೂ ಅರ್ಹವಾದ ವಿಶೇಷ ಸಹಾನುಭೂತಿಯ ಆರೈಕೆಯನ್ನು ತಜ್ಞ ವೃದ್ಧ ತಜ್ಞರ ಕೈಯಲ್ಲಿ ಪಡೆಯುವುದನ್ನು ಖಚಿತಪಡಿಸುತ್ತವೆ. ಬೆಂಗಳೂರಿಗೆ ಇಂತಹ ಹೆಚ್ಚಿನ ಉಪಕ್ರಮಗಳು ಬೇಕಾಗುತ್ತವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಚೆರಿ ಕೇರ್‌ನ ಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಲಕ್ಷ್ಮಿಪತಿ ರಮೇಶ್ ಸೇರಿದಂತೆ ಇತರರಿದ್ದರು.



ಪರಪ್ಪನ ಜೈಲಿನಲ್ಲಿ ಮತ್ತೆ ಅಕ್ರಮ

◆ **ಬೆಂಗಳೂರು:** ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗಳು ಸರಣಿಯಾಗಿ ವರದಿಯಾಗುತ್ತಲೇ ಇವೆ. ಡಿಜಿಪಿ ಅಲೋಕ್ ಕುಮಾರ್ ಅವರು ಜೈಲಿನ ವ್ಯವಸ್ಥೆಯನ್ನು ಸುಧಾರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರೂ, ಜೈಲಿನೊಳಗೆ ನಿಷೇಧಿತ ವಸ್ತುಗಳ ಕಳ್ಳಸಾಗಣೆ ಹೆಗ್ಗಿಲ್ಲದೆ ನಡೆಯುತ್ತಿದೆ. ಕೈದಿಗಳು ಜೈಲಿನಲ್ಲೇ ಕುಳಿತು ವಿಡಿಯೋ ಮಾಡಿ ಸುದ್ದಿಯಾದ ಬೆನ್ನಲ್ಲೇ, ಇದೀಗ ಜೈಲಿನೊಳಗೆ ಸಿಮ್ ಕಾರ್ಡ್ ಮತ್ತು ತಂಬಾಕು ಸಾಗಿಸಲು ಯತ್ನಿಸಿದ ಮಹಿಳೆಯೊಬ್ಬಳನ್ನು ಅಧಿಕಾರಿಗಳು ಬಂಧಿಸಿ, ಪರಪ್ಪನ ಅಗ್ರಹಾರ ಠಾಣಾ ಪೊಲೀಸರಿಗೆ ಒಪ್ಪಿಸಿದ್ದಾರೆ.

ತಪಾಸಣೆ ವೇಳೆ ಬಯಲಾದ ಕಳ್ಳಾಟ: ಮಾ.26 ಸಂಜೆ ಸುಮಾರು 4 ಗಂಟೆಯ ಸಮಯದಲ್ಲಿ ಜೈಲಿನ ಸಾಮಾನ್ಯ ಭೇಟಿ ವಿಭಾಗದಲ್ಲಿ ಈ ಘಟನೆ ನಡೆದಿದೆ. ವಿಚಾರಣಾಧೀನ ಕೈದಿ ಫರ್ಹಾನ್ ಖಾನ್ ಎಂಬಾತನನ್ನು ಭೇಟಿ ಮಾಡಲು ರಿತಿಕಾ ರೈ ಎಂಬ ಮಹಿಳೆ ಪಾಸ್ ಪಡೆದು ಬಂದಿದ್ದಳು. ಭೇಟಿಗೆ ಮುನ್ನ ಮಹಿಳಾ ಪೊಲೀಸ್ ಸಿಬ್ಬಂದಿ ಆಕೆಯನ್ನು ತಪಾಸಣೆ ನಡೆಸುತ್ತಿದ್ದಾಗ ಆಕೆಯ ನಡವಳಿಕೆ ಬಗ್ಗೆ ಅನುಮಾನ ಮೂಡಿದೆ. ಕೂಡಲೇ ಸೂಕ್ಷ್ಮವಾಗಿ ಪರಿಶೀಲನೆ ನಡೆಸಿದಾಗ, ಮಹಿಳೆಯು ತನ್ನ ದೇಹದ ಖಾಸಗಿ ಭಾಗದಲ್ಲಿ ಮೂರು ಪ್ಯಾಕೆಟ್ ತಂಬಾಕು ಪದಾರ್ಥಗಳು ಹಾಗೂ ಏರ್ಟೆಲ್ 5ಜಿ ಸಿಮ್ ಕಾರ್ಡ್ ಅಡಗಿಸಿಟ್ಟುಕೊಂಡಿರುವುದು ಪತ್ತೆಯಾಗಿದೆ.

ಜೈಲಿನೊಳಗೆ ನಿಷೇಧಿತ ವಸ್ತುಗಳನ್ನು ಅಕ್ರಮವಾಗಿ ಸಾಗಿಸಲು ಯತ್ನಿಸಿದ ತಕ್ಷಣ ಆಕೆಯನ್ನು ವಶಕ್ಕೆ ಪಡೆದ ಅಧಿಕಾರಿಗಳು, ವಸ್ತುಗಳನ್ನು ವಶಪಡಿಸಿಕೊಂಡು ಪರಪ್ಪನ ಅಗ್ರಹಾರ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಜೈಲು ಅಧೀಕ್ಷಕರು ನೀಡಿದ ದೂರಿನ ಆಧಾರದ ಮೇಲೆ ರಿತಿಕಾ ರೈ , ಕೈದಿ ಫರ್ಹಾನ್ ಖಾನ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಮದ್ಯ ಸೇವಿಸಿ ಚಾಲನೆ: 616 ಪ್ರಕರಣ ದಾಖಲು

◆ **ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿ ಕುಡಿದು ವಾಹನ ಚಲಾಯಿಸುವವರ ವಿರುದ್ಧ ನಗರ ಸಂಚಾರ ಪೊಲೀಸರು ಸಮರ ಸಾರಿದ್ದಾರೆ. ಕಳೆದ ಒಂದು ವಾರದಲ್ಲಿ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಬರೋಬ್ಬರಿ 616 ಡ್ರಂಕ್ ಅಂಡ್ ಡ್ರೈವ್ ಪ್ರಕರಣಗಳು ದಾಖಲಾಗಿವೆ. ನಗರದ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಮಾ.23 ರಿಂದ 29ರ ವರೆಗೆ ಈ ವಿಶೇಷ ತಪಾಸಣೆ ನಡೆಸಲಾಗಿತ್ತು. ಈ ಅವಧಿಯಲ್ಲಿ ಒಟ್ಟು 42,642 ವಾಹನಗಳನ್ನು ತಪಾಸಣೆಗೊಳಪಡಿಸಲಾಗಿದ್ದು, ಈ ಪೈಕಿ 616 ಚಾಲಕರು ಮದ್ಯಸೇವನೆ ಮಾಡಿರುವುದು ದೃಢಪಟ್ಟಿದೆ. ನಿಯಮ ಉಲ್ಲಂಘಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಅತಿ ವೇಗಕ್ಕೂ ದಂಡದ ಬಿಸಿ: ಕೇವಲ ಮದ್ಯಪಾನವಷ್ಟೇ ಅಲ್ಲದೆ, ಅತಿ ವೇಗವಾಗಿ ವಾಹನ ಚಲಾಯಿಸುವವರ ವಿರುದ್ಧವೂ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಅತಿ ವೇಗದ ಚಾಲನೆಗೆ ಸಂಬಂಧಿಸಿದಂತೆ 279 ಪ್ರಕರಣಗಳನ್ನು ದಾಖಲಿಸಿ, ಒಟ್ಟು 2.80 ಲಕ್ಷ ರೂ. ದಂಡ ಸಂಗ್ರಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆಟೋಗೆ ಬೈಕ್ ಡಿಕ್ಕಿ: ಚಾಲಕ ಸಾವು

◆ **ಬೆಂಗಳೂರು:** ಆಟೋ ಚಲಾಯಿಸುತ್ತಿದ್ದಾಗ ದಿಢೀರ್ ಆಗಿ ಬೈಕ್ ಅಡ್ಡ ಬಂದ ಕಾರಣ ಏಕಾಏಕಿ ಬ್ರೇಕ್ ಹಾಕಿದ ಪರಿಣಾಮ ಆಟೋ ಉರುಳಿ ಬಿದ್ದು ಚಾಲಕ ಮೃತಪಟ್ಟಿರುವ ಘಟನೆ ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮೃತ ಆಟೋ ಚಾಲಕನನ್ನು ರಾಜೇಶ್ (45) ಎಂದು ಗುರುತಿಸಲಾಗಿದೆ. ಇವರು ಚಿಕ್ಕಬಸ್ತಿಯ ನಿವಾಸಿಯಾಗಿದ್ದರು. ಭಾನುವಾರ ರಾತ್ರಿ ಸುಮಾರು 8 ಗಂಟೆ ವೇಳೆಯಲ್ಲಿ ರಾಜೇಶ್ ತಮ್ಮ ಆಟೋದಲ್ಲಿ ಸ್ನೇಹಿತ ದೇವರಾಜು (50) ಎಂಬವರನ್ನು ಕರೆದುಕೊಂಡು ವಿಶ್ವೇಶ್ವರಯ್ಯ ಲೇಔಟ್‌ನ 100 ಅಡಿ ರಸ್ತೆಯ ದೊಡ್ಡಬಸ್ತಿ ಬಳಿ ಹೋಗುತ್ತಿದ್ದರು. ಚಾಲಕ ರಾಜೇಶ್ ಹಾಗೂ ಅವರ ಸ್ನೇಹಿತ ದೇವರಾಜು ರಸ್ತೆಗೆ ಉರುಳಿ ಬಿದ್ದಿದ್ದಾರೆ. ತೀವ್ರತೆಗೆ ರಾಜೇಶ್ ಅವರ ತಲೆಗೆ ಪೆಟ್ಟಾಗಿ ರಕ್ತಸ್ರಾವವಾಗಿತ್ತು ಜ್ಞಾನಭಾರತಿ ಸಂಚಾರ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

ರಾಷ್ಟ್ರೀಯ ಜನಗಣತಿಗೆ ಐದು ಪಾಲಿಕೆಗಳಲ್ಲೂ ಸಿದ್ಧತೆ

ಸ್ವಯಂ ಗಣತಿಗೆ ಮುಕ್ತ ಅವಕಾಶ

◆ **ಬೆಂಗಳೂರು:** ಮಹತ್ವದ ರಾಷ್ಟ್ರೀಯ ಜನಗಣತಿ–2027 ರ ಕಾರ್ಯಕ್ಕೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಪಂಚ ಪಾಲಿಕೆಗಳು ಸಿದ್ದವಾಗಿವೆ. ಜನಗಣತಿ–2027 ರ ಮೊದಲ ಹಂತ ಏಪ್ರಿಲ್ 1 ರಿಂದ ಆರಂಭವಾಗಲಿದೆ. ಐದು ಪಾಲಿಕೆಗಳಲ್ಲಿ ಸ್ವಯಂ–ಗಣತಿಗೆ ಏಪ್ರಿಲ್ 1 ರಿಂದ 15 ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಒಂದು ಸುತ್ತಿನ ತರಬೇತಿ : ರಾಷ್ಟ್ರೀಯ ಜನಗಣತಿ–2027 ರ ಕಾರ್ಯಕ್ಕೆ ಪಂಚಪಾಲಿಕೆಗಳು ಅಗತ್ಯ ಪೂರ್ವಭಾವಿ ಕ್ರಮಗಳನ್ನು ಕೈಗೊಂಡಿದ್ದು, ಗಣತಿ ಕಾರ್ಯಕ್ಕೆ ನೇಮಕಗೊಂಡ ಫೀಲ್ಡ್ ಟ್ರೈನರ್‌ಗಳಿಗೆ, ಚಾರ್ಜ್ ಆಫೀಸರ್ಸ್‌ಗಳಿಗೆ, ಕಂದಾಯ ವಿಭಾಗ ಅಧಿಕಾರಿಗಳಿಗೆ, ಟೆಕ್ನಿಕಲ್ ಅಸಿಸ್ಟೆಂಟ್‌ಗಳಿಗೆ ಅಗತ್ಯ ತರಬೇತಿ ನೀಡಲಾಗಿದೆ.

ಸ್ವಯಂ ಗಣತಿ ಕಾರ್ಯಕ್ಕೆ ಅವಕಾಶ: ನಾಗರಿಕರು ತಮ್ಮ ಮನೆ ಹಾಗೂ ಕುಟುಂಬದ ಮೂಲಭೂತ ಮಾಹಿತಿಯನ್ನು ನಿಖರವಾಗಿ ದಾಖಲಿಸುವುದು ಅತ್ಯಂತ ಮಹತ್ವದ್ದಾಗಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಗೃಹ ಮಂತ್ರಾಲಯವು 2027 ರ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲು ಉದ್ದೇಶಿಸಿದೆ. ಮೊದಲ ಹಂತದಲ್ಲಿ ಮನೆಪಟ್ಟಿ ಏ.1 ರಿಂದ ಆರಂಭವಾಗಲಿದೆ. ಮೊದಲ ಹಂತ ಮೊದಲ ಭಾಗದಲ್ಲಿ ಏ.1ರಿಂದ 15ರ ವರೆಗೆ 15 ದಿನಗಳ ಕಾಲ ವೆಬ್ ಪೋರ್ಟಲ್ https://se.census.gov.in ಮೂಲಕ ಸ್ವಯಂ–ಗಣತಿಗೆ ಅವಕಾಶ ಕಲ್ಪಿಸಲಾಗಿದೆ. ಆದರಂತೆ, ಮನೆಯ ಯಾವುದೇ ಒಬ್ಬ ಸದಸ್ಯರು ಸುಮಾರು 15–20 ನಿಮಿಷಗಳ ಅವಧಿಯಲ್ಲಿ ಸ್ವಯಂ–ಗಣತಿ ಮಾಡಿ ಮನೆಯ ವಿವರಗಳನ್ನು ಒದಗಿಸಬಹುದು ಮತ್ತು ಮೊಬೈಲ್, ಇಮೇಲ್‌ನಲ್ಲಿ ಸ್ವಯಂ–ಗಣತಿ ಐಡಿಯನ್ನು ಪಡೆಯಬಹುದಾಗಿರುತ್ತದೆ. ಮೊದಲ ಹಂತದ ಎರಡನೇ ಭಾಗವಾಗಿ ಏ.16 ರಿಂದ ಮೇ.15 ವರೆಗೆ 30 ದಿನಗಳ ಕಾಲ ಗಣತಿದಾರರು ಮನೆ–ಮನೆಗೆ ಭೇಟಿ ನೀಡಿ ಮನೆಪಟ್ಟಿ ಮತ್ತು ಮನೆ ಗಣತಿ ಮಾಹಿತಿಯನ್ನು ಸಂಗ್ರಹಿಸಲಿದ್ದಾರೆ. ಗಣತಿದಾರರು ಮನೆಗೆ ಭೇಟಿ ನೀಡಿದಾಗ ಸ್ವಯಂ–ಗಣತಿ ದತ್ತಾಂಶದ ಅಂತಿಮ ಸಲ್ಲಿಕೆಗಾಗಿ ಸ್ವಯಂ–ಗಣತಿ ಐಡಿಯನ್ನು ಗಣತಿದಾರರೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ.



ಸಾರ್ವಜನಿಕರಲ್ಲಿ ಮನವಿ

ಜಿಬಿಎ ವ್ಯಾಪ್ತಿಯಲ್ಲಿ ಸಾರ್ವಜನಿಕರು ಸ್ವಯಂ ಗಣತಿ ವ್ಯವಸ್ಥೆಯನ್ನು ಬಳಸಿಕೊಂಡು ತಮ್ಮ ಮಾಹಿತಿಯನ್ನು ವೆಬ್ ಪೋರ್ಟಲ್ ಮೂಲಕ ಸಲ್ಲಿಸುವಂತೆ ಹಾಗೂ ಗಣತಿದಾರ ಸಿಬ್ಬಂದಿಗಳಿಗೆ ಸಹಕರಿಸಬೇಕು. ಡಿಜಿಟಲ್ ಜನಗಣತಿಯು ಕೇವಲ ಅಂಕಿ–ಅಂಶಗಳ ಸಂಗ್ರಹವಲ್ಲ, ನಗರದ ಭವಿಷ್ಯದ ಅಭಿವೃದ್ಧಿಗೆ ಬರೆಯುವ ಮುನ್ನುಡಿ. ನಾಗರಿಕರು ಸ್ವಯಂ–ಗಣತಿ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಆಯುಕ್ತರು ಮನವಿ ಮಾಡಿದ್ದಾರೆ.

- ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ಸಂಪೂರ್ಣ ಡಿಜಿಟಲ್ ಜನಗಣತಿ
- ಸ್ವಯಂ–ಗಣತಿಗೆ ಹೆಚ್ಚಿನ ಒತ್ತು

ಆಳ್ವಾಸ್ ವಿದ್ಯಾರ್ಥಿಗಳನ್ನೊಳಗೊಂಡ ಮಂಗಳೂರು ವಿವಿ ರಾಷ್ಟ್ರೀಯ ಮಟ್ಟದ ಖೋ ಖೋ ಪಂದ್ಯಾವಳಿಗೆ ಅರ್ಹತೆ

◆ **ಮೂಡುಬಿದಿರೆ:** ದಾವಣಗೆರೆ ವಿವಿಯಲ್ಲಿ ನಡೆದ ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾನಿಲಯಗಳ ಪುರುಷರ ಖೋ–ಖೋ ಪಂದ್ಯಾವಳಿಯಲ್ಲಿ ಆಳ್ವಾಸ್ ವಿದ್ಯಾರ್ಥಿಗಳನ್ನು ಒಳಗೊಂಡ ಮಂಗಳೂರು ವಿವಿ ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಖೋ ಖೋ ಪಂದ್ಯಾಟಕ್ಕೆ ಅರ್ಹತೆ ಪಡೆದು ಕೊಂಡಿದೆ. ಇದರ ಜೊತೆಯಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯ, ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯ ಹಾಗೂ ಕ್ಯಾಲಿಕಟ್ ವಿಶ್ವವಿದ್ಯಾನಿಲಯಗಳ ತಂಡಗಳು ಅರ್ಹತೆ ಪಡೆದಿವೆ.

ದಕ್ಷಿಣ ವಲಯ ಅಂತರ್ ವಿಶ್ವವಿದ್ಯಾನಿಲಯಗಳ ಈ ನಾಲ್ಕು ತಂಡಗಳ ನಡುವೆ ನಡೆದಂತಹ ಲೀಗ್ ಮಾದರಿಯ ಪಂದ್ಯಾಟದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯತಂಡವುಕ್ಯಾಲಿಕಟ್‌ತಂಡದ ವಿರುದ್ಧ 14 – 04 ಅಂಕಗಳು ಹಾಗೂ ಇನ್ನಿಂಗ್ಸ್ ನಿಂದ ಜಯಶಾಲಿಯಾದರೆ,ಎರಡನೇ ಲೀಗ್ ಪಂದ್ಯಾಟದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ತಂಡವು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವಿರುದ್ಧ 10–04 ಅಂಕಗಳು ಹಾಗೂ ಇನ್ನಿಂಗ್ಸ್ ನಿಂದ ಜಯಶಾಲಿಯಾಗಿದೆ.

ಮಂಗಳೂರು ವಿವಿ ತಂಡ ದಲ್ಲಿ ಒಟ್ಟು 15 ಆಟಗಾರರಲ್ಲಿ 12 ಜನ ಆಟಗಾರರು ಆಳ್ವಾಸ್ ಸಂಸ್ಥೆಯ ವಿದ್ಯಾರ್ಥಿಗಳು. ಆಳ್ವಾಸ್‌ನ ಸಂಗೀತ ಗೌಡನಿಗೆ ಬೆಸ್ಟ್ ಡಿಫೆಂಡರ್ ಪ್ರಶಸ್ತಿ ಲಭಿಸಿದೆ.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ ಮೋಹನ್ ಆಳ್ವ ಮುಂದಿನ ಹಂತದ ಪಂದ್ಯಕ್ಕೆ ಅರ್ಹತೆ ಪಡೆದ ತಂಡದ ಸದಸ್ಯರನ್ನು ಅಭಿನಂದಿಸಿದ್ದಾರೆ.



ಕಿರುಸುದ್ದಿ

ಏ.1-11: ಬಾಲಕಿಯರ ಸಂಸ್ಕೃತಿ ಶಿಕ್ಷಣ ಶಿಬಿರ

• **ಬಂಟ್ವಾಳ:** ಜನ ಕಲ್ಯಾಣ ಟ್ರಸ್ಟ್ ರಾಮನಗರ, ನಾಟ ಶ್ರೀ ಭಯಂಕೇಶ್ವರ ಸದಾಶಿವ ದೇವಸ್ಥಾನ, ನರಿಕೊಂಬು ಇದರ ಆಶ್ರಯದಲ್ಲಿ ಮೈತ್ರೇಯಿ ಗುರುಕುಲ ಮೂರ್ಕಜೆ, ಗ್ರಾಮ ವಿಕಾಸ ಸಮಿತಿ ನರಿಕೊಂಬು-ಶಂಭೂರು ಇದರ ಸಹಯೋಗದೊಂದಿಗೆ ಏ. 1ರಿಂದ 11 ರ ವರೆಗೆ ಬಾಲಕಿಯರ ಸಂಸ್ಕೃತಿ ಶಿಕ್ಷಣ ಶಿಬಿರ ನರಿಕೊಂಬು ಗ್ರಾಮದರಾಮಗಿರಿ-ನಾಟದಲ್ಲಿ ನಡೆಯಲಿದೆ.

ಏ.2 ರಂದು ಬೆಳಗ್ಗೆ 8 ಕ್ಕೆ ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಅವರು ಶಿಬಿರದ ಉದ್ಘಾಟನೆ ನೆರವೇರಿಸಲಿದ್ದಾರೆ. ರಾಷ್ಟ್ರ ಸೇವಿಕಾ ಸಮಿತಿ ಹೊಯ್ಸಳ ಪ್ರಾಂತ ಮಾರ್ಗದರ್ಶಿ ಮಂಡಳಿ ಸದಸ್ಯೆ ಡಾ. ಕಮಲಾ ಪ್ರಭಾಕರ ಭಟ್ ಕಲ್ಲಡ್ಕ ಗೌರವ ಉಪಸ್ಥಿತರಿರುವರು. ರಾಷ್ಟ್ರ ಸೇವಿಕಾ ಸಮಿತಿ ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯವಾಹಿಕ, ಜನಕಲ್ಯಾಣ ಟ್ರಸ್ಟ್ ಸದಸ್ಯೆ ಸಾವಿತ್ರಿ ಸೋಮಯಾಜಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ. ಆಸಕ್ತರು ಮೊ.ಸಂ. 6362220944 ಅಥವಾ 9686707611 ನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಮಡಿಕೇರಿಯಲ್ಲಿಂದು ಜನರಲ್ ತಿಮ್ಮಯ್ಯ ಜನ್ಮ ದಿನಾಚರಣೆ

ಮಡಿಕೇರಿ: ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಜನ್ಮ ದಿನಾಚರಣೆಯು ಮಾ.31 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನ (ಸನ್ನಿಸೈಡ್)ದಲ್ಲಿ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಅವರು ತಿಳಿಸಿದ್ದಾರೆ.

ಶ್ರೀ ದುರ್ಗಾಪರಮೇಶ್ವರೀ ನಾಗಕನ್ನಿಕಾ ಕ್ಷೇತ್ರದಲ್ಲಿ ಇಂದಿನಿಂದ ವಾರ್ಷಿಕ ಜಾತ್ರೆ

• **ಮಂಗಳೂರು:** ಕೊಂಚಾಡಿ ಶ್ರೀ ದುರ್ಗಾಪರಮೇಶ್ವರೀ ನಾಗಕನ್ನಿಕಾ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವವು ಏ. 1 ರಂದು ವೇದಮೂರ್ತಿ ನೀಲೇಶ್ವರ ಕೆ.ಯು.ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಹಾಗೂ ಮೂಲ ನಾಗ ಬ್ರಹ್ಮಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವವು ಬ್ರಹ್ಮಶ್ರೀ ಕುಡುವು ನರಸಿಂಹ ತಂತ್ರಿಗಳ ನೇತೃತ್ವದಲ್ಲಿ ಜರುಗಲಿದೆ.

ಮಾ.31 ರ ರಾತ್ರಿ 7.30 ಕ್ಕೆ ಸಾಮೂಹಿಕ ಪ್ರಾರ್ಥನೆ ನಂತರ ತಂತ್ರಿಗಳ ಉಪಸ್ಥಿತಿಯಲ್ಲಿ ದಂಪತಿಗಳಿಂದ ಗಣ್ಯರ ಉಪಸ್ಥಿತಿಯಲ್ಲಿ ದೀಪ ಪ್ರಜ್ವಲನೆಯೊಂದಿಗೆ ಜಾತ್ರಾ ಮಹೋತ್ಸವದ ಕಾರ್ಯಕ್ರಮಗಳು ಪ್ರಾರಂಭಗೊಳ್ಳಲಿದೆ. ನಂತರ ಪ್ರಾಸಾದ ಶುದ್ಧಿ, ವಾಸ್ತು ರಕ್ಷೋಘ್ನ, ವಾಸ್ತು ಬಲಿ, ಕಲಶ ಪೂಜೆ, ಕಲಶಾಭಿಷೇಕ, ಮಹಾಪೂಜೆ ಜರುಗಲಿದೆ. ಏ. 1 ರಂದು ಬೆಳಿಗ್ಗೆ 6ರಿಂದ ಗಣಹೋಮ, ಬಿಂಬಶುದ್ಧಿ, ಕಲಶಪೂಜೆ, ಕಲಶಾಭಿಷೇಕ. ಶ್ರೀ ನಾಗಕನ್ನಿಕಾ ದೇವಿ ಸನ್ನಿಧಿಯಲ್ಲಿ ಪವಮಾನ ಹೋಮ, ಅಲಂಕಾರ ಪೂಜೆ, ನಾಗದೇವರ ಸನ್ನಿಧಿಯಲ್ಲಿ ನಾಗತಂಬಿಲ, ಆಶ್ಲೇಷ ಬಲಿ, ಕಲಶಾಭಿಷೇಕ ಮಧ್ಯಾಹ್ನ 12.30 ಕ್ಕೆ ಮಹಾ ಪೂಜಾ ಪ್ರಸಾದ ವಿತರಣೆ, ನಂತರ ಮಹಾ ಅನ್ನಸಂತರ್ಪಣೆ, ಸಂಜೆ 6.30 ಕ್ಕೆ ದೀಪಾರಾಧನೆ 7.30ಕ್ಕೆ ಮಹಾಪೂಜೆ ನಂತರ 8 ಕ್ಕೆ ಶ್ರೀದೇವಿಯ ನೃತ್ಯ ಬಲಿ ಸೇವೆ, ಕಟ್ಟೆ ಪೂಜೆ, ಬಟ್ಟಲು ಕಾಣಿಕೆ ಪ್ರಸಾದ ವಿತರಣೆ, ರಾತ್ರಿ 11ಕ್ಕೆ ಕಲ್ಲುರ್ಟಿ ಅಮ್ಮನ ಕೋಲ ಸೇವೆ ಜುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮನೋಜ್ ಕುಮಾರ್‌ಗೆ ಡಾಕ್ಟರೇಟ್ ಪ್ರದಾನ

• **ಸುಬ್ರಹ್ಮಣ್ಯ:** ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ಎಸ್‌ಎಸ್‌ಪಿಯು ಕಾಲೇಜಿನ ಉಪನ್ಯಾಸಕ ಮನೋಜ್ ಕುಮಾರ್ ಬಿ.ಎಸ್. ಅವರಿಗೆ ಮಂಗಳೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.



ಮಂಗಳೂರು ವಿ.ವಿ.ಯ 44ನೇ ಘಟಿಕೋತ್ಸವದಲ್ಲಿ ಕರ್ನಾಟಕದ ರಾಜ್ಯಪಾಲ ಎ. ಥಾವರ್‌ಚಂದ್ ಗೆಹ್ಲೋಟ್ ಪದವಿ ಪ್ರದಾನ ಮಾಡಿದರು. ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಸ್ಮಾರಕ ಮಹಾವಿದ್ಯಾಲಯದ ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ. ತಿಮ್ಮಯ್ಯ ಟಿ.ಡಿ. ಅವರ ಮಾರ್ಗದರ್ಶನದಲ್ಲಿ ಮಂಡಿಸಿದ 'ಎಕಾಮಿಕ್ಸ್ ಆಫ್ ಅರಕನಟ್ ಕಲ್ಟಿವೇಷನ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಸ್ಮಾಲ್ ಫಾರ್ಮರ್ಸ್ ಆಫ್ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್' ಎಂಬ ವಿಷಯದ ಕುರಿತಾಗಿ ಮಂಡಿಸಿದ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿ ಗೌರವಿಸಿದೆ. ಅವರು ಅಜ್ಜಾವರ ಗ್ರಾಮದ ಆತ್ಯಡ್ಕದ ದಿ. ಶ್ರೀಧರ್ ಮತ್ತು ಕಮಲಾಕ್ಷಿ ದಂಪತಿಯ ಪುತ್ರ.



ಉಪ್ಪಳ: ವಿಧಾನ ಸಭಾ ಕ್ಷೇತ್ರದ ಚುನಾವಣೆಗೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿರುವಂತೆ ವಿವಿಧ ಪಕ್ಷದ ಕಾರ್ಯಕರ್ತರು, ನೇತಾರರು ಬಿರುಸಿನಿಂದ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. ಈ ಭಾರಿಯ ಚುನಾವಣೆ ಪೈಪೋಟಿಯಲ್ಲಿ ನಡೆಯುತ್ತಿದ್ದು, ಎಲ್ಲರ ಗಮನ ಮಂಜೇಶ್ವರ ವಿಧಾನಸಭಾ ಕ್ಷೇತ್ರದಲ್ಲಿದೆ. ಈಗಾಗಲೇ ಮೂರು ಪಕ್ಷಗಳ ಪರ್ಯಟನೆ, ಸಾರ್ವಜನಿಕ ಸಭೆ, ಮತದಾರರ ಭೇಟಿ, ಗೃಹ ಸಂಪರ್ಕ ನಡೆಯುತ್ತಿದೆ. ಬಿಜೆಪಿ ಮಂಜೇಶ್ವರ ಮಂಡಲದ ವಿವಿಧ ಪಂಚಾಯತ್‌ನ ಬೂತ್ ಮಟ್ಟದಲ್ಲಿ ಪ್ರಚಾರದ ಹಿನ್ನೆಲೆ ಮಹಾಸಂಪರ್ಕ ಅಭಿಯಾನ ಭಾನುವಾರ ನಡೆಯಿತು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಕಾರ್ಯಕರ್ತರೊಂದಿಗೆ ಬೆಳ್ಳೂರು ಗ್ರಾ.ಪಂ.ವ್ಯಾಪ್ತಿಯ ಕಾಯಿಮಲೆ ಶ್ರೀ ಕೊರಗಜ್ಜ ಸನ್ನಿಧಿಗೆ ತೆರಳಿ ಪ್ರಾರ್ಥನೆ ಸಲ್ಲಿಸಿ ಮತಯಾಚನೆ ನಡೆಸಿದರು.



ಉಪ್ಪಳ: ಮಂಜೇಶ್ವರ ವಿಧಾನಸಭಾ ಕ್ಷೇತ್ರ ಚುನಾವಣೆಯ ಸ್ಪರ್ಧಾ ಕಣದಲ್ಲಿರುವ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್‌ರವರ ಪ್ರಚಾರದ ಹಿನ್ನೆಲೆಯಲ್ಲಿ ಮಂಗಲ್ಪಾಡಿ ಪಂಚಾಯತ್ ವ್ಯಾಪ್ತಿಯ ಹನುಮಾನ್ ನಗರ ಮತ್ತು ಶಾರದಾನಗರ ಸಮುದ್ರ ತೀರಾ ಪ್ರದೇಶದ ಬಿಜೆಪಿ ಸಭೆ ಶಾರದಾನಗರದ ಶ್ರೀ ಶಾರದಾ ಭಜನಾ ಮಂದಿರದಲ್ಲಿ ಭಾನುವಾರ ನಡೆಯಿತು. ಸಭೆಯಲ್ಲಿ ಉಡುಪಿ ಶಾಸಕ ಯಶಪಾಲ್ ಸುವರ್ಣ ಮಾತನಾಡಿದರು. ಬಿಜೆಪಿ ಮುಖಂಡರಾದ ಕೆ.ಪಿ.ವಲ್ಸರಾಜ್, ವಿಜಯಕುಮಾರ್, ದಿನೇಶ್ ಚೆರುಗೋಳಿ, ಜಯಪ್ರಕಾಶ ಸುಳ್ಯ ಮೊದಲಾದವರು ಮಾತನಾಡಿದರು. ಭಾರೀ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿದ್ದರು.

ಇದು ಎಡರಂಗ, ಐಕ್ಯರಂಗ ಒಕ್ಕೂಟಗಳ ಸಾಧನೆ : ರಾಜ್ಯಸಭಾ ಸದಸ್ಯ ಸಿ. ಸದಾನಂದನ್ ಮಾಸ್ಟರ್ ಲೇವಡಿ

ಕೇರಳದಲ್ಲಿ ಉದ್ಯೋಗಾವಕಾಶಗಳ ಕೊರತೆ

• **ಕಾಸರಗೋಡು:** ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ಉತ್ತಮ ಉದ್ಯೋಗಾವಕಾಶಗಳ ಕೊರತೆಯಿಂದಾಗಿ ಎಲ್ಲಾ ಯುವಕರನ್ನು ಕೇರಳದಿಂದ ಹೊರಗೆ ಹೋಗುವಂತೆ ಮಾಡಲಾಗಿದೆ. ಇದರಿಂದಾಗಿ ಕೇರಳವು ಹಿರಿಯ ನಾಗರಿಕರ ರಾಜ್ಯವಾಗಿದೆ. ಇದು ಎಡರಂಗ ಮತ್ತು ಐಕ್ಯ ರಂಗ ಒಕ್ಕೂಟಗಳ ಸಾಧನೆಯಾಗಿದೆ ಎಂದು ರಾಜ್ಯಸಭಾ ಸದಸ್ಯ ಸಿ.ಸದಾನಂದನ್ ಮಾಸ್ಟರ್ ಲೇವಡಿ ಮಾಡಿದ್ದಾರೆ.



ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಎನ್‌ಡಿಎ ಕಾಸರಗೋಡು ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರ ಗೆಲುವಿಗಾಗಿ ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ ಕಚೇರಿಯಲ್ಲಿ ಭಾರತೀಯ ಮಹಿಳಾ ಮೋರ್ಚಾದ ನೇತೃತ್ವದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಮಹಿಳಾ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ಥಳೀಯ ಕಾರ್ಮಿಕರ ಕೊರತೆಯಿಂದಾಗಿ ಕೃಷಿ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳು ಬಿಕ್ಕಟ್ಟಿನಲ್ಲಿವೆ. ಕೇಂದ್ರ ಸರಕಾರದ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಗಳು ಮತ್ತು ಸಾರ್ವಜನಿಕ ಕಲ್ಯಾಣ ಯೋಜನೆಗಳನ್ನು ಹೊರತುಪಡಿಸಿ ಕೇರಳದಲ್ಲಿ ಬೇರೇನೂ ಕಾಣುತ್ತಿಲ್ಲ. ಮಹಿಳಾ ಸ್ನೇಹಿ ನೀತಿಗಳು ಮತ್ತು ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿರುವುದು ನರೇಂದ್ರ ಮೋದಿ ಸರಕಾರದ ಹೆಗ್ಗಳಿಕೆಯಾಗಿದೆ. ಪ್ರಧಾನಿ ಶ್ರೀ ಯೋಜನೆಯನ್ನು ಜಾರಿಗೆ ತಂದಿದ್ದರೆ ಜಿಲ್ಲೆಯ 6 ಶಾಲೆಗಳಲ್ಲಿ ಉತ್ತಮ ಕಲಿಕಾ ವಾತಾವರಣವನ್ನು ಸೃಷ್ಟಿಸಬಹುದಿತ್ತು ಎಂದು ಅವರು ಉದಾಹರಣೆ ಸಹಿತ ವಿವರಿಸಿದರು.

ಶಬರಿಮಲೆ ಸನ್ನಿಧಾನಕ್ಕೆ ಭಕ್ತರು ದಾನ ಮಾಡಿದ ಹಣ ಮತ್ತು ಚಿನ್ನವನ್ನು ಲೂಟಿ ಮಾಡುವ ಮೂಲಕ ರಾಜ್ಯ ಸರಕಾರ, ದೇವಸ್ವಂ ಮಂಡಳಿ ಮತ್ತು ಎಡ ಹಾಗೂ ಐಕ್ಯರಂಗಗಳು ಜನರ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿವೆ. ಈ ವಿಚಾರದಲ್ಲಿ ಪಿಣರಾಯಿ ವಿಜಯನ್ ಹಾಗೂ ಸಿಪಿಎಂ ನಾಯಕತ್ವದೊಂದಿಗೆ ಕಾಂಗ್ರೆಸ್ ಕೂಡಾ ಉತ್ತರಿಸಬೇಕಾಗುತ್ತದೆ ಎಂದು ಸಿ.ಸದಾನಂದನ್ ಮಾಸ್ಟರ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಕೆ.ಎಸ್.ರಮಣಿ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ರಾಜ್ಯ ಸಮಿತಿ ಸದಸ್ಯೆ ಸವಿತಾ ಟೀಚರ್, ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಕಾರ್ಯದರ್ಶಿಗಳಾದ ಪುಷ್ಪಾ ಗೋಪಾಲನ್, ಪ್ರಮೀಳಾ ಮಜಲ್, ಅಶ್ವಿನಿ ಕೆ.ಎಂ., ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಎಸ್.ಶ್ಯಾನುಭೋಗ್, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅನಿತಾ ನಾಯ್ಕ್, ಪ್ರೇಮಲತಾ ಎಸ್. ಮುಂತಾದವರು ಮಾತನಾಡಿದರು.

ಎಣ್ಮಕಜೆಯಲ್ಲಿ ಯುಡಿಎಫ್ ಚುನಾವಣಾ ಪರ್ಯಟನೆ





• **ಮಂಜೇಶ್ವರ:** ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕ, ಯುಡಿಎಫ್ ಅಭ್ಯರ್ಥಿ ಎ.ಕೆ.ಎಂ. ಅಶ್ರಫ್ ಅವರ ಚುನಾವಣಾ ಪ್ರಚಾರ ಪ್ರವಾಸವು ಎಣ್ಮಕಜೆ ಪಂಚಾಯತ್‌ನ ಮುಂಡ್ಯತ್ತಡ್ಕ ಪಳ್ಳತ್‌ನಿಂದ ಪ್ರಾರಂಭವಾಯಿತು. ಕಾಸರಗೋಡು ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಯುಡಿಎಫ್ ಕ್ಷೇತ್ರ ಸಂಚಾಲಕ ಮಂಜುನಾಥ ಆಳ್ವ ಮಡ್ವ ಅಧ್ಯಕ್ಷತೆ ವಹಿಸಿದ್ದರು. ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ, ಕರ್ನಾಟಕ ಪಿಸಿಸಿ ಕಾರ್ಯದರ್ಶಿ ಎ.ಎಸ್.ಮುಹಮ್ಮದ್ ಕುಂಞ, ಹಕೀಂ ಕುನ್ನಿಲ್, ಸೋಮಶೇಖರ ಜೆ.ಎಸ್., ಟಿ.ಎ.ಮೂಸಾ, ಎಂ.ಅಬ್ಬಾಸ್, ಎ.ಕೆ.ಆರಿಫ್, ಹಾರಿಸ್ ಚೂರಿ, ಹರ್ಷದ್ ವರ್ಕಾಡಿ, ಆರ್ಯಿರ್ಯು ಕಳತ್ತೂರು, ಯು.ಕೆ.ಸೈಫುಲ್ಲಾ ತಂಙಳ್, ಡಿ.ಎಂ.ಕೆ. ಮೊಹಮ್ಮದ್, ಲಕ್ಷ್ಮಣ ಪ್ರಭು ಕುಂಬಳೆ, ಪದ್ಮನಾಭ ಪೂಜಾರಿ, ಕುಸುಮಾವತಿ, ಕೃಷ್ಣಪ್ರಸಾದ್ ರೈ ಮುಂತಾದವರು ಮಾತನಾಡಿದರು.

ಕರೀಂ ಕುಡುಪದವು, ಹಾಡಿ ತಂಙಳ್ ಮೊಗ್ರಾಲ್, ಎಂ.ಪಿ.ಖಾಲಿದ್, ಅಬ್ದುಲ್ಲ ಮಾಡೇರಿ, ಅಬೂ ಬಕ್ಕರ್ ಪೆರ್ದನೆ, ಸಿದ್ದೀಕ್ ಒಳಮುಗರು, ಝುಡ್.ಎ.ಕಯ್ಯಾರು, ಎ.ಎ.ಆಯೇಷಾ, ಸಿದ್ದೀಕ್ ದಂಡೆ ಗೋಳಿ, ಎ.ಕೆ.ಶರೀಫ್, ಬಿ.ಎಸ್.ಗಾಂಭೀರ್, ಟಿ.ಎಂ.ಹಮೀದಲಿ ಕಾಂತಲ್, ಅಬ್ದುಲ್ಲ ಕಂಡತ್ತಿಲ್, ಇ.ಕೆ.ಮುಹಮ್ಮದ್ ಕುಂಞ, ರಫೀಕ್ ಕಣ್ಣೂರು ಮುಂತಾದವರು ಭಾಗವಹಿಸಿದ್ದರು. ಅಧ್ಯಕ್ಷ ಅಜೀಜ್ ಸ್ವಾಗತಿಸಿ, ವಂದಿಸಿದರು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಅವರು ಮಧೂರು ಶ್ರೀ ಕಾಳಿಕಾಂಬಾ ಮಠಕ್ಕೆ ಭೇಟಿ ನೀಡಿ ಹಿರಿಯರ ಆಶೀರ್ವಾದ ಪಡೆದು ಮತಯಾಚಿಸಿದರು.

ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಅಶ್ವಿನಿ ಪ್ರವಾಸ

• **ಕಾಸರಗೋಡು:** ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್.ಅಶ್ವಿನಿ ಅವರು ಸೋಮವಾರ ಬೆಳಗ್ಗೆ ವರ್ಕಾಡಿ, ಮಂಜೇಶ್ವರ ಮುಂತಾದ ಕಡೆಗಳಿಗೆ ಭೇಟಿ ನೀಡಿದ ಬಳಿಕ ಕಾಸರಗೋಡು ಮಂಡಲದ ವಿವಿಧೆಡೆ ಪ್ರವಾಸ ಕೈಗೊಂಡು ಮತಯಾಚಿಸಿದರು.

ಅವರು ಮಧ್ಯಾಹ್ನ ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ ಕಚೇರಿಯಲ್ಲಿ ನಡೆದ ಮಹಿಳಾ ಮೋರ್ಚಾದ ಜಿಲ್ಲಾ ನಾಯಕತ್ವ ಸಮಾವೇಶದಲ್ಲಿ ರಾಜ್ಯಸಭಾ ಸದಸ್ಯ ಸಿ.ಸದಾನಂದನ್ ಮಾಸ್ಟರ್ ಅವರೊಂದಿಗೆ ಭಾಗವಹಿಸಿದ್ದರು.



ನಂತರ ಕಾಸರಗೋಡು ನಗರಸಭಾ ವ್ಯಾಪ್ತಿಯ ಎಸ್‌ಸಿ – ಎಸ್‌ಟಿ ಉನ್ನತಿಗಳಿಗೆ (ಕಾಲನಿಗಳಿಗೆ) ಭೇಟಿ ನೀಡಿದರು. ಸಂಜೆ ಕಾಸರಗೋಡು ನಗರಸಭಾ ಬಿಜೆಪಿ ಸಮಿತಿ ಕೋಶಾಧಿಕಾರಿ ಕೆ.ಆರ್. ಹರೀಶ್ ಅವರ ಕುಟುಂಬ ಸದಸ್ಯರನ್ನು ಸಂದರ್ಶಿಸಿ ಬಳಿಕ ಕರಂದಕ್ಕಾಡು ಆಟೋ ನಿಲ್ದಾಣ ಮತ್ತು ನಗರದ ಹಲವೆಡೆಗಳಲ್ಲಿ ಮತಯಾಚಿಸಿದರು. ಅಲ್ಲದೆ ಎಂ.ಎಲ್. ಅಶ್ವಿನಿ ಅವರು ಕಾಸ್ಟೋಸ್ – ಸುನಾಮಿ ಕಾಲನಿ ಮತ್ತು ಎಸ್.ವಿ.ದೇವಸ್ಥಾನ ಮೊದಲಾದ ಕಡೆಗಳಿಗೆ ತೆರಳಿ ಪ್ರಚಾರ ಕಾರ್ಯ ಕೈಗೊಂಡರು.

ಎನ್‌ಡಿಎ ಅಭ್ಯರ್ಥಿಯೊಂದಿಗೆ ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಕೆ.ಎಸ್.ರಮಣಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪ್ರೇಮಲತಾ ಎಸ್. ಮತ್ತು ಅನಿತಾ ನಾಯ್ಕ್, ಜಿಲ್ಲಾ ಕಾರ್ಯದರ್ಶಿ ಮಮತಾ ಸಾಗರ್, ಬಿಜೆಪಿ ನಗರಸಭಾ ಪಶ್ಚಿಮ ವಲಯ ಸಮಿತಿ ಅಧ್ಯಕ್ಷ ಪುರುಷೋತ್ತಮನ್ ಮತ್ತು ಜನಪ್ರತಿನಿಧಿಗಳಾದ ರಾಜೇಶ್ ಜಿ. ಹಾಗೂ ರವೀಂದ್ರ ಪೂಜಾರಿ ಮುಂತಾದವರಿದ್ದರು.

ಏಕಾಏಕಿ ತೃತೀಯ ಭಾಷೆಗೆ ಅಂಕ ನೀಡುವ ಪದ್ಧತಿ ಬದಲು ಗ್ರೇಡ್ ಆರಂಭ

ಆತುರದ ನಿರ್ಧಾರ ಖಂಡನೀಯ: ಶಾಸಕ ಕಾಮತ್

• **ಮಂಗಳೂರು:** ರಾಜ್ಯದಲ್ಲಿ ಏಕಾಏಕಿ ತೃತೀಯ ಭಾಷೆಗೆ ಅಂಕ ನೀಡುವ ಪದ್ಧತಿ ಕೈಬಿಟ್ಟು ಗ್ರೇಡ್ ನೀಡುವುದನ್ನು ಆರಂಭಿಸಿರುವ ಕಾಂಗ್ರೆಸ್ ಸರ್ಕಾರದ ನಿರ್ಧಾರ 'ಆತುರಗಾರನಿಗೆ ಬುದ್ಧಿ ಮಟ್ಟ' ಎನ್ನುವಂತಿದ್ದು, ರಾಜಕೀಯ ತೆವಲಿಗಾಗಿ ವಿದ್ಯಾರ್ಥಿಗಳನ್ನು ಬಲಿಪಶು ಮಾಡುತ್ತಿರುವುದು ಖಂಡನೀಯ ಎಂದು ಶಾಸಕ ವೇದವ್ಯಾಸ ಕಾಮತ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಶಿಕ್ಷಣ ಸಚಿವರು ಇಂತಹ ನಿರ್ಧಾರ ಕೈಗೊಂಡು ಮಕ್ಕಳ ಮೇಲೆ ಎಂತಹ ಪರಿಣಾಮ ಬೀರಿದ್ದಾರೆ ಎಂಬುದು ಅರಿವಿದೆಯೇ? ಸರಕಾರದ ಈ ನಡೆಯಿಂದ ವಿದ್ಯಾರ್ಥಿಗಳು, ಶಿಕ್ಷಕರು, ಹೆತ್ತವರು ಕಂಗಾಲಾಗಿದ್ದಾರೆ. ಸಾಕಷ್ಟು ವಿದ್ಯಾರ್ಥಿಗಳು ನಮ್ಮ ಸ್ಕೋರಿಂಗ್ ಸಬ್ಜೆಕ್ಟ್ ಕಥೆಯೇನು ಎಂದು ಆತಂಕಗೊಳಗಾಗಿದ್ದಾರೆ. ಕೆಲವರು ಈಗಾಗಲೇ ಕೋರ್ಟ್ ಮೊರೆ ಹೋಗಲೂ ತಯಾರಿ ನಡೆಸಿದ್ದು, ತೃತೀಯ ಭಾಷೆ ಬೋಧಿಸುತ್ತಿರುವ ಸುಮಾರು 75 ಸಾವಿರಕ್ಕೂ ಹೆಚ್ಚು ಶಿಕ್ಷಕರು ಎಸೆಸ್ಸೆಲ್ಸಿ ಮೌಲ್ಯಮಾಪನ ಬಹಿಷ್ಕರಿಸಲು ನಿರ್ಧರಿಸಿದ್ದಾರೆ. ಇದಕ್ಕೆಲ್ಲಾ ಕಾಂಗ್ರೆಸ್ ಸರ್ಕಾರದ ಬೇಜವಾಬ್ದಾರಿತನವೇ ನೇರ ಕಾರಣ ಎಂದು ಆರೋಪಿಸಿದರು.

ಈ ನಿರ್ಧಾರದಿಂದ ಹಿಂದಿ ಜೊತೆಗೆ ಸಂಸ್ಕೃತ, ಕೊಂಕಣಿ, ತುಳು ಭಾಷೆಗೂ ಅನ್ಯಾಯವಾಗಲಿದೆ. ಅಲ್ಲದೇ ಮಕ್ಕಳ ಒಂದು ವರ್ಷದ ಪ್ರಯತ್ನಕ್ಕೂ ಬೆಲೆ ಇಲ್ಲವಾಗಿದೆ. ವಾಸ್ತವದಲ್ಲಿ ಶೈಕ್ಷಣಿಕ ವರ್ಷದ ಆರಂಭ ಅಥವಾ ಮುಂದಿನ ಶೈಕ್ಷಣಿಕ ವರ್ಷದಿಂದ ಈ ತೀರ್ಮಾನ ತೆಗೆದುಕೊಳ್ಳಬೇಕಿತ್ತು. ಅಂತಹ ಸೂಕ್ಷ್ಮ ಸಂವೇದನೆ ಇರುವ ಒಬ್ಬೇ ಒಬ್ಬ ಜವಾಬ್ದಾರಿಯುತ ವ್ಯಕ್ತಿಯೂ ಈ ಸರ್ಕಾರದಲ್ಲಿ ಇಲ್ಲವೇ? ಬೆಳೆಯುವ ಮಕ್ಕಳು ಹಲವು ಭಾಷೆಯನ್ನು ಕಲಿತಷ್ಟು ಮುಂದಿನ ಭವಿಷ್ಯಕ್ಕೆ ಒಳ್ಳೆಯದು. ಇಲ್ಲದಿದ್ದರೆ ಮುಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಸಮಸ್ಯೆ ಎದುರಿಸುವಂತಾಗಬಹುದು ಎಂದು ಶಾಸಕರು ಆತಂಕ ವ್ಯಕ್ತಪಡಿಸಿ, ಕೂಡಲೇ ಈ ನಿರ್ಧಾರವನ್ನು ಹಿಂಪಡೆಯುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ರಾಷ್ಟ್ರಮಟ್ಟದ ಪತ್ರ ಬರವಣಿಗೆ: ಕಟೀಲು ಶಾಲೆಯ ವಿದ್ಯಾರ್ಥಿನಿ ಪುಣ್ಯಶ್ರೀ ಪ್ರಥಮ



• **ಕಟೀಲು:** 18 ವರ್ಷ ಒಳಗಿನ ವಿಭಾಗದಲ್ಲಿ ನನ್ನ ಆದರ್ಶ ವ್ಯಕ್ತಿಗೆ ಪತ್ರ ಬರೆಯುವ ರಾಷ್ಟ್ರಮಟ್ಟದ ಪತ್ರ ಬರವಣಿಗೆ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಕಟೀಲು ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ ಪುಣ್ಯಶ್ರೀ ಪ್ರಥಮ ಬಹುಮಾನ ಪಡೆದಿದ್ದು, ರೂ. 25000 ನಗದು ಬಹುಮಾನ ಪಡೆದಿದ್ದಾಳೆ. ಶ್ರೀನಿವಾಸನಗರ ಅಂಚೆ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಹುಮಾನವನ್ನು ನೀಡಲಾಯಿತು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಹೊರೆಕಾಣಿಕೆ ಮೆರವಣಿಗೆ ಸಂಭ್ರಮ | ಧಾರ್ಮಿಕ ಸಭೆಯಲ್ಲಿ ಎಡನೀರು ಮಠಾಧೀಶರ ಆಶೀರ್ವಚನ

ಧರ್ಮ, ಸಂಸ್ಕೃತಿ ಕುರಿತು ನಾವೆಲ್ಲರೂ ಜಾಗೃತರಾಗೋಣ: ಸುಬ್ರಹ್ಮಣ್ಯ ಶ್ರೀ

• **ವಿಟ್ಲ :** ಧರ್ಮದ ಆಧಾರದ ಮೇಲೆ ನಿಂತಿರುವ ಸನಾತನ ಸಂಸ್ಕೃತಿಯನ್ನು ಉಳಿಸುವ ಕಾರ್ಯವನ್ನು ಮಾಡಬೇಕಾಗಿದೆ ಎಂದು ಹೇಳಿದ ಅವರು, ಪ್ರಪಂಚದಲ್ಲಿ ದೇವರ ಮನೆಗೆ ಹೆಚ್ಚು ಮಹತ್ವ ನೀಡಬೇಕು. ನಮ್ಮ ಧರ್ಮ, ಸಂಸ್ಕೃತಿಯನ್ನು ಕಳೆದುಕೊಂಡು ಬದುಕಬಾರದು. ನಮ್ಮದೇ ಆದಂಥ ಆಚರಣೆಗಳನ್ನು ಉಳಿಸಿಕೊಳ್ಳಬೇಕು ಎಂದು ಸುಬ್ರಹ್ಮಣ್ಯ ಮಠಾಧೀಶ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ನುಡಿದರು.

ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಮಾ.30ರಂದು ಸಂಜೆ ಹೊರೆಕಾಣಿಕೆ ಮೆರವಣಿಗೆ ಬಳಿಕ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ನಾವೆಲ್ಲರೂ ಜವಾಬ್ದಾರಿಯುತವಾಗಿ ಧರ್ಮ, ಸಂಸ್ಕೃತಿಯ ಕುರಿತು ಜಾಗೃತರಾಗಬೇಕಾಗಿದೆ. ಜೀರ್ಣೋದ್ಧಾರ, ಮತ್ತು ಬ್ರಹ್ಮಕಲಶೋತ್ಸವದಿಂದ ಇದು ಸಾಕಾರವಾಗಲಿ ಎಂದು ಸ್ವಾಮೀಜಿ ಹೇಳಿದರು.

ಕಲೆ, ಸಂಸ್ಕೃತಿಯ ಬೆಳವಣಿಗೆಗೆ ಪದ್ಯಾಣದವರ ಕೊಡುಗೆ ಅಪಾರವಾಗಿದೆ. ಭಕ್ತಿಯನ್ನು ಶಕ್ತಿಯಾಗಿ ಸ್ಥಾಪಿಸಲು ಧರ್ಮ ಅಗತ್ಯ ಎಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಟರಾಜನ ಮೂರ್ತಿಯನ್ನು ಅನಾವರಣಗೊಳಿಸಿದ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿ ಹೇಳಿದರು.



ಹೊರೆಕಾಣಿಕೆ ಮೆರವಣಿಗೆಗೆ ಚಾಲನೆ

ಮಿತ್ತನಡ್ಕದಲ್ಲಿ ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಂನ ಶ್ರೀ ಗುರುದೇವಾನಂದ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡಿದರು. ಈ ಸಂದರ್ಭ, ಶ್ರೀಧಾಮ ಮಾಣಿಲದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ, ಕಣಿಯೂರು ಶ್ರೀ ಮಹಾಬಲೇಶ್ವರ ಸ್ವಾಮೀಜಿ ಉಪಸ್ಥಿತರಿದ್ದು ಶುಭ ಹಾರೈಸಿದರು.

ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ರಾಜೇಶ್ ರೈ ಕಲ್ಲಂಗಳ ಮಾತನಾಡಿ, ಧರ್ಮದ ಕಾರ್ಯದಲ್ಲಿ ತೊಡಗಿದರೆ, ನ್ಯಾಯದ ಪರಿಪಾಲನೆ ಸಾಧ್ಯವಾಗುತ್ತದೆ. ದೇಶದಲ್ಲಿ ನ್ಯಾಯಾಲಯಗಳು ವ್ಯಾಜ್ಯಗಳಿಂದ ತುಂಬಿ ತುಳುಕುತ್ತಿದೆ, ಧರ್ಮದ ಹಾದಿಯಲ್ಲಿ ನಡೆದರೆ ಕಡಿಮೆಯಾಗಬಹುದು. ದಕ್ಷಿಣ ಕನ್ನಡದ ಜನರು ಧರ್ಮದ ಕುರಿತು ಜಾಗೃತರಾಗಿರುವುದು ಪ್ರಗತಿಯ ಸಂಕೇತ ಎಂದರು.

ವೇ.ಮೂ.ಹಿರಣ್ಯ ವೆಂಕಟೇಶ್ವರ ಭಟ್ ಧಾರ್ಮಿಕ ಉಪನ್ಯಾಸ ನೀಡಿದರು. ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳ ಸಿಇಒ (ಐಟಿ) ಪೂರಣ್ ವರ್ಮ, ವಿಟ್ಲ ನವಿಲುಬಸದಿಯ ಅಧ್ಯಕ್ಷ ಜಿತೇಶ್, ಉದ್ಯಮಿ ದರ್ಶನ್, ಕರೋಪಾಡಿ ಸಿಎ ಬ್ಯಾಂಕ್ ಅಧ್ಯಕ್ಷ ಆನೆಯಾಲಕೋಡಿ ವಿಘ್ನೇಶ್ವರ ಭಟ್, ಕಸಾಪ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು, ಕಸಾಪ ಮಾಜಿ ಜಿಲ್ಲಾಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ, ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿ ದಿನೇಶ್ ಅಮ್ಟೂರು, ಬಿಜೆಪಿ ಪುತ್ತೂರು ಗ್ರಾಮಾಂತರ ಮಂಡಲ ಅಧ್ಯಕ್ಷ ದಯಾನಂದ ಉಜಿರೆಮಾರು, ರವಿ ಇಳಂತಿಲ, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಪದ್ಯಾಣ ತಿಮ್ಮಣ್ಣ ಭಟ್ಟ, ಪದ್ಯಾಣ ರಘುರಾಮ ಕಾರಂತ, ಅಧ್ಯಕ್ಷ ಅರವಿಂದ ಪದ್ಯಾಣ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಡಾ. ಅರುಣ ಶ್ಯಾಮ, ಸಂಚಾಲಕ ಸೇರಾಜೆ ಗೋಪಾಲಕೃಷ್ಣ ಭಟ್, ಕಾರ್ಯಾಧ್ಯಕ್ಷ ಶಾಮಸುದರ್ಶನ ಹೊಸಮೂಲೆ, ಕಾರ್ಯದರ್ಶಿ ಕೃಷ್ಣ ಎಂ.ಆರ್. ಕಡಬ, ಸಂಘಟನಾ ಕಾರ್ಯದರ್ಶಿ ಶಿವಪ್ರಸಾದ ಶೆಟ್ಟಿ ಆನೆಯಾಲಗುತ್ತು, ಹೊರೆಕಾಣಿಕೆ ಸಮಿತಿ ಸಂಚಾಲಕ ಪಟ್ಲಗುತ್ತು ವಿನೋದ್ ಶೆಟ್ಟಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಹೊರೆಕಾಣಿಕೆಯ ಯಶಸ್ಸಿನಲ್ಲಿ ಪಾಲ್ಗೊಂಡರು.

ಅಧ್ಯಕ್ಷತೆಯನ್ನು ಮುಗುಳಿ ತಿರುಮಲೇಶ್ವರ ಭಟ್ ವಹಿಸಿದ್ದರು. ಆಡಳಿತ ಮೊಕ್ತೇಸರ ಸೇರಾಜೆ ಸತ್ಯನಾರಾಯಣ ಭಟ್ ಸ್ವಾಗತಿಸಿದರು. ಬ್ರಹ್ಮಕಲಶೋತ್ಸವ ಕಾರ್ಯದರ್ಶಿ ಈಶಾನ್ಯ ಪದ್ಯಾಣ ವಂದಿಸಿದರು. ಹೇಮಾ ಜಯರಾಮ ರೈ ಮತ್ತು ರೇಣುಕಾ ಕಣಿಯೂರು ಕಾರ್ಯಕ್ರಮ ನಿರ್ವಹಿಸಿದರು. ಚೈತನ್ಯಕೃಷ್ಣ ಪದ್ಯಾಣ ಮದ್ದಳೆಯಲ್ಲಿ ಹಾಗೂ ರವಿಚಂದ್ರ ಪದ್ಯಾಣ ಭಾಗವತಿಕೆಯ ಮೂಲಕ ಪ್ರಾರ್ಥನೆ ನೆರವೇರಿಸಿದರು. ಮೆರವಣಿಗೆಯಲ್ಲಿ ಶಿವಲಿಂಗವನ್ನು ಹೊತ್ತುಕೊಂಡು ಬಂದು ಸಭಾಂಗಣದ ಎದುರು ನಿಲ್ಲಿಸಿದ್ದು ಗಮನ ಸೆಳೆಯಿತು. ಬಳಿಕ ಜ್ಯೂನಿಯರ್ ಶಂಕರ್ ಬಳಗದಿಂದ ಜಾದೂ ನಡೆಯಿತು.

ಸನ್ಮಾನ

ಮಲಾರಬೀಡು ರವೀಂದ್ರನಾಥ ಆಳ್ವ ಮತ್ತು ದೈವನರ್ತಕ ಗಣೇಶ್ ಪಂಬದ ಚಿಪ್ಪಾರು ಅವರನ್ನು ಬಿಲ್ವಪತ್ರ ಮತ್ತು ರುದ್ರಾಕ್ಷಿ ಗಿಡದ ವಿಶೇಷ ಸ್ಮರಣಿಕೆಯೊಂದಿಗೆ ಸನ್ಮಾನಿಸಲಾಯಿತು.

ಹೊಸ ಆವೃತ್ತಿಯಲ್ಲೂ ಮುಂದುವರಿದ ಸಿಎಸ್‌ಕೆ ಕಳಪೆ ಬ್ಯಾಟಿಂಗ್

ಚೆನ್ನೈಗೆ ಹೀನಾಯ ಸೋಲು





◆ **ಗುವಾಹಟಿ:** ಮಹೇಂದ್ರ ಸಿಂಗ್ ಧೋನಿ ಅನುಪಸ್ಥಿತಿಯಲ್ಲಿ ಸೋಮವಾರ ಮೈದಾನಕ್ಕಿಳಿದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ರಾಜಸ್ಥಾನ ರಾಯಲ್ಸ್ ವಿರುದ್ಧ ಹೀನಾಯ ಪ್ರದರ್ಶನವನ್ನು ನೀಡಿತು. ಇದರೊಂದಿಗೆ ಐಪಿಎಲ್ 2026ರಲ್ಲಿ ಸೋಲಿನೊಂದಿಗೆ ಆರಂಭಿಸಿದೆ. 128 ರನ್‌ಗಳ ಸುಲಭ ಗುರಿಯನ್ನು ಬೆನ್ನತ್ತಿದ ರಾಯಲ್ಸ್, ಐದು ಬಾರಿಯ ಚಾಂಪಿಯನ್ ಸಿಎಸ್‌ಕೆ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಸೂರ್ಯವಂಶಿ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ರಾಜಸ್ಥಾನ ರಾಯಲ್ಸ್ ಪವರ್‌ಪ್ಲೇನಲ್ಲಿ 74 ರನ್ ಕಲೆಹಾಕಿತು. ರಾಯಲ್ ಗೆಲುವಿನೊಂದಿಗೆ ರಾಜಸ್ಥಾನ ಭರ್ಜರಿ ಶುಭಾರಂಭ ಮಾಡಿ ಹಿರಿಹಿರಿ ಹಿಗ್ಗಿದೆ.

ಸಿಎಸ್‌ಕೆ 127ಕ್ಕೆ ಸರ್ವಪತನ!: ಟಾಸ್ ಗೆದ್ದ ರಾಜಸ್ಥಾನ ನಾಯಕ ರಿಯಾನ್ ಪರಾಗ್ ಕ್ಷೇತ್ರರಕ್ಷಣೆ ಆಯ್ದುಕೊಂಡಿದ್ದರು. ಭಾರತದ ಟಿ20 ವಿಶ್ವಕಪ್ ಗೆಲುವಿನ ರೂವಾರಿಯಾಗಿ ಬೀಗಿದ್ದ ಸಂಜು ಸ್ಯಾಮ್ಸನ್ (6) ಐಪಿಎಲ್ 2026ರ ಆವೃತ್ತಿಯ ಮೊದಲ ಪಂದ್ಯದಲ್ಲಿ ಬೇಗನೆ ಪೆವಿಲಿಯನ್ ಸೇರಿ ನಿರಾಸೆ ಮೂಡಿಸಿದರು. ಒಂದು ಬೌಂಡರಿ ಹೊಡೆದಿದ್ದ ಸ್ಯಾಮ್ಸನ್ ವೇಗಿ ನ್ಯಾಂಡ್ರೆ ಬರ್ಗರ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆಗಿದ್ದರು. ವೇಗಿ ಜೊಫ್ರಾ ಆರ್ಚರ್ ಎಸೆತವನ್ನು ಆಕರ್ಷಕ ಕವರ್ ಡ್ರೈ ಹೊಡೆದಿದ್ದ ನಾಯಕ ಋತುರಾಜ್ ಗಾಯಕ್ವಾಡ್ (6) ಮುಂದಿನ ಎಸೆತದಲ್ಲೇ ಬೌಲ್ಡ್ ಆಗಿದ್ದರು. ಗಾಯಕ್ವಾಡ್ ಬಳಿಕ ಕ್ರೀಸ್‌ಗಿಳಿದ ಯುವ ಬ್ಯಾಟರ್ ಆಯುಷ್ ಮಾತ್ರೆ (0) ಎತ್ತರದಲ್ಲಿ ಬಂದಿದ್ದ ಎಸೆತವನ್ನು ಹುಕ್ ಮಾಡುವ ಯತ್ನದಲ್ಲಿ ಬರ್ಗರ್‌ಗೆ ವಿಕೆಟ್ ಒಪ್ಪಿಸಿದರು.

ವೈಭವ್ 15 ಎಸೆತಗಳ ಫಿಫ್ಟಿ

ಸೂಪರ್ ಕಿಂಗ್ಸ್ ಬೌಲರ್‌ಗಳನ್ನು ನೆಟ್ಸ್‌ನಲ್ಲಿ ಆಡುವಂತೆ ದಂಡಿಸಿದ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ 15 ಎಸೆತಗಳಲ್ಲೇ ಅರ್ಧಶತಕ ದಾಖಲಿಸಿದರು. ನೂರ್ ಅಹ್ಮದ್ ಎಸೆತವನ್ನು ಲಾಂಗ್ ಆನ್ ಕ್ಷೇತ್ರದಲ್ಲಿ ಸಿಕ್ಸರ್‌ಗೆ ಎತ್ತುವುದರೊಂದಿಗೆ ತಮ್ಮ ಎಂದಿನ ಶೈಲಿಯಲ್ಲೇ ಅರ್ಧಶತಕ ಪೂರೈಸಿದರು. ಕಂಬೋಜ್ ಎಸೆತದಲ್ಲಿ ಡೀಪ್ ಎಕ್ಸ್‌ಟ್ರಾ ಕವರ್‌ನಲ್ಲಿ ಬೌಂಡರಿ ಹೊಡೆಯುವ ಪ್ರಯತ್ನದಲ್ಲಿದ್ದಾಗ ಸರ್ಫರಾಜ್ ಅಹ್ಮದ್ ಮುಂದಕ್ಕೆ ಓಡುತ್ತಾ ಡೈವ್ ಮಾಡಿ ಅದ್ಭುತ ಕ್ಯಾಚ್ ಪಡೆದಿದ್ದರು. 17 ಎಸೆತಗಳನ್ನು ಎದುರಿಸಿದ್ದ ವೈಭವ್ 4 ಬೌಂಡರಿ ಮತ್ತು 5 ಸಿಕ್ಸರ್‌ಗಳೊಂದಿಗೆ 305.88 (306) ಸ್ಟ್ರೈಕ್‌ರೇಟ್‌ನಲ್ಲಿ ಬ್ಯಾಟ್ ಬೀಸಿದ್ದರು.

- ಸೂರ್ಯವಂಶಿ 306 ಸ್ಟ್ರೈಕ್‌ರೇಟ್, 2026ರ ಆವೃತ್ತಿಯಲ್ಲಿ ಅತ್ಯಧಿಕ ಸ್ಟ್ರೈಕ್ ರೇಟ್ ದಾಖಲೆ
- ಟಾಸ್‌ಗೆ ಮುನ್ನ ಮಳೆ, ಪಂದ್ಯ ತುಸು ತಡವಾಗಿ ಆರಂಭ
- ಮಾಜಿ ತಂಡದ ವಿರುದ್ಧ 2 ಪ್ರಮುಖ ವಿಕೆಟ್ ಕಿತ್ತು ಜಡೇಜ ಶೈನ್

ಪವರ್‌ಪ್ಲೇ ಓವರ್‌ಗಳಲ್ಲಿ ಸಿಎಸ್‌ಕೆ 4 ವಿಕೆಟ್ ಕಳೆದುಕೊಂಡು 41 ರನ್ ಗಳಿಸಿ ಸಂಕಷ್ಟದಲ್ಲಿತ್ತು. ಆದರೆ ಮತ್ತೆ ಇನ್ನಷ್ಟು ಸಂಕಷ್ಟಗಳನ್ನು ಎದುರಿಸಿತು. ಕೇವಲ 2 ರನ್ ಮಾಡಿದ್ದ ಮ್ಯಾಥ್ಯೂ ಶಾರ್ಟ್ ತಮ್ಮ ಹೆಸರಿನಂತೆ ಶಾರ್ಟ್ ಇನ್ನಿಂಗ್ಸ್ ಆಡಿದ್ದು, ಸಂದೀಪ್ ಶರ್ಮಾಗೆ ವಿಕೆಟ್ ಒಪ್ಪಿಸಿದರು. ಕ್ರೀಸ್‌ಗಿಳಿದ ಶಿವಂ ದುಬೆ (6) ಸ್ಫೋಟಕ ಆಟ ಆಡುವಂತೆ ತೋರಿಸಿದ್ದು, ಮಾಜಿ ಸಿಎಸ್‌ಕೆ ಆಟಗಾರ ರವೀಂದ್ರ ಜಡೇಜ ಮೇಲೆ ಒತ್ತಡ ಹಾಕುವ ಪ್ರಯತ್ನದಲ್ಲಿ ತಾವೇ ವಿಕೆಟ್ ಒಪ್ಪಿಸಿದ್ದರು. ಸ್ಫೋಟಕ ಆಟ ಪ್ರದರ್ಶಿಸಲು ಹೊರಟ ಸರ್ಫರಾಜ್ (17) ಸಹ ಜಡೇಜ ಸ್ಪಿನ್ ಮೋಡಿಗೆ ಬೆಪ್ಪಾಗಿ ಪೆವಿಲಿಯನ್ ಸೇರಿದ್ದರು. ಮೊದಲ ಹತ್ತು ಓವರ್‌ಗಳಲ್ಲಿ ಸಿಎಸ್‌ಕೆ ಸ್ಕೋರ್ 6 ವಿಕೆಟ್ ನಷ್ಟಕ್ಕೆ 70 ರನ್, ಮುಂದಿನ 10 ಓವರ್‌ಗಳಲ್ಲಿ ಸಿಎಸ್‌ಕೆ ಕಲೆಹಾಕಿದ ರನ್ ಕೇವಲ 57 ರನ್.

ಓವರ್‌ಟನ್ ಹೋರಾಟ ವ್ಯರ್ಥ: ಇಂಗ್ಲೆಂಡ್ ಬ್ಯಾಟರ್ ಜೇಮಿ ಓವರ್‌ಟನ್ ಅವರ ಏಕಾಂಗಿ ಹೋರಾಟದ ಫಲವಾಗಿ ಸಿಎಸ್‌ಕೆ ಸ್ಕೋರ್ 120 ದಾಟಿತು. 36 ಎಸೆತಗಳನ್ನು ಎದುರಿಸಿದ್ದ ಓವರ್‌ಟನ್ 2 ಬೌಂಡರಿ ಮತ್ತು 2 ಸಿಕ್ಸರ್‌ಗಳೊಂದಿಗೆ 43 ರನ್ ಗಳಿಸಿದ್ದು, ಕೊನೆಯ ಓವರ್‌ನಲ್ಲಿ ಎರಡನೇ ರನ್ ಕಸಿಯುವ ಯತ್ನದಲ್ಲಿ ರನೌಟಾಗಿದ್ದರು.

ಸಂಕ್ಷಿಪ್ತ ಸ್ಕೋರ್

ಚೆನ್ನೈ ಸೂಪರ್ ಕಿಂಗ್ಸ್ 127/10 (19.4)
ಓವರ್‌ಟನ್ 43(36), ಕಾರ್ತಿಕ್ 18(15), ಸರ್ಫರಾಜ್ 17(12), ಆರ್ಚರ್ 19ಕ್ಕೆ 2, ಬರ್ಗರ್ 26ಕ್ಕೆ 2, ಜಡೇಜ 18ಕ್ಕೆ 2

ರಾಜಸ್ಥಾನ್ ರಾಯಲ್ಸ್ 128/2 (12.1)
ಜೈಸ್ವಾಲ್ 38(36)★, ವೈಭವ್ 52(17), ಜ್ಯೂರೆಲ್ 18(9), ಪರಾಗ್ 14(11)★
ಕಂಬೋಜ್ 27ಕ್ಕೆ 2

ಭಾರತ ಟಿ20 ತಂಡದಿಂದ ಕಡೆಗಣಿಸಲ್ಪಟ್ಟ ಐಕಾನ್ ಆಟಗಾರರ ನಡುವೆ ಸ್ಪರ್ಧೆ

ಕಿಂಗ್ಸ್ ತವರಿನಲ್ಲಿ ಟೈಟನ್ಸ್ ಕದನ

◆ **ಚಂಡೀಗಢ:** ಐಪಿಎಲ್ 19ನೇ ಆವೃತ್ತಿಯ ನಾಲ್ಕನೇ ಪಂದ್ಯದಲ್ಲಿ ಮಂಗಳವಾರ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ಮತ್ತು ಶುಭ್ಮನ್ ಗಿಲ್ ನೇತೃತ್ವದ ಗುಜರಾತ್ ಟೈಟನ್ಸ್ ಸೆಣಸಾಡಲಿವೆ. ಪಂಜಾಬ್ ತನ್ನ ತವರಿನ ಗೆಲುವಿನ ದಾಖಲೆ ಉತ್ತಮಗೊಳಿಸಲು ಹೋರಾಡಲಿದೆ.

ಟಿ20 ರಾಷ್ಟ್ರೀಯ ತಂಡದಿಂದ ಕಡೆಗಣಿಸಲ್ಪಟ್ಟ ಬ್ಯಾಟರ್‌ಗಳಾದ ಶುಭ್ಮನ್ ಮತ್ತು ಶ್ರೇಯಸ್ ಸದ್ಯ ಐಪಿಎಲ್‌ನಲ್ಲಿ ಫ್ರಾಂಚೈಸಿಗಳ ನಾಯಕತ್ವ ವಹಿಸಿದ್ದು, ಮಂಗಳವಾರ ಚಂಡೀಗಢದಲ್ಲಿ ನಡೆಯಲಿರುವ ಹೈ-ವೋಲ್ಟೇಜ್ ಆರಂಭಿಕ ಪಂದ್ಯದಲ್ಲಿ ಸಾಮರ್ಥ್ಯ ಪ್ರದರ್ಶನಕ್ಕೆ ಸಿದ್ಧರಾಗಿದ್ದಾರೆ.

ಹೊಸ ಆವೃತ್ತಿಯಲ್ಲಿ ಶುಭಾರಂಭಕ್ಕಾಗಿ ಸೆಣಸಾಟ

ಟೈಟನ್ಸ್‌ನಲ್ಲಿ ಜೋಸ್ ಬಟ್ಲರ್, ಸಾಯಿ ಸುದರ್ಶನ್ ಸೇರಿದಂತೆ ಬಲಿಷ್ಠ ಬ್ಯಾಟಿಂಗ್ ಇರುವ ಸ್ಥಿರ ತಂಡವೆಂದೇ ಪರಿಗಣಿಸಲ್ಪಟ್ಟಿದೆ. ಪ್ರಭ್‌ಸಿಮ್ರನ್ ಸಿಂಗ್ ಮತ್ತು ಪ್ರಿಯಾಂಶ್ ಆರ್ಯಾ ಅವರ ಸ್ಫೋಟಕ ಆರಂಭಿಕ ಜೋಡಿ ಪಂಜಾಬ್ ಕಿಂಗ್ಸ್‌ನಲ್ಲಿದೆ. ಬ್ಯಾಟಿಂಗ್ ಆಲ್‌ರೌಂಡರ್ ಮಾರ್ಕಸ್ ಸ್ಟೊಯ್ನಿಸ್, ಲೆಗ್ ಸ್ಪಿನ್ನರ್ ಯುಜ್ವೇಂದ್ರ ಚಹಲ್ ಅವರಂತಹ ಅನುಭವಿ ಟಿ20 ಆಟಗಾರರಿದ್ದಾರೆ.

ಶುಭ್ಮನ್‌ಗೆ ಟಿ20 ಅಗ್ನಿ ಪರೀಕ್ಷೆ : ಭಾರತದ ಟೆಸ್ಟ್ ಮತ್ತು ಏಕದಿನ ನಾಯಕ ಗಿಲ್, ಟಿ20 ಉಪನಾಯಕನಾಗಿ ನೇಮಕಗೊಂಡಿದ್ದರೂ ಕಳಪೆ ಬ್ಯಾಟಿಂಗ್ ಪ್ರದರ್ಶನದ ಕಾರಣದಿಂದ ಟಿ20 ವಿಶ್ವಕಪ್ ತಂಡದಿಂದ ಹೊರಗುಳಿಯಬೇಕಾಯಿತು. ಹೀಗಾಗಿ ಟಿ20 ಮಾದರಿಯಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಬೇಕಾದ ಒತ್ತಡದಲ್ಲಿದ್ದಾರೆ. ಭಾರತವು ದಾಖಲೆಯ ಮೂರನೇ ಐಸಿಸಿ ಟಿ20 ವಿಶ್ವಕಪ್ ಗೆದ್ದಿದ್ದರೂ, ಗಿಲ್ ಈ ಆವೃತ್ತಿಯಲ್ಲಿ ತನ್ನ ಟಿ20 ವೃತ್ತಿಜೀವನದ ಮಹತ್ವದ ಹಂತದಲ್ಲಿ ಪ್ರವೇಶಿಸುತ್ತಿದ್ದಾರೆ.

2023ರಿಂದ ಈವರೆಗೆ ಐಪಿಎಲ್‌ನಲ್ಲಿ ವಿರಾಟ್ ಕೊಹ್ಲಿ ಮಾತ್ರ ಗಿಲ್‌ಗಿಂತ ಹೆಚ್ಚು ರನ್ ಗಳಿಸಿದ್ದಾರೆ. ಆದರೆ ಗಮನ ಸ್ಥಿರತೆಯಿಂದ ಸ್ಟ್ರೈಕ್‌ರೇಟ್ ಕಡೆಗೆ ತಿರುಗಿದೆ. ಮ್ಯಾಥ್ಯೂ ಹೇಡನ್ ಟೈಟನ್ಸ್ ಹೊಸ ಬ್ಯಾಟಿಂಗ್ ಕೋಚ್ ಆಗಿ ನೇಮಕಗೊಂಡಿದ್ದು, ಗಿಲ್ ಸಿಕ್ಸರ್ ಹೊಡೆಯುವ ಸಾಮರ್ಥ್ಯ ಮತ್ತು ಆರಂಭಿಕ ಹಂತದಲ್ಲಿನ ಆಕ್ರಮಣಕಾರಿ ಇರಾದೆ ಮೇಲೆ ಹೆಚ್ಚಿನ ಗಮನವಿರಲಿದೆ.

ಪಿಚ್ ರಿಪೋರ್ಟ್

ಚಂಡೀಗಢದ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಸ್ಟೇಡಿಯಂ ಸಮತೋಲನದ ಪಿಚ್ ಹೊಂದಿದ್ದು, ಇಲ್ಲಿ ತಂಡಗಳು 180ರಿಂದ 200 ರನ್ ಸ್ಕೋರ್ ಮಾಡುವ ನಿರೀಕ್ಷೆಯಿದೆ. ದ್ವಿತೀಯ ಇನ್ನಿಂಗ್ಸ್‌ನಲ್ಲಿ ಮಂಜಿನ ಹನಿ ಬೀಳುವ ಕಾರಣ ಬೌಲಿಂಗ್ ಕಷ್ಟವಾಗಲಿದ್ದು, ಟಾಸ್ ಗೆದ್ದವರು ಬೌಲಿಂಗ್ ಆಯ್ಕೆ ಮಾಡುವ ಸಾಧ್ಯತೆಯಿದೆ.

ಪಂದ್ಯದ ಮಾಹಿತಿ

(ಪಂಜಾಬ್-ಗುಜರಾತ್), ಚಂಡೀಗಢ, ಸಂಜೆ 7.30ಕ್ಕೆ
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್





ಟೈಟನ್ಸ್‌ಗೆ ಸುದರ್ಶನ ಬಲ

ಗುಜರಾತ್ ಟೈಟನ್ಸ್ ಅತ್ಯಂತ ಸಮತೋಲನದ ತಂಡವಾಗಿ ಕಾಣಿಸಿಕೊಂಡಿದೆ. 20 ಆಟಗಾರರನ್ನು ಉಳಿಸಿಕೊಂಡಿದ್ದು ಟೈಟನ್ಸ್ ಸ್ಥಿರತೆಯನ್ನು ತೋರಿಸುತ್ತದೆ. ಗಿಲ್ ಮತ್ತು ಸಾಯಿ ಸುದರ್ಶನ್ ಅವರ ಆರಂಭಿಕ ಜೋಡಿ ಗುಜರಾತ್ ತಂಡದ ಪ್ರಮುಖ ಶಕ್ತಿ. 2025ರ ಆರೆಂಜ್ ಕ್ಯಾಪ್ ಪಡೆದಿದ್ದ ಸುದರ್ಶನ್ 1 ಶತಕ ಮತ್ತು 6 ಅರ್ಧಶತಕಗಳ ಸಹಿತ ಒಟ್ಟು 759 ರನ್ ಕಲೆಹಾಕಿದ್ದರು. ನಾಲ್ಕನೇ ಸ್ಥಾನದಲ್ಲಿದ್ದ ಶುಭ್ಮನ್ ಗಿಲ್ 6 ಅರ್ಧಶತಕಗಳೊಂದಿಗೆ 650 ರನ್ ಪೇರಿಸಿದ್ದರು. ಪಕ್ಕೆಲುಬಿನ ಗಾಯದಿಂದ ಮರಳಿದ ಸುದರ್ಶನ್, ಗಾಯಕ್ಕೂ ಮೊದಲು ದೇಶೀಯ ಕ್ರಿಕೆಟ್‌ನಲ್ಲಿ ಶತಕ (ಔಟಾಗದೆ 101) ಮತ್ತು ಹಲವು ಅರ್ಧಶತಕಗಳೊಂದಿಗೆ ಉತ್ತಮ ಫಾರ್ಮ್‌ನಲ್ಲಿ ಇದ್ದರು.

ಬೌಲಿಂಗ್: ವೇಗಿಗಳಾದ ಮೊಹಮ್ಮದ್ ಸಿರಾಜ್, ಕನ್ನಡಿಗ ಪ್ರಸಿದ್ಧ್ ಕೃಷ್ಣ, ಕಗಿಸೋ ರಬಾಡ ಮತ್ತು ಅನುಭವಿ ಇಶಾಂತ್ ಶರ್ಮಾ ಅವರಿದ್ದಾರೆ. ಆಫ್‌ಸ್ಪಿನ್ ಮಾಂತ್ರಿಕ ರಶೀದ್ ಖಾನ್ ತಂಡದಲ್ಲಿದ್ದು, ಅಗತ್ಯಬಿದ್ದಾಗ ಬ್ಯಾಟ್ ಬೀಸಿ ಸಿಕ್ಸರ್ ಹೊಡೆಯುವ ಸಾಮರ್ಥ್ಯ ಹೊಂದಿದ್ದಾರೆ.

ಪಂಜಾಬ್‌ಗೆ ಅಯ್ಯರ್ ಕಿಂಗ್

ಪಂಜಾಬ್ ಕಿಂಗ್ಸ್ ತಂಡಕ್ಕೆ ಮತ್ತೆ ನಾಯಕ ಶ್ರೇಯಸ್ ಅಯ್ಯರ್ ಮೇಲೆ ಹೆಚ್ಚಿನ ನಿರೀಕ್ಷೆ ಇದೆ. ಅವರು ಈಗಾಗಲೇ ಮೂರು ವಿಭಿನ್ನ ತಂಡಗಳನ್ನು ಫೈನಲ್‌ಗೆ ಕೊಂಡೊಯ್ದಿರುವ ನಾಯಕ (2020ರಲ್ಲಿ ಡೆಲ್ಲಿ ಕ್ಯಾಪಿಟಲ್ಸ್, 2024ರಲ್ಲಿ ಕೆಕೆಆರ್, ಮತ್ತು ಕಳೆದ ಸೀಸನ್‌ನಲ್ಲಿ ಪಂಜಾಬ್ ಕಿಂಗ್ಸ್). ನಿರಂತರ ಉತ್ತಮ ಪ್ರದರ್ಶನ ನೀಡಿದ್ದರೂ, ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿಯಿಂದ ಶ್ರೇಯಸ್ ಇನ್ನೂ ಕಡೆಗಣಿಸಲ್ಪಡುತ್ತಿದ್ದಾರೆ. ಅವರು ಕೊನೆಯ ಬಾರಿ ಡಿಸೆಂಬರ್ 2023ರಲ್ಲಿ ಟಿ20 ಅಂತಾರಾಷ್ಟ್ರೀಯ ಪಂದ್ಯವನ್ನು ಆಡಿದ್ದರು.

ಕಳೆದ ಆವೃತ್ತಿಯಲ್ಲಿ ಶ್ರೇಯಸ್ 604 ರನ್ ಗಳಿಸಿ, 175ಕ್ಕಿಂತ ಹೆಚ್ಚು ಸ್ಟ್ರೈಕ್‌ರೇಟ್‌ನಲ್ಲಿ ಸ್ಫೋಟಕ ಪ್ರದರ್ಶನ ನೀಡಿದ್ದರು. ಅಯ್ಯರ್ ಸ್ಟ್ರೈಕ್‌ರೇಟ್ ಕಳೆದ ಆವೃತ್ತಿಯ ಅಗ್ರ-10 ಅತ್ಯಧಿಕ ರನ್ ಸ್ಕೋರರ್‌ಗಳಲ್ಲೇ ಅತ್ಯಧಿಕವಾಗಿದ್ದರೂ ಭಾರತದ ಏಷ್ಯಾ ಕಪ್ ಮತ್ತು ಟಿ20 ವಿಶ್ವಕಪ್ ತಂಡಗಳಲ್ಲಿ ಅವರಿಗೆ ಸ್ಥಾನ ಸಿಗಲಿಲ್ಲ.

ಬೌಲಿಂಗ್: ವೇಗಿ ಅರ್ಷದೀಪ್ ಸಿಂಗ್, ಕನ್ನಡಿಗ ವಿಜಯ್‌ಕುಮಾರ್ ವೈಶಾಕ್, ಬ್ರಾರ್ ಮತ್ತು ಲೆಗ್‌ಸ್ಪಿನ್ನರ್ ಚಹಲ್ ಬಲ ತುಂಬಲಿದ್ದಾರೆ. ಬೆನ್ನು ನೋವಿನಿಂದ ಚೇತರಿಸಿಕೊಂಡ ಬ್ಯಾಟಿಂಗ್ ಆಲ್‌ರೌಂಡರ್ ಕೂಪರ್ ಕ್ಯಾನೊಲಿ ಅವರಿಗೆ ಬೌಲಿಂಗ್ ಮಾಡದಂತೆ ಕ್ರಿಕೆಟ್ ಆಸ್ಟ್ರೇಲಿಯಾ ತಾಕೀತು ಮಾಡಿದೆ.

ಕಿರುಸುದ್ದಿ

ಪ್ರಸಿದ್ಧ ರಿಯಲ್ ಬೆಟಿಸ್ ಕ್ಲಬ್ ಶಿಬಿರಕ್ಕೆ ಫೆರ್ನಾಂಡಿಸ್

◆ **ಹೊಸದಿಲ್ಲಿ:** ಭಾರತೀಯ ಮಹಿಳಾ ಫುಟ್ಬಾಲರ್ ವಲೈನಾ ಫೆರ್ನಾಂಡಿಸ್ ಅವರ ಸ್ಪೇನ್‌ನ ಪ್ರಸಿದ್ಧ ರಿಯಲ್ ಬೆಟಿಸ್ ಕ್ಲಬ್‌ನ ಫುಟ್ಬಾಲ್ ತರಬೇತಿ ಶಿಬಿರಕ್ಕೆ ಆಯ್ಕೆಯಾಗಿದ್ದಾರೆ. 16ರ ಹರೆಯದ ಭಾರತೀಯ ಆಟಗಾರ್ತಿ ವಲೈನಾ, ಎಎಫ್‌ಸಿ 17 ವರ್ಷದೊಳಗಿನ ವನಿತೆಯರ ಏಷ್ಯಾ ಕಪ್ 2026ಕ್ಕೆ ಅರ್ಹತೆ ಪಡೆದ ಭಾರತ ಅ-17 ತಂಡದ ಸದಸ್ಯೆಯಾಗಿದ್ದಾರೆ.



ಬೆನ್ನುನೋವಿನ ಕಾರಣದಿಂದ ಬೌಲಿಂಗ್ ಮಾಡಿಲ್ಲ ಗ್ರೀನ್

◆ **ಮುಂಬೈ:** ಕೋಲ್ಕತ ನೈಟ್ ರೈಡರ್ಸ್ (ಕೆಕೆಆರ್) ಪರ ಪದಾರ್ಪಣೆಗೈದ ದುಬಾರಿ ಬ್ಯಾಟಿಂಗ್ ಆಲ್‌ರೌಂಡರ್ ಕ್ಯಾಮರೂನ್ ಗ್ರೀನ್‌ರಿಗೆ ಬೌಲಿಂಗ್ ಯಾಕೆ ನೀಡಿಲ್ಲವೆಂಬ ಪ್ರಶ್ನೆಗೆ ನಾಯಕ ಅಜಿಂಕ್ಯಾ ರಹಾನೆ ಸ್ಪಷ್ಟನೆಯನ್ನು ನೀಡಿದ್ದಾರೆ. ಈ ಆವೃತ್ತಿಯ ಹರಾಜಿನಲ್ಲಿ 25.2 ಕೋಟಿ ರೂ. ದಾಖಲೆ ಬೆಲೆಗೆ ಕೆಕೆಆರ್ ಕ್ಯಾಮರೂನ್ ಗ್ರೀನ್ ಅವರನ್ನು ಖರೀದಿಸಿತ್ತು. ದುಬಾರಿ ಬೆಲೆ ನೀಡಿ ಖರೀದಿ ಮಾಡಿದ ಆಟಗಾರನನ್ನು ಆತನ ಸಾಮರ್ಥ್ಯಕ್ಕೆ ತಕ್ಕಂತ ಬಳಸಿಕೊಳ್ಳಬೇಕೆಂದು ಎಲ್ಲರ ಅಭಿಪ್ರಾಯವಾಗಿದೆ.

ಆದರೆ ಪಂದ್ಯದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಗೆ ಉತ್ತರಿಸಿದ ರಹಾನೆ, ಗ್ರೀನ್ ಅವರಿಗೆ ಯಾಕೆ ಬೌಲಿಂಗ್ ಕೊಟ್ಟಿಲ್ಲವೆಂಬ ಪ್ರಶ್ನೆಯನ್ನು ನೀವು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ)ಗೆ ಕೇಳಬೇಕು. ದುರದೃಷ್ಟವಶಾತ್ ಅವರು ಬೌಲಿಂಗ್ ನಡೆಸುವಂತಿಲ್ಲ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಬೆನ್ನುನೋವಿನಿಂದ ಪೂರ್ತಿ ಗುಣಮುಖರಾಗದ ಕ್ಯಾಮರೂನ್ ಅವರಿಗೆ ಬೌಲಿಂಗ್ ಮಾಡದಂತೆ ಕ್ರಿಕೆಟ್ ಆಸ್ಟ್ರೇಲಿಯಾ ತಾಕೀತು ಮಾಡಿದೆ. ಮುಂಬರುವ ಟಿ20 ವಿಶ್ವಕಪ್‌ನಲ್ಲಿ ಆಸೀಸ್ ತಂಡದ ಹಿತದೃಷ್ಟಿಯಿಂದ ತಮ್ಮ ಪ್ರಮುಖ ಆಟಗಾರ ಗ್ರೀನ್ ಬೆನ್ನುನೋವಿನಿಂದ ಸಂಪೂರ್ಣ ಗುಣಮುಖರಾಗುವವರೆಗೆ ಅವರಿಂದ ಬೌಲಿಂಗ್ ಮಾಡಿಸದಂತೆ ಕೆಕೆಆರ್ ಫ್ರಾಂಚೈಸಿಗೆ ಈಗಾಗಲೇ ಕ್ರಿಕೆಟ್ ಆಸ್ಟ್ರೇಲಿಯಾ ಮನವಿ ಮಾಡಿಕೊಂಡಿದೆ. ಇದೇ ಕಾರಣದಿಂದ ಗ್ರೀನ್ ಅವರಿಗೆ ಮುಂಬೈ ವಿರುದ್ಧ ಬೌಲಿಂಗ್ ನೀಡಿರಲಿಲ್ಲ. ಮುಂದಿನ ಎರಡು ವಾರಗಳೊಳಗೆ ಗ್ರೀನ್ ಪುನಃ ಬೌಲಿಂಗ್ ನಡೆಸಲು ಆರಂಭಿಸುವ ಸಾಧ್ಯತೆಯಿದೆ. ಆದರೆ ಸದ್ಯ ಕೆಕೆಆರ್ ಪರ ಬ್ಯಾಟ್ ಬೀಸಲಿದ್ದಾರೆ.

ಕ್ರಿಕೆಟ್ ಆಸ್ಟ್ರೇಲಿಯಾ ಸ್ಪಷ್ಟನೆ: ಕೆಕೆಆರ್ ನಾಯಕ ರಹಾನೆ ಪತ್ರಿಕಾಗೋಷ್ಠಿಯ ಬಳಿಕ ಕ್ರಿಕೆಟ್ ಆಸ್ಟ್ರೇಲಿಯಾವು ಗ್ರೀನ್‌ಗೆ ಬೌಲಿಂಗ್ ನೀಡದಿರುವ ಕುರಿತು ಸ್ಪಷ್ಟನೆಯನ್ನು ನೀಡಿದೆ. ಕ್ಯಾಮರೂನ್ ಅವರಿಗೆ ಬೆನ್ನುನೋವು ಇರುವುದರಿಂದ ಕೆಲವು ದಿನಗಳವರೆಗೆ ಬೌಲಿಂಗ್ ಮಾಡುವುದು ಸೂಕ್ತವಲ್ಲ. ಈ ಸಂಬಂಧ ಕೆಕೆಆರ್ ಜತೆ ಮಾತುಕತೆ ನಡೆಸಿದ್ದೇವೆ ಎಂದು ತಿಳಿಸಿದೆ.

ಯಶಸ್ಸಿನ ರಹಸ್ಯ ತಿಳಿಸಿದ ರಹಾನೆ: ಟೀಕೆಗಳಿಗೆ ತಲೆಕೆಡಿಸುವುದಿಲ್ಲ, ಯಾರನ್ನೂ ಮೆಚ್ಚಿಸಲೂ ನಾನು ಕ್ರಿಕೆಟ್ ಆಡುತ್ತಿಲ್ಲ. ಪಂದ್ಯದಿಂದ ಪಂದ್ಯಕ್ಕೆ ನನ್ನ ಆಟವನ್ನು ಉತ್ತಮಗೊಳಿಸಬೇಕೆಂಬ ಉದ್ದೇಶದಿಂದಲೇ ಮೈದಾನಕ್ಕೆ ಇಳಿಯುತ್ತೇನೆಯೇ ಹೊರತು ಯಾರಿಗೂ ಯಾವುದನ್ನೂ ಸಾಬೀತುಪಡಿಸಲು ಆಡುತ್ತಿಲ್ಲ. ಜನರು ನನ್ನ ಆಟ ನೋಡುತ್ತಾರೆ, ಮಾತನಾಡುತ್ತಾರೆ, ಅವರಿಗೆ ಮಾತನಾಡಲು ಬಿಡಬೇಕು ಎಂದು 37 ವರ್ಷದ ರಹಾನೆ ಪ್ರತಿಕ್ರಿಯಿಸಿದ್ದಾರೆ.

2012ರ ಬಳಿಕ ಆರಂಭಿಕ ಪಂದ್ಯ ಗೆದ್ದ ಮುಂಬೈ | ರೋಹಿತ್, ರಿಕ್ಲೆಲ್ಟನ್ ಮಿಂಚು

ಮುಂಬೈಗೆ 6 ವಿಕೆಟ್ ಗೆಲುವು

◆ **ಮುಂಬೈ:** ಮಾಜಿ ನಾಯಕ ರೋಹಿತ್ ಶರ್ಮಾ (78) ಮತ್ತು ರಿಯಾನ್ ರಿಕ್ಲೆಲ್ಟನ್ (81) ಅಬ್ಬರದ ಅರ್ಧಶತಕಗಳ ನೆರವಿನಿಂದ ಮುಂಬೈ ಇಂಡಿಯನ್ಸ್, ಕೆಕೆಆರ್ ವಿರುದ್ಧ 5 ಎಸೆತಗಳು ಉಳಿದಿರುವಂತೆಯೇ 6 ವಿಕೆಟ್‌ಗಳ ಜಯ ಸಾಧಿಸಿತು. ಕಳೆದ 13 ಆವೃತ್ತಿಗಳಲ್ಲಿ ಆರಂಭಿಕ ಪಂದ್ಯಗಳ ಸೋಲಿನ ಸರಣಿಯನ್ನು ಮುಂಬೈ ಈ ಪಂದ್ಯ ಗೆದ್ದು ಮುರಿದಿದೆ.

2012ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 8 ವಿಕೆಟ್‌ಗಳ ಜಯ ಸಾಧಿಸಿದ ಬಳಿಕ ಕಳೆದ ಆವೃತ್ತಿಯವರೆಗೆ ಎಲ್ಲಾ ಆರಂಭಿಕ ಪಂದ್ಯಗಳನ್ನು ಸೋತಿದ್ದ ಮುಂಬೈ, 221 ರನ್‌ಗಳ ಬೃಹತ್ ಗುರಿಯನ್ನು ಬೆನ್ನಟ್ಟುವಲ್ಲಿ ಸಂಪೂರ್ಣ ಪ್ರಾಬಲ್ಯ ಮೆರೆದಿದೆ. 19.1 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 224 ರನ್ ಕಲೆಹಾಕುವುದರೊಂದಿಗೆ ಮುಂಬೈ ಗೆಲುವು ಸಾಧಿಸಿತು. ಸಮತಟ್ಟಾದ ಪಿಚ್‌ನಲ್ಲಿ ಶಾರ್ದೂಲ್ ಠಾಕೂರ್ (39ಕ್ಕೆ 3) ನಿರಂತರ ಪ್ರಮುಖ ವಿಕೆಟ್‌ಗಳನ್ನು ಕಬಳಿಸುವ ಮೂಲಕ ಕೆಕೆಆರ್ ರನ್ ಗತಿಯನ್ನು ಕಡಿತಗೊಳಿಸಿದರು ಹಾಗೂ ಮುಂಬೈ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.



ಮಿಂಚಿದ ಹಿಟ್‌ಮ್ಯಾನ್, ರಿಕ್ಲೆಲ್ಟನ್: ಕಳೆದ ಐಪಿಎಲ್‌ನ ನಂತರ ತನ್ನ ಮೊದಲ ಟಿ20 ಪಂದ್ಯ ಆಡಿದ ರೋಹಿತ್, 38 ಚೆಂಡುಗಳಲ್ಲಿ 6 ಸಿಕ್ಸರ್ ಮತ್ತು 6 ಬೌಂಡರಿಗಳೊಂದಿಗೆ 78 ರನ್ ಗಳಿಸಿ ಮತ್ತಷ್ಟು ಆಕ್ರಮಣಕಾರಿ ಆಟವನ್ನು ತೋರಿಸಿದರು. ಇನ್ನೊಂದು ತುದಿಯಲ್ಲಿ ರಿಕ್ಲೆಲ್ಟನ್ 43 ಎಸೆತಗಳಲ್ಲಿ 8 ಸಿಕ್ಸರ್ ಮತ್ತು 4 ಬೌಂಡರಿಗಳೊಂದಿಗೆ 81 ರನ್ ಸಿಡಿಸಿ, ದೊರೆತ ಎರಡು ಜೀವದಾನಗಳನ್ನು ಸದುಪಯೋಗಪಡಿಸಿ ಮುಂಬೈಗೆ ಮೊದಲ ಪಂದ್ಯದಲ್ಲೇ ಅಮೂಲ್ಯ ಎರಡು ಅಂಕಗಳನ್ನು ತಂದುಕೊಟ್ಟರು. ರೋಹಿತ್ ಮತ್ತು ರಿಕ್ಲೆಲ್ಟನ್ 72 ಚೆಂಡುಗಳಲ್ಲಿ 148 ರನ್‌ಗಳ ಜತೆಯಾಟ ಆಡಿದ್ದರು.

ಯಾನಿಕ್ ಸಿನ್ನರ್, ಸೆಬಲೆಂಕಾಗೆ ಮಯಾಮಿ ಕಿರೀಟ

◆ **ಮಯಾಮಿ:** ಇತ್ತೀಚೆಗೆ ಇಂಡಿಯನ್ ವೆಲ್ಸ್‌ನಲ್ಲಿ ಚಾಂಪಿಯನ್ನರಾಗಿ ಹೊರಹೊಮ್ಮಿದ್ದ ಇಟಲಿಯ ಯಾನಿಕ್ ಸಿನ್ನರ್ ಹಾಗೂ ಸರ್ಬಿಯಾದ ಅರೀನಾ ಸೆಬಲೆಂಕಾ, ಮಯಾಮಿ ಓಪನ್‌ನಲ್ಲೂ ಚಾಂಪಿಯನ್ ಕಿರೀಟ ಮುಡಿಗೇರಿಸಿದ್ದಾರೆ. ಒಂದೇ ಋತುವಿನಲ್ಲಿ ಅಮೆರಿಕದಲ್ಲಿ ಸತತ ಎರಡು ಟೂರ್ನಿಗಳಲ್ಲಿ ಪ್ರಶಸ್ತಿ ಮುಡಿಗೇರಿಸಿದ ಸಾಧನೆಗೈದರು.

ಒಂದೇ ಋತುವಿನಲ್ಲಿ ಅಮೆರಿಕದಲ್ಲಿ ಸತತ ಎರಡು ಪ್ರಶಸ್ತಿ ಗೆದ್ದ ದ್ವಿತೀಯ ಪುರುಷ ಟೆನಿಸಿಗನೆಂಬ ದಾಖಲೆ ಬರೆದಿದ್ದಾರೆ. ಈ ಹಿಂದೆ 2017ರಲ್ಲಿ ರೋಜರ್ ಫೆಡರರ್ ಈ ದಾಖಲೆಯನ್ನು ಬರೆದಿದ್ದರು. ಆದರೆ ಎರಡೂ ಟೂರ್ನಿಗಳಲ್ಲಿ ಒಂದೂ ಸೆಟ್ ಸೋಲದೆ ಈ ಸಾಧನೆಗೈದ ಮೊದಲ ಪುರುಷರ ಆಟಗಾರನೆಂಬ ದಾಖಲೆಯನ್ನು ಸಿನ್ನರ್ ಬರೆದಿದ್ದಾರೆ.





ಭಾನುವಾರ ತಡರಾತ್ರಿ ನಡೆದ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ತವರಿನ ಆಟಗಾರ್ತಿ ಕೊಕೊ ಗಾಫ್ ಅವರನ್ನು ಸೋಲಿಸುವ ಮೂಲಕ ಸೆಬಲೆಂಕಾ ಪ್ರಶಸ್ತಿಗೆ ಮುತ್ತಿಟ್ಟರು. ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಜಿರಿ ಲೆಹೆಕ್ಕಾರನ್ನು 6-4, 6-4 ನೇರ ಸೆಟ್‌ಗಳ ಅಂತರದಿಂದ ಮಣಿಸಿದ ಸಿನ್ನರ್ ಚಾಂಪಿಯನ್ ಆದರು. ಇಂಡಿಯನ್ ವೆಲ್ಸ್ ಮತ್ತು ಮಯಾಮಿ ಓಪನ್ ಗೆದ್ದ 8ನೇ ಪುರುಷ ಆಟಗಾರನೆಂಬ ದಾಖಲೆಯನ್ನು ಬರೆದಿದ್ದಾರೆ. 2016ರಲ್ಲಿ ಜೊಕೊವಿಚ್ ಮತ್ತು ವಿಕ್ಟೋರಿಯಾ ಅಜರೆಂಕಾ ಈ ಸಾಧನೆಗೈದ ನಂತರ ಸಿನ್ನರ್ ಮತ್ತು ಸೆಬಲೆಂಕಾ ಅವರು ಒಂದೇ ಋತುವಿನಲ್ಲಿ ದಾಖಲೆ ಬರೆದಿದ್ದಾರೆ. ಫೈನಲ್ ಪಂದ್ಯದಲ್ಲಿ ಗಾಫ್‌ರನ್ನು 6-2, 4-6, 6-3 ಸೆಟ್‌ಗಳ ಅಂತರದಿಂದ ಸೆಬಲೆಂಕಾ ಸೋಲಿಸಿದ್ದಾರೆ.

2025ನೇ ಸಾಲಿನ ಸಾಧನೆ ಪರಿಗಣಿಸಿ ಘೋಷಣೆ

ಶೀತಲ್ ದೇವಿ ಜಗತ್ತಿನ ಶ್ರೇಷ್ಠ ಪ್ಯಾರಾ ಆರ್ಚರ್



> ವಿಶ್ವದ ಅಗ್ರ-6 ಪ್ಯಾರಾ ಆರ್ಚರ್‌ಗಳ ಸಾಲಿನಲ್ಲಿ ನಾಮನಿರ್ದೇಶನದ ಗೌರವ ಪಡೆದಿದ್ದು, ಇದೀಗ ವರ್ಷದ ಶ್ರೇಷ್ಠ ಪ್ಯಾರಾ ಆರ್ಚರ್ ಎಂದು ವಿಶ್ವ ಆರ್ಚರಿ ಘೋಷಿಸಿರುವುದು ನನಗೆ ಬಹಳ ಆನಂದವನ್ನು ನೀಡಿದೆ. ಹೃದಯಪೂರ್ವಕ ಕೃತಜ್ಞತೆಗಳು.
>
> ■ ಶೀತಲ್ ದೇವಿ, ಪ್ಯಾರಾ ಆರ್ಚರ್.

◆ **ಹೊಸದಿಲ್ಲಿ:** ಭಾರತದ ಶೀತಲ್ ದೇವಿ ಅವರನ್ನು 2025ನೇ ಸಾಲಿನ ಶ್ರೇಷ್ಠ ಪ್ಯಾರಾ ಆರ್ಚರ್ ಎಂದು ವಿಶ್ವ ಆರ್ಚರಿ ಘೋಷಿಸಿದೆ. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಸ್ವರ್ಣ ಗೆಲ್ಲುವುದರೊಂದಿಗೆ ಒಟ್ಟಾರೆ ಅವರ ಅಂತಾರಾಷ್ಟ್ರೀಯ ಆರ್ಚರಿ ಪ್ರದರ್ಶನವನ್ನು ಗಮನದಲ್ಲಿಟ್ಟು, ಶೀತಲ್ ಹೆಸರನ್ನು ಆಯ್ಕೆ ಮಾಡಿದೆ.

ಜಮ್ಮು ಕಾಶ್ಮೀರದ 19ರ ಹರೆಯದ ಪ್ಯಾರಾ ಆರ್ಚರ್ ಶೀತಲ್ ದೇವಿ ಅವರು ವಿಶ್ವ ಪ್ಯಾರಾ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಸ್ವರ್ಣ ಪದಕ ಗೆದ್ದ ಮೊದಲ ಮತ್ತು ಏಕೈಕ ಭಾರತೀಯ ಪ್ಯಾರಾ ಆರ್ಚರ್ ಎಂಬ ದಾಖಲೆಯನ್ನು ಬರೆದಿದ್ದರು. ಕಳೆದ ವರ್ಷ ದಕ್ಷಿಣ ಕೊರಿಯಾದ ಗ್ವಾಂಗ್ಜುನಲ್ಲಿ ನಡೆದಿದ್ದ ವಿಶ್ವ ಚಾಂಪಿಯನ್‌ಶಿಪ್‌ನ ಮಹಿಳೆಯರ ಕಂಪೌಂಡ್ ವೈಯಕ್ತಿಕ ಸ್ಪರ್ಧೆಯಲ್ಲಿ ಸ್ವರ್ಣ ಪದಕ ಗೆದ್ದುಕೊಂಡಿದ್ದರು.

ಜನ್ಮತಃ ಕೈಗಳಿಲ್ಲದ ಶೀತಲ್ ತಮ್ಮ ಕಾಲುಗಳು ಮತ್ತು ಭುಜದ ಸಹಾಯದಿಂದ ಪ್ಯಾರಾ ಆರ್ಚರಿಯಲ್ಲಿ ಸಾಧನೆಗೈದಿದ್ದಾರೆ. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಮಹಿಳಾ ತಂಡದ ರಜತ ಮತ್ತು ಮಿಶ್ರ ತಂಡದ ಕಂಚಿನ ಪದಕವನ್ನೂ ಗೆದ್ದಿದ್ದಾರೆ. ಇವುಗಳಲ್ಲದೆ, ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಮಿಶ್ರ ತಂಡ ಕಂಚು, ಬ್ಯಾಂಕಾಕ್‌ನಲ್ಲಿ ನಡೆದ 2022ರ ಏಷ್ಯನ್ ಪ್ಯಾರಾ ಗೇಮ್ಸ್ ಮತ್ತು 2023ರ ಏಷ್ಯನ್ ಚಾಂಪಿಯನ್‌ಶಿಪ್‌ನಲ್ಲಿ ರಜತ ಪದಕಗಳನ್ನು ಗೆದ್ದುಕೊಂಡಿದ್ದರು.


> ಗ್ವಾಂಗ್ಜುನಲ್ಲಿ ವಿಶ್ವ ಕಿರೀಟವನ್ನು ಮುಡಿಗೇರಿಸುವುದರ ಜತೆಗೆ ಕಳೆದ ಋತುವಿನಲ್ಲಿ ಅದ್ಭುತ ಪ್ರದರ್ಶನ ನೀಡಿದ ಭಾರತದ ಶೀತಲ್ ದೇವಿಯವರು ವರ್ಷದ ಶ್ರೇಷ್ಠ ಪ್ಯಾರಾ ಆರ್ಚರ್ ಗೌರವವನ್ನು ಸಂಪಾದಿಸಿದ್ದಾರೆ.
>
> ■ ವಿಶ್ವ ಆರ್ಚರಿ ಸಂಸ್ಥೆ

ಮುಂಬೈನಲ್ಲಿ ಟಾಸ್ ಫಿಕ್ಸಿಂಗ್?

◆ **ಮುಂಬೈ:** ವಾಂಖೇಡೆ ಸ್ಟೇಡಿಯಂನಲ್ಲಿ ಭಾನುವಾರ ನಡೆದ ಮುಂಬೈ ಇಂಡಿಯನ್ಸ್ ಮತ್ತು ಕೋಲ್ಕತ ನೈಟ್ ರೈಡರ್ಸ್ ನಡುವಿನ ಐಪಿಎಲ್ ಪಂದ್ಯ ಹಲವು ಕಾರಣಗಳಿಗೆ ಸುದ್ದಿಯಾಗಿದ್ದು, ಅದರಲ್ಲಿ ಟಾಸ್ ವಿವಾದವೇ ಪ್ರಮುಖ ವಿಚಾರವಾಗಿದೆ. ಮುಂಬೈ 300ನೇ ಪಂದ್ಯದಲ್ಲಿ ಟಾಸ್ ಫಿಕ್ಸಿಂಗ್ ನಡೆಸಿರುವ ಬಗ್ಗೆ ಕ್ರಿಕೆಟ್ ಅಭಿಮಾನಿಗಳು ಸಂಶಯ ವ್ಯಕ್ತಪಡಿಸಿದ್ದಾರೆ. ಟಾಸ್ ಸಮಯದಲ್ಲಿ ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ, ಕೆಕೆಆರ್ ನಾಯಕ ಅಜಿಂಕ್ಯಾ ರಹಾನೆ, ಮ್ಯಾಚ್ ರೆಫರಿ ಮತ್ತು ವೀಕ್ಷಕ ವಿವರಣೆಗಾರ ರವಿ ಶಾಸ್ತ್ರಿ ಸ್ಥಳದಲ್ಲಿದ್ದರು. ಪಾಂಡ್ಯ ನಾಣ್ಯ ಹಾರಿಸಿದ್ದು, ಟೇಲ್ಸ್ ಎಂಬುದು ಸ್ಪಷ್ಟವಾಗಿ ರಹಾನೆ ಅವರ ಕರೆಯಾಗಿತ್ತು. ಆದರೆ ನಾಣ್ಯ ನೆಲದಲ್ಲಿ ಬಿದ್ದಾಗ ಐಪಿಎಲ್ ಪ್ರಸಾರಕರು ಕ್ಯಾಮರಾ ಆ್ಯಂಗಲ್ ಬದಲಿಸಿದ್ದು, ವೀಕ್ಷಕರಿಗೆ ಏನೂ ಕಾಣಿಸಿಲ್ಲ. ಈ ವೇಳೆ ಮೈದಾನದ ದೊಡ್ಡ ಪರದೆಯಲ್ಲೂ ಏನೂ ಪ್ರಸಾರವಾಗಿಲ್ಲ. ಇದೇ ಸಂದರ್ಭ ಇನ್ನೂ ನಾಣ್ಯ ತೋರಿಸಿದಿದ್ದರೂ ಪಾಂಡ್ಯ, ನಾವು ಬೌಲಿಂಗ್ ಎಂದು ಅಸ್ಪಷ್ಟವಾಗಿ ಹೇಳಿದ ಆಡಿಯೋ ಪ್ರಸಾರವಾಗಿದೆ. ಇದಾದ ಬಳಿಕವಷ್ಟೇ ರವಿ ಶಾಸ್ತ್ರಿ, ಟಾಸ್ ನೀವು ಗೆದ್ದಿದ್ದೀರಿ ನಿಮ್ಮ ನಿರ್ಧಾರವೇನೆಂದು ಪಾಂಡ್ಯರನ್ನು ಕೇಳಿದ್ದಾರೆ. ಪಾಂಡ್ಯ ಬೌಲಿಂಗ್ ಆಯ್ದುಕೊಂಡಿದ್ದಾಗಿ ತಮ್ಮ ನಿರ್ಧಾರ ಪುನರುಚ್ಚರಿಸಿದ್ದಾರೆ. ಈ ಬಗ್ಗೆ ಕೆಕೆಆರ್ ನಾಯಕ ರಹಾನೆಯೂ ತುಟಿಪಿಟಿಕ್ ಅಂದಿಲ್ಲ. ಐಪಿಎಲ್ ಪ್ರಸಾರಕ ಜಿಯೋ ಹಾಟ್‌ಸ್ಟಾರ್ ಸಂಸ್ಥೆ, ಐಪಿಎಲ್ ಸಂಘಟಕರು ಐದು ಬಾರಿಯ ಚಾಂಪಿಯನ್ ಪರವಾಗಿದ್ದಾರೆ ಎಂದು ಕ್ರಿಕೆಟ್ ಅಭಿಮಾನಿಗಳು ಆರೋಪಿಸಿದ್ದರೆ, ಇನ್ನು ಕೆಲವರು ಇದನ್ನು ಫಿಕ್ಸಿಂಗ್ ನಡೆಸಿರುವುದಾಗಿ ಆರೋಪಿಸಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5939

ಎಡದಿಂದ ಬಲಕ್ಕೆ
3.ಒಂದೇ ಸ್ಥಳದಲ್ಲಿಟ್ಟ ದೀಪ (5)
5.ಗುರುವಿನ ನಡುವೆ ಹೂಂಕರಿಸುವಿಕೆಯಿದೆ (3)
6.ಹಿಂದೂಸ್ತಾನಿ ಸಂಗೀತದಲ್ಲಿ ಬಳಸುವ ಚರ್ಮವಾದ್ಯ (3)
7.ಕೈಯಲ್ಲಿ ಹುಟ್ಟಿದುದು- ಕೈಯಿಂದ ಮಾಡಿದುದು (3)
9.ಶತ್ರುಗಳು ಯುದ್ಧ ಮಾಡುವ ಬಯಲು (4)
11.ಆಲಸ್ಯ-ಸೋಮಾರಿತನದಿಂದ ಕೂಡಿದ್ದು (4)
14.ಖರ್ಜೂರದಂತೆ ಸಿಹಿಹಣ್ಣು ಕೊಡುವ ಮರ (3)
16.ಕಲ್ಲು ಕಡೆದು ವಿಗ್ರಹ ಮಾಡುವವ ಉಲ್ಟಾ ಕುಳಿತಿದ್ದಾನೆ (3)
17.ಬಲಭಾಗ-ತೆಂಕಣ ದಿಕ್ಕಿದು (3)
18.ಹೆಬ್ಬಾಗಿಲು-ಮಹಾದ್ವಾರ (5)

ಮೇಲಿನಿಂದ ಕೆಳಕ್ಕೆ
1.ಹಾಡಿನ ಮೂಲಕ ಮನ ತಣಿಸುವವನು (5)
2.ಹಳೆಯ ಕಾಲದ ಹೆಬ್ಬೆರಳಿನ ಅಳತೆಯ ಪ್ರಮಾಣ (3)
3.ಅಸ್ತವ್ಯಸ್ತ-ಗೊಂದಲದಿಂದ ಕೂಡಿದ್ದು (4)
4.ಪ್ರಕಾಶಗೊಳಿಸುವಂಥಾದ್ದು ಒಂದು ರಾಗದ ಹೆಸರಾಗಿದೆ (3)
8.ವಿರಳವಾಗಿ ಹರಿಯುತ್ತಿರುವ ರಕ್ತ (3)
10.ದೇವರ-ಹಿರಿಯರ ಪಾದವಿಲ್ಲಿ ತಲೆಕೆಳಗಾಗಿದೆ (3)
12.ಕಾಲಿನಿಂದ ತಲೆಮುಡಿಯವರೆಗೆ-ಆಮೂಲಾಗ್ರವಾಗಿ (5)
13.ಶತ್ರು ನಗರಗಳನ್ನು ನಾಶ ಮಾಡಿದವನು (4)
15. ವಸ್ತು-ವ್ಯಕ್ತಿಯ ಗುರುತಿಸಲು ಸಹಕರಿಸುವ ಗುಣ (3)
16. ಲೆಕ್ಕಕ್ಕೆ ತೆಗೆದುಕೊಳ್ಳುವಿಕೆ (3)

5938 ಉತ್ತರ

ಎಡದಿಂದ ಬಲಕ್ಕೆ:
1.ಸಮಾಚಾರ 3.ಸುಲಿಗೆ
5.ವಾರ್ಧಕ 7.ಬಾಲಿಶ
8.ಮಧುಮತಿ 10.ಕಲಿತನ
12.ಸಂಕೋಲೆ 14.ಕುಟಿಲ
15.ಲಕೋಟೆ 16.ಕಬಳಿಸು

ಮೇಲಿನಿಂದ ಕೆಳಕ್ಕೆ :
1.ಸತ್ಯಾಂಶ 2.ಶನಿವಾರ
4.ಗೆಜ್ಜೆಪಂತಿ 6.ಮರುಕ
7.ಬಾನುಲಿ 9.ಮಸಾಲೆ
10.ಕಪಿಂಜಲ 11.ನರಕು
12.ಸಂಚಾಲಕ
13.ತೋರಿಸು

ಕಿರುಸುದ್ದಿ

12ನೇ ಮಹಡಿಯಿಂದ ಹಾರಿ ವೈದ್ಯಕೀಯ ವಿದ್ಯಾರ್ಥಿ ಆತ್ಮಹತ್ಯೆ

ಮಂಗಳೂರು: ವೈದ್ಯಕೀಯ ವಿದ್ಯಾರ್ಥಿಯೊಬ್ಬ ಆತ್ಮಹತ್ಯೆ ಮಾಡಿಕೊಂಡ ಘಟನೆ ಸೋಮವಾರ ನಗರದಲ್ಲಿ ನಡೆದಿದೆ. ನಗರದ ಕಾಲೇಜೊಂದರಲ್ಲಿ ಎಂಬಿಬಿಎಸ್ ಕಲಿಯುತ್ತಿದ್ದ ಪಶ್ಚಿಮ ಬಂಗಾಳದ ಕೊಲ್ಕತ್ತಾ ಮೂಲದ ಸಾರ್ಥಕ್ ಮೌರ್ಯ (23) ಅಪಾರ್ಟ್‌ಮೆಂಟ್‌ನ 12ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡವರು. ನಗರದ ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ 4ನೇ ವರ್ಷದ ಎಂಬಿಬಿಎಸ್ ಶಿಕ್ಷಣ ಪಡೆಯುತ್ತಿದ್ದ ಸಾರ್ಥಕ್ ಅವರು ಸೋಮವಾರ ಮಧ್ಯಾಹ್ನ ತನ್ನ ಗೆಳತಿ ಉಳಿದುಕೊಂಡಿದ್ದ ಅತ್ತಾವರದ ಅಪಾರ್ಟ್‌ಮೆಂಟ್‌ಗೆ ತೆರಳಿದ್ದರು. ಅಲ್ಲಿನ ಸೆಕ್ಯುರಿಟಿ ಕೌಂಟರ್‌ನಲ್ಲಿ ಗೆಳತಿಯ ಮನೆಗೆ ಹೋಗುವ ಬಗ್ಗೆ ಮಾಹಿತಿ ನಮೂದಿಸಿ, ಆಕೆ ಉಳಿದುಕೊಂಡಿದ್ದ 12ನೇ ಮಹಡಿ ಕಡೆಗೆ ತೆರಳಿದ್ದಾರೆ. ಆದರೆ ಆಕೆಯ ಮನೆಗೆ ಹೋಗುವ ಬದಲು ವಿರುದ್ಧ ದಿಕ್ಕಿಗೆ ತೆರಳಿ ಕೆಳಗೆ ಹಾರಿದ್ದಾರೆ. ಗಂಭೀರ ಗಾಯಗೊಂಡಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಾಂಡೇಶ್ವರ ಠಾಣೆ ಪೊಲೀಸರು ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿದ್ದಾರೆ. ಸಾರ್ಥಕ್‌ಗೆ ಮಾ.31ರಿಂದ ಪರೀಕ್ಷೆ ಇತ್ತು. ಆತ್ಮಹತ್ಯೆಗೆ ನಿಖರ ಕಾರಣ ಇನ್ನಷ್ಟೇ ತಿಳಿದುಬರಬೇಕಿದೆ.

ಪಟಾಕಿ ಸಿಡಿಸಿದಾಗ ಮದುವೆ ಮನೆಯ ಚಪ್ಪರಕ್ಕೆ ಹತ್ತಿಕೊಂಡ ಬೆಂಕಿ: ತಪ್ಪಿದ ಭಾರೀ ದುರಂತ

ಕಾಸರಗೋಡು: ವರನ ಸಹಿತ ವಿವಾಹ ತಂಡ ತಲುಪಿದಾಗ ಸಿಡಿಸಿದ ಪಟಾಕಿಯಿಂದ ಬೆಂಕಿ ಹತ್ತಿಕೊಂಡು ವಧುವಿನ ಮನೆಯಲ್ಲಿ ನಿರ್ಮಿಸಿದ ಚಪ್ಪರ ಉರಿದು ನಾಶಗೊಂಡ ಘಟನೆ ನಡೆದಿದೆ. ಚಪ್ಪರದ ಒಂದು ಭಾಗ ಹಾಗೂ ಅಲಂಕಾರ ಸಾಮಗ್ರಿಗಳು ಉರಿದು ನಾಶಗೊಂಡಿದೆ. ಕೂಡಲೇ ಮನೆಯಲ್ಲಿದ್ದವರು ನೀರೆರೆದು ಬೆಂಕಿ ಶಮನಗೊಳಿಸಿದುದರಿಂದ ಭಾರೀ ದುರಂತ ತಪ್ಪಿಹೋಗಿದೆ. ಬೇಕಲ ಪೊಲೀಸ್ ಠಾಣೆ ವ್ಯಾಪ್ತಿಯ ಮವ್ವಲ್‌ನಲ್ಲಿ ಈ ಘಟನೆ ನಡೆದಿದೆ. ವರ ಹಾಗೂ ತಂಡ ತಲುಪಿದಾಗ ಸಿಡಿಸಿದ ಪಟಾಕಿಯಿಂದ ಹಾರಿದ ಬೆಂಕಿ ಕಿಡಿ ಚಪ್ಪರಕ್ಕೆ ಹತ್ತಿಕೊಂಡಿರುವುದಾಗಿ ಹೇಳಲಾಗುತ್ತಿದೆ.

ತೊಕ್ಕೊಟ್ಟು ರೌಡಿ ಕೊಲೆ ಪ್ರಕರಣ: ಆರೋಪಿಗಳ ಪತ್ತೆ ಕಾರ್ಯ ಮತ್ತಷ್ಟು ಚುರುಕು

ಮಂಗಳೂರು: ತೊಕ್ಕೊಟ್ಟಿನಲ್ಲಿ ಇತ್ತೀಚೆಗೆ ಬರ್ಬರವಾಗಿ ಹತ್ಯೆಗೀಡಾದ ರೌಡಿ ಶೀಟರ್ ಆರಿಫ್ ಹುಸೈನ್ (46) ಕೊಲೆ ಪ್ರಕರಣದಲ್ಲಿ ನೇರವಾಗಿ ಭಾಗಿಯಾದ ಆರು ಮಂದಿ ಆರೋಪಿಗಳನ್ನು ಪೊಲೀಸರು ಗುರುತಿಸಿದ್ದು, ಬಂಧನಕ್ಕೆ ಬಲೆ ಬೀಸಿದ್ದಾರೆ. ಆದರೆ ಆರೋಪಿಗಳು ನಿರಂತರವಾಗಿ ಸ್ಥಳ ಬದಲಾವಣೆ ಮಾಡುತ್ತಿರುವುದರಿಂದ ಅವರನ್ನು ತಕ್ಷಣ ಬಂಧಿಸುವುದು ತನಿಖಾ ತಂಡಗಳಿಗೆ ಸವಾಲಾಗಿ ಪರಿಣಮಿಸಿದೆ.



ಹಾಗಾಗಿ ಪ್ರಕರಣದ ಮುಂದಿನ ತನಿಖೆಯನ್ನು ಸಿಸಿಬಿ ಎಸಿಪಿ ತಂಡಕ್ಕೆ ವಹಿಸಲಾಗಿದೆ ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಸಹಾಯ ಮಾಡಿದವರಿಗೂ ಬಂಧನ

ಈವರೆಗೆ ನಡೆದ ತನಿಖೆಯಲ್ಲಿ ಈ ಕೊಲೆ ಕೃತ್ಯದಲ್ಲಿ ಇನ್ನಷ್ಟು ಆರೋಪಿಗಳು ಭಾಗಿಯಾಗಿರುವುದನ್ನು ಗುರುತಿಸಲಾಗಿದೆ. ಆರೋಪಿಗಳಿಗೆ ಕೃತ್ಯ ಎಸಗಲು ಹಾಗೂ ಅವರು ತಪ್ಪಿಸಿಕೊಳ್ಳಲು ಸಹಾಯ ಮಾಡಿದ ಶಂಕಿತ ಕೆಲವು ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಲಾಗುತ್ತಿದೆ. ಕೃತ್ಯದಲ್ಲಿ ಅವರ ಪಾತ್ರ ದೃಢಪಟ್ಟರೆ, ಅವರನ್ನು ಕೂಡ ಬಂಧಿಸಲಾಗುವುದು ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ. ಆರೋಪಿಗಳಿಗೆ ಯಾರಾದರೂ ಯಾವುದೇ ರೀತಿಯಲ್ಲಿ ಸಹಾಯ ಮಾಡಿದರೆ ಬಿಎನ್‌ಎಸ್ ಸೆಕ್ಷನ್ 249(ಎ) ಅಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೊಲೀಸ್ ಕಮಿಷನರ್ ಎಚ್ಚರಿಸಿದ್ದಾರೆ.

ಗಾಂಜಾ ಸಾಗಾಟ ಪ್ರಕರಣದ ಆರೋಪಿಗೆ ಸಜೆ, ದಂಡ

ಕಾಸರಗೋಡು: ಬೈಕ್‌ನಲ್ಲಿ ಗಾಂಜಾ ಸಾಗಿಸಿದ ಪ್ರಕರಣದ ಆರೋಪಿಗೆ ಕಾಸರಗೋಡು ಹೆಚ್ಚುವರಿ ಜಿಲ್ಲಾ ಸೆಶನ್ಸ್ ನ್ಯಾಯಾಲಯ (ದ್ವಿತೀಯ)ದ ನ್ಯಾಯಾಧೀಶ ರಾಮು ರಮೇಶ್‌ಚಂದ್ರಭಾನು ಅವರು ಒಂದು ವರ್ಷ ಕಠಿಣ ಸಜೆ ಮತ್ತು 10 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ನೆಲ್ಲಿಕಟ್ಟೆ ಚೆನ್ನಡ್ಕ ಆರೀಫಾ ಮಂಜಿಲ್‌ನ ಅಬ್ದುಲ್ ನೌಶಾದ್ (37) ಎಂಬಾತನಿಗೆ ಈ ರೀತಿ ಶಿಕ್ಷೆ ವಿಧಿಸಲಾಗಿದೆ. ದಂಡ ಪಾವತಿಸದಿದ್ದಲ್ಲಿ ಎರಡು ತಿಂಗಳ ಹೆಚ್ಚುವರಿ ಸಜೆ ಅನುಭವಿಸಬೇಕಾಗಿದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. 2018ರ ಏಪ್ರಿಲ್ 14ರಂದು ಮಧ್ಯಾಹ್ನ ಕಾಸರಗೋಡು ಸಿಪಿಸಿಆರ್‌ಐ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಂದು ಕಾಸರಗೋಡು ಪೊಲೀಸ್ ಠಾಣೆಯ ಎಸ್‌ಐ ಆಗಿದ್ದ ಹಸೈನಾರ್‌ಕುಟ್ಟಿಯವರ ನೇತೃತ್ವದ ಪೊಲೀಸರ ತಂಡ ನಡೆಸಿದ ಕಾರ್ಯಾಚರಣೆಯಲ್ಲಿ ಬೈಕ್‌ನಲ್ಲಿ ಸಾಗಿಸುತ್ತಿದ್ದ ಒಂಭತ್ತೂವರೆ ಕಿಲೋ ಗ್ರಾಂ ಗಾಂಜಾ ಪತ್ತೆಹಚ್ಚಿ ಅದಕ್ಕೆ ಸಂಬಂಧಿಸಿ ಆರೋಪಿ ಅಬ್ದುಲ್ ನೌಶಾದ್‌ನನ್ನು ಬಂಧಿಸಿ ಆತನ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು.

ಕರಾವಳಿ ಕರ್ನಾಟಕದ ಮೊದಲ ಎನ್-ಜೆನ್ ಅಂಚೆ ಆರಂಭ | ಡಿಜಿಟಲ್ ಟಚ್ ಪಡೆದ ಎನ್‌ಐಟಿಕೆ ಅಂಚೆ ಕಚೇರಿ

ಅಂಚೆಯೊಳಗೊಂದು ಚಂದದ ವ್ಯವಸ್ಥೆ!

ಮಂಗಳೂರು: ಉಚಿತ ಹೈ-ಸ್ಪೀಡ್ ವೈ-ಫೈ ವ್ಯವಸ್ಥೆ, ಸ್ವಯಂ ಬುಕ್ಕಿಂಗ್ ಕಿಯೋಸ್ಕ್, ವಿಶ್ರಾಂತಿ ಕೊಠಡಿ, ಬರವಣಿಗೆಗೆ ಮೇಜಿನ ವ್ಯವಸ್ತೆ, ಜ್ಞಾನ ಭಂಡಾರ ಹೆಚ್ಚಿಸಲು ಒಂದಷ್ಟು ಪುಸ್ತಕಗಳು... ಹೀಗೆ ಹತ್ತು ಹಲವು ಸೌಲಭ್ಯಗಳು ಅಂಚೆ ಕಚೇರಿಯಲ್ಲಿ ಲಭ್ಯ!

ಅರೆ!, ಇದೇನು ಹೊಸ ವ್ಯವಸ್ಥೆ ಎಂದು ಗಲಿಬಿಲಿಗೊಳ್ಳಬೇಡಿ.

ಹೊಸ ತಲೆಮಾರನ್ನು ಡಿಜಿಟಲ್ ಟಚ್‌ನೊಂದಿಗೆ ಅಂಚೆ ಕಚೇರಿಯೊಂದಿಗೆ ಬೆಸೆಯಲು ಅಂಚೆ ಇಲಾಖೆ ಇಟ್ಟಿರುವ ವಿನೂತನ ಹೆಜ್ಜೆ ಇದಾಗಿದೆ. ಭಾರತೀಯ ಅಂಚೆ ಇಲಾಖೆ ಮಂಗಳೂರು ವಿಭಾಗದ ವತಿಯಿಂದ ನಗರದ ಹೊರವಲಯದ ಸುರತ್ಕಲ್ ಎನ್‌ಐಟಿಕೆ ಕ್ಯಾಂಪಸ್ಸಿನಲ್ಲಿರುವ ಶ್ರೀನಿವಾಸ ನಗರದಲ್ಲಿ ನ್ಯೂ ಜನರೇಶನ್ (ಎನ್-ಜೆನ್) ಅಂಚೆ ಕಚೇರಿಯಲ್ಲಿ ವಿನೂತನ ವ್ಯವಸ್ಥೆ ಅಳವಡಿಸಲಾಗಿದ್ದು, ಸೋಮವಾರ ಚಾಲನೆ ದೊರೆತಿದೆ.

ಕರಾವಳಿಯ ಮೊದಲ ಎನ್-ಜೆನ್

ಕರಾವಳಿ ಕರ್ನಾಟಕದ ಮೊದಲ ಎನ್-ಜೆನ್ ಅಂಚೆ ಕಚೇರಿ ಇದಾಗಿದೆ. ಡಿಜಿಟಲ್ ಪೀಳಿಗೆಗೆ ಸುಮಾರು 170 ವರ್ಷದ ಪರಂಪರೆ ಹೊಂದಿರುವ ಭಾರತೀಯ ಅಂಚೆ ಇಲಾಖೆಯ ಸೇವೆಯನ್ನು ಇಂದಿನ ಡಿಜಿಟಲ್ ಪೀಳಿಗೆಯ ಜೀವನಶೈಲಿಗೆ ಹೊಂದಿಸುವ ಉದ್ದೇಶದಿಂದ ಎನ್-ಜೆನ್ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಈಗಾಗಲೇ ಬೆಂಗಳೂರು ನಗರದ ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಗೀತಂ ವಿಶ್ವವಿದ್ಯಾಲಯ ಮತ್ತು ರಾಯಚೂರಿನ ಯುಎಎಸ್ ವಿಶ್ವವಿದ್ಯಾಲಯಗಳಲ್ಲಿ ಇಂತಹ ಅಂಚೆ ಕಚೇರಿಗಳನ್ನು ಆರಂಭಿಸಲಾಗಿದೆ. ಮಂಗಳೂರು ವಿಭಾಗ ಹಾಗೂ ದಕ್ಷಿಣ ಕರ್ನಾಟಕ ಅಂಚೆ ವ್ಯಾಪ್ತಿಯಲ್ಲಿ ಇದು ಮೊದಲ ಎನ್-ಜೆನ್ ಅಂಚೆ ಕಚೇರಿಯಾಗಿದೆ.



> **ಸಕಲ ವ್ಯವಸ್ಥೆ ಇಲ್ಲಿದೆ**
> ಸುಮಾರು 170 ವರ್ಷಗಳ ಪರಂಪರೆಯುಳ್ಳ ಭಾರತ ಅಂಚೆ ಸೇವೆಯನ್ನು ನವೀನ ಡಿಜಿಟಲ್ ಯುಗದ ವಿದ್ಯಾರ್ಥಿಗಳ ಜೀವನಶೈಲಿಗೆ ಹೊಂದಿಸುವ ಪ್ರಯತ್ನ ಮಾಡಲಾಗಿದೆ. ಇಲ್ಲಿ ಅತ್ಯಾಧುನಿಕ ಸೌಲಭ್ಯಗಳ ಜೊತೆಗೆ ಕುಡಿಯುವ ನೀರಿನ ವ್ಯವಸ್ಥೆ, ಗೇಮ್ ಜೋನ್ ಹಾಗೂ ಅಂಚೆ ಪೆಟ್ಟಿಗೆ ಮತ್ತು ಯುವಜನತೆಯ ನಡುವೆ 'ಹೈ-ಫೈವ್' ಚಿತ್ರವಿರುವ ಸೆಲ್ಫಿ ಪಾಯಿಂಟ್ ಕೂಡ ಒದಗಿಸಲಾಗಿದೆ.
> ■ ದಿನೇಶ್ ಪಿ., ಉಪ ಅಂಚೆ ಅಧೀಕ್ಷಕರು, ಮಂಗಳೂರು ಅಂಚೆ ವಿಭಾಗ

ಪಾರಂಪರೆಗಿಂತ ಭಿನ್ನ

ನೂತನ ಎನ್-ಜೆನ್ ಅಂಚೆ ಕಚೇರಿಯು ಪಾರಂಪರಿಕ ಅಂಚೆ ಕೌಂಟರ್ ವ್ಯವಸ್ಥೆಗೆ ಸೀಮಿತವಾಗದೆ, ವಿದ್ಯಾರ್ಥಿಗಳಿಗಾಗಿ ಬಹುಉದ್ದೇಶದ ಸಮುದಾಯ ಕೇಂದ್ರದಂತೆಯೂ ಈ ಅಂಚೆ ಕಚೇರಿಯನ್ನು ರೂಪಿಸಲಾಗಿದೆ. ಈ ಅಂಚೆ ಕಚೇರಿಯ ಮೂಲಕ ವಿದ್ಯಾರ್ಥಿಗಳು ಓದು, ಚರ್ಚೆ ಮತ್ತು ಸಂವಾದ ನಡೆಸುವ ಜೊತೆಗೆ ಅಗತ್ಯ ಅಂಚೆ ಹಾಗೂ ಆರ್ಥಿಕ ಸೇವೆಗಳನ್ನು ಸುಲಭವಾಗಿ ಪಡೆಯಲು ಅವಕಾಶ ಸಿಗಲಿದೆ.

> **ನವೀನ ತಂತ್ರಜ್ಞಾನ**
> ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಅಂಚೆ ಸೇವೆಗಳನ್ನು ಯುವಜನತೆ ಹೆಚ್ಚು ಬಳಸಿಕೊಳ್ಳಬೇಕು. ಕರ್ನಾಟಕ ಅಂಚೆ ವಲಯದಲ್ಲಿ ಇದು ನಾಲ್ಕನೇ ಎನ್-ಜೆನ್ ಅಂಚೆ ಕಚೇರಿಯಾಗಿದ್ದು, ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಮೊದಲನೆಯದಾಗಿದೆ.
> ■ ಜೂಲಿಯಾ ಮೋಹಪಾತ್ರ, ಅಂಚೆ ಲೆಕ್ಕ ಹಾಗೂ ಹಣಕಾಸು ವಿಭಾಗದ ಮಹಾಪ್ರಬಂಧಕರು ಬೆಂಗಳೂರು

> **ಸದುಪಯೋಗ ಪಡಿಸಿಕೊಳ್ಳಿ**
> ವಿದ್ಯಾರ್ಥಿಗಳು ಅಂಚೆ ಇಲಾಖೆಯ ವಿವಿಧ ಸೇವೆಗಳಾದ ಸ್ವಯಂ ಬುಕ್ಕಿಂಗ್, ಇಲೆಕ್ಟ್ರಾನಿಕ್, ಮನಿ ಆರ್ಡರ್ ಸೇರಿದಂತೆ ಹಲವು ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ಕೆಲವು ಅಂಚೆ ಸೇವೆಗಳನ್ನು 'ಡಾಕ್ ಸೇವಾ' ಮೊಬೈಲ್ ಆ್ಯಪ್ ಮೂಲಕವೂ ಬಳಸಬಹುದು.
> ■ ಶ್ರೀಹರ್ಷ ಎನ್., ಉತ್ತರ ಕರ್ನಾಟಕ ಅಂಚೆ ವಲಯದ ನಿರ್ದೇಶಕ

> **ಅಂಚೆಯೊಂದಿಗೆ ಆತ್ಮೀಯ ನಂಟು**
> ನಾನು ಎನ್‌ಐಟಿಕೆಯಲ್ಲಿ ಕಲಿಯುತ್ತಿದ್ದ ವೇಳೆ 200 ರೂಪಾಯಿ ಮನಿ ಆರ್ಡರ್ ಬರುತ್ತಿತ್ತು. ಆ ದಿನಕ್ಕಾಗಿ ಕಾಯುತ್ತಿದ್ದೆ. ಪತ್ರ ವ್ಯವಹಾರದಿಂದ ಮೊದಲ್ಗೊಂಡು ಪ್ರತಿಯೊಂದಕ್ಕೂ ಅಂಚೆಯೊಂದಿಗೆ ಆತ್ಮೀಯ ನಂಟಿತ್ತು. ಈಗ ಅಂಚೆ ಕಚೇರಿ ಎನ್-ಜೆನ್ ರೂಪದಲ್ಲಿ ಅಭಿವೃದ್ಧಿಯಾಗಿರುವುದು ಸಂತಸದ ಸಂಗತಿ.
> ■ ಪ್ರೊ.ಸುಭಾಷ್ ಯರಗಲ್, ಎನ್‌ಐಟಿಕೆ ಉಪನಿರ್ದೇಶಕ

ಎನ್‌ಐಟಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರಿನ ಅಂಚೆ ಲೆಕ್ಕ ಹಾಗೂ ಹಣಕಾಸು ವಿಭಾಗದ ಮಹಾಪ್ರಬಂಧಕರಾದ ಜೂಲಿಯಾ ಮೋಹಪಾತ್ರ, ಎನ್‌ಐಟಿಕೆ ಸುರತ್ಕಲ್ ಇದರ ಉಪನಿರ್ದೇಶಕ ಪ್ರೊ.ಸುಭಾಷ್ ಸಿ ಯರಗಲ್, ಉತ್ತರ ಕರ್ನಾಟಕ ಅಂಚೆ ವಲಯದ ನಿರ್ದೇಶಕ ಶ್ರೀಹರ್ಷ ಎನ್.ಮತ್ತಿತರರು ಉಪಸ್ಥಿತರಿದ್ದರು. ಈ ಸಂದರ್ಭ ಕಟೀಲು ಎಸ್‌ಡಿಪಿಟಿ ಶಾಲೆಯ ವಿದ್ಯಾರ್ಥಿನಿ ಪುಣ್ಯಶ್ರೀ ಅವರಿಗೆ ಕರ್ನಾಟಕ ಮಟ್ಟದ 'ಧಾಯಿ ಆಕ್ಷರ ಪತ್ರ ಬರಹ ಸ್ಪರ್ಧೆ'ಯಲ್ಲಿ ಮೊದಲ ಬಹುಮಾನ ಗೆದ್ದ ಹಿನ್ನೆಲೆಯಲ್ಲಿ ಸನ್ಮಾನಿಸಲಾಯಿತು.

ಮಂಗಳೂರು ಅಂಚೆ ವಿಭಾಗದ ಉಪ ಅಂಚೆ ಅಧೀಕ್ಷಕರಾದ ದಿನೇಶ್ ಪಿ ಸ್ವಾಗತಿಸಿದರು. ಅಕ್ಷತಾ ನಾಯಕ್ ನಿರೂಪಿಸಿದರು.ಹಿರಿಯ ಪೋಸ್ಟ್ ಮಾಸ್ಟರ್ ಲೋಕನಾಥ್ ವಂದಿಸಿದರು.

ಮದುವೆಯಾದ ಒಂದೇ ತಿಂಗಳಲ್ಲಿ ಯುವಕ ಆತ್ಮಹತ್ಯೆ

ಬಲವಂತದ ಮದುವೆ: ಪೊಲೀಸರಿಗೆ ಮೃತನ ಪೋಷಕರಿಂದ ದೂರು

ಕಾರ್ಕಳ: ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ನೆಲ್ಯಾಡಿಯ ದಾಮೋದರ ಶೆಟ್ಟಿ ಎಂಬವರ ಮಗ ನವವಿವಾಹಿತ ಸುದೀಪ್ ರೈ ವಿಷ ಸೇವಿಸಿ ಅನುಮಾನಾಸ್ಪದವಾಗಿ ಮೃತಪಟ್ಟ ಪ್ರಕರಣದ ಕುರಿತು ಸ್ಫೋಟಕ ತಿರುವು ಸಿಕ್ಕಿದೆ. ಫೇಸ್‌ಬುಕ್ ಮೂಲಕ ಕಾರ್ಕಳದ ಬಂಗ್ಲೆಗುಡ್ಡೆಯ ಕಜೆ ನಿವಾಸಿ ಸೌಮ್ಯ ಶೆಟ್ಟಿ ಪರಿಚಯವಾಗಿದ್ದ ಸುದೀಪ್ ರೈ ಬಳಿಕ ಸೌಮ್ಯ ಶೆಟ್ಟಿಯ ಮನೆಗೆ ಬಂದು ತದನಂತರ ಸಮೀಪದ ದೇವಸ್ಥಾನದಲ್ಲಿ ಸರಳವಾಗಿ ಮದುವೆಯಾಗಿದ್ದರು. ಬಳಿಕ ಫೆಬ್ರವರಿ 17ರಂದು ಪುತ್ತೂರು ಸಬ್ ರಿಜಿಸ್ಟರ್ ಕಚೇರಿಯಲ್ಲಿ ವಿವಾಹ ನೋಂದಣಿ ಮಾಡಿಸಿಕೊಂಡಿದ್ದರು. ಆದರೆ ಮದುವೆಯಾದ ಕೇವಲ ಒಂದೇ ತಿಂಗಳಲ್ಲಿ ನವವಿವಾಹಿತ ಆತ್ಮಹತ್ಯೆ ಮಾಡಿಕೊಂಡಿದ್ದು, ಈತನ ಸಾವಿನ ಕುರಿತು ಹತ್ತಾರು ಸಂಶಯಗಳು ಮೂಡಿದೆ. ತನ್ನ ಮಗನ ಸಾವಿಗೆ ಪತ್ನಿ ಸೌಮ್ಯ ಶೆಟ್ಟಿಯೇ ಕಾರಣ ಎಂದು ಸುದೀಪ್ ರೈ ತಂದೆ ದಾಮೋದರ ಶೆಟ್ಟಿ ಪೊಲೀಸರಿಗೆ ದೂರು ನೀಡಿದ್ದಾರೆ.

ಸುದೀಪ್ ರೈ ಆತ್ಮಹತ್ಯೆ ಪ್ರಕರಣದಲ್ಲಿ ಸಾಕಷ್ಟು ಗೊಂದಲವಿದ್ದು, ಮದುವೆಯಾದ ಒಂದೇ ತಿಂಗಳಲ್ಲಿ ಸುದೀಪ್ ರೈ ಯಾಕಾಗಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ. ಈತನ ಸಾವಿಗೆ ನಿಜವಾದ ಕಾರಣ ಪೊಲೀಸರ ತನಿಖೆಯಿಂದಷ್ಟೇ ಬಹಿರಂಗವಾಗಬೇಕಿದೆ.

ಪ್ರಕರಣದ ವಿವರ



ಕಾರ್ಕಳದ ತನ್ನ ಪತ್ನಿ ಮನೆಯಲ್ಲಿ ಇಲಿ ಪಾಷಾಣ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ ತೀವ್ರ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಸುದೀಪ್ ರೈ (31) ಅವರು ಚಿಕಿತ್ಸೆಗೆ ಸ್ಪಂದಿಸದೇ ಭಾನುವಾರದಂದು ಮಂಗಳೂರಿನ ಯೆನಪೋಯ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಆದರೆ ಮೃತ ಸುದೀಪ್ ಸಾವಿನ ಕುರಿತು ಆತನ ಪೋಷಕರು ಅನುಮಾನ ವ್ಯಕ್ತಪಡಿಸಿದ್ದು, ಆತನಿಗೆ ವಿಷ ಪ್ರಾಶನ ಮಾಡಲಾಗಿದೆ ಎಂದು ಆತನ ಪತ್ನಿಯ ವಿರುದ್ಧ ದೂರಿದ್ದಾರೆ.

ನೆಲ್ಯಾಡಿಯ ಸುದೀಪ್ ಕಾರ್ಕಳದ ಸೌಮ್ಯ ಶೆಟ್ಟಿಯನ್ನು ಪ್ರೀತಿಸಿ ಇತ್ತೀಚೆಗಷ್ಟೇ ಮದುವೆಯಾಗಿದ್ದರು ಎನ್ನಲಾಗಿದೆ. ಸುದೀಪ್ ಅವರು ಕಾರ್ಕಳ ಬಂಗ್ಲೆಗುಡ್ಡೆ ಕಜೆ ಎಂಬಲ್ಲಿ ಪತ್ನಿ ಮನೆಯಲ್ಲಿ ವಾಸವಿದ್ದರು. ಆದರೆ ಕಳೆದ ಮೂರು ದಿನಗಳ ಹಿಂದೆ ಸುದೀಪ್ ರೈ ವಿಷ ಸೇವನೆಯಿಂದ ಅಸ್ವಸ್ಥಗೊಂಡಿದ್ದು, ಪತ್ನಿ ಸೌಮ್ಯ ಶೆಟ್ಟಿ ಅವರು ಗಂಡ ಸುದೀಪ್ ರೈಯವರನ್ನು ಕಾರ್ಕಳ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಅನಂತರ ಹೆಚ್ಚಿನ ಚಿಕಿತ್ಸೆಗೆ ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಇತ್ತ ಸುದೀಪ್ ರೈ ಚಿಕಿತ್ಸೆಗೆ ಸ್ಪಂದಿಸದ ಹಿನ್ನೆಲೆಯಲ್ಲಿ ಯುವಕನ ಕುಟುಂಬಸ್ಥರು ಮಂಗಳೂರಿನ ಯೆನಪೋಯ ಖಾಸಗಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದರು. ಕಳೆದ ಒಂದು ವಾರದಿಂದ ಚಿಕಿತ್ಸೆ ಪಡೆಯುತ್ತಿದ್ದ ಸುದೀಪ್ ಅವರು ಚಿಕಿತ್ಸೆ ಫಲಕಾರಿಯಾಗದೆ ಮಾ.29ರ ಮುಂಜಾನೆ ಮೃತಪಟ್ಟಿದ್ದಾರೆ.

ಪೊಲೀಸರು ಪ್ರಕರಣ ದಾಖಲಿಸಿಕೊಂಡು ಸುದೀಪ್ ರೈ ಸಾವಿನ ಕುರಿತು ನಿಖರ ಕಾರಣ ಏನು ಎನ್ನುವ ಕುರಿತು ತನಿಖೆ ಕೈಗೊಂಡಿದ್ದಾರೆ. ಪೊಲೀಸರ ತನಿಖೆಯ ಬಳಿಕವೇ ಸುದೀಪ್ ರೈ ಸಾವಿಗೆ ನಿಖರ ಕಾರಣವೇನು ಎಂದು ತಿಳಿದು ಬರಬೇಕಿದೆ.

ಕಬಕ-ಪುತ್ತೂರು ರೈಲು ನಿಲ್ದಾಣದಲ್ಲಿ ಸುಸಜ್ಜಿತ ಶೆಲ್ಟರ್ ನಿರ್ಮಾಣ

₹2.91 ಕೋ.ಮಂಜೂರು: ಸಂಸದ

ಮಂಗಳೂರು: ಕಬಕ - ಪುತ್ತೂರು ರೈಲು ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಹೆಚ್ಚಿನ ಮೂಲಸೌಕರ್ಯ ಒದಗಿಸಲು 2.91 ಕೋಟಿ ರೂ. ಮೊತ್ತದ ಅಭಿವೃದ್ಧಿ ಕಾಮಗಾರಿ ಯೋಜನೆಗೆ ಮಂಜೂರಾತಿ ದೊರೆತಿದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದ್ದಾರೆ.

ಈ ಯೋಜನೆಯಡಿ ಕಬಕ-ಪುತ್ತೂರು ನಿಲ್ದಾಣದ ಪ್ಲಾಟ್‌ಫಾರ್ಮ್ ನಂ. 1ರಲ್ಲಿ 2.91ಕೋಟಿ ರೂ. ವೆಚ್ಚದಲ್ಲಿ ಬೃಹತ್ ಶೆಲ್ಟರ್ ನಿರ್ಮಾಣಕ್ಕೆ ಮಂಜೂರಾತಿ ಸಿಕ್ಕಿದೆ. ಪ್ರಸ್ತುತ ಈ ನಿಲ್ದಾಣದಲ್ಲಿ ಪ್ರಯಾಣಿಕರ ತಂಗುದಾಣಕ್ಕೆ ಕೇವಲ 531 ಚ. ಮೀಟರ್ ಉದ್ದದ ಶೆಲ್ಟರ್ ಇದೆ. ಇದೀಗ ಈ ಯೋಜನೆಯಡಿ 3392 ಚ.ಮೀಟರ್ ವಿಸ್ತೀರ್ಣದ ಬೃಹತ್ ಶೆಲ್ಟರ್ ನಿರ್ಮಾಣಕ್ಕೆ ಅನುದಾನ ದೊರಕಿದೆ. ಆದರಂತೆಯೇ ಶೆಲ್ಟರ್ ನಿರ್ಮಾಣಕ್ಕೆ ಸ್ಥಳ ಗುರುತು ಮಾಡುವ ಪ್ರಕ್ರಿಯೆ ಮುಗಿದಿದ್ದು ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ. ಈ ಕಾಮಗಾರಿ ಪೂರ್ಣಗೊಂಡರೆ ಕಬಕ- ಪುತ್ತೂರು ರೈಲ್ವೇ ಸ್ಟೇಶನ್‌ನಲ್ಲಿ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಅವರು ಹೇಳಿದ್ದಾರೆ.

ಇದರೊಂದಿಗೆ ನಿಲ್ದಾಣದಲ್ಲಿ ಪ್ರಯಾಣಿಕರು ಸುಲಭವಾಗಿ ಓಡಾಡಲು ಅನುಕೂಲವಾಗುವಂತೆ ನಿಲ್ದಾಣದಲ್ಲಿ ಸದ್ಯ ಇರುವ ಮೇಲ್ಸೇತುವೆಗೆ (ಎಫ್‌ಒಬಿ) ಪ್ಲಾಟ್‌ಫಾರ್ಮ್ ನಂ. 2 ಮತ್ತು 2 ರ ಬಳಿ ಒಟ್ಟು 2 ಲಿಫ್ಟ್ ವ್ಯವಸ್ಥೆ ಅಳವಡಿಸುವ ಪ್ರಸ್ತಾವನೆ ಇದೆ. ಇದಕ್ಕೆ ಅಂದಾಜು 1.33 ಕೋಟಿ ರೂ. ವೆಚ್ಚ ನಿರೀಕ್ಷಿಸಲಾಗಿದ್ದು, ಪ್ರಸ್ತುತ ಈ ಯೋಜನೆಯು ರೈಲ್ವೆ ಕೇಂದ್ರ ಕಚೇರಿಯಲ್ಲಿ ಪರಿಶೀಲನೆ ಹಂತದಲ್ಲಿದೆ ಎಂದು ಸಂಸದರು ತಿಳಿಸಿದ್ದಾರೆ.

ಪತ್ರ ಬರೆದಿದ್ದ ಸಂಸದರು

ಕಬಕ-ಪುತ್ತೂರು ರೈಲು ನಿಲ್ದಾಣದ ಅಭಿವೃದ್ಧಿಯ ಅಗತ್ಯತೆ ಬಗ್ಗೆ ಸಂಸದರು, 2024ರ ನವೆಂಬರ್‌ನಲ್ಲಿ ನೈಋತ್ಯ ರೈಲ್ವೆಯ ಜನರಲ್ ಮ್ಯಾನೇಜರ್‌ಗೆ ಪತ್ರ ಬರೆದು ಶೆಲ್ಟರ್ ವಿಸ್ತರಿಸಲು ಕ್ರಮ ಕೈಗೊಳ್ಳುವಂತೆ ಕೋರಿದ್ದರು. ರೈಲು ನಿಲ್ದಾಣದ ಅಭಿವೃದ್ಧಿಗೆ ಅನುದಾನ ಮಂಜೂರು ಮಾಡಿರುವುದಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ, ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್, ವಿ. ಸೋಮಣ್ಣ ಮತ್ತು ರೈಲ್ವೆ ಇಲಾಖೆಗೆ ಪ್ರಯಾಣಿಕರು ಹಾಗೂ ರೈಲ್ವೆ ಬಳಕೆದಾರರ ಸಂಘದ ಪರವಾಗಿ ಸಂಸದರು ಧನ್ಯವಾದ ಸಲ್ಲಿಸಿದ್ದಾರೆ.



ಎಸ್ಸೆಸ್ಸೆಲ್ಸಿ ಗಣಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿ

ತಾಂತ್ರಿಕ ದೋಷ : ವಿದ್ಯಾರ್ಥಿಗಳ ಸಂಕಷ್ಟ

ಕುಂದಾಪುರ: ಮಾ.28 ರಂದು ನಡೆದ ಎಸ್ಸೆಸ್ಸೆಲ್ಸಿ ಗಣಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿನ ತಾಂತ್ರಿಕ ದೋಷ ಮತ್ತು ಅಡಿಷನಲ್ ಶೀಟ್ ಕೊಡಲು ತಡ ಮಾಡಿದ್ದರಿಂದ ವಿದ್ಯಾರ್ಥಿಗಳು ತೊಂದರೆಗೊಳಗಾದ ಘಟನೆ ನಡೆದಿದೆ.

ಗಣಿತ ಪ್ರಶ್ನೆ ಪತ್ರಿಕೆಯಲ್ಲಿ ಭದ್ರತೆಯ ದೃಷ್ಟಿಯಿಂದ ಬಳಸಲಾದ ಎಎಸ್ ಕೋಡ್‌ನ ವಾಟರ್ ಮಾರ್ಕ್ ಪ್ರಶ್ನೆಗಳ ಮೇಲೆಯೇ ದಟ್ಟವಾಗಿ ಮುದ್ರಣಗೊಂಡಿತ್ತು. ಇದರಿಂದಾಗಿ ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಓದಲು ಮತ್ತು ಅಂಕಿ-ಅಂಶಗಳನ್ನು ಸರಿಯಾಗಿ ಗುರುತಿಸಲು ತುಂಬಾ ಕಷ್ಟಪಟ್ಟ ಘಟನೆ ತಡವಾಗಿ ಬೆಳಕಿಗೆ ಬಂದಿದೆ. ಗಣಿತದಂತಹ ವಿಷಯದಲ್ಲಿ ಸಣ್ಣ ಚಿಹ್ನೆ ಅಥವಾ ಅಂಕಿ ಅಸ್ಪಷ್ಟವಾಗಿದ್ದರೂ ಇಡೀ ಲೆಕ್ಕವೇ ತಪ್ಪಾಗುವ ಸಾಧ್ಯತೆ ಇರುತ್ತದೆ. ಇಲಾಖೆಯ ಈ ಗೊಂದಲದಿಂದಾಗಿ ಮಕ್ಕಳು ಪರೀಕ್ಷಾ ಸಮಯದಲ್ಲಿ ತೀವ್ರ ಮಾನಸಿಕ ಒತ್ತಡ ಅನುಭವಿಸಿದ್ದಲ್ಲದೆ ವಿದ್ಯಾರ್ಥಿಗಳ ಅಮೂಲ್ಯ ಸಮಯವೂ ವ್ಯರ್ಥವಾಗಿದೆ. ಪ್ರಶ್ನೆಪತ್ರಿಕೆಯಲ್ಲಿ ಕೆಲವೊಂದು ಪ್ರಶ್ನೆಗಳು ಅಸ್ಪಷ್ಟವಾಗಿದ್ದ ಕಾರಣ ವಿದ್ಯಾರ್ಥಿಗಳು ಸಾಕಷ್ಟು ತೊಂದರೆ ಅನುಭವಿಸಿದ್ದಾರೆ. ಕೆಲವು ಕಡೆ ಅಡಿಷನಲ್ ಶೀಟ್ ಕೊಡಲು ಹತ್ತಾರು ನಿಮಿಷ ಕಾಯಿಸಿ ಅಡಿಷನಲ್ ಶೀಟ್ ಕೊಡಲು ತಡ ಮಾಡಿದ್ದಾರೆ. ಇದರಿಂದಾಗಿ ಶೀಟ್ ಪಡೆಯಲು 15- 20 ನಿಮಿಷ ಕಾದು ವಿದ್ಯಾರ್ಥಿಗಳು ಪರೀಕ್ಷೆ ಬರೆದ ಘಟನೆಯೂ ನಡೆದಿದೆ. ಈ ಕಾರಣದಿಂದ ವಿದ್ಯಾರ್ಥಿಗಳ ಅಮೂಲ್ಯ ಸಮಯ ವ್ಯರ್ಥವಾಗಿದ್ದು, ಮಂಡಳಿಯ ಈ ಅವ್ಯವಸ್ಥೆಯ ವಿರುದ್ಧ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಂಡಳಿಯ ಅವ್ಯವಸ್ಥೆಯಿಂದಾಗಿ ಈ ಬಾರಿಯ ಎಸ್ಸೆಸ್ಸೆಲ್ಸಿ ಗಣಿತ ಪರೀಕ್ಷೆಯಲ್ಲಿ ಮಕ್ಕಳು ಬಹಳಷ್ಟು ಗಲಿಬಿಲಿಗೊಂಡು ತೊಂದರೆ ಅನುಭವಿಸಿದ್ದಾರೆ.

ಕಾಸರಗೋಡಿನ ಡಾ. ಚೇತನಾಗೆ ಜಾಗತಿಕ ಗೌರವ

ಹ್ಯಾಲೆಟ್ ಪ್ರೈಜ್ ಮೆಡಲ್ ಪ್ರಶಸ್ತಿ ಪ್ರದಾನ

ಕಾಸರಗೋಡು: ಕಾಸರಗೋಡು ಸಮೀಪದ ಮೇಲ್ಪರಂಬ ನಿವಾಸಿ ಡಾ.ಚೇತನಾ ಸಿ.ಎಸ್. ಅವರು ಎಂಆರ್‌ಸಿಎಸ್ (ಇಎನ್‌ಟಿ) ಪರೀಕ್ಷೆಯಲ್ಲಿ ಶೇಕಡಾ 92 ಅಂಕಗಳನ್ನು ಗಳಿಸಿ ಜಾಗತಿಕ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಇಂಗ್ಲೆಂಡಿನ ರಾಯಲ್ ಕಾಲೇಜ್ ಆಫ್ ಸರ್ಜನ್ಸ್ ವತಿಯಿಂದ ಪ್ರದಾನವಾಗುವ ಹ್ಯಾಲೆಟ್ ಪ್ರೈಜ್ ಮೆಡಲ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮಾರ್ಚ್ 26ರಂದು ಲಂಡನ್‌ನಲ್ಲಿ ನಡೆದ ಸಮಾರಂಭದಲ್ಲಿ ಈ ಗೌರವವನ್ನು ಪ್ರದಾನ ಮಾಡಲಾಯಿತು.

ಸರ್ಜನ್‌ಗಳಿಗೆ ಜಾಗತಿಕ ಮಟ್ಟದಲ್ಲಿ ನೀಡಲಾಗುವ ಅತ್ಯುನ್ನತ ಗೌರವಗಳಲ್ಲಿ ಒಂದಾದ ಈ ಪ್ರಶಸ್ತಿ, ಎಂ.ಆರ್.ಸಿ.ಎಸ್. ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲೇ ಶೇಕಡಾ 90ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ ಅಗ್ರ ಪ್ರತಿಭಾವಂತರಿಗೆ ಮಾತ್ರವೇ ನೀಡಲಾಗುತ್ತದೆ. ಈ ಬಾರಿ ಡಾ.ಚೇತನಾ ಅವರು ಶೇಕಡಾ 92 ಅಂಕಗಳೊಂದಿಗೆ ವಿಶಿಷ್ಟ ಸಾಧನೆ ಮಾಡಿರುವುದು ಗಮನಾರ್ಹ. ಭಾರತದಲ್ಲಿ ಈ ಗೌರವಕ್ಕೆ ಪಾತ್ರರಾದ ವೈದ್ಯರುಗಳ ಸಂಖ್ಯೆ ಅತ್ಯಲ್ಪವಾಗಿದೆ.



ಪ್ರಸ್ತುತ ಮಂಗಳೂರಿನ ಎ.ಜೆ. ಮೆಡಿಕಲ್ ಕಾಲೇಜ್‌ನಲ್ಲಿ ಇ.ಎನ್.ಟಿ ತಜ್ಞೆಯಾಗಿ ಸೇವೆ ಸಲ್ಲಿಸುತ್ತಿರುವ ಅವರು, ಯೆನೆಪೋಯ ಮೆಡಿಕಲ್ ಕಾಲೇಜಿನ ಅಸೋಸಿಯೇಟ್ ಪ್ರೊಫೆಸರ್ ಹಾಗೂ ಮನೋವೈದ್ಯರಾದ ಡಾ.ಶಾಶ್ವತ್ ಸತ್ಯನಾಥ್ ಅವರ ಪತ್ನಿ. ದಂಪತಿಗೆ ಅನುಷ್ಕಾ ಎಂಬ ಪುತ್ರಿ ಇದ್ದಾಳೆ.

ಡಾ.ಚೇತನಾ ಅವರು ಕಾಸರಗೋಡಿನ ಕಳನಾಡು ನರ್ಸಿಂಗ್ ಹೋಂನ ಡಾ.ಎಂ. ಸತ್ಯನಾಥ್ ಮತ್ತು ಡಾ.ಗೀತಾ ಸತ್ಯನಾಥ್ ಅವರ ಸೊಸೆಯಾಗಿದ್ದು, ಉಜಿರೆಯ ಪ್ರೊ.ಶಿವರಾವ್ ಹಾಗೂ ಜಾಹ್ನವಿ ದಂಪತಿಯ ಪುತ್ರಿಯಾಗಿದ್ದಾರೆ.

> **ಸಂಘಟನೆಗಳ ಅಭಿನಂದನೆ**
> ವೈದ್ಯಕೀಯ ಕ್ಷೇತ್ರದಲ್ಲಿ ತಮ್ಮ ಅಪ್ರತಿಮ ಸಾಧನೆಯ ಮೂಲಕ ಡಾ.ಚೇತನಾ ಅವರು ಕಾಸರಗೋಡು ಹಾಗೂ ಕರ್ನಾಟಕಕ್ಕೆ ಹೆಮ್ಮೆ ತಂದಿದ್ದಾರೆ. ಅವರ ಈ ಅತ್ಯುನ್ನತ ಸಾಧನೆಗೆ ಕಾಸರಗೋಡು ಹಾಗೂ ಮಂಗಳೂರಿನ ಐಎಂಎ ಸಹಿತ ನೂರಾರು ಸಂಘಟನೆಗಳು ಅಭಿನಂದನೆ ಸಲ್ಲಿಸಿವೆ.

ಹಿಂದು ಸಂಘಟನೆಗಳಿಂದ ತೀವ್ರ ಆಕ್ರೋಶ | ಸೂಕ್ತ ಕ್ರಮಕ್ಕೆ ಆಗ್ರಹಿಸಿ ದೈವ ಆರಾಧಕರು, ನರ್ತಕರ ಸಂಘದಿಂದ ಮಡಿಕೇರಿ ಪೊಲೀಸರಿಗೆ ದೂರು ಸಲ್ಲಿಕೆ

ಮದುವೆಯಲ್ಲಿ ಮದುಮಗನಿಗೆ ತುಳುನಾಡಿನ ದೈವ ಹೋಲುವ ಅಲಂಕಾರ

ಮಡಿಕೇರಿ: ಕೊಡಗು ಜಿಲ್ಲೆಯ ಎಮ್ಮೆಮಾಡು ಪರಿಸರದಲ್ಲಿ ನಡೆದ ಮುಸ್ಲಿಂ ಸಮುದಾಯದ ಮದುವೆ ಸಮಾರಂಭವೊಂದರಲ್ಲಿ, ತುಳುನಾಡಿನ ಪವಿತ್ರ ದೈವವನ್ನೇ ಹೋಲುವ ರೀತಿಯಲ್ಲಿ ಮದುಮಗನಿಗೆ ವೇಷ ಹಾಕಿ ಅತಿರೇಕದ ವರ್ತನೆ ತೋರಿರುವ ಘಟನೆ ಇದೀಗ ಹಿಂದೂ ಸಂಘಟನೆಗಳ ಆಕ್ರೋಶಕ್ಕೆ ಕಾರಣವಾಗಿದೆ.

ಮದುಮಗ ಮತ್ತು ಆತನ ಬೆಂಬಲಿಗರ ಈ ವೀಡಿಯೋಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಆಕ್ರೋಶ ವ್ಯಕ್ತವಾಗಿದೆ.

ಮುಸ್ಲಿಂ ಸಮುದಾಯದಲ್ಲಿ ಮದುವೆ ದಿನದ ರಾತ್ರಿ ಮದುಮಗ ತನ್ನ ಸ್ನೇಹಿತರೊಂದಿಗೆ ಸೇರಿ ತಮಾಷೆಗಾಗಿ ಒಂದಷ್ಟು ವಿನೋದದ ಕಾರ್ಯಕ್ರಮಗಳನ್ನು ಮಾಡುವುದು ರೂಢಿ. ಆದರೆ ಎಮ್ಮೆಮಾಡಿನಲ್ಲಿ ನಡೆದ ಈ ವಿವಾಹದಲ್ಲಿ ಮದುಮಗನಿಗೆ ತುಳುನಾಡಿನ ದೈವದ ಕೋಲದ ಮಾದರಿಯಲ್ಲಿ ಮುಖ ಹಾಗೂ ಮೈಗೆ ಬಣ್ಣ ಬಳಿದು, ದೈವವನ್ನೇ ಅಣಕಿಸುವ ರೀತಿಯಲ್ಲಿ ಕುಳ್ಳಿರಿಸಲಾಗಿದೆ.





ಈ ವೀಡಿಯೋ ವೈರಲ್ ಆಗುತ್ತಿದ್ದಂತೆ ಸಾರ್ವಜನಿಕ ವಲಯದಲ್ಲಿ ತೀವ್ರ ಖಂಡನೆ ವ್ಯಕ್ತವಾಗಿದೆ. ಕೇವಲ ಹಿಂದೂ ಸಂಘಟನೆಗಳು ಮಾತ್ರವಲ್ಲದೆ, ಸ್ವತಃ ಮುಸ್ಲಿಂ ಸಮುದಾಯದ ಅನೇಕರು ಈ ನಡೆಯನ್ನು ಖಂಡಿಸಿದ್ದಾರೆ.

> **6 ಮಂದಿ ವಿರುದ್ಧ ಎಫ್‌ಐಆರ್**
> ಪ್ರಕರಣಕ್ಕೆ ಸಂಬಂಧಿಸಿದಂತೆ ನಾಪೋಕ್ಲು ಠಾಣೆಯಲ್ಲಿ ದೂರು ದಾಖಲಾಗಿದ್ದು, ಆರು ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿರುವುದಾಗಿ ಮೂಲಗಳು ತಿಳಿಸಿವೆ.

"ಇಂತಹ ವರ್ತನೆಗಳು ಸಮಾಜದ ಶಾಂತಿ ಕದಡುತ್ತವೆ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುತ್ತವೆ" ಎಂದು ಸಮುದಾಯದ ಹಿರಿಯರು ಆಡಿಯೋಗಳ ಮೂಲಕ ಅಸಮಾಧಾನ ಹೊರಹಾಕುತ್ತಿದ್ದಾರೆ. ಧಾರ್ಮಿಕ ಸಾಮರಸ್ಯಕ್ಕೆ ಧಕ್ಕೆ ತರುವ ಇಂತಹ ಕೃತ್ಯಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ.

> **ದೈವ ಆರಾಧಕರು, ದೈವ ನರ್ತಕರ ಸಂಘದಿಂದ ಖಂಡನೆ**
> ಈ ನಡುವೆ ಈ ಕೃತ್ಯವನ್ನು ಖಂಡಿಸಿರುವ ಕೊಡಗು ಜಿಲ್ಲಾ ದೈವ ಆರಾಧಕರು ಮತ್ತು ನರ್ತಕರ ಸಂಘವು ಖಂಡಿಸಿದ್ದು, ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದೆ. ಈ ಸಂಬಂಧ ಮಡಿಕೇರಿ ಉಪ ಪೊಲೀಸ್ ಅಧೀಕ್ಷಕ ಸೂರಜ್ ಅವರಿಗೆ ಮನವಿ ಸಲ್ಲಿಸಿರುವ ಸಂಘದ ಪ್ರಮುಖರು, ಮುಸ್ಲಿಂ ಸಮುದಾಯದ ಮದುವೆ ಸಮಾರಂಭದಲ್ಲಿ ಮದುಮಗನು ತುಳುನಾಡಿನ ದೈವಕೊಲದ ಮಾದರಿ ಮುಖಕ್ಕೆ ಬಣ್ಣ ಬಳಿದು ದೈವವನ್ನೇ ಅಣಕಿಸುವ ರೀತಿಯಲ್ಲಿ ವಿಕೃತವಾಗಿ ವರ್ತಿಸಿದ್ದು, ಇದನ್ನು ದೈವ ಆರಾಧಕರು ಮತ್ತು ದೈವ ನರ್ತಕರ ಸಂಘ ತೀವ್ರವಾಗಿ ಖಂಡಿಸುತ್ತದೆ. ದೈವ ಆರಾಧನೆ ನಮ್ಮ ಹಿರಿಯರು ಹಾಕಿಕೊಟ್ಟಿರುವ ಮೂಲನಂಬಿಕೆ, ಮೂಲ ಪದ್ಧತಿಯ ಆಧಾರವಾಗಿದೆ. ದೈವ ಆರಾಧನೆ ಪ್ರದರ್ಶನದ ಕಲೆಯಲ್ಲ ಹಾಗೂ ಜಾನಪದ ಕಲೆಯೂ ಅಲ್ಲ. ಈ ರೀತಿಯಲ್ಲಿ ದೈವವನ್ನೇ ಹೊಲುವ ರೀತಿ ವೇಷಭೂಷಣ ಹಾಕಿ ದೈವಕ್ಕೆ ಅಪಮಾನ ಅಪಹಾಸ್ಯ ಮಾಡಿದಲ್ಲದೇ ದೈವಾರಾಧನೆ ಮಾಡುವ ಸಮುದಾಯಕ್ಕೆ ನಿಂದನೆ ಮಾಡಿದಂತಾಗಿದೆ. ಆದುದರಿಂದ ಈ ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸಿ ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸಂಘದ ಪ್ರಮುಖರಾದ ಪಿ.ಎಂ.ರವಿ, ಹರೀಶ್ ಆಚಾರ್ಯ ಮತ್ತಿತರರು ಒತ್ತಾಯಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 25° | ಉಡುಪಿ 32° 26°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಮಂಗಳವಾರ 31, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ರಜಾ ದಿನಗಳಲ್ಲೂ ಇಲ್ಲಿ ಟ್ರಾಫಿಕ್ ಜಾಮ್ ಮಾಮೂಲು!
ಪುಟ 2



ನಿರಂತರ ಹೋರಾಟ, ಟೀಕೆ ನಡುವೆ ಕೊನೆಗೂ ಸುಗಮ ಹಾದಿ
ಪುಟ 6

ಕಾಸರಗೋಡು, ಮಂಜೇಶ್ವರ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳಿಂದ ಸಾಗುತ್ತಿದೆ ಬಿರುಸಿನ ಚುನಾವಣಾ ಪ್ರಚಾರ







ಕೇರಳ ವಿಧಾನ ಸಭಾ ಚುನಾವಣೆ ಭರ್ಜರಿಯಾಗಿ ಕಾವೇರುತ್ತಿದ್ದು, ಕಾಸರಗೋಡು ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ, ಮಂಜೇಶ್ವರ ವಿಧಾನ ಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಎ.ಕೆ.ಎಂ. ಅಶ್ರಫ್, ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ಅವರು ಖುದ್ದು ಮತದಾರರ ಮನೆಮನೆಗಳಿಗೆ ತೆರಳಿ ಬಿರುಸಿನ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ. ಕಾರ್ಯಕರ್ತರು ಸುಡುವ ಬಿಸಿಲನ್ನೂ ಲೆಕ್ಕಿಸದೆ ಹೆಜ್ಜೆ ಹಾಕುತ್ತಿದ್ದಾರೆ.

ಸುತ್ತಮುತ್ತ

ಇಳಿಕೆಯಾಗದ ಉಷ್ಣಾಂಶ: ಏ.4ರ ತನಕ ಕರಾವಳಿಯ ವಿವಿಧ ಭಾಗಗಳಲ್ಲಿ ಮಳೆ?

ಮಂಗಳೂರು: ದಕ್ಷಿಣ ಕನ್ನಡ ಸಹಿತ ಕರಾವಳಿ ಜಿಲ್ಲೆಗಳಲ್ಲಿ ತಾಪಮಾನ ಏರಿಕೆ ಯಥಾಸ್ಥಿತಿಯಲ್ಲಿ ಮುಂದುವರಿದಿದ್ದು, ಈ ನಡುವೆ ಏ.4ರ ತನಕ ಅಲ್ಲಲ್ಲಿ ಹಗುರ ಮಳೆ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸೋಮವಾರ ದಿನದ ಬಹುತೇಕ ಭಾಗ ಮೋಡ ಕವಿದ ವಾತಾವರಣ ಕಂಡುಬಂದಿದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಠ 35, ಉಡುಪಿಯಲ್ಲಿ 33, ಕಾಸರಗೋಡಿನಲ್ಲಿ 32 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿತ್ತು.

ಪೂಂಬಾಡಿ ಪರಿಸರದಲ್ಲಿ ಕಾಡಾನೆಗಳ ಮೊಕ್ಕಾಂ: ಭಯಾತಂಕದಲ್ಲಿ ಕೃಷಿಕರು

ಸುಳ್ಯ: ಇಲ್ಲಿನ ಮಡಪ್ಪಾಡಿ ಗ್ರಾಮದಲ್ಲಿ ಕಾಡಾನೆಗಳ ಹಾವಳಿ ಕಂಡುಬಂದಿದ್ದು ಕೃಷಿಕರು ಮತ್ತೆ ಆತಂಕಕ್ಕೆ ಒಳಗಾಗಿದ್ದಾರೆ. ಇಲ್ಲಿನ ಪೂಂಬಾಡಿ ಪರಿಸರದಲ್ಲಿ ಆನೆಗಳು ಬೀಡುಬಿಟ್ಟಿವೆ ಎಂದು ಶಂಕಿಸಲಾಗಿದ್ದು, ಇಲ್ಲಿಂದ ಕತ್ತಲಾಗುತ್ತಿದ್ದಂತೆಯೇ ಕೃಷಿ ಭೂಮಿಗೆ ನುಗ್ಗುವ ಸಲಗಗಳು ಅಪಾರ ಪ್ರಮಾಣದಲ್ಲಿ ಬೆಳೆ ಹಾನಿ ಮಾಡುತ್ತಿವೆ ಎಂದು ಕೃಷಿಕರು ದೂರಿದ್ದಾರೆ. ಅರಣ್ಯ ಇಲಾಖೆ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ಆಗ್ರಹಿಸುತ್ತಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಕ್ತಾಯ: ಫಲಿತಾಂಶ ಈ ಬಾರಿ ವಿಳಂಬ ಸಾಧ್ಯತೆ

ಕಾಸರಗೋಡು: ಜಿಲ್ಲೆಯಲ್ಲಿ ಮಾ.5ರಂದು ಆರಂಭಗೊಂಡ ಕೇರಳ ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಮಾ.30ರಂದು ಮುಕ್ತಾಯವಾಗಿದೆ. ಉತ್ತರ ಪತ್ರಿಕೆಗಳ ಮೌಲ್ಯಮಾಪನ ಏ.16ರಂದು ಆರಂಭಗೊಳ್ಳಲಿದೆ. ಆದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಫಲಿತಾಂಶ ಪ್ರಕಟಗೊಳ್ಳುವಲ್ಲಿ ಅಲ್ಪ ವಿಳಂಬವಾಗುವ ಸಾಧ್ಯತೆಯಿದೆ. ಈ ಬಾರಿಯ ಪರೀಕ್ಷೆಗೆ ರಾಜ್ಯದಲ್ಲಿ 13 ಲಕ್ಷಕ್ಕಿಂತಲೂ ಅಧಿಕ ಮಂದಿ ವಿದ್ಯಾರ್ಥಿಗಳು ಹಾಜರಾಗಿದ್ದರು.

ಶನಿವಾರದ ಗಾಳಿ ಮಳೆಗೆ ಬೆಳ್ತಂಗಡಿಯಲ್ಲಿ 128 ವಿದ್ಯುತ್ ಕಂಬಗಳು ಧರೆಗೆ

ಬೆಳ್ತಂಗಡಿ: ತಾಲೂಕಿನಲ್ಲಿ ಶನಿವಾರ ಸಂಜೆ ಸುರಿದ ಭಾರಿ ಗಾಳಿ ಮಳೆಗೆ ನೂರಾರು ವಿದ್ಯುತ್ ಕಂಬಗಳು ಧರೆಗೆ ಉರುಳಿವೆ. ಬೆಳ್ತಂಗಡಿ ವ್ಯಾಪ್ತಿಯ 70 ಕಡೆಗಳಲ್ಲಿ ಹಾಗೂ ಉಜಿರೆ ವ್ಯಾಪ್ತಿಯ 58 ಕಡೆಗಳಲ್ಲಿ ವಿದ್ಯುತ್ ಕಂಬಗಳು ಧರೆಗೆ ಉರುಳಿವೆ.

ಪೂರಿ, ಬನ್ಸ್, ಪರೋಟ, ಇಡ್ಲಿ, ದೋಸೆ

ಏಟು ಕೊಡ್ತಿದೆ ರೇಟ್

ಬೆಲೆ ಏರಿಸಿಕೊಂಡಿವೆ ಹೋಟೇಲ್ ತಿಂಡಿ

ಕಾಸರಗೋಡು: ವಾಣಿಜ್ಯ ಬಳಕೆ ಅಡುಗೆ ಅನಿಲ ಸಿಲಿಂಡರ್ ಕೊರತೆ ಕಾಸರಗೋಡು ಜಿಲ್ಲೆಯಲ್ಲಿ ಮುಂದುವರಿದಿದ್ದು, ಇದರ ಬೆನ್ನಲ್ಲೇ ಹೋಟೇಲ್ ತಿಂಡಿಗಳ ದರದಲ್ಲಿ ಹಠಾತ್ ಭಾರೀ ಏರಿಕೆಯಾಗಿದೆ.

ಕಾಸರಗೋಡಲ್ಲಿ ಮೊದಲು!

ಕೇರಳದ ವಿವಿಧ ಜಿಲ್ಲೆಗಳ ಹೋಟೇಲ್‌ಗಳಲ್ಲಿ ವಿವಿಧ ತಿಂಡಿ ತಿನಸುಗಳಿಗೆ ಕಳೆದ ಕೆಲವು ದಿನಗಳ ಹಿಂದೆ ಬೆಲೆ ಹೆಚ್ಚಿಸಲಾಗಿದೆ. ಅದರಂತೆ ಕಾಸರಗೋಡು ನಗರದಲ್ಲಿ ಇದೀಗ ಪ್ರಥಮವಾಗಿ ದರಯೇರಿಕೆ ಜಾರಿಗೆ ಬಂದಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲಾ ನಗರ, ಗ್ರಾಮೀಣ ಪ್ರದೇಶಗಳ ಹೋಟೇಲ್‌ಗಳಲ್ಲಿ ಬೆಲೆ ಯೇರಿಕೆ ಅನುಷ್ಠಾನಗೊಳ್ಳಲಿದೆ.

ಕೆಲವು ಹೋಟೇಲ್‌ಗಳು ಬಂದ್

ಇದೇ ವೇಳೆ ಜಿಲ್ಲೆಯ ಕೆಲವು ಹೋಟೇಲ್‌ಗಳು ಮುಚ್ಚುಗಡೆಗೊಂಡಿವೆ. ಈ ಹಿನ್ನೆಲೆಯಲ್ಲಿ ಹೊರರಾಜ್ಯಗಳ ಕಾರ್ಮಿಕರು ಅವರ ಊರುಗಳಿಗೆ ತೆರಳಿದ್ದಾರೆ. ಈ ನಿಟ್ಟಿನಲ್ಲಿ ಇಮ್ಮಡಿ ಕೂಲಿ ನೀಡಿ ಸ್ಥಳೀಯ ಕಾರ್ಮಿಕರನ್ನು ನೌಕರಿಗೆ ತೆಗೆಯಬೇಕಾಗುತ್ತದೆ. ದಿನಂಪ್ರತಿ ಖರ್ಚು ಏರಿಕೆಯಾದ ಕಾರಣ ಆಹಾರ ಪದಾರ್ಥಗಳ ದರ ಏರಿಕೆ ಅನಿವಾರ್ಯವಾಗಿದೆ ಎಂದು ಕೇರಳ ಹೋಟೇಲ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಶನ್‌ನ ಜಿಲ್ಲಾ ಪದಾಧಿಕಾರಿಗಳು ಪತ್ರಿಕೆಗೆ ತಿಳಿಸಿದ್ದಾರೆ.



ಹೀಗಿದೆ ರೇಟ್ ಲಿಸ್ಟ್

ಪೂರಿಗೆ 5 ರೂ., ಪರೋಟಕ್ಕೆ 4 ರೂ., ಇಡ್ಲಿಗೆ 3 ರೂ., ದೋಸೆಗೆ 2 ರೂ., ಇತರ ತಿಂಡಿಗಳಿಗೆ 2 ರಿಂದ 4ರೂ. ಚಹಾಕ್ಕೆ 5ರೂ., ಕಾಫಿಗೆ 5 ರೂ. ಹೆಚ್ಚಿಸಲಾಗಿದೆ. ಕೋಳಿ ಪದಾರ್ಥ ಮತ್ತು ಮೊಟ್ಟೆ ಪದಾರ್ಥಗಳಿಗೆ 20 ರೂಪಾಯಿಯಷ್ಟು ದರ ಏರಿಸಲಾಗಿದೆ.

ಮೂರುಪಟ್ಟು ಹೆಚ್ಚು ಬೆಲೆ ನೀಡಿ ಸಿಲಿಂಡರ್ ಖರೀದಿ

ಮೂರುಪಟ್ಟು ಹೆಚ್ಚು ಬೆಲೆ ನೀಡಿ ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಖರೀದಿಸಬೇಕಾಗುತ್ತದೆ. ಅಲ್ಲದೆ ಕಟ್ಟಿಗೆಗೆ ಲೋಡ್‌ವೊಂದಕ್ಕೆ 6,000ರೂ. ತನಕ ದರ ವಿಧಿಸಲಾಗುತ್ತಿದೆ. ಇದರಿಂದಾಗಿ ಆಹಾರ ವಸ್ತುಗಳಿಗೆ ಬೆಲೆಯೇರಿಕೆ ಅನಿವಾರ್ಯವಾಯಿತು ಎಂದು ಕಾಸರಗೋಡು ನಗರದ ಹೋಟೇಲ್ ಮಾಲಕರು ತಿಳಿಸಿದ್ದಾರೆ.

ವಾರಾಂತ್ಯದ ರಜೆಗೆ ಇನ್ನಷ್ಟು ಕಳೆ

ಓಡಾಟ ನಡೆಸಲಿದೆ ವಿಶೇಷ ರೈಲುಬಂಡಿ

ಕರಾವಳಿಗೆ ರೈಲ್ವೆಯಿಂದ ಸಿಹಿ ಸುದ್ದಿ

ಉಡುಪಿ: ಏಪ್ರಿಲ್ ಮೊದಲ ವಾರದ ವಾರಾಂತ್ಯದ ರಜೆ ಹಿನ್ನೆಲೆಯಲ್ಲಿ ಪ್ರಯಾಣಿಕರ ಅತಿಯಾದ ದಟ್ಟಣೆಯನ್ನು ನಿಯಂತ್ರಿಸಲು ನೈಋತ್ಯ ರೈಲ್ವೆಯು ಬೆಂಗಳೂರಿನಿಂದ ಕೇರಳ ಮತ್ತು ಗೋವಾಕ್ಕೆ ವಿಶೇಷ ರೈಲುಗಳ ಸಂಚಾರವನ್ನು ಘೋಷಿಸಿದೆ.

ಕೊಚುವೇಲಿಗೆ ವಿಶೇಷ ರೈಲು

ಬೆಂಗಳೂರಿನ ಎಸ್‌ಎಂವಿಟಿ ನಿಲ್ದಾಣದಿಂದ ಕೇರಳದ ಕೊಚುವೇಲಿಗೆ ವಿಶೇಷ ರೈಲು ಏಪ್ರಿಲ್ 2ರಂದು ಸಂಜೆ 6.30ಕ್ಕೆ ಹೊರಡಲಿದೆ. ಈ ರೈಲು ಸೇಲಂ ಮತ್ತು ಪಾಲಕ್ಕಾಡ್ ಮೂಲಕ ಕೇರಳದ ಕೊಚುವೇಲಿಗೆ ಸಂಚರಿಸಲಿದೆ.

ಅದೇ ರೀತಿ, ಗೋವಾಕ್ಕೆ ತೆರಳುವ ಪ್ರವಾಸಿಗರಿಗಾಗಿ ಹುಬ್ಬಳ್ಳಿ ಮತ್ತು ಬೆಳಗಾವಿ ಮಾರ್ಗವಾಗಿ ವಿಶೇಷ ರೈಲು ವ್ಯವಸ್ಥೆ ಮಾಡಲಾಗಿದೆ. ಕೊಂಕಣ ರೈಲ್ವೆ ಮಾರ್ಗದ ಉಡುಪಿ ಮತ್ತು ಮಂಗಳೂರು ಮೂಲಕ ಹಾದುಹೋಗುವ ರೈಲುಗಳಲ್ಲಿ ಈಗಾಗಲೇ ಟಿಕೆಟ್ ಬುಕಿಂಗ್ ಭರ್ತಿಯಾಗುತ್ತಿದ್ದು ಪ್ರಯಾಣಿಕರ ಒತ್ತಡ ಹೆಚ್ಚಿರುವ ಕಾರಣ ಈ ವಿಶೇಷ ರೈಲುಗಳು ಸಹಕಾರಿಯಾಗಲಿವೆ.



ಐಆರ್‌ಸಿಟಿಸಿ ಜಾಲತಾಣ ಬಳಸಿಕೊಳ್ಳಲು ಮನವಿ

ಏ.3 ಗುಡ್ ಫ್ರೈಡೇ, ಏ. 4, 5 ಶನಿವಾರ, ಭಾನುವಾರದ ರಜೆ ಇರುವುದರಿಂದ ಪ್ರವಾಸಿಗರು ಮತ್ತು ಊರಿಗೆ ತೆರಳುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಲಿದೆ. ಪ್ರಯಾಣಿಕರು ಐಆರ್‌ಸಿಟಿಸಿ ಜಾಲತಾಣದ ಮೂಲಕ ಈ ವಿಶೇಷ ರೈಲುಗಳ ಸೌಲಭ್ಯ ಪಡೆಯುವಂತೆ ರೈಲ್ವೆ ಇಲಾಖೆ ತಿಳಿಸಿದೆ.

ಬೇಸಿಗೆ ಬೇಗೆಗೆ ಗ್ರಾಹಕರಿಗೆ ಇನ್ನಷ್ಟು ಆಪ್ತವಾದ ತೈವಾನ್, ನಾಮಧಾರಿ


ಈಗ ಜೇಬನ್ನೂ ತಂಪಾಗಿಸಿದೆ ಬಚ್ಚಂಗಾಯಿ!

ಮಂಗಳೂರು: ಮಧ್ಯಪ್ರಾಚ್ಯದ ಯುದ್ಧ ಬಿಕ್ಕಟ್ಟು ಈಗ ಕಲ್ಲಂಗಡಿ ಹಣ್ಣಿನ ಧಾರಣೆ ಮೇಲೂ ಪ್ರಭಾವ ಬೀರಿದೆ!

ಹೌದು, ಕಳೆದ ಕೆಲವು ದಿನಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಲಂಗಡಿ ಹಣ್ಣಿನ ಧಾರಣೆ ಸತತವಾಗಿ ಕುಸಿತ ಕಾಣುತ್ತಿದೆ.

ಏನಿದು? ಯಾಕಿದು?

ಒಂದೆಡೆ ಕೊಲ್ಲಿ ಯುದ್ಧದ ಹಿನ್ನೆಲೆಯಲ್ಲಿ ವಿದೇಶಗಳಿಗೆ ರಫ್ತಾಗುತ್ತಿರುವ ಕಲ್ಲಂಗಡಿ ಹಣ್ಣುಗಳ ಪ್ರಮಾಣ ಇಳಿಕೆ ಕಂಡಿದೆ. ಇನ್ನೊಂದೆಡೆ ಈ ಬಾರಿ ಉತ್ತಮ ಫಸಲು ಕೂಡಾ ಲಭಿಸಿದೆ. ಮತ್ತೊಂದೆಡೆ ಉಳಿದ ಜಿಲ್ಲೆಗಳಿಂದ ಜಿಲ್ಲೆಗೆ ನಿತ್ಯ ಲೋಡುಗಟ್ಟಲೆ ಕಲ್ಲಂಗಡಿ ಹಣ್ಣುಗಳು ಬಂದು ಬೀಳುತ್ತಿವೆ.



ಇವೆಲ್ಲದರ ಒಟ್ಟು ಪರಿಣಾಮವಾಗಿ ಈಗ ಮಾರುಕಟ್ಟೆಯಲ್ಲಿ ಕಲ್ಲಂಗಡಿ ಹೇರಳವಾಗಿ ಲಭ್ಯವಾಗುತ್ತಿದ್ದು, ಧಾರಣೆಯಲ್ಲಿ ಕೂಡಾ ಸತತ ಕುಸಿತವಾಗುತ್ತಿದೆ.

10-15 ರೂ.ಗಳಷ್ಟು ಇಳಿಕೆ

ಈ ಹಿಂದೆ ಕಿಲೋ ಒಂದಕ್ಕೆ 30 ರೂ.ಗಳಿದ್ದ ಸಣ್ಣ ಬಗೆಯ ತೈವಾನ್ ಕಲ್ಲಂಗಡಿಗಳು ಈಗ ಮಾರುಕಟ್ಟೆಯಲ್ಲಿ ಕಿಲೋ ಒಂದಕ್ಕೆ 20 ರೂ.ಗಳಿಗೆ, ರಸ್ತೆ ಬದಿಗಳಲ್ಲಿ 10-15 ರೂ.ಗಳಿಗೆ ಲಭ್ಯವಾಗುತ್ತಿದೆ. ನಾಮಧಾರಿ ದೊಡ್ಡ ಗಾತ್ರದ ಕಲ್ಲಂಗಡಿ ಬೆಲೆ ಕೂಡಾ ಭಾರೀ ಇಳಿಕೆ ಕಂಡಿದೆ.

- **ಕಿಲೋ ಒಂದಕ್ಕೆ 10 ರೂ. ಗಳಷ್ಟು ಇಳಿಕೆಯಾದ ಬೆಲೆ**
- **ತೈವಾನ್, ನಾಮಧಾರಿ ಕಲ್ಲಂಗಡಿಗೆ ಭಾರೀ ಬೇಡಿಕೆ**
- **ಬಿಸಿಲ ತಾಪಕ್ಕೆ ತಂಪೆರೆದಿವೆ ಈ ಸಿಹಿ ಸಿಹಿ ಹಣ್ಣುಗಳು**

ಉಳಿದ ಹಣ್ಣುಗಳ ಧಾರಣೆ ಸದ್ಯಕ್ಕೆ ಸ್ಥಿರ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಲ್ಲಂಗಡಿ ಹಣ್ಣಿನ ಧಾರಣೆ ಮಾತ್ರ ಇಳಿಕೆಯಾಗಿದ್ದು, ಉಳಿದಂತೆ ಇತರೆ ಹಣ್ಣುಗಳ ಧಾರಣೆ ಯಥಾಸ್ಥಿತಿ ಇದೆ. ಈ ನಡುವೆ ಎಳನೀರಿಗೆ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಧಾರಣೆ ತುಸು ಏರಿಕೆ ಕಂಡಿದೆ. ಊರಿನ ಎಳನೀರಿಗೆ 60 ರಿಂದ 65 ರೂ. ಗೆಂದಾಳಿ ತಳಿಗೆ 70ರಿಂದ 75 ರೂ.ಗಳಿಗೆ ಮಾರಾಟವಾಗುತ್ತಿದೆ.

ನದಿಗೆ ಧುಮುಕಿದ ಕಂಬಳ ಕೋಣ: ಸಹಾಯಕನಿಗೆ ಸಿಕ್ತು 'ರಕ್ಷಿತ'ನ ರಕ್ಷಣೆ

ಸಮಯಪ್ರಜ್ಞೆಗೆ ಸಿಕ್ಕಿತು ಸನ್ಮಾನದ ಗೌರವ

ಉಪ್ಪಿನಂಗಡಿ: ವಿಜಯ-ವಿಕ್ರಮ ಜೋಡುಕರೆ ಕಂಬಳ ಸಮಿತಿ ನೇತೃತ್ವದಲ್ಲಿ ನಡೆದ ಉಬಾರ್ ಕಂಬಳೋತ್ಸವದಲ್ಲಿ ಕಂಬಳದ ಕೋಣವೊಂದು ಹಠಾತ್ ನದಿ ನೀರಿಗೆ ಇಳಿದಿದ್ದು ಅದರೊಂದಿಗೆ ಅದನ್ನು ನಿಯಂತ್ರಿಸುತ್ತಿದ್ದ ಯುವಕನೂ ಎಳೆದೊಯ್ಯಲ್ಪಟ್ಟ ಘಟನೆ ನಡೆದಿದೆ.

ನೀರಿನಲ್ಲಿ ಮುಳುಗಿ ಅಪಾಯಕ್ಕೆ ಸಿಲುಕಿದಾಗ ಕಂಬಳ ಕೋಣಗಳ ಬೇರೆ ತಂಡದೊಂದಿಗೆ ಬಂದಿದ್ದ ರಕ್ಷಿತ್ ಎಂಬ ಯುವಕ ತಕ್ಷಣ ನದಿಗೆ ಹಾರಿ ಅಪಾಯದಲ್ಲಿದ್ದ ವ್ಯಕ್ತಿಯನ್ನು ರಕ್ಷಿಸಿ ದಡಕ್ಕೆ ತಂದಿದ್ದರು. ರಕ್ಷಿತ್ ಅವರ ಸಕಾಲಿಕ ಸಮಯಪ್ರಜ್ಞೆ ಹಾಗೂ ಜೀವದ ಹಂಗನ್ನೇ



ತೊರೆದು ಸಂಕಷ್ಟದಲ್ಲಿದ್ದ ವ್ಯಕ್ತಿಯನ್ನು ರಕ್ಷಿಸಲು ಮುಂದಾಗಿರುವ ಸಾಹಸ ಕಾರ್ಯವನ್ನು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಶ್ಲಾಘಿಸಿ ಸನ್ಮಾನಿಸಿ ಗೌರವಿಸಿದರು.

ಅರಣ್ಯ ಇಲಾಖೆ ಮೇಲೆ ಅಸಮಾಧಾನ | ಆತಂಕದಲ್ಲೇ ಸಾಗುತ್ತಿದೆ ಇಲ್ಲಿ ದಿನ

ವಾರ ಕಳೆದರೂ ಸೆರೆಗೆ ಸಿಗದ ಹುಲಿರಾಯ!

ಸಂಗಮ ವಿಶೇಷ

ಮಡಿಕೇರಿ: ಕಾಡಾನೆಗಳ ಹಾವಳಿಯಿಂದಾಗಿ ಈಗಾಗಲೇ ನಲುಗುತ್ತಿರುವ ಕೊಡಗು ಜಿಲ್ಲೆಯ ಜನತೆ ಈಗ ಹುಲಿಗಳ ಸಂಚಾರದಿಂದ ಭಯ ಪಡುವಂತಾಗಿದೆ.

ಕಳೆದ ವಾರ ಜಿಲ್ಲಾ ಕೇಂದ್ರವಾದ ಮಡಿಕೇರಿ ಹೊರವಲಯದ ಇಬ್ನಿವಳವಾಡಿ ಗ್ರಾಮದಲ್ಲಿ ಹುಲಿಯೊಂದು ಸಂಚರಿಸಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಆದರೆ ಈ ಹುಲಿಯನ್ನು ಹಿಡಿಯಲು ಅರಣ್ಯ ಇಲಾಖೆ ನಡೆಸಿದ ಪ್ರಯತ್ನ ಮಾತ್ರ ಸದ್ಯಕ್ಕೆ ವಿಫಲವಾಗಿದೆ.

ಅರಣ್ಯ ಇಲಾಖೆ ಮಾತ್ರ ಮೌನ

ಇಬ್ನಿವಳವಾಡಿ ಗ್ರಾಮದ 10 ಕಿ.ಮೀ. ವ್ಯಾಪ್ತಿ ಪ್ರದೇಶದಲ್ಲಿ ವನ್ಯಪ್ರಾಣಿಯೊಂದರ ಸಂಚಾರ ಏರುವ ಬಗ್ಗೆ ಹಾಗೂ ಸಾಕುಪ್ರಾಣಿಗಳನ್ನು ಹತ್ಯೆಗೈದ ಮಾಹಿತಿ ಅರಣ್ಯ ಇಲಾಖೆಗೆ ದೊರಕಿದ್ದರೂ, ಯಾವುದೇ ರೀತಿ ಕ್ರಮಗಳನ್ನು ಕೈಗೊಂಡಿಲ್ಲ. ಅಲ್ಲಿ ಓಡಾಡಿರುವುದು ಹುಲಿ ಎಂಬುದು ಖಚಿತವಾಗುತ್ತಿದ್ದಂತೆ, ಸೆರೆ ಹಿಡಿಯಲು ತೀವ್ರ ಶೋಧ ಕಾರ್ಯ ನಡೆಸಿದರಾದರೂ, ಹುಲಿ ಅಲ್ಲಿಂದ ಪರಾರಿಯಾಗಿತ್ತು. ಮತ್ತೊಂದೆಡೆ ಅದೇ ದಿನ ದಕ್ಷಿಣ ಕೊಡಗಿನ ಪೊನ್ನಂಪೇಟೆ ಸಮೀಪ ಅದು ಪತ್ತೆಯಾಗಿತ್ತು. »ಪುಟ 6



ಹುಲಿ ಬೇಟೆಗೆ ಸಿಬ್ಬಂದಿ ತಂಡ ಎಸ್ಟೇಟ್‌ಗೆ ಹೆಜ್ಜೆ...

ಹುಲಿಯ ಚಲನವಲನ ಪತ್ತೆಹಚ್ಚಲು ಸಿಬ್ಬಂದಿಗಳ ತಂಡಗಳು ಎಸ್ಟೇಟ್ ಪ್ರದೇಶದಲ್ಲಿ ಪರಿಶೀಲನೆ ನಡೆಸುತ್ತಿದ್ದು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಡಿನಲ್ಲಿ ಇವುಗಳಿಗೆ ಆಹಾರವೇ ಸಿಗುತ್ತಿಲ್ಲ

ನಾಗರಹೊಳೆ ರಾಷ್ಟ್ರೀಯ ಉದ್ಯಾನವನ್ನು ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸಲಾಗಿದೆ. ಆದರೆ ಅಲ್ಲಿ ಹುಲಿ ಸಂಖ್ಯೆಗೆ ಅನುಗುಣವಾಗಿ ಇತರ ಪ್ರಾಣಿಗಳ ಲಭ್ಯತೆ ಇಲ್ಲದಿರುವುದರಿಂದ ಇವು ನಾಡಿನತ್ತ ಮುಖ ಮಾಡುತ್ತಿವೆ. ಪ್ರಾಣಿಗಳು ಅಕ್ರಮ ಬೇಟೆಗಾರರ ಪಾಲಾಗುತ್ತಿರುವುದು ಹುಲಿಗಳ ಬೇಟೆಗೆ ಪ್ರಾಣಿಗಳ ಅಲಭ್ಯತೆಗೆ ಕಾರಣವಾಗಿದೆ ಎಂಬುದನ್ನು ಕಾಡಂಚಿನಲ್ಲಿರುವ ನಿವಾಸಿಗಳೇ ಹೇಳುತ್ತಾರೆ.

ಕೇವಲ 476 ಅಕ್ಕಿಕಾಳಿನಲ್ಲಿ ಶ್ರೀರಾಮ ರಕ್ಷಾ ಸ್ತೋತ್ರ ರಚನೆ

ಅಚ್ಚರಿ ಮೂಡಿಸಿದ ಹಾವೇರಿಯ ಸಾಧಕ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯದ ಉದ್ಯಮಿ ಅಕ್ಕಿ ಕಾಳಿನಲ್ಲಿ ಬರೆಯುವ ಸೂಕ್ಷ್ಮ ಕಲೆಯನ್ನು ಕರಗತ ಮಾಡಿಕೊಂಡಿರುವ ಕಲಾ ಸಾಧಕ ಮೈಕ್ರೋ ಪರಮೇಶ್ (ಪರಮೇಶ ಸಂಕ್ರಪ್ಪ ಬಂಡಿ), ರಾಮ ನವಮಿಯ ಸಂದರ್ಭದಲ್ಲಿ ಅಕ್ಕಿ ಕಾಳಿನಲ್ಲಿ ಶ್ರೀ ರಾಮ ರಕ್ಷಾ ಸ್ತೋತ್ರವನ್ನು ಬರೆದು ಎಲ್ಲರ ಗಮನಸೆಳೆದಿದ್ದಾರೆ.



ಇಷ್ಟೇ ಅವಧಿಯಲ್ಲಿ!

ಸುಮಾರು 476 ಅಕ್ಕಿ ಕಾಳು ಬಳಸಿ ಸುಮಾರು 10 ಗಂಟೆ 30 ನಿಮಿಷ ಅವಧಿಯಲ್ಲಿ ಈ ಸ್ತೋತ್ರವನ್ನು ಬರೆದರು. ರಾಮ ರಕ್ಷಾ ಸ್ತೋತ್ರ ಬರೆದ ಬಳಿಕ ಅವರು ಇದನ್ನು ಅಚ್ಚುಕಟ್ಟಾಗಿ ಫೋಟೋ ಫ್ರೇಮ್ ಹಾಕಿ ಇರಿಸಿದ್ದಾರೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಉದ್ಯಮಿಯಾಗಿರುವ ಪರಮೇಶ್ ಅವರು ಮೂಲತಃ ಹಾವೇರಿಯವರಾಗಿದ್ದಾರೆ.



ಹಲವು ದಾಖಲೆ ಬರೆದ ಸರದಾರ ಈ ಪರಮೇಶ್

ಮೈಕ್ರೋ ಪರಮೇಶ್ (ಪರಮೇಶ ಸಂಕ್ರಪ್ಪ ಬಂಡಿ) ಅವರು ಅಕ್ಕಿ ಕಾಳಿನಲ್ಲಿ ಬರೆಯುವ ತನ್ನ ಸೂಕ್ಷ್ಮ ಕಲಾ ಸಾಧನೆಗಾಗಿ ಏಷ್ಯಾ ಬುಕ್ ಆಫ್ ರೆಕಾರ್ಡ್, ವಂಡರ್ ರೆಕಾರ್ಡ್, ಇಂಡಿಯಾ ಬುಕ್ ಆಫ್ ರೆಕಾರ್ಡ್, ವರ್ಲ್ಡ್ ರೆಕಾರ್ಡ್ ಆಫ್ ಇಂಡಿಯಾದಲ್ಲಿ ಸ್ಥಾನ ಪಡೆದಿದ್ದಾರೆ. ಇದಲ್ಲದೆ ಹಾವೇರಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಗಳಿಸಿದ್ದಾರೆ.

ಬಿ.ಸಿ.ರೋಡಿನಲ್ಲಿ ವಾಹನ ಸವಾರರಿಗೆ ದಿನನಿತ್ಯ ಕಿರಿಕಿರಿ | ಎಲ್ಲೆಂದರಲ್ಲಿ ವಾಹನಗಳ ಅಡ್ಡಾದಿಡ್ಡಿ ಪಾರ್ಕಿಂಗ್

ರಜಾ ದಿನಗಳಲ್ಲೂ ಇಲ್ಲಿ ಟ್ರಾಫಿಕ್ ಜಾಮ್ ಮಾಮೂಲು!





ಬಂಟ್ವಾಳ: ಸರಕಾರಿ ಇಲ್ಲವೇ ಇತರೆ ರಜೆ ಇರಲಿ ರಜಾ ದಿನ ಇಲ್ಲದಿರಲಿ ಪ್ರತಿ ನಿತ್ಯವು ಬಂಟ್ವಾಳ ತಾಲೂಕಿನ ಕೇಂದ್ರ ಸ್ಥಾನವಾದ ಬಿ.ಸಿ.ರೋಡಿನ ರಾಜಾರಸ್ತೆಯಲ್ಲಿ ಟ್ರಾಫಿಕ್ ಜಾಮ್ ತಪ್ಪಿದ್ದಲ್ಲ...

ಮಂಗಳೂರಿನಿಂದ ಇತರ ಜಿಲ್ಲೆ, ತಾಲೂಕುಗಳಿಗೆ ಸಂಚರಿಸುವ ಖಾಸಗಿ, ಸರಕಾರಿ ಬಸ್ ಗಳು ಸಹಿತ ಬಾಡಿಗೆ ವಾಹನಗಳು ಹೆದ್ದಾರಿ ಮಧ್ಯದಲ್ಲೇ ನಿಲುಗಡೆಗೊಳಿಸಿ ಪ್ರಯಾಣಿಕರನ್ನು ಹತ್ತಿಸಿ, ಇಳಿಸುವುದರಿಂದ ಟ್ರಾಫಿಕ್ ಜಾಮ್‌ಗೆ ಒಂದು ಕಾರಣವಾದರೆ, ಪೆಟ್ರೋಲ್ ಪಂಪ್ ನಿಂದ ಖಾಸಗಿ ಬಸ್ ತಂಗುದಾಣದವರೆಗೆ ರಸ್ತೆಯುದ್ದಕ್ಕೂ ವಿವಿಧ ಅಂಗಡಿಗಳ ಮುಂದೆ ವಾಹನಗಳನ್ನು ಫುಟ್‌ಪಾತ್ ಮತ್ತು ರಸ್ತೆಯುದ್ದಕ್ಕೂ ಅಡ್ಡಾದಿಡ್ಡಿ ನಿಲುಗಡೆಗೊಳಿಸುವುದರಿಂದಲೂ ಟ್ರಾಫಿಕ್ ಜಾಮ್‌ಗೆ ಕಾರಣವಾಗುತ್ತಿದೆ.

ಸೋಮವಾರ ಮಹಾವೀರ ಜಯಂತಿ ಪ್ರಯುಕ್ತ ರಜಾದಿನ ವಿದ್ದರೂ ಸಂಜೆ ಹೊತ್ತು ಬಿ.ಸಿ.ರೋಡಿನ ಹೆದ್ದಾರಿ ಟ್ರಾಫಿಕ್ ಜಾಮ್ ಎಂದಿನಂತಿತ್ತು. ಫುಟ್‌ಪಾತ್ ನಲ್ಲೇ ಅಂಗಡಿ ಸಾಮಗ್ರಿ, ದ್ವಿಚಕ್ರ ವಾಹನ ಕಬ್ಜಾ ಮಾಡಿರುವುದರಿಂದ ಪಾದಚಾರಿಗಳು ಫುಟ್ ಪಾತ್ ಬಿಟ್ಟು ರಸ್ತೆಯಲ್ಲೆ ನಡೆದಾಡಬೇಕಾಗಿದೆ. ಪಾದಚಾರಿಗಳು ರಸ್ತೆ ದಾಟಬೇಕೆಂದರೂ ಹರಸಾಹಸ ಪಡುವ ದೃಶ್ಯ ನಿತ್ಯ ಕಂಡುಬರುತ್ತಿದೆ.

ವೀಡಿಯೋ ವೈರಲ್!

ಸಾಮಾಜಿಕ ಕಾರ್ಯಕರ್ತ ಖಾಲಿದ್ ನಂದಾವರ ಎಂಬವರು ತಾವು ಕಾರಿನಲ್ಲಿ ಸಂಚರಿಸುತ್ತಿದ್ದ ವೇಳೆ ಅಡ್ಡಾದಿಡ್ಡಿ ವಾಹನವನ್ನು ನಿಲುಗಡೆಗೊಳಿಸಿ ಟ್ರಾಫಿಕ್ ಜಾಮ್ ಸಮಸ್ಯೆಗೆ ಕಾರಣವಾಗಿದ್ದ ದೃಶ್ಯವನ್ನು ವಿಡಿಯೋ ಮಾಡಿದ್ದಲ್ಲದೇ, ಸಾಮಾಜಿಕ ಜಾಲತಾಣದ ಮೂಲಕ ವೈರಲ್ ಮಾಡಿ ಟ್ರಾಫಿಕ್ ಪೊಲೀಸ್ ಅಧಿಕಾರಿಗಳ ಗಮನಸೆಳೆದಿದ್ದಾರೆ.

ಸಂಜೆ ಪೊಲೀಸರು ಚುರುಕು!

ಸಾಮಾಜಿಕ ಕಾರ್ಯಕರ್ತ ಖಾಲಿದ್ ಟ್ರಾಫಿಕ್ ಜಾಮ್ ವೀಡಿಯೋ ದೃಶ್ಯ ವೈರಲ್ ಮಾಡಿರುವ ಬೆನ್ನಿಗೆ ಸಂಜೆಯ ವೇಳೆ ಬಂಟ್ವಾಳ ಸಂಚಾರಿ ಪೊಲೀಸರು ಮೈಕೊಡವಿಕೊಂಡು ಪೀಲ್ಡಿಗಿಳಿದಿದ್ದಾರೆ.

ಸಂಚಾರಿ ಸಿಬ್ಬಂದಿಗಳ ದಿವ್ಯ ಮೌನ!

ಬಿ.ಸಿ.ರೋಡಿನ ಸರ್ವಿಸ್ ರಸ್ತೆಯಲ್ಲೂ ಟ್ರಾಫಿಕ್ ಸಮಸ್ಯೆ ನಿತ್ಯವು ಆಗುತ್ತಿದ್ದರೂ, ಕರ್ತವ್ಯದಲ್ಲಿರುವ ಸಂಚಾರಿ ಠಾಣಾ ಸಿಬ್ಬಂದಿ ತನ್ನ ಬೈಕ್ ಮೇಲೆ ಕುಳಿತು ಮೊಬೈಲ್ ನಲ್ಲೇ ತಲ್ಲೀನರಾಗಿರುತ್ತಾರೆಯೆ ಹೊರತು ಹೆದ್ದಾರಿ, ಸರ್ವಿಸ್ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಆದರೂ ಅವರಿಗೇನು ಸಮಸ್ಯೆಯೇ ಇಲ್ಲದಂತಿರುತ್ತಾರೆ.ಆದರೆ ಈ ಜಿಲ್ಲೆಯ ಕೆಲ ಸಂಚಾರಿ ಸಿಬ್ಬಂದಿಗಳು ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಿ ಟ್ರಾಫಿಕ್ ಸಮಸ್ಯೆ ಕ್ಲೀಯರ್ ಮಾಡುವಲ್ಲಿ ತಲ್ಲೀನರಾಗಿರುತ್ತಾರೆ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ.

ಬಂಟ್ವಾಳ ಸಂಚಾರಿ ಪೊಲೀಸರು ಬಿ.ಸಿ.ರೋಡು ನಾರಾಯಣ ಗುರು ವೃತ್ತ ಹಾಗೂ ಮೇಲ್ಸೇತುವೆಯ ಕೆಳಭಾಗದಲ್ಲಿ ದ್ವಿಚಕ್ರವಾಹನವನ್ನು ಗುರಿಯಾಗಿಸಿ ಕೇಸು ದಾಖಲಿಸುವುದರಲ್ಲೇ ನಿರತರಾಗುತ್ತಾರೆ ವಿನಹ ಹೆದ್ದಾರಿಯಲ್ಲಿಯೇ ಖಾಸಗಿ ಬಸ್, ಸರಕಾರಿ ಬಸ್ ನಿಲುಗಡೆಯಾಗಿ ಸುಗಮ ಸಂಚಾರಕ್ಕೆ ಅಡಚಣೆಯಾದರೂ ಅದರ ಹತ್ತಿರ ಸುಳಿಯುತ್ತಿಲ್ಲ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕೈಕುಂಜ ರಸ್ತೆಯ ಇಂದಿರಾ ಕ್ಯಾಂಟೀನ್ ಮುಂಭಾಗ ವಾಹನ ನಿಲುಗಡೆಗೆ ಅವಕಾಶವಿಲ್ಲ ಎಂಬ ಫಲಕ ವಿದ್ದರೂ ಇಲ್ಲಿ ರಸ್ತೆಯುದ್ದಕ್ಕೂ ಖಾಸಗಿ ವಾಹನಗಳು ನಿಲುಗಡೆಯಾಗುತ್ತದೆ. ಪುರಸಭೆಯಿಂದಲೂ 'ಗರುಡ' ತೆರವು ಕಾರ್ಯಾ ಚರಣೆಯು ಸದ್ಯಕ್ಕೆ ಸ್ಥಗಿಗೊಂಡಿದೆ. ಗರುಡನ ರೆಕ್ಕೆಯನ್ನೇ ಕತ್ತರಿಸಲಾಗಿದೆಯೇ ಎಂಬ ಅನುಮಾನ ಸಾರ್ವಜನಿಕ ವಲಯದಲ್ಲಿ ಹುಟ್ಟು ಹಾಕಿದೆ. ಬಿ.ಸಿ.ರೋಡಿನ ಖಾಸಗಿ ಬಸ್ ತಂಗುದಾಣದಲ್ಲಿರುವ ಪುರಸಭೆಯ ವಾಣಿಜ್ಯ ಸಂಕೀರ್ಣದಲ್ಲಿರುವ ಅಂಗಡಿ ಜಗಲಿಯುದ್ದಕ್ಕೂ ಸಾಮಗ್ರಿಗಳು ಹರಡಿಕೊಂಡಿದ್ದರೂ ಪುರಸಭೆ ಇದು ನಮಗೆ ಸಂಬಂಧಿಸಿದ್ದೆ ಅಲ್ಲ ಎಂಬಂತೆ ವರ್ತಿಸುತ್ತಿದೆ.

ಪುತ್ತೂರಿನ ಮುಳಿಯ ಸಂಸ್ಥೆಯಿಂದ ಗ್ರಾಹಕರಿಗಾಗಿ ವಿಶೇಷ ಕೊಡುಗೆ

'ಡೈಮಂಡ್ ಫೆಸ್ಟ್' ವಿಶೇಷ ಉತ್ಸವಕ್ಕೆ ಚಾಲನೆ



ಪುತ್ತೂರು: ಪ್ರಸಿದ್ಧ ಆಭರಣ ಸಂಸ್ಥೆ ಮುಳಿಯ ಗೋಲ್ಡ್ ಎಂಡ್ ಡೈಮಂಡ್ಸ್ ಗ್ರಾಹಕರಿಗಾಗಿ 'ಡೈಮಂಡ್ ಫೆಸ್ಟ್' ವಿಶೇಷ ಉತ್ಸವವನ್ನು ಆರಂಭಿಸಿದ್ದು ಮಾ.30ರಂದು ಉದ್ಘಾಟನೆ ನಡೆಯಿತು.

'ಡೈಮಂಡ್ ಫೆಸ್ಟ್' ವಿಶೇಷ ಉತ್ಸವವನ್ನು ಉದ್ಘಾಟಿಸಿದ ಸುಬ್ರಹ್ಮಣ್ಯ ಶ್ರೀಕೃಷ್ಣ ರೆಸಿಡೆನ್ಸಿ ಮಾಲಕಿ ಪ್ರಜ್ಞಾ ಶೆಣೈ, ಗುಣಮಟ್ಟ, ನಂಬಿಕೆಯೊಂದಿಗೆ ಜನರ ವಿಶ್ವಾಸದ ಸಂಸ್ಥೆಯಾಗಿ ಬೆಳೆದಿರುವ ಮುಳಿಯ ಜುವೆಲ್ಸ್ ಹತ್ತೂರಿನಲ್ಲಿ ಮನೆ ಮಾತಾಗಿದೆ. ಗ್ರಾಹಕರ ಆಯ್ಕೆಗೆ ತಕ್ಕಂತೆ ಸಂಗ್ರಹವೂ ಇಲ್ಲಿದ್ದು ಜತೆಗೆ ಸಿಬಂದಿಗಳ ಆತ್ಮೀಯ ಭಾವದ ಸೇವೆಯೂ ಇಲ್ಲಿನ ವಿಶೇಷತೆ. ಡೈಮಂಡ್ ಫೆಸ್ಟ್ ಯಶಸ್ವಿಯಾಗಲಿ ಎಂದರು.

ವೈದ್ಯ ಡಾ.ಎಂ.ಎಸ್. ಶೆಣೈ ಮಾತನಾಡಿ, ಮುಳಿಯ ಸಂಸ್ಥೆಯ ಜತೆಗಿನ ಆತ್ಮೀಯ ಒಡನಾಟ ಸ್ಮರಿಸಿ ಮುಳಿಯ ಸಂಸ್ಥೆ ಇನ್ನಷ್ಟು ಎತ್ತರಕ್ಕೇರಲಿ ಎಂದು ಶುಭ ಹಾರೈಸಿದರು.

ಸಂಸ್ಥೆಯ ಆಡಳಿತ ನಿರ್ದೇಶಕ ಕೇಶವ ಪ್ರಸಾದ್ ಮುಳಿಯ ಮಾತನಾಡಿ, 23 ವರ್ಷಗಳಿಂದ ನಡೆಯುತ್ತಿರುವ ಡೈಮಂಡ್ ಫೆಸ್ಟ್‌ಗೆ ಇತ್ತೀಚಿನ ವರ್ಷಗಳಲ್ಲಿ ಹೊಸ ರೂಪ ನೀಡಲಾಗಿದೆ. ವಜ್ರಾಭರಣ ಖರೀದಿ ಸಾಧ್ಯವೇ ಎನ್ನುವ ಪ್ರಶ್ನಾರ್ಥದ ಕಾಲಘಟ್ಟದಲ್ಲಿ ಕೈಗೆಟುವ ದರದಲ್ಲಿ ವಜ್ರಾಭರಣ ಖರೀದಿಗೆ ಅವಕಾಶ ಸೃಷ್ಟಿಯಾಗಿದೆ. ಮುಳಿಯ ಗೋಲ್ಡ್ ಎಂಡ್ ಡೈಮಂಡ್ಸ್‌ನಲ್ಲಿ ಆಯ್ಕೆಗಳ ಸಂಗ್ರಹವೇ ಇದೆ. ವಜ್ರಾಭರಣಗಳ ಮೇಲೆ ಶೇ.95 ಎಕ್ಸ್‌ಚೇಂಜ್ ಹಾಗೂ ಶೇ.90 ಬೈಬ್ಯಾಕ್ ಸೌಲಭ್ಯ ಸಂಸ್ಥೆ ನೀಡುತ್ತಿದೆ ಎಂದರು.

ಪ್ರಥಮ ಗ್ರಾಹಕಿ ಸಿಂಚನಾ ನೆಹರೂ ನಗರ ಅವರಿಗೆ ಡೈಮಂಡ್ಸ್ ಹಸ್ತಾಂತರಿಸಲಾಯಿತು. ಗ್ರಾಹಕಿ ಮಮತಾ ಅನಿಸಿಕೆ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ಉದ್ಯಮಿ ಪ್ರಜ್ವಲ್ ಕಾಮತ್, ಸಂಸ್ಥೆಯ ಆಡಳಿತ ನಿರ್ದೇಶಕಿ ಕೃಷ್ಣವೇಣಿ ಪ್ರಸಾದ್ ಮುಳಿಯ, ಶಾಖಾ ಪ್ರಬಂಧಕ ರಾಘವೇಂದ್ರ ಪಾಟೀಲ್ ಉಪಸ್ಥಿತರಿದ್ದರು. ಸಂಸ್ಥೆಯ ರಾಜೇಶ್ ವಂದಿಸಿದರು. ಅಶ್ವಿನಿ ಕಾರ್ಯಕ್ರಮ ನಿರ್ವಹಿಸಿದರು.

ಈ ಉತ್ಸವದಲ್ಲಿ ರೂ.50 ಸಾವಿರಕ್ಕಿಂತ ಹೆಚ್ಚಿನ ಖರೀದಿಗೆ ಖಚಿತ ಉಡುಗೊರೆ ನೀಡಲಾಗುತ್ತಿದೆ. ಜತೆಗೆ ಲಕ್ಕಿ ಡ್ರಾ ಮೂಲಕ ಬಂಪರ್ ಬಹುಮಾನವಾಗಿ ಎಲೆಕ್ಟ್ರಿಕ್ ಸ್ಕೂಟರ್ ಗೆಲ್ಲುವ ಅವಕಾಶವೂ ಕಲ್ಪಿಸಲಾಗಿದೆ. ಉತ್ಸವದ ಅಂಗವಾಗಿ ವಿವಿಧ ವಿನ್ಯಾಸಗಳ ವಜ್ರಾಭರಣಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿದ್ದು, ಮದುವೆ ಹಾಗೂ ಹಬ್ಬದ ಸೀಸನ್‌ಗಳನ್ನು ಗಮನದಲ್ಲಿಟ್ಟುಕೊಂಡು ಹಾರಗಳು, ಕಿವಿಯೋಲೆಗಳು, ಉಂಗುರಗಳು ಸೇರಿದಂತೆ ಹಲವಾರು ನವೀನ ಆಭರಣಗಳು ಗ್ರಾಹಕರ ಗಮನ ಸೆಳೆಯುತ್ತಿವೆ. ಅಮೂಲ್ಯ ಡೈಮಂಡ್ಸ್ ಹಾಗೂ ಕಿಸ್ನ ಡೈಮಂಡ್ ಎಂಡ್ ಗೋಲ್ಡ್ ಜ್ಯುವೆಲ್ಲರಿ ಬ್ರ್ಯಾಂಡ್‌ಗಳ ಸಹಭಾಗಿತ್ವದಲ್ಲಿ ನಡೆಯುತ್ತಿರುವ ಈ ಉತ್ಸವ ಗುಣಮಟ್ಟ ಹಾಗೂ ವೈವಿಧ್ಯತೆಯಲ್ಲಿಯೂ ಗಮನ ಸೆಳೆಯುತ್ತಿದೆ. ಪುತ್ತೂರು, ಬೆಳ್ತಂಗಡಿ, ಮಡಿಕೇರಿ ಮತ್ತು ಗೋಣಿಕೊಪ್ಪ ಶಾಖೆಗಳಲ್ಲಿ ಈ ಡೈಮಂಡ್ ಫೆಸ್ಟ್ ನಡೆಯುತ್ತಿದ್ದು ಗ್ರಾಹಕರು ಸಮೀಪದ ಶೋರೂಮ್ ಗಳಿಗೆ ಭೇಟಿ ನೀಡಿ ಆಫರ್‌ಗಳನ್ನು ಸದುಪಯೋಗಪಡಿಸಿಕೊಳ್ಳಬಹುದು ಎಂದು ಸಂಸ್ಥೆ ತಿಳಿಸಿದೆ.

ಏ.10-11ಕ್ಕೆ ವಿವಿಧ ಧಾರ್ಮಿಕ ಕಾರ್ಯಕ್ರಮ | ಪೂರ್ವಭಾವಿ ಸಿದ್ಧತಾ ಸಭೆ

ಪೆರುವಾಜೆ ಶ್ರೀಕ್ಷೇತ್ರದಲ್ಲಿ ಪ್ರತಿಷ್ಠಾ ವರ್ಧಂತಿ



ಪುತ್ತೂರು: ಸುಳ್ಯ, ಪುತ್ತೂರು ಹಾಗೂ ಕಡಬ ತಾಲೂಕಿನ ಇಪ್ಪತ್ತೆರಡು ಗ್ರಾಮಗಳಿಗೆ ಒಳಪಟ್ಟ ಮಾಗಣೆ ಕ್ಷೇತ್ರ ಪೆರುವಾಜೆ ಶ್ರೀ ಜಲದುರ್ಗಾದೇವಿ ದೇವಾಲಯದಲ್ಲಿ ಏ.10 ಮತ್ತು 11ರಂದು ಪ್ರತಿಷ್ಠಾ ವರ್ಧಂತಿ, ಚಂಡಿಕಾ ಹೋಮ, 108 ನಾಳಿಕೇರ ಗಣಪತಿ ಹವನ, ಮೂಡಪ್ಪ ಸೇವೆ ಹಾಗೂ ಶ್ರೀ ಸತ್ಯನಾರಾಯಣ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಕಾರ್ಯಕ್ರಮಗಳ ಸಿದ್ಧತೆಗಾಗಿ ಭಕ್ತಾಧಿಗಳ ಸಭೆ ಮಾ.29ರಂದು ದೇವಾಲಯದಲ್ಲಿ ನಡೆಯಿತು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಸುನಿಲ್ ಕುಮಾರ್ ರೈ ಪೆರುವಾಜೆಗುತ್ತು, ಮಾಗಣೆ ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಆಮಂತ್ರಣ ಪತ್ರಿಕೆ ತಲುಪಿಸುವ ಕಾರ್ಯ ಕೈಗೊಳ್ಳಲಾಗುವುದು ಎಂದರು. ಮನೆ ಮನೆಗೆ ಆಮಂತ್ರಣ ಪತ್ರಿಕೆ ವಿತರಣೆಗಾಗಿ ಭಕ್ತವೃಂದದ ಸಹಕಾರ ಅಗತ್ಯವಿದೆ ಎಂದರು.

ಪ್ರತಿಷ್ಠಾ ವರ್ಧಂತಿ ಸೇರಿದಂತೆ ವಿವಿಧ ಪೂಜಾ ಕಾರ್ಯಕ್ರಮಗಳ ಆಮಂತ್ರಣದೊಂದಿಗೆ ಪೂಜಾ ರಶೀದಿಯನ್ನು ಮನೆ ಮನೆಗೆ ತಲುಪಿಸುವ ಬಗ್ಗೆ ಸಭೆಯಲ್ಲಿ ನಿರ್ಧರಿಸಲಾಯಿತು. ಪ್ರತಿ ಕುಟುಂಬವು 350 ರೂ. ಮೊತ್ತದ ಪೂಜಾ ರಶೀದಿ ಪಡೆದು ಸಹಕರಿಸುವಂತೆ ಮನವಿ ಮಾಡುವುದಾಗಿ ತಿಳಿಸಲಾಯಿತು.

ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಪದ್ಮನಾಭ ಶೆಟ್ಟಿ ಪೆರುವಾಜೆ, ರಶೀದಿ ಪುಸ್ತಕಗಳನ್ನು ಭಕ್ತರಿಗೆ ಹಂಚಿ ವಿವಿಧ ಪ್ರದೇಶಗಳಲ್ಲಿ ವಿತರಣೆ ಮಾಡುವಂತೆ ಯೋಜನೆ ರೂಪಿಸಬೇಕು ಎಂದರು. ಆಮಂತ್ರಣ ಪತ್ರಿಕೆ ವಿತರಣೆಗೆ ಪ್ರತ್ಯೇಕ ತಂಡಗಳನ್ನು ರಚಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸಭೆಯಲ್ಲಿ ವ್ಯವಸ್ಥಾಪನ ಸಮಿತಿ ಸದಸ್ಯರಾದ ದೀಪಕ್ ಶೆಟ್ಟಿ, ಪಿ.ಅಜಯ್ ಶೆಟ್ಟಿ, ಶೇಷಪ್ಪ ನಾಯ್ಕ, ನಿರ್ಮಲಾ ರೈ, ಮಾಜಿ ಸದಸ್ಯರಾದ ನಾರಾಯಣ ಕೊಂಡೆಪ್ಪಾಡಿ, ಸುಜಾತ ರೈ ಪೆರುವಾಜೆ, ಪ್ರಮುಖರಾದ ಜಗದೀಶ್ ರೈ ಪೆರುವಾಜೆ, ಪ್ರೀತಂ ರೈ ಪೆರುವಾಜೆ, ಜಯಚಂದ್ರ ಪೆರುವಾಜೆ, ಪೂರ್ಣಿಮಾ ಉಮೇಶ್, ಶಿವಪ್ರಕಾಶ್ ಆಚಾರ್ಯ ಪೆರುವಾಜೆ, ಜಯಂತ ಗೌಡ ಕುಂಡಡ್ಕ, ಪೂರ್ಣಿಮಾ ಎನ್ ಕೆ., ರೂಪ ಸಾರಕರೆ, ದಿವ್ಯ, ವೇದಿತ್ ರೈ, ವಸಂತ ಪೆರುವಾಜೆ ಮೊದಲಾದವರು ಉಪಸ್ಥಿತರಿದ್ದರು.

ಆದಾಯ ವೃದ್ಧಿಗೆ ಚರ್ಚೆ

ಕ್ಷೇತ್ರದ ಆದಾಯ ವೃದ್ಧಿಗಾಗಿ ಕಲ್ಯಾಣ ಮಂಟಪ ನಿರ್ಮಾಣದ ಯೋಜನೆ ಬಗ್ಗೆ ವಿವರಿಸಿದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಸುನಿಲ್ ಕುಮಾರ್ ರೈ, ವಾರ್ಷಿಕ ಆದಾಯ-ವೆಚ್ಚದ ವಿವರಗಳನ್ನು ಸಭೆಗೆ ಮಂಡಿಸಿದರು. ಎಲ್ಲರ ಸಹಕಾರದಿಂದ ಯೋಜನೆ ಕಾರ್ಯಗತಗೊಳ್ಳಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಬಸ್ ಸೇವೆಗೆ ಶಾಸಕ ಅಶೋಕ್ ರೈ ಹಸಿರು ನಿಶಾನೆ ಮೂಲಕ ಚಾಲನೆ

ಪುತ್ತೂರಿನಿಂದ ಜಾವಗಲ್‌ಗೆ ಬಸ್ ವ್ಯವಸ್ಥೆ



ಪುತ್ತೂರು: ಪುತ್ತೂರಿನಿಂದ ಜಾವಗಲ್ ಗೆ ನೂತನ ಬಸ್ ಸೇವೆಗೆ ಶಾಸಕ ಅಶೋಕ್ ರೈ ಅವರು ಸೋಮವಾರ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಹೊಸ ಪಲ್ಲಕ್ಕಿ ಆರಂಭ

ನೂತನ ಬಸ್ ಪುತ್ತೂರು-ಉಪ್ಪಿನಂಗಡಿ-ಸಕಲೇಶಪುರ-ಬೇಲೂರು-ಹಳೆಬೀಡು- ಜಾವಗಲ್- ಅರಸಿಕೆರೆಗೆ ಪಯಣಿಸಲಿದೆ. ಇದೇ ಸಂದರ್ಭದಲ್ಲಿ ಪುತ್ತೂರು-ಮೈಸೂರು-ಬೆಂಗಳೂರು ನಡುವೆ ಹೊಸ ಪಲ್ಲಕ್ಕಿ ಬಸ್ಸಿನ ಸಂಚಾರಕ್ಕೂ ಚಾಲನೆ ನೀಡಲಾಯಿತು.

ಬಳಿಕ ಶಾಸಕ ಅಶೋಕ್ ರೈ ಮಾತನಾಡಿ, ಪುತ್ತೂರಿನಿಂದ ಜಾವಗಲ್‌ನ ದರ್ಗಾ ಕ್ಷೇತ್ರಕ್ಕೆ ತೆರಳಲು ಬಸ್ಸಿನ ಬೇಡಿಕೆ ಹಲವು ಸಮಯದಿಂದ ಇತ್ತು. ಜತೆಗೆ ಬೇಳೂರು, ಹಳೆಬೀಡುವಿಗೆ ತೆರಳುವ ಯಾತ್ರಿಕರ ಬೇಡಿಕೆಯೂ ಇತ್ತು. ಈ ಬಸ್ಸು ನಿಂತು ಹಲವು ಸಮಯ ಆಗಿತ್ತು. ಈಗ ಪ್ರಯಾಣಿಕರ ಬೇಡಿಕೆಯನ್ನು ಈಡೇರಿಸಲಾಗಿದೆ ಹಾಗೂ ಶಕ್ತಿ ಯೋಜನೆಗೆ ಶಕ್ತಿ ತುಂಬಲಾಗಿದೆ ಎಂದರು.

ಈ ಬಸ್ಸು ಪ್ರತಿ ದಿನ ಬೆಳಗ್ಗೆ 8 ಗಂಟೆಗೆ ಪುತ್ತೂರಿನಿಂದ ಹೊರಟು ಅರಸಿಕೆರೆಗೆ 1 ಗಂಟೆಗೆ ತಲುಪುತ್ತದೆ. ಮರಳಿ ಅರಸಿಕೆರೆಯಿಂದ 2.30 ಗಂಟೆಗೆ ಹೊರಟು ಸಂಜೆ 7 ಗಂಟೆಗೆ ವಾಪಾಸು ಪುತ್ತೂರಿಗೆ ತಲುಪಲಿದೆ. ಎ.1 ರಿಂದ ಜಾವಗಲ್ ಬಸ್ಸು ಓಡಾಡುತ್ತವೆ. ಬೆಂಗಳೂರಿಗೆ ಹೊಸ ಪಲ್ಲಕ್ಕಿ ಬಸ್ಸು ವಯಾ ಮೈಸೂರು ರೂಟ್‌ನಲ್ಲಿ ಓಡಾಟ ನಡೆಸಲಿದೆ. ರಾತ್ರಿ 9.15ಕ್ಕೆ ಪುತ್ತೂರಿನಿಂದ ಹಾಗೂ ರಾತ್ರಿ 9.50ಕ್ಕೆ ಬೆಂಗಳೂರಿನಿಂದ ಪಲ್ಲಕ್ಕಿ ಬಸ್ಸು ಹೊರಡಲಿದೆ ಎಂದು ಶಾಸಕರು ಮಾಹಿತಿ ನೀಡಿದರು.

ಇನ್ನು ಹೊಸ ಬಸ್ಸುಗಳು 25 ಬರಲಿದ್ದು ಮಂಗಳೂರು-ಪುತ್ತೂರು ಮಾರ್ಗದಲ್ಲಿ ಓಡಾಟ ನಡೆಸಲಿದೆ. ಪುತ್ತೂರಿನಲ್ಲಿ ಸಿಟಿ ಬಸ್ಸು ಓಡಾಟದ ಯೋಚನೆ ಇದೆ. ಇನ್ನು 15 ದಿನಗಳಲ್ಲಿ ಹೆಚ್ಚುವರಿ ಬಸ್ಸು ಪುತ್ತೂರಿಗೆ ಬರುತ್ತವೆ. ಮುಂದಿನ ದಿನಗಳಲ್ಲಿ ಪುತ್ತೂರಿನಿಂದ ಮುಂಬಯಿಗೆ ಬಸ್ಸು ಹಾಕುವ ಉದ್ದೇಶವೂ ಇದೆ ಎಂದು ಅಶೋಕ್ ರೈ ತಿಳಿಸಿದರು. ಪ್ರಮುಖರಾದ ಉಮಾನಾಥ ಶೆಟ್ಟಿ ಪೆರ್ನೆ, ಮಹಮ್ಮದ್ ಬಡಗನ್ನೂರು, ಈಶ್ವರ ಭಟ್ ಪಂಜಿಗುಡ್ಡೆ, ಎಚ್. ಮಹಮ್ಮದ್ ಆಲಿ, ಕೃಷ್ಣಪ್ರಸಾದ್ ಆಳ್ವ, ಎ. ಹೇಮನಾಥ ಶೆಟ್ಟಿ, ಶಕೂರ್ ಹಾಜಿ ಮೊದಲಾದವರು ಉಪಸ್ಥಿತರಿದ್ದರು. ಡಿಪೋ ಮ್ಯಾನೇಜರ್ ಸುಬ್ರಹ್ಮಣ್ಯ ಪ್ರಕಾಶ್ ಸ್ವಾಗತಿಸಿ, ನಿರ್ವಹಿಸಿದರು.

ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಬ್ರಹ್ಮಕಲಶೋತ್ಸವ

ಆರಾಧನೆಯಿಂದ ಇಷ್ಟಾರ್ಥ ಸಿದ್ಧಿ: ಆನೆಗುಂದಿ ಶ್ರೀ



ಆಲಂಕಾರು: ಪ್ರತಿಯೊಬ್ಬರೂ ಶ್ರದ್ಧೆ, ಭಯ ಭಕ್ತಿಯೊಂದಿಗೆ ಶುಚಿತ್ವಕ್ಕೆ ಹೆಚ್ಚು ಮಹತ್ವ ನೀಡಬೇಕು. ಈ ಮೂಲಕ ನಾವು ಮಾಡಿದ ಭಜನೆ ಭಗವಂತನ ಪಾದ ಸೇರಲು ಸಾಧ್ಯ ಎಂದು ಆನೆಗುಂದಿ ಮಹಾಸಂಸ್ಥಾನದ ಕಾಳಹಸ್ತೇಂದ್ರ ಸರಸ್ವತೀ ಮಹಾ ಸ್ವಾಮೀಜಿ ಹೇಳಿದರು.

ಅವರು ಭಾನುವಾರ ಸಂಜೆ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ಬ್ರಹ್ಮಕಲಶೋತ್ಸವ ಸಂಭ್ರಮದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ಶ್ರದ್ಧೆ ಮತ್ತು ಭಕ್ತಿಯಿಂದ ದೇವಿಯನ್ನು ಆರಾಧಿಸಿದರೆ ಇಷ್ಟಾರ್ಥ ಸಿದ್ಧಿಯಾಗುತ್ತದೆ. ಸ್ನೇಹದಲ್ಲಿ ಇದ್ದು ಲೋಕದಲ್ಲಿ ಸದ್ಗುಣವನ್ನು ಬೆಳೆಸಿಕೊಳ್ಳಬೇಕು. ಆಗ ಶ್ರೀ ದೇವಿಯ ಅನುಗ್ರಹ ಪ್ರಾಪ್ತಿಯಾಗುತ್ತದೆ ಎಂದರು.

ಶ್ರೀ ಬಾರ್ಕೂರು ಮಹಾಸಂಸ್ಥಾನ ಭಾರ್ಗವ ಬೀಡು ಬಾರ್ಕೂರು ಮಠಾದೀಶ ಡಾ. ವಿದ್ಯಾ ವಾಚಸ್ಪತಿ ವಿಶ್ವಸಂತೋಷ ಭಾರತಿ ಶ್ರೀಪಾದರು ಆಶೀರ್ವಚನ ನೀಡಿ, ಜಗತ್ತಿನಲ್ಲಿರುವ ಎಲ್ಲಾ ದೇಶಗಳು ಗೋಳಾಟವನ್ನು ಮಾಡುತ್ತಿದೆ. ಆದರೆ, ಭಾರತ ಮಾತ್ರ ಉತ್ಸವವನ್ನು ಆಚರಿಸುತ್ತಿದೆ. ಇದು ಸನಾತನ ಹಿಂದೂ ಧರ್ಮದ ಮಹಿಮೆಯಾಗಿದೆ. ದೇವಿಯ ಆರಾಧನೆಯ ಮೂಲಕ ಸನಾತನ ಧರ್ಮದಲ್ಲಿ ಹೆಣ್ಣಿಗೆ ಮಾತೃಸ್ಥಾನವನ್ನು ನೀಡಿದೆ. ನಾವು ಯಾವ ರೂಪದಲ್ಲಿ ದೇವರನ್ನು ಆರಾಧಿಸಿದರೂ ಅದು ಸಲ್ಲುವುದು ಭಗವಂತನಿಗೆ. ಮೂಢನಂಬಿಕೆಯಿಂದ ಮೂಲ ನಂಬಿಕೆಗಳನ್ನು ಕಡೆಗಣಿಸಿದರೆ ಧರ್ಮದ ಅಧಃಪತನವಾಗುವುದು. ಆದ್ದರಿಂದ ಮೂಢನಂಬಿಕೆಗಳಿಂದ ಹೊರ ಬಂದು ದೇವರನ್ನು ಶ್ರದ್ಧೆ, ಭಯ ಭಕ್ತಿ, ಕರ್ಮ ಮಾರ್ಗದಿಂದ ದೇವರನ್ನು ಆರಾಧಿಸಬೇಕು ಎಂದರು.

ಮಾಜಿ ಸಚಿವ ಬಿ. ರಮಾನಾಥ ರೈ ಮಾತನಾಡಿದರು. ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಶುಭಾಶಂಸನೆಗೈದರು. ಧಾರ್ಮಿಕ ಉಪನ್ಯಾಸ ನೀಡಿದ ವೇದಮೂರ್ತಿ ಅನಂತ ನಾರಾಯಣ ಭಟ್ ಪರಕ್ಕಜೆ ಶ್ರೀ ದೇವಿ ಮತ್ತು ಭಕ್ತನ ಸಂಬಂಧ ತಾಯಿ ಮತ್ತು ಮಗುವಿನ ಸಂಬಂಧವಿದ್ದಂತೆ. ಮನೆದೇವರು ಬೇರೆ ಬೇರೆಯಾಗಿದ್ದರೂ ಪ್ರತಿ ಮನೆಯಲ್ಲಿ ದುರ್ಗೆಯನ್ನು ಆರಾಧಿಸುತ್ತಾರೆ ಎಂದರು.

ರಾಜ್ಯ ಧಾರ್ಮಿಕ ಪರಿಷತ್ ಸದಸ್ಯೆ ಮಲ್ಲಿಕಾ ಪಿ. ಪಕಳ ಸಭಾ ಕಾರ್ಯಕ್ರಮದ ದೀಪ ಪ್ರಜ್ವಲನೆಗೈದು, ಕರಾವಳಿ ಭಾಗ ದೈವ ದೇವರುಗಳ ಆರಾಧನೆಯ ಕೇಂದ್ರವಾಗಿದೆ. ಶ್ರೀ ದೇವಿಯ ಪ್ರೇರಣೆಯಿಂದ ಶ್ರೀ ಕ್ಷೇತ್ರ ಶರವೂರಿನಲ್ಲಿ ಬಹಳ ಸುಂದರವಾದ ದೇವಸ್ಥಾನ ನಿರ್ಮಾಣವಾಗಿದೆ ಎಂದರು.

ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಎಂ. ಗೋಪಾಲಕೃಷ್ಣ ಪಡ್ಡಿಲ್ಲಾಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಸುಬ್ರಹ್ಮಣ್ಯ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಹರೀಶ ಇಂಜಾಡಿ, ಸರ್ವೆ ದೇವಾಲಯದ ಶಿವನಾಥ ರೈ ಮೇಗಿನಗುತ್ತು, ವಿದ್ಯಾಮಾತಾ ಅಕಾಡೆಮಿಯ ನಿರ್ದೇಶಕ ಭಾಗ್ಯೇಶ್ ರೈ, ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ನಿರ್ದೇಶಕ ಅಗರಿ ನವೀನ ಭಂಡಾರಿ, ವ್ಯವಸ್ಥಾಪನಾ ಸಮಿತಿಯ ಮಾಜಿ ಅಧ್ಯಕ್ಷ ಎಸ್. ಪೂವಪ್ಪ ನಾಯ್ಕ, ಆಶಾ ತಿಮ್ಮಪ್ಪ ಗೌಡ, ಕೃಷ್ಣಪ್ಪ ಪೂಜಾರಿ, ಗುರುರಾಜ್ ಕೇವಳ ಮತ್ತಿತರರು ಉಪಸ್ಥಿತರಿದ್ದರು.

ಅಭಿವೃದ್ಧಿ ಸಮಿತಿಯ ಅಧ್ಯಕ್ ಹೇಮಂತ ರೈ ಮನವಳಿಕೆಗುತು ಸ್ವಾಗತಿಸಿ, ಕಡಬ ಉಪತಹಶೀಲ್ದಾರ ಕೆ. ಗೋಪಾಲ ವಂದಿಸಿದರು. ಉಪನ್ಯಾಸಕ ಗಣರಾಜ ಕುಂಬ್ಳೆ ಕಾರ್ಯಕ್ರಮ ನಿರ್ವಹಿಸಿದರು.

ಉಗ್ರಾಣ ಉದ್ಘಾಟನೆ, ಮಡಂತ್ಯಾರು, ಪಾರೆಂಕಿ, ಕುಕ್ಕಳ, ಮಾಲಾಡಿಯ ಭಕ್ತರು ನೀಡಿದ ಹೊರೆಕಾಣಿಕೆ ಸಮರ್ಪಣೆ

ಬಳ್ಳಮಂಜ ಶ್ರೀ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವಕ್ಕೆ ಚಾಲನೆ



- ಏ.6 ರವರೆಗೆ ನಡೆಯಲಿದೆ ಬ್ರಹ್ಮಕಲಶೋತ್ಸವ
- ದೇವಳಕ್ಕೆ ದಿನನಿತ್ಯ ಸಾವಿರಾರು ಭಕ್ತರ ಆಗಮನ, ವಿಶೇಷ ಅಲಂಕಾರ

ಬೆಳ್ತಂಗಡಿ: ಇತಿಹಾಸ ಪ್ರಸಿದ್ಧ ಬಳ್ಳಮಂಜ ಮಹತೋಭಾರ ಶ್ರೀ ಅನಂತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಾ. 29ರಿಂದ ಏ.6 ರವರೆಗೆ ಬ್ರಹ್ಮಕಲಶೋತ್ಸವ ನಡೆಯಲಿದೆ.

ಮಾ. 29ರಂದು ಮಡಂತ್ಯಾರು ಗಣಪತಿ ಮಂಟಪದಲ್ಲಿ ಮಡಂತ್ಯಾರು, ಪಾರೆಂಕಿ, ಕುಕ್ಕಳ, ಮಾಲಾಡಿ ಕಡೆಯಿಂದ ಸಮರ್ಪಿಸಿದ ಹೊರೆಕಾಣಿಕೆ ಸಮರ್ಪಣೆಗೆ ಮಡಂತ್ಯಾರು ಪಾರೆಂಕಿ ಶ್ರೀ ಮಹಿಷ ಮರ್ಧಿನಿ ದೇವಸ್ಥಾನದ ವ್ಯವಸ್ಥಾಪನ ಸಮಿತಿ ಮಾಜಿ ಅಧ್ಯಕ್ಷ ವಿಠಲ ಶೆಟ್ಟಿ ಮೂಡಯೂರು ಚಾಲನೆ ನೀಡಿದರು. ಜಮಾ ಉಗ್ರಾಣ ಉದ್ಘಾಟನೆಯನ್ನು ಮಡಂತ್ಯಾರು ವಿಷ್ಣುದಾಸ್ ಬಾಳಿಗ ನೆರವೇರಿಸಿದರು. ಮೋನಪ್ಪ ಪೂಜಾರಿ ಕಂಡೆತ್ಯಾರು, ಬೇಬಿ ನಾಣ್ಯಪ್ಪ ಪೂಜಾರಿ, ಸುಕೇಶ್ ಶೆಟ್ಟಿ ಮುಖ್ಯ ಅತಿಥಿ ಗಳಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅನುವಂಶಿಕ ಆಡಳಿತ ಮೊಕ್ತೇಸರ ಡಾ.ಹರ್ಷ ಸಂಪಿಗೆತ್ತಾಯ,ಬ್ರಹ್ಮ ಕಲಶ ಸಮಿತಿ ಅಧ್ಯಕ್ಷ ವಸಂತ ಮರಕಡ, ಯೋಗೇಶ್ ಕುಮಾರ್ ಕಡ್ತಿಲ,ಮಡಂತ್ಯಾರು ವರ್ತಕರ ಸಂಘದ ಅಧ್ಯಕ್ಷ ಜಯಂತ್ ಶೆಟ್ಟಿ, ಕಾಂತಪ್ಪ ಗೌಡ,

ಮೋನಪ್ಪ ಪೂಜಾರಿ ಕಂಡೆತ್ಯಾರ್, ಅಶೋಕ್ ಭಂಡಾರಿ ಗುಂಡಿಯಾಲ್ಕೆ,ಸುಧೀರ್ ಶೆಟ್ಟಿ,ಪ್ರಮೋದ್ ಕುಮಾರ್,ಹರ್ಷ ನಾರಾಯಣ ಶೆಟ್ಟಿ, ನಾರಾಯಣ ಪೂಜಾರಿ,ಸುರೇಶ್ ಎಸ್., ರವಿ ಕುಮಾರ್,ಸದಾಶಿವ ಹೆಗ್ಡೆ,ಅಡಕೆ ವರ್ತಕರ ಸಂಘದ ಜಿಲ್ಲಾಧ್ಯಕ್ಷ ಪ್ರಶಾಂತ್ ಶೆಟ್ಟಿ ಮೂಡಯೂರು, ಬಿ.ಪಿಲಾತ್ತಬೆಟ್ಟು ವ್ಯ.ಸೇ.ಸ.ಸಂಘ ನಿವೃತ್ತ ಶಾಖಾ ಪ್ರಬಂಧಕ ಮಂಜಪ್ಪ ಮೂಲ್ಯ, ಪಿ., ಪ್ರಮೋದ್ ಕುಮಾರ್, ಚಂದ್ರಕಾಂತ್ ನಿಡ್ಡಾಜೆ,ಸಂಪತ್ ಸುವರ್ಣ,ಸುಧೀರ್ ಕುಮಾರ್,ತುಳಸಿದಾಸ್ ಪೈ, ಶ್ಯಾಮ್ ಪ್ರಸಾದ್ ಸಂಪಿಗೆತ್ತಾಯ,ಮಾಧವ ಜೋಗಿತ್ತಾಯ, ಸತೀಶ್ ಕಾರಂದೂರು, ಯತೀಶ್ ರೈ, ಹೊನ್ನಪ್ಪ ಕುಲಾಲ್, ಬೂಬ ಮೇಸ್ತ್ರಿ ಅವಿನಾಶ್ ಕುಲಾಲ್, ಕಿಶೋರ್ ಕುಮಾರ್ ಶೆಟ್ಟಿ ಹರೀಶ್ ಶೆಟ್ಟಿ ಪದ್ಮನಾಭ ಸುವರ್ಣ, ಮಡಂತ್ಯಾರು ಗ್ರಾಪಂ ಮಾಜಿ ಅಧ್ಯಕ್ಷೆ ರೂಪಾ ನವೀನ್, ಡಾ. ಕೆ. ಎಂ. ಶೆಟ್ಟಿ,ರಾಜಶೇಖರ್ ಶೆಟ್ಟಿ, ವೆಂಕಟ್ರಮಣ ಗೌಡ, ಗಣೇಶ್ ಮೂಲ್ಯ, ಉಮೇಶ್, ಕಾರ್ತಿಕ್ ಬ್ರಹ್ಮಕಲಶ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಸುತ್ತಮುತ್ತ

ಬೆಳ್ತಂಗಡಿ ಕ್ಷೇತ್ರ: ರಸ್ತೆ ಅಭಿವೃದ್ಧಿಗೆ ಅನುದಾನ ಬಿಡುಗಡೆ



ಬೆಳ್ತಂಗಡಿ: ಬೆಳ್ತಂಗಡಿ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ ಸಮುದಾಯದ ಕಾಲನಿಗಳ ರಸ್ತೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರವು ಅನುದಾನ ಬಿಡುಗಡೆಗೊಳಿಸಿರುವುದಾಗಿ ಹರೀಶ್ ಪೂಂಜ ತಿಳಿಸಿದ್ದಾರೆ. ಕುಕ್ಕಳ ಗ್ರಾಮದ ಹಟ್ಟತ್ತೋಡಿಯಿಂದ ಕೆಂಪರಿಗೆಯವರೆಗೆ ರಸ್ತೆ ರೂ.25.00 ಲಕ್ಷ, ಮಾಲಾಡಿ ಗ್ರಾಮದ ಪುರಿಯದಿಂದ ಕುರಿಯೋಡಿ ವರೆಗೆ ರಸ್ತೆ ರೂ.25.00 ಲಕ್ಷ, ವೇಣೂರು ಗ್ರಾಮದ ಮೂಡ್ಲಾ ಕ್ರಾಸ್‌ನಿಂದ ನತ್ಯಟ್ಟವರೆಗೆ ರಸ್ತೆ ರೂ.25.00 ಲಕ್ಷ, ನಾರಾವಿ ಗ್ರಾಮದ ದುಗಲಾಯಿ ಗುಡ್ಡೆ ರಸ್ತೆ ರೂ.25.00 ಲಕ್ಷ, ಕಳೆಂಜ ಗ್ರಾಮದ ಬಂಡೇರಿಯಿಂದ ಬೇಂಗದಗಂಡಿವರೆಗೆ ರಸ್ತೆ ರೂ.25.00 ಲಕ್ಷ, ನ್ಯಾಯತರ್ಪು ಗ್ರಾಮದ ಗೋವಿಂದೂರು ರಿಂದ ಕಣಿಯೂರು ಗ್ರಾಮದ ಕಾಪಿನಡ್ಕ -ಪೆರ್ದಡ್ಕ ರಸ್ತೆ ರೂ.50.00 ಲಕ್ಷ, ಪಟ್ರಮೆ ಗ್ರಾಮದ ಮಣಿಯೇರು ರಸ್ತೆ ರೂ.15.00 ಲಕ್ಷ, ಪಟ್ರಮೆ ಗ್ರಾಮದ ಓಟಕಜೆ ರಸ್ತೆ ರೂ.10.00 ಲಕ್ಷ., ಈ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ ಸಮುದಾಯದ ಜನರಿಗೆ ಉತ್ತಮ ರಸ್ತೆ ಸೌಲಭ್ಯ ಲಭ್ಯವಾಗಲಿದ್ದು, ದೈನಂದಿನ ಸಂಚಾರ ಮತ್ತು ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅವರು ತಿಳಿಸಿದ್ದಾರೆ. ಈ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸಿದ ರಾಜ್ಯ ಸರ್ಕಾರಕ್ಕೆ ಶಾಸಕ ಹರೀಶ್ ಪೂಂಜ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

ದೈವದ ಸೇವಾ ಟ್ರಸ್ಟ್ ಅಧ್ಯಕ್ಷರಾಗಿ ರಾಘವ ಉಚ್ಚಿಲ್



ಉಳ್ಳಾಲ: ಉಚ್ಚಿಲ ಕೋಟೆ ಶ್ರೀ ಧೂಮಾವತಿ ಬಂಟ ವೈದ್ಯನಾಥ ಪರಿವಾರ ದೈವಗಳು ಮತ್ತು ಸಂಕೋಳಿಗೆ ಗುಳಿಗ ದೈವದ ಸೇವಾ ಟ್ರಸ್ಟ್ ಇದರ ಅನುವಂಶಿಕ ಆಡಳಿತ ಮೊಕ್ತೇಸರ ಉಚ್ಚಿಲತ್ತಾಯ ನೀಲೇಶ್ವರ ಪದ್ಮನಾಭ ತಂತ್ರಿಯವರ ಮಾರ್ಗದರ್ಶನದಂತೆ ಅಧ್ಯಕ್ಷರಾಗಿ ರಾಘವ.ಆರ್. ಉಚ್ಚಿಲ್, ಉಪಾಧ್ಯಕ್ಷರಾಗಿ ಅಶೋಕ್ ಉಚ್ಚಿಲ್,ಪ್ರಧಾನ ಕಾರ್ಯದರ್ಶಿಯಾಗಿ ಮುರಳಿ ಮೋಹನ್ ಹಾಗೂ ಕೋಶಾಧಿಕಾರಿಯಾಗಿ ರಘು ಉಚ್ಚಿಲ್ ಅವರು ಆಯ್ಕೆಯಾಗಿದ್ದಾರೆ.

ಆತೂರು ಜಾತ್ರೆ: ಧ್ವಜಾರೋಹಣ



ಕಡಬ: ಕೊೈಲ ಗ್ರಾಮದ ಆತೂರು ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ವಾರ್ಷಿಕ ಜಾತ್ರೆ ಅಂಗವಾಗಿ ಭಾನುವಾರ ಸಂಜೆ ಧ್ವಜಾರೋಹಣ ನಡೆಯಿತು. ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ್ ತಂತ್ರಿಗಳ ನೇತೃತ್ವದಲ್ಲಿ ಪವಿತ್ರಪಾಣಿ ವೆಂಕಟ್ರಮಣ ಕುದ್ರೆತ್ತಾಯ, ದೇವಳದ ಅರ್ಚಕ ವಿಷ್ಣುಮೂರ್ತಿ ಬಡೆಕ್ಕಿಲ್ಲಾಯ ವೈದಿಕ ವಿಧಿ ವಿಧಾನ ನೆರವೇರಿಸಿದರು. ಬಳಿಕ ಶ್ರೀ ದೇವರ ಬಲಿ ಉತ್ಸವ, ಅನ್ನ ಸಂತರ್ಪಣೆ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಸೋಮವಾರ ಬೆಳಿಗ್ಗೆ ಬಲಿ ಹೊರಟು ಉತ್ಸವ, ಆತೂರಿನಿಂದ ಗೋಕುಲನಗರ, ಕೆ.ಸಿ. ಫಾರ್ಮ್ ತನಕ ಪೇಟೆ ಸವಾರಿ, ಕಟ್ಟೆ ಪೂಜೆ ನಡೆಯಿತು. ಬಳಿಕ ಗೋಕುಲನಗರ ಯಕ್ಷನಂದನ ಕಲಾ ಸಂಘದಿಂದ ರಾಜ ಸೂಯಾಧ್ವರ ಎಂಬ ಪ್ರಸಂಗದ ಯಕ್ಷಗಾನ ತಾಳಮದ್ದಳೆ ನಡೆಯಿತು. ವ್ಯವಸ್ಥಾಪನ ಸಮಿತಿ ಅಧ್ಯಕ್ಷ ನೀರಜ್ ಕುಮಾರ್ ರೈ ಆರ್ತ್ವಾರ ಬಾಳಿಕೆ, ಉತ್ಸವ ಸಮಿತಿ ಅಧ್ಯಕ್ಷ ಧರ್ಣಪ್ಪ ಗೌಡ ಕೋರಿಕ್ಕಾರು ಇದ್ದರು.

ಮೂಡುಬಿದಿರೆ: ದುಂಡು ಮೇಜಿನ ಕೃಷಿ ವಿಚಾರ ವಿನಿಮಯ

ಮೂಡುಬಿದಿರೆ: ಕೃಷಿ ವಿಚಾರ ವಿನಿಮಯ ಕೇಂದ್ರ ಮೂಡುಬಿದಿರೆ ಇವರ ದುಂಡು ಮೇಜಿನ ಕೃಷಿ ವಿಚಾರ ವಿನಿಮಯ ಕಾರ್ಯಕ್ರಮ ಹಂಡೇಳು ಗುತ್ತು ಧನಕೀರ್ತಿ ಬಲಿಪರ ಮನೆಯಲ್ಲಿ ನಡೆಯಿತು. ಸಮಾರಂಭದ ಅಧ್ಯಕ್ಷತೆ ಯನ್ನು ಎಸ್ ಡಿ. ಸಂಪತ್ ಸಾಮ್ರಾಜ್ಯ ಇವರು ವಹಿಸಿದ್ದರು. ವಿಚಾರ ಗೋಷ್ಠಿಯಲ್ಲಿ ಕಂಪೋಸ್ಟ್ ಗೊಬ್ಬರದ ವಿಚಾರವನ್ನು ರಾಜವರ್ಮ9 ಬೈಲಗಂಡಿ, ಸುಡುಮಣ್ಣು ಬಗ್ಗೆ ಬಿ ಅಭಯ ಕುಮಾರ್ ,ಹನಿ ನೀರಾವರಿಯ ವಿಚಾರವಾಗಿ ಕೃಷಿ ಅಧಿಕಾರಿ ಪ್ರವೀಣ ಕೆ. ಭತ್ತದ ಬೇಸಾಯ ವಿಚಾರ ಧನಕಿ9ತಿ ಬಲಿಪ, ಕೋಳಿ ಸಾಕಾಣಿಕೆ ಮತ್ತು ಹೈನುಗಾರಿಕೆ ಬಗ್ಗೆ ನಾಗರಾಜ ಶೆಟ್ಟಿ, ಜೇನು ವ್ಯವಸಾಯ ಹರೀಶ್ ಕೋಟ್ಯಾನ್, ಕರಿಮೆಣಸು ವಿಚಾರದಲ್ಲಿ ಗುಣಪಾಲ ಮುದ್ಯ ಮಾಹಿತಿ ನೀಡಿದರು. ಪ್ರತಿಯೊಬ್ಬರೂ ಭತ್ತದ ಕೃಷಿಯನ್ನು ಮಾಡಬೇಕು. ಇದರಿಂದ ಭವಿಷ್ಯದಲ್ಲಿ ಆಹಾರ ಸಮಸ್ಯೆ ಉಂಟಾಗದು ಎಂಬ ಪ್ರಭಲ ವಾದವನ್ನು ಸಭೆಯಲ್ಲಿ ಮಂಡಿಸಲಾಯಿತು.

ಸುತ್ತ ಮುತ್ತ

ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮ

ಮುಲ್ಕಿ: ನ್ಯಾಷನಲ್ ಮೆಡಿಕೋಸ್ ಆರ್ಗನೈಸೇಶನ್ ಕೇಶವ ಸ್ಮೃತಿ ಸಂವರ್ಧನ ಸಮಿತಿ ಮತ್ತು ರಾಷ್ಟ್ರೀಯ ಸೇವಾ ಭಾರತಿ, ಕರ್ನಾಟಕ ಆಶ್ರಯದಲ್ಲಿ ಹಳೆಯಂಗಡಿ ಶ್ರೀ ವಿದ್ಯಾವಿನಾಯಕ ಯುವಕ ಮಂಡಲ, ರಜತ ಸೇವಾ ಟ್ರಸ್ಟ್, ಯುವತಿ ಮತ್ತು ಮಹಿಳಾ ಮಂಡಲ, ಕಿಶೋರ–ಕಿಶೋರಿ ಸಂಘ, ಹಾಗೂ ಹಳೆಯಂಗಡಿ ಗ್ರಾಪಂ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವು ಹಳೆಯಂಗಡಿ ಇಂದಿರಾನಗರದ ಸಮುದಾಯ ಭವನದಲ್ಲಿ ಭಾನುವಾರ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಮಂಗಳೂರು ಎಜೆ ಆಸ್ಪತ್ರೆಯ ಮಕ್ಕಳ ತಜ್ಞರಾದ ಡಾ. ಝಿಬಾ ಉದ್ಘಾಟಿಸಿ, ಗ್ರಾಮೀಣ ಭಾಗದಲ್ಲಿ ಶಿಬಿರಗಳ ಮೂಲಕ ಸೇವಾ ಸಂಸ್ಥೆಗಳ ಸ್ವಚ್ಚತೆ ಹಾಗೂ ಆರೋಗ್ಯದ ಕಳಕಳಿ ಶ್ಲಾಘನೀಯ ಎಂದರು. ಮುಖ್ಯ ಅತಿಥಿಗಳಾಗಿ ಶ್ವಾಸಕೋಶ ತಜ್ಞ ಡಾ. ಪ್ರೇರಣ ಉಪಸ್ಥಿತರಿದ್ದರು.ಆರೋಗ್ಯ ತಪಾಸಣಾ ಶಿಬಿರದ ಬಗ್ಗೆ ಎಜೆ ಆಸ್ಪತ್ರೆಯ ವಿದ್ಯಾರ್ಥಿ ತನ್ಮಯ್ ಎ.ಜೆ ಮಾತನಾಡಿದರು. ಯುವಕ ಮಂಡಲದ ಅಧ್ಯಕ್ಷ ಕಿರಣ್ ರಾಜ್, ಯುವತಿ ಮಂಡಲದ ಅಧ್ಯಕ್ಷೆ ನಿರ್ಮಿತ, ಮಹಿಳಾ ಮಂಡಲದ ಕಾರ್ಯದರ್ಶಿ ಪ್ರೇಮಲತಾ ಯೋಗೀಶ್ ಇದ್ದರು. ಯುವಕ ಮಂಡಲದ ಜೊತೆ ಕಾರ್ಯದರ್ಶಿ ಯಶ್ ಸ್ವಾಗತಿಸಿ, ದಿವ್ಯಶ್ರೀ ರಮೇಶ್ ಕೋಟ್ಯಾನ್ ವಂದಿಸಿದರು. ಪ್ರಧಾನ ಕಾರ್ಯದರ್ಶಿ ಯತೀಶ್ ಕೋಟ್ಯಾನ್ ಕಾರ್ಯಕ್ರಮ ನಿರೂಪಿಸಿದರು.

ಅಮರ್ ಕೋಟೆಗೆ ಸಮಾಜ ರತ್ನ ಪುರಸ್ಕಾರ

ಮೂಡುಬಿದಿರೆ: ಸ್ವಾಮೀಸ್ ಸ್ಟ್ರೆಂಥ್ ಟ್ರೈನಿಂಗ್ ಸಂಸ್ಥೆ ಸಮಾಜ ಸೇವಕ, ಜವನೆರ್ ಬೆದ್ರ ಸಂಸ್ಥಾಪಕ ಅಮರ್ ಕೋಟೆ ಅವರಿಗೆ 'ಸಮಾಜ ರತ್ನ' ಪುರಸ್ಕಾರ ನೀಡಿ ಗೌರವಿಸಿದೆ.



ಶನಿವಾರ ಮೂಡುಬಿದಿರೆಯ ಸಮಾಜ ಮಂದಿರದಲ್ಲಿ ನಡೆದ 'ಬೆದ್ರ ಕ್ಲಾಸಿಕ್ 2026' ಜಿಲ್ಲಾ ಮಟ್ಟದ ಬಾಡಿಬಿಲ್ಡಿಂಗ್ ಚಂಪಿಯನ್ ಶಿಪ್ ಕಾರ್ಯಕ್ರಮದಲ್ಲಿ ಸಂಘ, ಸಂಘಟನೆಗಳು, ಸುಶಿಕ್ಷಿತ ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿದ ಹಿನ್ನಲೆಯಲ್ಲಿ ಅಮರ್ ಕೋಟೆ ಅವರಿಗೆ ಈ ಬಿರುದು ನೀಡಿ ಗೌರವಿಸಲಾಯಿತು. ಇದೇ ಸಂದರ್ಭ ವಿನಯ್ ಕುಮಾರ್, ಸಂತೋಷ್ ಪೂಜಾರಿ ಮತ್ತು ಹನೀಫ್ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು. ಮಾಜಿ ಸಚಿವ ಕೆ.ಅಭಯಚಂದ್ರ ಜೈನ್, ಮಾಲಕರಾದ ಸ್ವಾಮಿ ಪ್ರಸಾದ್ ಸಹಿತ ಗಣ್ಯರು ಇದ್ದರು.

ನರಿಕೊಂಬು ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಪದಗ್ರಹಣ ಕಾರ್ಯಕ್ರಮ

ಬಂಟ್ವಾಳ: ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ ಹಿರಿಯ ಪ್ರಾಥಮಿಕ ಶಾಲೆ ನರಿಕೊಂಬು ಇಲ್ಲಿನ ಪೂರ್ವ ಪ್ರಾಥಮಿಕ (ಎಲ್‌ಕೆಜಿ ಹಾಗೂ ಯುಕೆಜಿ) ತರಗತಿ ಮಕ್ಕಳ ಪದಗ್ರಹಣ ಕಾರ್ಯಕ್ರಮ ಶನಿವಾರ ಜರಗಿತು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ರವಿ ಅಂಚನ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಬಿ.ಸಿ.ರೋಡಿನ ಹಿರಿಯ ನ್ಯಾಯವಾದಿ ಮತ್ತು ನೋಟರಿ ಅಶ್ವನಿ ಕುಮಾರ್ ರೈ ಕಾರ್ಯಕ್ರಮ ಉದ್ಘಾಟಿಸಿ, ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿ ಪದವಿ ಅನ್ನುವ ಪರಿಕಲ್ಪನೆಯನ್ನು ಕಲ್ಪಿಸಿ ಮಕ್ಕಳಿಗೆ ಕಲಿಕೆಯನ್ನು ಪ್ರೋತ್ಸಾಹಿಸಲು ಉತ್ತಮವಾದ ಕಾರ್ಯಕ್ರಮವಾಗಿದ್ದು, ಮಕ್ಕಳ ಪೋಷಕರು ಕೂಡ ಶಾಲೆಯೊಂದಿಗೆ ಸಂಪರ್ಕದಲ್ಲಿದ್ದು ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನು ಕಲಿಸಿಕೊಡುವ ಮೂಲಕ ಸತ್ಪ್ರಜೆಯನ್ನಾಗಿ ರೂಪಿಸುವ ಜವಾಬ್ದಾರಿ ಪೋಷಕರಲ್ಲಿದೆ ಎಂದರು. ಈ ಸಂದರ್ಭ ಮಕ್ಕಳಿಂದ ಕಲಿಕಾ ಚಟುವಟಿಕೆಗಳ ಪ್ರದರ್ಶನ ಜರಗಿತು. ತಾಯಂದಿರ ಸಮಿತಿಯ ಅಧ್ಯಕ್ಷೆ ಉಷಾಲಕ್ಷ್ಮಿ, ಶಾಲಾಭಿವೃದ್ಧಿ ಸಮಿತಿಯ ಉಪಾಧ್ಯಕ್ಷೆ ಲಕ್ಷ್ಮೀಪ್ರಕಾಶ್,ಹಿರಿಯ ಶಿಕ್ಷಕಿ ಸುಜಾತ ಇದ್ದರು. ದೈಹಿಕ ಶಿಕ್ಷಣ ಶಿಕ್ಷಕಿ ಶೋಭಾ ಸ್ವಾಗತಿಸಿ, ಶಿಕ್ಷಕಿ ನಿಶಾ ವಂದಿಸಿದರು. ಶಿಕ್ಷಕಿ ದಿವ್ಯಶ್ರೀ ನಿರೂಪಿಸಿದರು.



ಮೂಡುಬಿದರೆ ಸಮೀಪದ ಅಶ್ವತ್ಥಪುರದ ಶ್ರೀ ಸೀತಾರಾಮಚಂದ್ರ ದೇವಸ್ಥಾನದಲ್ಲಿ ವೈಭವದ ಉತ್ಸವ ಹಾಗೂ ರಾಮನವಮಿ ಆಚರಿಸಲಾಯಿತು. ಭಕ್ತರು ಆಗಮಿಸಿ ಶ್ರೀದೇವರ ದರ್ಶನ ಪಡೆದುಕೊಂಡರು. ರಾತ್ರಿ ದೇವರ ಬಲಿ ಉತ್ಸವ ನಡೆಯಿತು.

ಅಮೃತ ಮಹೋತ್ಸವದ ಸಂಭ್ರಮದಲ್ಲಿ ಪುಲ್ಕೇರಿ ಶ್ರೀರಾಮಪ್ಪ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ

ಏ.5ಕ್ಕೆ ಕಟ್ಟಡದ ಲೋಕಾರ್ಪಣೆ, ಶಿಶು ಮಂದಿರ ಉದ್ಘಾಟನೆ

■ ಗಣೇಶ್ ನಾಯಕ್, ಸಾಣೂರು

ಕಾರ್ಕಳ: ತಾಲೂಕಿನಾದ್ಯಂತ ಪುಲ್ಕೇರಿ ರಾಮಪ್ಪ ಶಾಲೆ ಎಂದೇ ಹೆಸರು ಪಡೆದಿರುವ ಈ ಶಾಲೆಗೆ ಇದೀಗ 75 ವರ್ಷ. ಕಲಿತು ಬಲಿತ ಸಾವಿರಾರು ವಿದ್ಯಾರ್ಥಿಗಳ ಬದುಕು ಬೆಳಗಿಸಿದ ಗರಿಮೆ ಈ ವಿದ್ಯಾ ದೇಗುಲದ್ದು. ಅಂದು ಚಿಕ್ಕಮಗಳೂರು ಜಿಲ್ಲೆಯ ಕುದುರೆಗುಂಡಿಯ ಕಾಫಿ ತೋಟದ ಮಾಲೀಕ ಎನ್. ರಾಮಪ್ಪನವರ ಕನಸು ಸಮಾಜದಲ್ಲೊಂದು ಶಿಕ್ಷಣ ಕ್ರಾಂತಿ ಮಾಡಿದ್ದು ಇತಿಹಾಸ.

ಪುಲ್ಕೇರಿ ಭವಾನಿ ಮಿಲ್ಲಿನ ಬಳಿ ಹುಲ್ಲು ಮಾಡಿನ ಸೂರಿನಡಿಯಲ್ಲಿ 1-06-1949ರಲ್ಲಿ ಆರಂಭಗೊಂಡ ಈ ಶಾಲೆ 11-7-1954ರಂದು ಈಗ ಇರುವ ಶಾಲಾ ಕಟ್ಟಡಕ್ಕೆ ಸ್ಥಳಾಂತರವಾಗಿತ್ತು. 1950ರಲ್ಲಿ ನೇಮಕಗೊಂಡ ಶಿಕ್ಷಕ ಶಾಲೆಯ ಚಾಲನಾ ಶಕ್ತಿ ಕೆ. ಬಾಬು ಪೂಜಾರಿ ಹಾಗೂ ಆದರ್ಶ ಶಿಕ್ಷಕ ಎಂದೇ ಕರೆಯಲ್ಪಟ್ಟ ಮೋನಪ್ಪ ಶೆಟ್ಟಿಗಾರ್ ಹಾಗೂ ಇತರ ಶಿಕ್ಷಕರ ಸೇವೆ ಅನನ್ಯವಾದುದು. ಈ ಶಾಲೆಯಲ್ಲಿ ಕಲಿತು ಬಲಿತ ಹಳೆ ವಿದ್ಯಾರ್ಥಿವೃಂದ, ದಾನಿಗಳ



ಶ್ರೀ ರಾಮಪ್ಪ ಎಜ್ಯುಕೇಶನ್ ಟ್ರಸ್ ಆಡಳಿತ ಮಂಡಳಿ
ಡಾ. ವೇದಾವತಿ ಆರ್. ಕಲ್ಯಾ, ಸಂಚಾಲಕರು, ಶ್ರೀಧರ ಎನ್. ಸುವರ್ಣ, ಅಧ್ಯಕ್ಷರು. ನಿರ್ದೇಶಕರಾಗಿ ರಮೇಶ್ ಕಾರ್ಣಿಕ್ ವಿ. ಅನಿಲ್ ಕುಮಾರ್, ಶರತ್ ಡಿ. ಕಲ್ಯಾ, ಕಿರಣ್ ಕುಮಾರ್ ಕಲ್ಲೆ ಸೂರಜ್ ಎಂ. ಕಲ್ಯಾ ಸಂತೋಷ್, ಕೋಶಾಧಿಕಾರಿ.

ಸಹಕಾರ, ಉತ್ತಮ ಗುರುವೃಂದ ಹಾಗೂ ಸಂಚಾಲಕ ಮಂಡಳಿಯ ಶ್ರಮದಿಂದ ಈ ಶಾಲೆ ಒಂದು ಶಿಕ್ಷಣ ಕ್ಷೇತ್ರದ ಶಕ್ತಿಯಾಗಿ ಬೆಳೆಯಿತು. ವರ್ತಮಾನದಲ್ಲಿ

> **ಯಶಸ್ವಿಗೊಳಿಸಿ**
> **ಕಲಿತ ಶಾಲೆಗಳಿಗೆ ಋಣಿಯಾಗಿರುವುದು ಪುಣ್ಯದ ಕೆಲಸ. ಅಮೃತ ಮಹೋತ್ಸವದಲ್ಲಿ ಹಳೆ ವಿದ್ಯಾರ್ಥಿಗಳು, ಶಿಕ್ಷಣ ಪ್ರೇಮಿಗಳು ಪಾಲ್ಗೊಂಡು ಯಶಸ್ವಿಗೊಳಿಸಬೇಕು.**
> ● ಸುಭಾಸ್ ಕಾಮತ್ ಪುಲ್ಕೇರಿ, ಹಳೆ ವಿದ್ಯಾರ್ಥಿ

ಈ ಶಾಲೆ ಸೊರಗಿದೆ. ಕಾರಣ ಅಲ್ಲಲ್ಲಿ ಅನೇಕ ಶಾಲೆಗಳು ಹುಟ್ಟಿಕೊಂಡವು. ಅದರಲ್ಲೂ ಇಂಗ್ಲಿಷ್ ಮಾಧ್ಯಮ ಶಾಲೆಗಳು, ಸರ್ಕಾರದ ಬದಲಾದ ಶಿಕ್ಷಣ ನೀತಿ ಹಾಗೂ ಹೆಚ್ಚಿರುವ ಇಂಗ್ಲಿಷ್ ಶಿಕ್ಷಣದ ವ್ಯಾಮೋಹದಿಂದಾಗಿ ಈ ಕನ್ನಡ ಶಾಲೆ ಬಸವಳಿದಿದೆ. ಕಲಿಯುವ ಮಕ್ಕಳ ಸಂಖ್ಯೆಯೂ ಕರಗಿದೆ. ಆದರೆ ಆಡಳಿತ ಮಂಡಳಿ ಬಳಲಲಿಲ್ಲ, ಶಾಲೆಗೆ ಮತ್ತೊಮ್ಮೆ ಹೊಸ ಚಿಂತನೆಯೊಂದಿಗೆ ರೂಪ ಕೊಡುವ ಉದ್ದೇಶದಿಂದ ನೀಲನಕ್ಷೆಯನ್ನು ತಯಾರಿಸಿದೆ. ಹಾಗಾಗಿ ಶ್ರೀ ರಾಮಪ್ಪ ಎಜುಕೇಶನ್ ಟ್ರಸ್ಟ್ ಕಾರ್ಕಳ

> **ಸಂತಸ ತರುತ್ತದೆ**
> **ಅಮೃತ ಮಹೋತ್ಸವವನ್ನು ಮನೆ ಕಾರ್ಯಕ್ರಮದಂತೆ ಆಚರಿಸಲಾಗುತ್ತಿದ್ದು ಹಳೆಯ ವಿದ್ಯಾರ್ಥಿಗಳೆಲ್ಲರೂ ಒಂದೆಡೆ ಕಾರ್ಯಕ್ರಮದಲ್ಲಿ ಭಾಗಿಯಾಗುವುದೇ ಸಂತಸ ತರುತ್ತದೆ.**
> ● ಪ್ರಕಾಶ್ ರಾವ್, ಹಳೆ ವಿದ್ಯಾರ್ಥಿ, ಅಮೃತ ಮಹೋತ್ಸವ ಸಂಚಾಲಕ

ಇದರ ಮುಖೇನ ಈ ವಿದ್ಯಾಮಂದಿರ ರಾಷ್ಟ್ರೀಯತೆಗೆ ಒತ್ತುಕೊಟ್ಟು ಸುಸಂಸ್ಕೃತ ಭಾರತೀಯ ಶಿಕ್ಷಣ ನೀಡಲು ಉದ್ದೇಶಿಸಿದೆ.

ಸೈನಿಕ ಶಿಕ್ಷಣ

ಡಿಜಿಟಲ್ ಸಾಕ್ಷರತಾ ಸೌಲಭ್ಯಗಳೊಂದಿಗೆ ಸಂಸ್ಕೃತ ಭಾಷಾ ಬೋಧನೆ, ಸಾಂಸ್ಕೃತಿಕವಾಗಿ ಸಂಗೀತ, ಯಕ್ಷಗಾನ ಜೊತೆಗೆ ದೈಹಿಕ ಶಿಕ್ಷಣ, ಯೋಗ, ಕಂಪ್ಯೂಟರ್ ಕಲಿಕೆಯಲ್ಲದೆ ಕನ್ನಡದೊಂದಿಗೆ ಇಂಗಿಷ್ ಭಾಷೆಗೂ ಪ್ರಾಧಾನ್ಯತೆ ಪಡೆದು ಶಾಲೆ ಮುನ್ನಡೆಯಲಿದೆ. ಪ್ರಕೃತಿಯೊಂದಿಗೆ ಬದುಕು ಕಟ್ಟುವ ಕೃಷಿ ಕೂಡ ಈ ವಿದ್ಯಾಮಂದಿರದಲ್ಲಿ ಪಠ್ಯವಾಗಲಿದೆ. ಭವಿಷ್ಯದಲ್ಲಿ ದೇಶಸೇವೆ ಗೈಯುವ ಯೋಧರನ್ನು ನಿರ್ಮಿಸುವ ಸಂಕಲ್ಪದೊಂದಿಗೆ ಸೈನಿಕ ಶಿಕ್ಷಣವನ್ನು ಆರಂಭಿಸುವ ಯೋಜನೆಯನ್ನು ಹೊಂದಿದೆ.

ಪ್ರಸ್ತುತ 1 ರಿಂದ 7ನೇ ತರಗತಿವರೆಗೆ ವಿದ್ಯಾರ್ಜನೆ ಆಗುತ್ತಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸ ಶಿಕ್ಷಣ ನೀತಿ 2020ರ ಅನುಸಾರ 3 ವರ್ಷದಿಂದ ಶಿಕ್ಷಣ ಕಡ್ಡಾಯವಾಗಿದೆ. ಆದ್ದರಿಂದ ಮುಂದಿನ ಶೈಕ್ಷಣಿಕ ವರ್ಷದಿಂದ ಮಕ್ಕಳಿಗೆ ಶಿಶು ಮಂದಿರವನ್ನು ಪ್ರಾರಂಭಿಸುವ ಯೋಜನೆಯಿದೆ. ಇವೆಲ್ಲವನ್ನೂ ಕಾರ್ಯಗತಗೊಳಿಸುವ ಕನಸು ನನಸಾಗಬೇಕಾದರೆ ಸಮಾಜ ಸಹಕರಿಸಬೇಕಿದೆ

ಅಮೃತ ಮಹೋತ್ಸವದ ಯೋಜನೆಗಳು

ಅಮೃತ ಮಹೋತ್ಸವದ ಸವಿನೆನಪಿಗಾಗಿ ನೂತನ ಕಟ್ಟಡ ಲೋಕಾರ್ಪಣೆ ಹಾಗೂ ಶಿಶು ಮಂದಿರದ ಉದ್ಘಾಟನೆ ಏ. 5ರಂದು ಜರಗಲಿದೆ. ಶಾಸಕ ವಿ. ಸುನೀಲ್ ಕುಮಾರ್, ಸರಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಜ್ಞಾನೇಶ್ ಕಾಮತ್ ಸಹಿತ ಹಲವು ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಫರಂಗಿಪೇಟೆ ಸೇವಾಂಜಲಿ ಪ್ರತಿಷ್ಠಾನದಿಂದ ರಕ್ತದಾನ ಶಿಬಿರ



ಬಂಟ್ವಾಳ: ತುರ್ತು ಸಂದರ್ಭದಲ್ಲಿ ಜನರಿಗೆ ಆಗೂ ಆಸ್ಪತ್ರೆಗಳ ರಕ್ತನಿಧಿಗೆ ರಕ್ತದ ಅವಶ್ಯಕತೆ ಇದ್ದಾಗ ಸೇವಾಂಜಲಿ ಸಂಸ್ಥೆ ನಿರಂತರ ಶಿಬಿರಗಳನ್ನು ಹಮ್ಮಿಕೊಂಡು ರಕ್ತದ ಬೇಡಿಕೆಯನ್ನು ಪೂರೈಸುತ್ತಿರುವುದು ಉತ್ತಮ ಕಾರ್ಯ ಎಂದು ಬಂಟ್ವಾಳ ಉಪವಿಭಾಗದ ಸಹಾಯಕ ಅಧೀಕ್ಷಕ ಯಶ್ ಕುಮಾರ್ ಶರ್ಮ ಹೇಳಿದರು.

ಸೇವಾಂಜಲಿ ಪ್ರತಿಷ್ಠಾನ ಫರಂಗಿಪೇಟೆ ಇದರ ಆಶ್ರಯದಲ್ಲಿ, ಕೆ. ಎಸ್. ಹೆಗ್ಡೆ ಆಸ್ಪತ್ರೆಯ ಸಹಯೋಗದೊಂದಿಗೆ ಫರಂಗಿಪೇಟೆಯ ಸೇವಾಂಜಲಿ ಸಭಾಗ್ರಹದಲ್ಲಿ ಭಾನುವಾರ ನಡೆದ 135 ನೇ ರಕ್ತದಾನ ಶಿಬಿರವನ್ನು ದೀಪ ಬೆಳಗಿಸಿ, ಸ್ವಯಂ ರಕ್ತದಾನ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ನಗರ ಭಾಗದಲ್ಲಿ ಬ್ಲಡ್ ಬ್ಯಾಂಕ್ ಗಳು ಅಗತ್ಯ ಸಂದರ್ಭದಲ್ಲಿ ರಕ್ತ ಒದಗಿಸುವ ಕೆಲಸಮಾಡುತ್ತದೆ ಆದರೆ ಗ್ರಾಮೀಣ ಭಾಗಗಳಲ್ಲಿ ಅತಂಹ ವ್ಯವಸ್ಥೆಗಳು ಇರುವುದಿಲ್ಲ, ಸೇವಾಂಜಲಿ ಸಂಸ್ಥೆ ಹಲವು ವರ್ಷಗಳಿಂದ ಇಂತಹ ಸೇವಾ ಕಾರ್ಯ ನಡೆಸುತ್ತಿರುವುದು ಅಭಿನಂದನೀಯ ಎಂದರು.

ರೋಟರಿ ಜಿಲ್ಲೆ 3181ನ ಮಾಜಿ ಗವರ್ನರ್ ಎನ್.ಪ್ರಕಾಶ್ ಕಾರಂತ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ರಕ್ತದ ಕೊರತೆ ಎದುರಿಸುತ್ತಿರುವ ಈ ಕಾಲಘಟ್ಟದಲ್ಲಿ ಆಸ್ಪತ್ರೆಗಳ ಬೇಡಿಕೆಗನುಗುಣವಾಗಿ ಸೇವಾಂಜಲಿ ಸಂಸ್ಥೆ ರಕ್ತದಾನ ಶಿಬಿರಗಳನ್ನು ಹಮ್ಮಿಕೊಂಡು ಬರುತ್ತಿದೆ. ಸೇವಾಂಜಲಿಯ ಕೃಷ್ಣ ಕುಮಾರ್ ಪೂಂಜ ಅವರು ಅನೇಕ ಸಂಸ್ಥೆಗಳಿಗೆ ಪ್ರೇರಕರಾಗಿದ್ದುಕೊಂಡು ಜನ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಚುನಾಯಿತ ಜನಪ್ರತಿನಿಧಿ ಮಾಡಬೇಕಾಧ ಕಾರ್ಯವನ್ನು ಅವರು ಮಾಡುತ್ತಿದ್ದು ಸ್ವಸ್ಥ ಸುಂದರ ಸಮಾಜ ನಿರ್ಮಾಣವಾಗಲು ನಾವೆಲ್ಲಾ ಅವರೊಂದಿಗೆ ಕೈ ಜೋಡಿಸುವಂತೆ ತಿಳಿಸಿದರು.

ಸೇವಾಂಜಲಿಯ ಆರೋಗ್ಯ ಕೇಂದ್ರದ ವೈದ್ಯ ಡಾ. ಚೇತನ್ ರಕ್ತದಾನದ ಮಹತ್ವದ ಬಗ್ಗೆ ತಿಳಿಸಿದರು. ಕೆಎಂಸಿ ಬ್ಲಡ್ ಬ್ಯಾಂಕಿನ ಅನಿಲ್ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೇವಾಂಜಲಿ ಪ್ರತಿಷ್ಠಾನದ ಆಡಳಿತ ಟ್ರಸ್ಟಿ ಕೃಷ್ಣಕುಮಾರ್ ಪೂಂಜ ಪ್ರಾಸ್ತಾವಿಕವಾಗಿ ಮಾತನಾಡಿ, ಒಂದು ಯುನಿಟ್ ರಕ್ತದಾನ ಮಾಡುವ ಮೂಲಕ 4 ಮಂದಿಯ ಪ್ರಾಣ ಉಳಿಸಲು ಸಾಧ್ಯವಿದ್ದು, ಸ್ವಯಂ ಪ್ರೇರಣೆಯಿಂದ ರಕ್ತದಾನದಲ್ಲಿ ಭಾಗವಹಿಸುವಂತೆ ತಿಳಿಸಿದರು. ಟ್ರಸ್ಟಿ ಕೊಡ್ಮಾಣ್ ದೇವದಾಸ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಪ್ರಮುಖರಾದ ಡಾ. ರಾಮಕೃಷ್ಣ ಇರ್ವತ್ತೂರು ಸುಕೇಶ್ ಶೆಟ್ಟಿ ತೇವು, ಅರ್ಜುನ್ ಪೂಂಜ, ಬಿ.ನಾರಾಯಣ ಮೇರಮಜಲು, ದಿನೇಶ್ ತುಂಬೆ, ಹರ್ಷ ರಾಜ್ ಸುಜೀರು, ಪ್ರಕಾಶ್ ಕಿದೆಬೆಟ್ಟು, ಸುರೇಶ್ ರೈ ಪೆಲಪಾಡಿ, ಮೋಹನ್ ಬೆಂಜನಪದವು, ಜಯಾನಂದ ನಾಯ್ಕ್ ಕುಮ್ಡೇಲು, ಧನರಾಜ್ ತುಂಬೆ, ಪ್ರಮೋದ್ ದೇವಾಡಿಗ ಇದ್ದರು. ಶಿಬಿರದಲ್ಲಿ ಒಟ್ಟು 57 ಯುನಿಟ್ ರಕ್ತ ಸಂಗ್ರಹವಾಯಿತು.

ಕುಂಪಲ ಸರ್ಕಾರಿ ಶಾಲೆಯಲ್ಲಿ ಸಹ್ಯಾದ್ರಿ ಕಾಲೇಜಿನ ಎನ್ನೆಸ್ಸೆಸ್ ಶಿಬಿರ ಉದ್ಘಾಟನೆ



ಉಳ್ಳಾಲ: ಕುಂಪಲ ರೋಟರಿ ಸಮುದಾಯ ದಳದ ಮನವಿಗೆ ಸ್ಪಂದಿಸಿ ಕುಂಪಲ ಸರಕಾರಿ ಶಾಲೆಗೆ ಈಗಾಗಲೇ ಪೈಂಟ್ ಬಳಿಯಲಾಗಿದ್ದು,ಶಾಲೆಯ ಇತರ ಕೆಲಸ ಕಾರ್ಯಗಳನ್ನು ನಡೆಸುವ ಮೂಲಕ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರ ಯಶಸ್ವಿಯಾಗಲಿಯೆಂದು ಮಂಗಳೂರು ರೋಟರಿ ಕ್ಲಬ್‌ನ ಸುಜೀರ್ ಪ್ರಸಾದ್ ನಾಯಕ್ ಹೇಳಿದರು.

ಕುಂಪಲದ ಸರಕಾರಿ ಶಾಲೆಯಲ್ಲಿ ಪ್ರಾರಂಭಗೊಂಡ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಶಿಬಿರವನ್ನು ಉದ್ಘಾಟಿಸಿ, ಮಾತನಾಡಿದರು.

ರಾಷ್ಟ್ರೀಯ ಸೇವಾ ಭಾರತಿ ಸಂಯೋಜಿತ ಕುಂಪಲ ಕೇಸರಿ ಮಿತ್ರ ವೃಂದ ಸೇವಾ ಟ್ರಸ್ಟ್ ಹಾಗೂ ರೋಟರಿ ಸಮುದಾಯದಳದ ಸೇವಾ ಕಾರ್ಯಗಳಿಗೆ ಮುಂದೆಯೂ ನಮ್ಮ ಸಹಕಾರ ನಿರಂತರ ಇರಲಿದೆಯೆಂದರು.

ಕೇಸರಿ ಮಿತ್ರ ವೃಂದ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ನಾರಾಯಣ ಕುಂಪಲ ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾರ್ಜನೆಯ ಜೊತೆ ಜೊತೆಗೆ ಸೇವಾ ಕಾರ್ಯ ಮಾಡುವ ಮೂಲಕ ತಮ್ಮ ಕಾಲೇಜಿಗೆ ಉತ್ತಮ ಹೆಸರು ತರುವಂತಾಗಬೇಕು. ಜಲ ಸಂರಕ್ಷಣೆ, ವನ ಮಹೋತ್ಸವ, ಪರಿಸರ ಸಂರಕ್ಷಣೆ ಕಾರ್ಯಗಳನ್ನು ಮಾಡುವ ಮೂಲಕ ರಾಷ್ಟ್ರ ಹಿತಕ್ಕಾಗಿ ಏನಾದರೂ ಮಾಡಿ, ಆ ಮೂಲಕ ರಾಷ್ಟ್ರ ಸೇವೆಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿ ಕೊಳ್ಳಬೇಕೆಂದು ಸಲಹೆ ನೀಡಿದರು. ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎಸ್ ಇಂಜಗನೆರಿ ಅಧ್ಯಕ್ಷತೆ ವಹಿಸಿದ್ದರು. ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಡಾ.ಪ್ರಶಾಂತ್ ಕುಮಾರ್,ಕೇಸರಿ ಮಿತ್ರ ವೃಂದ ಟ್ರಸ್ಟ್ ಅಧ್ಯಕ್ಷ ಸುಧಾಕರ ಕುಂಪಲ,ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕಿಶೋರ್ ಕುಮಾರ್, ಮುಖ್ಯೋಪಾಧ್ಯಾಯಿನಿ ಚಂದ್ರಕಲಾ ಇದ್ದರು. ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದ ಮೇಲ್ವಿಚಾರಕಿ ರಶ್ಮಿತಾ ಸ್ವಾಗತಿಸಿ, ಉಪನ್ಯಾಸಕ ಮಧುರ ನಿರೂಪಿಸಿ, ನಿಖಿಲ್ ಕುಮಾರ್ ವಂದಿಸಿದರು.

ಫಿಲೋಮಿನಾ ಕಾಲೇಜಿನ ಶೈಕ್ಷಣಿಕ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆ



ಪುತ್ತೂರು: ನಗರದ ಸಂತ ಫಿಲೋಮಿನಾ ಕಾಲೇಜಿನ(ಸ್ವಾಯತ್ತ) ವಿದ್ಯಾರ್ಥಿ ಸಂಘದ ವತಿಯಿಂದ ಶೈಕ್ಷಣಿಕ ಸಾಧಕರಿಗೆ ಅಭಿನಂದನಾ ಸಲ್ಲಿಸುವ ಸನ್ಮಾನ ಕಾರ್ಯಕ್ರಮ ಕಾಲೇಜಿನ ರಜತ ಮಹೋತ್ಸವ ಸಭಾಂಗಣದಲ್ಲಿ ಜರುಗಿತು.

ಕಾಲೇಜಿನ ಸಂಚಾಲಕ ರೆ.ಫಾ. ಲಾರೆನ್ಸ್ ಮಸ್ಕರೇನ್ಹಸ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಯಾಗಿದ್ದ ಕಾಲೇಜಿನ ಹಳೆಯ ವಿದ್ಯಾರ್ಥಿ ಮತ್ತು ಕೆನರಾ ಕಾಲೇಜಿನ ಸಂಚಾಲಕ ಸಿಎ ಜಗನ್ನಾಥ್ ಕಾಮತ್, ಕಲಿಕೆ ಎಂಬುದು ನಿರಂತರ ಪ್ರಕ್ರಿಯೆ. ವಿದ್ಯಾರ್ಥಿಗಳು ಜೀವನದಲ್ಲಿ ಸಾಧನೆ ಮಾಡಿದಾಗ ಅವರ ಪೋಷಕರಿಗೆ ಎಲ್ಲರಿಗಿಂತ ಹೆಚ್ಚು ಸಂತೋಷವಾಗುತ್ತದೆ. ನಾವು ಸಾಧಕರನ್ನು ಸನ್ಮಾನಿಸಿದಾಗ, ಅದು ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯನ್ನು ನೀಡುತ್ತದೆ. ಶಿಕ್ಷಣದಲ್ಲಿ ಸಾಧನೆಗೈಯಲು ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ, ಪ್ರೋತ್ಸಾಹಿಸುವಲ್ಲಿ ಶಿಕ್ಷಕರು ಮತ್ತು ಪೋಷಕರ ಪಾತ್ರ ಬಹಳ ದೊಡ್ಡದು ಎಂದರು.

ಕಾಲೇಜಿನ ಪ್ರಾಂಶುಪಾಲ ಫಾ.ಡಾ. ಆಂಟನಿ ಪ್ರಕಾಶ್ ಮೊಂತೇರೊ ಮಾತನಾಡಿದರು. ಮಂಗಳೂರು ವಿವಿಯ ಪದವಿ ಪರೀಕ್ಷೆಯ ಬಿಎಸ್ಸಿ ವಿಭಾಗದಲ್ಲಿ ಶ್ರೀದೇವಿ ಪ್ರಥಮ ರ್‍ಯಾಂಕ್, ಆಯಿಷತ್ ಸಮ 4ನೇ ರ್‍ಯಾಂಕ್ ಗಳಿಸಿದ್ದಾರೆ. ಬಿಎ ವಿಭಾಗದಲ್ಲಿ ಮಾದ್ರಿ ಅರ್ಚನಾ 8ನೇ ರ್‍ಯಾಂಕ್, ಬಿಬಿಎ ವಿಭಾಗದಲ್ಲಿ ಶಾಯಿರಿನ್ ಬಾನು 10ನೇ ರ್‍ಯಾಂಕ್ ಗಳಿಸಿದ್ದು, ಅವರನ್ನು ಸನ್ಮಾನಿಸಲಾಯಿತು. ವಿಜ್ಞಾನ ವಿಭಾಗದ ಮುಖ್ಯಸ್ಥೆ ಡಾ. ಮಾಲಿನಿ, ಬಿಎ ವಿಭಾಗದ ಮುಖ್ಯಸ್ಥ ಡಾ. ನೋರ್ಬರ್ಟ್ ಮಸ್ಕರೇನ್ಹಸ್, ಉಪನ್ಯಾಸಕ ಪ್ರಶಾಂತ್ ರೈ ಪರಿಚಯಿಸಿದರು. ವಿದ್ಯಾರ್ಥಿ ಕ್ಷೇಮಪಾಲನ ಅಧಿ ಕಾರಿ ಡಾ. ರಾಧಾಕೃಷ್ಣ ಗೌಡ ಸ್ವಾಗತಿಸಿ, ಸ್ಪರ್ಲ್ ಫಿಯೋನಾ ಪಿರೇರಾ ವಂದಿಸಿದರು. ಪ್ರಥಮ ಬಿಎಸ್ಸಿ ವಿದ್ಯಾರ್ಥಿನಿ ಶ್ರೀವಿದ್ಯಾ ಕಾರ್ಯಕ್ರಮ ನಿರ್ವಹಿಸಿದರು.

ನೆಲ್ಯಾಡಿ ಕಾಲನಿಯಲ್ಲಿ ಮನ್ ಕೀ ಬಾತ್‌ನ 132ನೇ ಕಂತಿನ ವೀಕ್ಷಣಾ ಕಾರ್ಯಕ್ರಮ



ಕಡಬ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಮನ್ ಕೀ ಬಾತ್‌ನ 132ನೇ ಕಂತಿನ ವೀಕ್ಷಣಾ ಕಾರ್ಯಕ್ರಮವು ನೆಲ್ಯಾಡಿ ಗ್ರಾಮದ ಪಡುಬೆಟ್ಟು ಕಾಲನಿಯ ನಿವಾಸಿ ಬಾಲಕೃಷ್ಣ ಅವರ ಮನೆಯಲ್ಲಿ ಭಾನುವಾರ ನಡೆಯಿತು.

ಕಾರ್ಯಕ್ರಮವನ್ನು ಬಾಲಕೃಷ್ಣ ಅವರ ಮಾತೃಶ್ರೀ ಭವಾನಿ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ದ.ಕ. ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಈ ಕಾರ್ಯಕ್ರಮವನ್ನು ಶ್ಲಾಘಿಸಿದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಪ್ರಸನ್ನ ಮಾಡ್ತಾ ಮಾತನಾಡಿ, ಮನ್ ಕೀ ಬಾತ್ ಕಾರ್ಯಕ್ರಮವು ದೇಶದಲ್ಲಿ ನಡೆಯುತ್ತಿರುವ ಬದಲಾವಣೆಗಳನ್ನು ಸಾಮಾನ್ಯ ಜನರಿಗೆ ತಲುಪಿಸುವ ಮಹತ್ವದ ವೇದಿಕೆಯಾಗಿದೆ ಎಂದರು.

ಜಿಲ್ಲಾ ಮನ್ ಕೀ ಬಾತ್ ಸಹ ಸಂಚಾಲಕ ಜಯಕುಮಾರ್, ಎಸ್ಸಿ ಯುವ ಮೋರ್ಚಾ ಉಪಾಧ್ಯಕ್ಷ ಶಿವಪ್ರಸಾದ್, ಜಿಲ್ಲಾ ಬಿಜೆಪಿ ಕಾರ್ಯಕಾರಿ ಸಮಿತಿ ಸದಸ್ಯ ಬಾಲಕೃಷ್ಣ ಬಾಣಜಾಲು, ನೆಲ್ಯಾಡಿ ಶಕ್ತಿ ಕೇಂದ್ರ ಅಧ್ಯಕ್ಷ ರವಿಪ್ರಸಾದ್ ಬಲ್ಯ ಹಾಗೂ 21ನೇ ಬೂತ್ ಅಧ್ಯಕ್ಷ ರಕ್ಷಿತ್ ಮಡಿವಾಳ ಇದ್ದರು. ಕಾರ್ಯಕ್ರಮವನ್ನು ಎಸ್ಸಿ ಯುವ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಿ ಏಳ್ತಿಮಾರ್ ಸ್ವಾಗತಿಸಿ, ನಿರೂಪಿಸಿದರು. ರವಿಪ್ರಸಾದ್ ಬಲ್ಯ ವಂದಿಸಿದರು. ಈ ಸಂದರ್ಭದಲ್ಲಿ ಬೂತ್ ಮಟ್ಟದ ಪದಾಧಿಕಾರಿಗಳು, ಪಕ್ಷದ ಕಾರ್ಯಕರ್ತರು, ಗ್ರಾಮಸ್ಥರು ಭಾಗವಹಿಸಿ, ಬಳಿಕ ಪ್ರಧಾನಿಯವರ ಮನ್ ಕೀ ಬಾತ್ ಕಾರ್ಯಕ್ರಮ ಸಮೂಹವಾಗಿ ವೀಕ್ಷಿಸಿದರು.

ಎಡನೀರು ಶ್ರೀಗಳಿಗೆ ಆಮಂತ್ರಣ



ಮಂಗಳೂರು: ಉಪ್ಪಿನಂಗಡಿ ಸಮೀಪದ ಬಾರ್ಯ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದಲ್ಲಿ ಏ. 14ರಂದು ನಡೆಯಲಿರುವ ಎರಡನೆಯ ವರ್ಷದ ಶ್ರೀ ಮಹಾವಿಷ್ಣು ಯಾಗ ಸಂಬಂಧ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ಮತ್ತು ಶ್ರೀ ದೇವಳದ ಹೊರಾಂಗಣದ ಶಾಶ್ವತ ಮೇಲ್ಛಾವಣಿ ನಿರ್ಮಾಣಕ್ಕೆ ಚಾಲನೆ ನೀಡಲು ಆಗಮಿಸಲಿರುವ ಶ್ರೀ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮೀಜಿಯವರನ್ನು ಕ್ಷೇತ್ರದ ಆಡಳಿತ ಟ್ರಸ್ಟ್ ಪರವಾಗಿ ಆಮಂತ್ರಿಸಲಾಯಿತು .

ದೇವಳದ ಆಡಳಿತ ಸೇವಾ ಟ್ರಸ್ಟ್ ಅಧ್ಯಕ್ಷ ಭಾಸ್ಕರ ಬಾರ್ಯ, ಶ್ರೀಧರ ಕೇಕುಣ್ಣಾಯ, ಶುಭಾ ಅಡಿಗ, ಕಿಶೋರಿ ದುಗ್ಗಪ್ಪನಡುಗಲ್ಲು, ಶಾರದಾ ಅರಸ್ ಉಪಸ್ಥಿತರಿದ್ದರು.



ಒಡಿಯೂರು ಶ್ರೀ ಗ್ರಾಮ ವಿಕಾಸ ಯೋಜನೆಯ ವೃಂದಾವನ ಘಟ ಸಮಿತಿಯ ಏಳಿಂಜೆ ಕಾರ್ಯಕ್ಷೇತ್ರದ ಆಶ್ರಯದಲ್ಲಿ ಸಂಯೋಜಕರ ವಿದಾಯ ಕೂಟದಲ್ಲಿ ಯುಗಪುರುಷದ ಸಂಪಾದಕ ಭುವನಾಭಿರಾಮ ಉಡುಪ, ಮುಲ್ಕಿ ವಲಯದ ಸಂಯೋಜಕ ಸುರೇಶ್ ಶೆಟ್ಟಿ ಹಾಗೂ ಏಳಿಂಜೆ ಕಾರ್ಯಕ್ಷೇತ್ರದ ಸುಜಾತ ಮೂಲ್ಯ ಅವರನ್ನು ಗೌರವಿಸಲಾಯಿತು. ಘಟ ಸಮಿತಿಯ ಅಧ್ಯಕ್ಷೆ ಜಯಲಕ್ಷ್ಮೀ, ಉಪಾಧ್ಯಕ್ಷೆ ಸುಮಾ, ಕೋಶಾಧಿಕಾರಿ ಶಾಲಿನಿ, ನೂತನ ಸೇವಾ ರಕ್ಷಿತ, ಮಮತಾ, ಕಾರ್ಯದರ್ಶಿ ದೇವಕಿ ಇದ್ದರು.



ಮಂಗಳೂರು ನಗರದ ಬೊಕ್ಕಪಟ್ಣ ಪಾಷಾಣ ಮೂರ್ತಿ ಪಂಚಾದೇವತಾ ದೈವಸ್ಥಾನದಲ್ಲಿ ನಿರ್ಮಾಣಗೊಳ್ಳಲಿರುವ ವಿಶ್ರಾಂತಿ ಗೃಹಕ್ಕೆ ಶಾಸಕ ವೇದವ್ಯಾಸ ಕಾಮತ್ ಶಿಲಾನ್ಯಾಸ ನೆರವೇರಿಸಿದರು.
ಈ ಸಂದರ್ಭದಲ್ಲಿ ಬಿಜೆಪಿ ಪ್ರಮುಖರಾದ ದಿನೇಶ್, ಕಿರಣ್ ರೈ, ವಿನೋದ್ ಮೆಂಡನ್, ಹಾಗೂ ಪುರುಷೋತ್ತಮ ಕೋಟ್ಯಾನ್, ನಾರಾಯಣ ಕೋಟ್ಯಾನ್, ಚಂದ್ರಶೇಖರ ಕೋಟ್ಯಾನ್, ಗಿರಿಧರ್ ಕೋಟ್ಯಾನ್, ಕುಮಾರ್ ಕೋಟ್ಯಾನ್, ಗಂಗಾಧರ ಕೋಟ್ಯಾನ್ ಸೇರಿದಂತೆ ಬೊಕ್ಕಪಟ್ನದ ಕೋಟ್ಯಾನ್ ಕುಟುಂಬಸ್ಥರು ಉಪಸ್ಥಿತರಿದ್ದರು.

ರಾಷ್ಟ್ರ ಮಟ್ಟದಲ್ಲಿ ಕಂಬಳ ಆಯೋಜಿಸುವಂತಾಗಲಿ: ನ್ಯಾಯವಾದಿ ಮಹೇಶ್ ಕಜೆ ಆಶಯ

ಉಪ್ಪಿನಂಗಡಿ: ಕಂಬಳವೆನ್ನುವುದು ನಮ್ಮ ಸಂಸ್ಕೃತಿ, ಹೆಮ್ಮೆ ಮತ್ತು ಗೌರವವಾಗಿದೆ. ಹಳ್ಳಿಗೆ ಸೀಮಿತವಾಗಿದ್ದ ಕಂಬಳವನ್ನು ರಾಜ್ಯದಲ್ಲಿ ಈಗಾಗಲೇ ಆಯೋಜನೆ ಮಾಡಲಾಗಿದ್ದು, ಇದು ಮುಂದಕ್ಕೆ ರಾಷ್ಟ್ರದ ಆಕರ್ಷಣೆಗೆ ಒಳಗಾಗುವಂತೆ ಮಾಡಬೇಕಾಗಿದೆ ಎಂದು ನ್ಯಾಯವಾದಿ ಮಹೇಶ್ ಕಜೆ ಹೇಳಿದರು.

ಉಪ್ಪಿನಂಗಡಿಯ ವಿಜಯ-ವಿಕ್ರಮ ಜೋಡುಕರೆ ಕಂಬಳ ಸಮಿತಿಯಿಂದ ಆಯೋಜನೆಗೊಂಡ ಉಬಾರ್ ಕಂಬಳೋತ್ಸವದಲ್ಲಿ ಮಾ.29ರಂದು ನಡೆದ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ, ಕಂಬಳ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ರೈ, ರಾಜ್ಯ ಸರಕಾರ ಈಗಾಗಲೇ ಕಂಬಳಕ್ಕೆ ಅನುದಾನ ಮಂಜೂರು ಮಾಡಿದ್ದು, ಈ ಭಾಗದ 13 ಜನ ಶಾಸಕರು ರಾಜಕೀಯ ಬಿಟ್ಟು ಒಮ್ಮತಿನಿಂದ ಕಂಬಳಕ್ಕಾಗಿ ಧ್ವನಿಯೆತ್ತಿದಾಗ ಕಂಬಳಕ್ಕೆ





ಎಷ್ಟು ಬೇಕಾದರೂ ಅನುದಾನ ತರಿಸಬಹುದು. ಎಂದರು. ಪುತ್ತೂರು ದೇವಾಲಯದ ವ್ಯವಸ್ಥಾಪನಾ ಸಮಿತಿ ಸದಸ್ಯೆ ನಳಿನಿ ಪಿ. ಶೆಟ್ಟಿ, ವಿಟ್ಲ-ಉಪ್ಪಿನಂಗಡಿ ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಪ್ರವೀಣ್ ಚಂದ್ರ ಆಳ್ವ, ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸುದರ್ಶನ ನ್ಯಾಕ್ ಕಂಪ, ಪುತ್ತೂರು ನಗರ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಪ್ರಸಾದ್ ಆಳ್ವ, ನೋಟರಿ ವಕೀಲೆ ಅರುಣಾ ದಿನಕರ್ ರೈ, ಪುಡಾ ಸದಸ್ಯ ನಿಹಾಲ್ ಶೆಟ್ಟಿ, ಸುಮಾ ಅಶೋಕ್ ಕುಮಾರ್ ರೈ ಮತ್ತಿತರರಿದ್ದರು. ಕಂಬಳ ಸಮಿತಿಯ ಕಾರ್ಯಾಧ್ಯಕ್ಷ ಅಶೋಕ್ ಕುಮಾರ್ ರೈ ಅರ್ಪಿಣಿಗುತ್ತು ಸ್ವಾಗತಿಸಿ, ಗೌರವ ಸಲಹೆಗಾರ ನಿರಂಜನ್ ರೈ ಮಠಂತಬೆಟ್ಟು ನಿರ್ವಹಿಸಿದರು.

ಕಂಬಳದ ಫಲಿತಾಂಶ

ಹಗ್ಗ ಹಿರಿಯ ವಿಭಾಗದಲ್ಲಿ 13 ಜೊತೆ ಕೋಣಗಳು ಭಾಗವಹಿಸಿದ್ದು, ಇದರಲ್ಲಿ ನಂದಳಿಕೆ ಶ್ರೀಕಾಂತ್ ಭಟ್ ಅವರ ಬಿ ವಿಭಾಗದ ಕೋಣಗಳು ಪ್ರಥಮ ಹಾಗೂ ಎ ವಿಭಾಗದ ಕೋಣಗಳು ದ್ವಿತೀಯ ಬಹುಮಾನ ಪಡೆದವು. ಬಂಬ್ರಾಣ ಬೈಲು ವಂದಿತ್ ಶೆಟ್ಟಿ ಕೋಣಗಳನ್ನು ಓಡಿಸಿದರು.

ಹಗ್ಗ ಕಿರಿಯ ವಿಭಾಗದಲ್ಲಿ 18 ಜೊತೆ ಕೋಣಗಳು ಭಾಗವಹಿಸಿದ್ದು, ಬೆಳುವಾಯಿ ಪೆರೋಡಿ ಮತ್ತಿಗೆಗುತ್ತು ನರಸಿಂಹ ಕೆ. ಶೆಟ್ಟಿಯವರ ಎ ಹಾಗೂ ಬಿ ವಿಭಾಗದ ಕೋಣಗಳು ಫೈನಲ್ ಪ್ರವೇಶಿಸಿದ್ದವು. ಇಲ್ಲಿ ಪ್ರಥಮ ಬಹುಮಾನವನ್ನು ಬಿ ವಿಭಾಗದ ಕೋಣಗಳು (ಕೋಣ ಓಡಿಸಿದವರು: ಮಾಳ ಆದಿಶ್ ಪೂಜಾರಿ) ತಮ್ಮದಾಗಿಸಿಕೊಂಡವು. ದ್ವಿತೀಯ ಬಹುಮಾನವನ್ನು ಅವರ ಎ ವಿಭಾಗದ ಕೋಣಗಳು(ಕೋಣ ಓಡಿಸಿದವರು: ಕಾವೂರು ದೋಟ ಸುದರ್ಶನ್) ಪಡೆದವು. ಅಡ್ಡ ಹಲಗೆಯಲ್ಲಿ 8 ಜೊತೆ ಕೋಣಗಳು ಭಾಗವಹಿಸಿದ್ದು, ಇರುವೈಲು ದೊಡ್ಡಗುತ್ತು ಜಗದೀಶ್ ಎಂ. ಶೆಟ್ಟಿ ಅವರ ಕೋಣಗಳು (ಕೋಣ ಓಡಿಸಿದವರು: ತೆಕ್ಕಟ್ಟೆ ಸುಧೀರ್ ದೇವಾಡಿಗ) ಪ್ರಥಮ ಹಾಗೂ ದ್ವಿತೀಯ ಬಹುಮಾನವನ್ನು ನಾರಾವಿ ರಕ್ಷಿತ್ ಜೈನ್ ಅವರ ಕೋಣಗಳು (ಕೋಣ ಓಡಿಸಿದವರು: ಭಟ್ಕಳ ಹರೀಶ್) ಪಡೆದವು.

ನೇಗಿಲು ಹಿರಿಯ ವಿಭಾಗ

ನೇಗಿಲು ಹಿರಿಯ ವಿಭಾಗದಲ್ಲಿ 18 ಜೊತೆ ಕೋಣಗಳು ಭಾಗವಹಿಸಿದ್ದು, ಬೆಳುವಾಯಿ ದರೆಗುಡ್ಡೆ ಕಮಲ ನಿವಾಸ ಮನನ್ ಕಾರ್ತಿಕ್ ಪೂಜಾರಿಯವರ ಎ ವಿಭಾಗದ ಕೋಣಗಳು (ಕೋಣ ಓಡಿಸಿದವರು: ಕುಂದಬಾರಂದಡಿ ಮಾಸ್ತಿಕಟ್ಟೆ ಸ್ವರೂಪ) ಪ್ರಥಮ ಬಹುಮಾನವನ್ನು ಪಡೆದವು. ದ್ವಿತೀಯ ಬಹುಮಾನವನ್ನು ಜೈ ತುಳುನಾಡ್ ಕಕ್ಯಪದವು ಪುಣ್ಕೆದಡಿ ರೆಹಾನ್ಸ್ ಭಂಡಾರಿ ಅವರ ಕೋಣಗಳು (ಕೋಣ ಓಡಿಸಿದವರು: ಭಟ್ಕಳ ಶಂಕರ) ಪಡೆದವು. ನೇಗಿಲು ಹಿರಿಯ ವಿಭಾಗದಲ್ಲಿ 61 ಜೊತೆ ಕೋಣಗಳು ಭಾಗವಹಿಸಿದ್ದು, ಫೈನಲ್‌ನಲ್ಲಿ ಎರ್ಮಾಳ್ ಪುಚ್ಚೊಟ್ಟುಬೀಡು ಬಾಲಚಂದ್ರ ಲೋಕಯ್ಯ ಶೆಟ್ಟಿ ಅವರ ಎ ವಿಭಾಗದ ಕೋಣಗಳು (ಕೋಣ ಓಡಿಸಿದವರು: ಕುಂದಬಾರಂದಡಿ ಮಾಸ್ತಿಕಟ್ಟೆ ಸ್ವರೂಪ್) ಹಾಗೂ ಶ್ರೀ ಪಂಚಲಿಂಗೇಶ್ವರ ಉರುವಾಲು ನೇಕಾಳುಗುತ್ತು ಸದಾನಂದ ಗೌಡ ಅವರ ಕೋಣಗಳು (ಕೋಣ ಓಡಿಸಿದವರು: ಬೈಂದೂರು ವಿಶ್ವನಾಥ ದೇವಾಡಿಗ) ಸ್ಪರ್ಧಿಸಿದ್ದವು. ಆದರೆ, ಇಲ್ಲಿ ಎರಡು ಕೋಣಗಳು ಸಮಾನವಾಗಿ ಮಂಜೊಟ್ಟಿ ತಲುಪಿದವು. ಕಂಬಳ ಸಮಿತಿಯ ತೀರ್ಮಾನದಂತೆ ಇಲ್ಲಿ ಎರಡು ಜೊತೆ ಕೋಣಗಳಿಗೂ ಪ್ರಥಮ ಬಹುಮಾನವಾದ ಒಂದು ಪವನ್ ಚಿನ್ನವನ್ನು ನೀಡಿ ಗೌರವಿಸಲಾಯಿತು. ಕನಹಲಗೆ ವಿಭಾಗದಲ್ಲಿ 10 ಜೊತೆ ಕೋಣಗಳು ಭಾಗವಹಿಸಿದ್ದು, ಇಲ್ಲಿ ಯಾವ ಕೋಣಗಳು ನಿಶಾನೆಗೆ ನೀರು ಹಾಯಿಸದ ಕಾರಣ 10 ಜೊತೆ ಕೋಣಗಳ ಯಜಮಾನರಿಗೆ ಟ್ರೋಫಿ ನೀಡಿ ಗೌರವಿಸಲಾಯಿತು.

ನಿಮ್ಮೂರಿನ ಸುದ್ದಿ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಮಂಗಳವಾರ 31, ಮಾರ್ಚ್ 2026

ಸುತ್ತಮುತ್ತ

ಕುಂದಾಪುರದಲ್ಲಿ ಮಹಾವೀರ ಜಯಂತಿ

ಕುಂದಾಪುರ: ಇಲ್ಲಿನ ಕುಂದಾಪುರ ಮಿನಿ ವಿಧಾನ ಸೌಧದ ಕೋರ್ಟ್ ಹಾಲ್‌ನಲ್ಲಿ ತಾಲೂಕು ಆಡಳಿತದ ವತಿಯಿಂದ ಮಹಾವೀರ ಜಯಂತಿಯನ್ನು ಸೋಮವಾರ ಆಚರಿಸಲಾಯಿತು. ಕುಂದಾಪುರ ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್ ಅವರು ಮಹಾವೀರ ಅವರ ಭಾವಚಿತ್ರಕ್ಕೆ ಪುಷ್ಪ ನಮನದ ಮೂಲಕ ಗೌರವ ಸಲ್ಲಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬಂದಿ ವರ್ಗದವರು, ವಿವಿಧ ಗ್ರಾ.ಪಂ.ಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಾರ್ಕಳ ಕಚೇರಿಯಲ್ಲಿ ಮಹಾವೀರ ಜಯಂತಿ

ಕಾರ್ಕಳ: ತಾಲೂಕು ಕಚೇರಿಯಲ್ಲಿ ಸೋಮವಾರ ಮಹಾವೀರ ಜಯಂತಿ ಆಚರಿಸಲಾಯಿತು. ತಹಶೀಲ್ದಾರ್ ಪ್ರದೀಪ್ ಆರ್. ದೀಪ ಬೆಳಗಿ ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭ ಉಪತಹಶೀಲ್ದಾರ್ ಮಂಜುನಾಥ್ ಹಾಗೂ ಕಚೇರಿ ಸಿಬ್ಬಂದಿ ಉಪಸ್ಥಿತರಿದ್ದರು.

ಮಹಿಳಾ ದಿನಾಚರಣೆ

ಮೂಡುಬಿದಿರೆ: ಮಹಿಳಾ ಬಂಟರ ಸಂಘ ಮೂಡುಬಿದಿರೆ ಇದರ ವತಿಯಿಂದ ಮಾ. 29ರಂದು ಇಲ್ಲಿನ ಹೋಟೆಲ್ ಪಂಚರತ್ನ ಇಂಟರ್‌ನ್ಯಾಷನಲ್ ಸಭಾಂಗಣದಲ್ಲಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಕಳದ ಎಸ್‌ವಿಟಿ ಮಹಿಳಾ ಕಾಲೇಜಿನ ನಿವೃತ್ತ ಪ್ರಾಂಶುಪಾಲೆ ಶಿಮತಿ ಮಿತ್ರಪ್ರಭಾ ಹೆಗ್ಡೆಯವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಸಾಮಾಜಿಕ ಜೀವನದಲ್ಲಿ ಮಳಿಯೆಯರ ಪಾತ್ರದ ಕುರಿತು ಮಾತನಾಡುತ್ತಾ ಕುಟುಂಬ ವ್ಯವಸ್ಥೆ ಹಾಗೂ ಸಾಮಾಜಿಕ ಜೀವನದಲ್ಲಿ ಮಹಿಳೆಯ ಪಾತ್ರದ ಬಗ್ಗೆ ವಿವರಿಸಿದರು. ಮಹಿಳಾ ಬಂಟರ ಸಂಘದ ಅಧ್ಯಕ್ಷೆ ಶೋಭಾ ಎಸ್. ಹೆಗ್ಡೆ ಸ್ವಾಗತಿಸಿ, ಕೋಶಾಧಿಕಾರಿ ಗೀತಾ ಪಿ ಶೆಟ್ಟಿ ಹಾಗೂ ಕಾರ್ಯದರ್ಶಿ ಸಂಗೀತ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಯಲಕ್ಷ್ಮಿ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸಭಾ ಕಾರ್ಯಕ್ರಮದ ನಂತರ ಮಹಿಳೆಯರಿಗಾಗಿ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಏ.24ರಿಂದ ಮೇ 3ರವರೆಗೆ ದೈವಗಳ ಪ್ರತಿಷ್ಠೆ

ಸುಬ್ರಹ್ಮಣ್ಯ: ಕರಿಕ್ಕಳದ ನಿಡ್ವಾಳ ಶ್ರೀ ಮಹಾ ವಿಷ್ಣುಮೂರ್ತಿ ದೇವಸ್ಥಾನದ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಏ.24ರಿಂದ ಮೇ 3ರ ತನಕ ನಡೆಯಲಿದೆ. ಆ ಪ್ರಯುಕ್ತ ಶ್ರೀ ದೇವಳದ ಶ್ರೀ ಚಾಮುಂಡಿ ಮತ್ತು ಪರಿವಾರ ದೈವಗಳ ಪ್ರತಿಷ್ಠೆಯು ಮೂಲಸ್ಥಾನ ಚಾಮುಂಡಿಮೂಲೆಯ ದೈವಸ್ಥಾನದಲ್ಲಿ ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ನಡೆಯಿತು. ದೇವಳದ ಸಮೀಪದಲ್ಲಿದ್ದ ದೈವಸ್ಥಾನದಲ್ಲಿ ವಿವಿಧ ವೈದಿಕ ಕಾರ್ಯಕ್ರಮಗಳು ನಡೆದು ಬಳಿಕ ಶ್ರೀ ಚಾಮುಂಡಿ ಮತ್ತು ಪರಿವಾರ ದೈವಗಳ ಭಂಡಾರವನ್ನು ಮೂಲಸ್ಥಾನ ಚಾಮುಂಡಿಮೂಲೆಗೆ ವಾದ್ಯ ಘೋಷಗಳ ಮೆರವಣಿಗೆ ಮೂಲಕ ತರಲಾಯಿತು. ನಂತರ ಶ್ರೀ ದೈವಗಳ ಪ್ರತಿಷ್ಠೆ ಕಲಶಾಭಿಷೇಕ, ತಂಬಿಲ ಸೇವೆ, ಮಂಗಳಾರತಿ, ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ನಿಡ್ವಾಳ ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಮತ್ತು ಪುನರ್‌ನಿರ್ಮಾಣ ಸಮಿತಿ ಕೋಶಾಧಿಕಾರಿ ಚಂದ್ರಪ್ರಕಾಶ್ ಕಂಬಳ, ಪುನರ್ ನಿರ್ಮಾಣ ಸಮಿತಿ ಅಧ್ಯಕ್ಷ ಮತ್ತು ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷನೇಮಿರಾಜ ಪಲ್ಲೋಡಿ, ಪಂಜ ಶ್ರೀ ಸದಾಶಿವ ಪರಿವಾರ ಪಂಚಲಿಂಗೇಶ್ವರ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಡಾ. ದೇವಿಪ್ರಸಾದ್ ಕಾನತ್ತೂರ್, ಕುಕ್ಕೆ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಸದಸ್ಯ ಮಹೇಶ್ ಕುಮಾರ್ ಕರಿಕ್ಕಳ, ಪಂಜ ಗ್ರಾ.ಪಂ. ಮಾಜಿ ಅಧ್ಯಕ್ಷ ರಫೀಕ್ ಸಿ.ಎಂ., ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಕೋಶಾಧಿಕಾರಿ ಕುಶಾಲಪ್ಪ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಪುರಿಯಮನೆ, ಆಡಳಿತ ಮಂಡಳಿ ಕಾರ್ಯದರ್ಶಿ ಗುರುಪ್ರಸಾದ್ ತೋಟ, ದೇವಳದ ಪ್ರಧಾನ ಅರ್ಚಕ ಅಕ್ಷಯ್ ಭಟ್ ಬರ್ಲಾಯಬೆಟ್ಟು ಮತ್ತಿತರರು ಉಪಸ್ಥಿತರಿದ್ದರು.

ಮಾತೃಭೂಮಿ ಮಹಿಳಾ ಸಹಕಾರ ಸಂಘಕ್ಕೆ ಆಯ್ಕೆ

ಬೈಂದೂರು: ಇಲ್ಲಿನ ಮಾತೃಭೂಮಿ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಸರಳಾ



ಹಾಗೂ ಉಪಾಧ್ಯಕ್ಷರಾಗಿ ಅಂಬಿಕಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ನಿರ್ದೇಶಕರಾಗಿ ಗಿರಿಜಾ, ಲಕ್ಷ್ಮೀ ಬೈಂದೂರು, ಶ್ಯಾಮಲಾ, ಅನುಸೂಯ, ಸುಜಾತಾ, ಶಿಲ್ಪಾ ಕೆ. ಭಟ್, ಸಂಗೀತಾ, ಸಾವಿತ್ರಿ, ಮಾಲತಿ ಮರಾಠಿ ಇವರೂ ಕೂಡ ಅವಿರೋಧ ಆಯ್ಕೆಯಾಗಿದ್ದಾರೆ.

ಮಂಗಳೂರಿನಲ್ಲಿ ದ.ಕ. ಜಿಲ್ಲಾಡಳಿತದಿಂದ ಭಗವಾನ್ ಮಹಾವೀರ ಜಯಂತಿ ಆಚರಣೆ

ಬದುಕಿಗೆ ಮಹಾವೀರರ ಸಂದೇಶ ಪ್ರೇರಣಾದಾಯಿ: ಕಾಮತ್



ಮಂಗಳೂರು: ಜಗತ್ತು, ದೇಶ, ಸಮಾಜದಲ್ಲಿ ಸಮಾನತೆ ಇದ್ದರೆ, ಯಾವುದೇ ಸಂಘರ್ಷ ಉಂಟಾಗದು ಎಂದು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಿ. ವೇದವ್ಯಾಸ್ ಕಾಮತ್ ಹೇಳಿದರು.

ದ.ಕ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದ.ಕ. ಹಾಗೂ ಜೈನ ಸೊಸೈಟಿ ಮಂಗಳೂರು ವತಿಯಿಂದ ಬಜಿಲಕೇರಿ ಶ್ರೀ ಆದೀಶ್ವರ ಸ್ವಾಮಿ ಜೈನ ಬಸದಿಯಲ್ಲಿ ಸೋಮವಾರ ನಡೆದ ಭಗವಾನ್ ಮಹಾವೀರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶಾಂತಿ ಅಹಿಂಸೆಯ ಸಮಾಜ ನಿರ್ಮಾಣಕ್ಕೆ ಸಮಾನತೆ ಸಹಬಾಳ್ವೆ ಅಗತ್ಯ. ಎಲ್ಲವೂ ಸಮರ್ಪಕವಾಗಿದ್ದರೆ, ವ್ಯವಸ್ಥೆ ಅರ್ಥಪೂರ್ಣವಾಗಲಿದೆ ಎಂಬುವುದನ್ನು ಮಹಾವೀರರು ಅವರ ತತ್ವಗಳಲ್ಲಿ ತೋರಿಸಿದ್ದಾರೆ. ಅವರ ಸಂದೇಶಗಳು ಪ್ರೇರಣಾದಾಯಿಯಾಗಿವೆ. ಜೈನ ಸಮುದಾಯವು ಸಣ್ಣ ಸಮುದಾಯವಾಗಿದ್ದು ಸವಾಲುಗಳನ್ನು ದಿಟ್ಟವಾಗಿ ಎದುರಿಸಬೇಕು. ಅನ್ಯಾಯ ಮಾಡಿದವರಿಗೆ ರಕ್ಷಣೆ ಸಿಗುವ ಕಾಲದಲ್ಲಿ ನ್ಯಾಯ ದಲ್ಲಿರುವವರಿಗೂ ರಕ್ಷಣೆ ಸಿಗಲೇಬೇಕು ಎಂದರು.

ಮೂಡುಬಿದಿರೆ ಜೈನ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಪ್ರಭಾತ್ ಬಲ್ನಾಡ್ ಅವರು ಉಪನ್ಯಾಸ ನೀಡಿದರು. ಅಹಿಂಸೆ ಜೈನ ಧರ್ಮದ ಆತ್ಮ. ಯುದ್ಧದ ಪರಿಸ್ಥಿತಿ ಎದುರಾಗಿರುವ ವಿಶ್ವದಲ್ಲಿ ಮುಂದೇನಾಗುತ್ತದೆ ಎಂಬುವುದು ಹೇಳಲು ಸಾಧ್ಯವಿಲ್ಲ, ಆದರೆ, ಅಹಿಂಸೆ ಪಾಲಿಸಿದರೆ, ಎಲ್ಲಾ ಸಂದರ್ಭವನ್ನು ಗೆಲ್ಲಬಹುದು. ಮಹಾವೀರರ ಸಂದೇಶ ಈ ನಿಟ್ಟಿನಲ್ಲಿ ಪ್ರಸ್ತುತವಾಗಿದೆ ಎಂದರು. ಸಜ್ಜನರಾಗಿ ಧಾರ್ಮಿಕ ನಂಬಿಕೆ ಉಳಿಸಬೇಕು. ಪರಸ್ಪರ ಗೌರವಿಸಿ, ಬಾಳಬೇಕು ಎಂದವರು ಹೇಳಿದರು. ಜೈನ್ ಮಿಲಾನ್ ಅಧ್ಯಕ್ಷ ರತ್ನಾಕರ್ ಜೈನ್, ಮಂಗಳೂರು ಜೈನ ಸೊಸೈಟಿಯ ಗೌರವಾಧ್ಯಕ್ಷ ಸುರೇಶ್ ಬಲ್ಲಾಲ್, ಕಾರ್ಯದರ್ಶಿ ಸಚಿನ್ ಜೈನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಶ್ ಜಿ. ಉಪಸ್ಥಿತರಿದ್ದರು. ಜೈನ್ ಸೊಸೈಟಿಯ ಅಧ್ಯಕ್ಷ ಪುಷ್ಪರಾಜ್ ಜೈನ್ ಪ್ರಸ್ತಾವಿಸಿ ಸ್ವಾಗತಿಸಿದರು. ಜೈನ ಸೊಸೈಟಿಯ ನಿರ್ದೇಶಕ ಸುಕುಮಾರ್ ಬಲ್ಲಾಲ್ ನಿರೂಪಿಸಿದರು.

ಮುಲ್ಕಿ ತಾಲೂಕು ಆಡಳಿತದಿಂದ ಆಚರಣೆ



ಮುಲ್ಕಿ: ಅಹಿಂಸೆ ಪರಮೋಧರ್ಮ ಎಂದು ಬೋಧಿಸಿ ಪ್ರತಿಯೊಬ್ಬರನ್ನು ಗೌರವದಿಂದ ನೋಡಿಕೊಳ್ಳುತ್ತಿದ್ದ ಭಗವಾನ್ ಮಹಾವೀರರು ಅದ್ಭುತನಿಯಂತ್ರಣಕೌಶಲ್ಯವನ್ನುಹೊಂದಿದ್ದರು ಅವರ ಸರಳತೆ ಯುವ ಜನಾಂಗಕ್ಕೆ ಮಾದರಿ ಎಂದು ಮುಲ್ಕಿ ತಾಲೂಕು ಉಪತಹಶಿಲ್ದಾರ್ ದಿಲೀಪ್ ರೋಡ್ಕರ್ ಹೇಳಿದರು

ಅವರು ತಾಲೂಕು ಆಡಳಿತ ಪ್ರಜಾ ಸೌಧದಲ್ಲಿ ಮಹಾವೀರ ಜಯಂತಿ ಪ್ರಯುಕ್ತ ಮಹಾವೀರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಭಗವಾನ್ ಮಹಾವೀರರು ಆಡಂಬರ ತಪ್ಪಿಸಿ ಸರಳತೆಗೆ ಹೆಸರುವಾಸಿಯಾಗಿದ್ದರು. ಅವರ ಜೀವನದ ಸಾಧನೆಗಳು ಕಾಲಕಾಲಕ್ಕೂ ಪ್ರಸ್ತುತ ಎಂದರು.

ಈ ಸಂದರ್ಭ ತಾಲೂಕು ಕಂದಾಯ ಇಲಾಖೆ ಅಧಿಕಾರಿ ಮೋಹನ್, ವಿಎ ಸುಜಿತ್ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಕೊಡಗು ಜಿಲ್ಲಾಡಳಿತದಿಂದ ಮಹಾವೀರ ಜಯಂತಿ | ವಾಣಿ ಪುಷ್ಪರಾಜ್ ಸಲಹೆ

ಅಹಿಂಸೆ ಮಾರ್ಗದಿಂದ ಯುದ್ಧದ ಮನಸ್ಥಿತಿ ದೂರ



ಮಡಿಕೇರಿ: ಭಗವಾನ್ ಮಹಾವೀರರ ತತ್ವ ಚಿಂತನೆ ಹಾಗೂ ಅಹಿಂಸೆಯನ್ನು ಅಳವಡಿಸಿ ಕೊಂಡಲ್ಲಿ ಪ್ರಪಂಚದಲ್ಲಿ ಯಾವುದೇ ಯುದ್ಧ ನಡೆಯುವುದಿಲ್ಲ ಆ ನಿಟ್ಟಿನಲ್ಲಿ ಭಗವಾನ್ ಮಹಾವೀರರ ಸಂದೇಶಗಳು ಹಾಗೂ ಮಾರ್ಗದರ್ಶನವನ್ನು ಪಾಲಿಸುವಂತಾಗಬೇಕು ಎಂದು ನಿವೃತ್ತ ಪ್ರಾಂಶುಪಾಲೆ ಡಾ.ವಾಣಿ ಪುಷ್ಪರಾಜ್ ಅವರು ಪ್ರತಿಪಾದಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಗಾಂಧಿ ಭವನದಲ್ಲಿ ಸೋಮವಾರ ನಡೆದ ಭಗವಾನ್ ಮಹಾವೀರರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಮೆರಿಕಾ-ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದ ವಿಶ್ವದಲ್ಲಿ ಒಂದು ರೀತಿ ಸಂದಿಗ್ಧ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಆರ್ಥಿಕ ಚಟುವಟಿಕೆ ಹಾಗೂ ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂದು ಹೇಳಿದರು.

'ಇಂದಿನ ವೇಗದ ಬದುಕಿನಲ್ಲಿ ಜಗತ್ತು ಒಂದು ಹಳ್ಳಿಯಾಗಿದ್ದು, ರಾಷ್ಟ್ರ ರಾಷ್ಟ್ರಗಳು ಒಂದಕ್ಕೊಂದು ಅವಲಂಬಿತವಾಗಿ ಬದುಕು ನಡೆಸುವಂತಾಗಿದೆ. ಆದ್ದರಿಂದ ಇಡೀ ವಿಶ್ವದಲ್ಲಿ ಶಾಂತಿ ನೆಲೆಸುವಂತಾಗಬೇಕು. ಅದಕ್ಕೆ ಮಹಾವೀರರ ಸಂದೇಶಗಳು ಮತ್ತು ತತ್ವಗಳನ್ನು ಅಳವಡಿಸಿಕೊಂಡು ಮುನ್ನಡೆಯುವಂತಾಗಬೇಕು' ಎಂದರು.

ಅಹಿಂಸೆಯೇ ಪರಮಧರ್ಮ ಪ್ರತಿಯೊಂದು ಜೀವಿಯೂ ಮನುಷ್ಯ, ಪ್ರಾಣಿ, ಸಸ್ಯ, ಸಮಾನವಾದುದು ಮತ್ತು ಎಲ್ಲದರಲ್ಲೂ ಆತ್ಮವಿದೆ. ಆದ್ದರಿಂದ ಯಾವ ಪ್ರಾಣಿ, ಪಕ್ಷಿಗೂ ಹಿಂಸೆ ನೀಡಬಾರದು ಎಂದು ಮಹಾವೀರರು ಪ್ರತಿಪಾದಿಸಿದ್ದಾರೆ ಎಂದು ಅವರು ನುಡಿದರು.

ಪಂಚ ಮಹಾವ್ರತಗಳು ಸೇರಿದಂತೆ ರತ್ನತ್ರಯಗಳು, ಕರ್ಮ ಸಿದ್ಧಾಂತ, ಅನೇಕಾಂತವಾದ ಹೀಗೆ ಹಲವು ಭೋದನೆಗಳಲ್ಲಿ ವಿವರಿಸಿದ್ದಾರೆ ಎಂದು ವಾಣಿ ಪುಷ್ಪರಾಜ್ ಅವರು ತಿಳಿಸಿದರು.

ಜೈನ ಸಮಾಜದ ಅಲ್ಪಸಂಖ್ಯಾತರ ವಿಭಾಗದ ಸದಸ್ಯ ಜೆ.ಎನ್.ಚಂದ್ರಪ್ರಸಾದ್ ಮಾತನಾಡಿ, ಮಹಾವೀರರು ಹಾಕಿಕೊಟ್ಟ ಸತ್ಯದ ಮಾರ್ಗದಲ್ಲಿ ನಡೆದರೆ ವಿಶ್ವದಲ್ಲಿ ಶಾಂತಿ ನೆಲೆಸಲು ಸಾಧ್ಯ ಎಂದರು.

ಸಮಾಜದಲ್ಲಿ ಅಹಿಂಸೆ, ಶಾಂತಿ ಇರಬೇಕು. ಮೋಸ ಮತ್ತು ವಂಚನೆ ಇರಬಾರದು. ಯಾರಿಗೂ ನೋವು ಉಂಟಾಗದಂತೆ ನಡೆದುಕೊಳ್ಳಬೇಕು. ಸತ್ಯ ಧರ್ಮದಲ್ಲಿ ನಂಬಿಕೆ ಇರಬೇಕು. ಆ ನಿಟ್ಟಿನಲ್ಲಿ ಭಗವಾನ್ ಮಹಾವೀರರ ಸಂದೇಶಗಳು ಇಂದಿಗೂ ಸಹ ಸಾರ್ವಕಾಲಿಕ ಎಂದು ಜೆ.ಎನ್. ಚಂದ್ರಪ್ರಸಾದ್ ಅವರು ವಿವರಿಸಿದರು.

ಜೈನ ಸಮಾಜದ ಜಿಲ್ಲಾಧ್ಯಕ್ಷ ಜೆ.ಎನ್. ಪುಷ್ಪರಾಜ್ ಮಾತನಾಡಿ, ಭಗವಾನ್ ಮಹಾವೀರರ ಸಂದೇಶಗಳನ್ನು ಅಳವಡಿಸಿ ಕೊಂಡಲ್ಲಿ ಪ್ರಪಂಚದಲ್ಲಿ ಶಾಂತಿ ಸ್ಥಾಪಿಸಲು ಸಾಧ್ಯ ಎಂದರು. ಭಗವಾನ್ ಮಹಾವೀರರ ಶಾಂತಿ ಮಂತ್ರವನ್ನು ಇದೇ ಸಂದರ್ಭ ಪಠಿಸಲಾಯಿತು. ತಹಶೀಲ್ದಾರ್ ಕಚೇರಿಯ ಶಿರಸ್ತೇದಾರ್ ದೇವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ, ವಿದ್ಯಾರ್ಥಿಗಳು ಇತರರು ಇದ್ದರು. ಅನ್ವಿತ್ ಮತ್ತು ಸಮನ್ಯು ನಾಡಗೀತೆ ಹಾಡಿದರು.

ಪುತ್ತೂರು ತಾಲೂಕು ಆಡಳಿತಸೌಧದಿಂದ ಭಗವಾನ್ ಮಹಾವೀರ ಜಯಂತಿ

ಸಹಬಾಳ್ವೆಗೆ ಒತ್ತು ನೀಡಿದ ಶ್ರೇಷ್ಠ ಸಂತ: ಕೂಡಲಗಿ



ಪುತ್ತೂರು: ಮನುಕುಲಕ್ಕೆ ಮೌಲ್ಯಯುತ ವಾದ ತತ್ವ ಸಿದ್ಧಾಂತಗಳ ಮೂಲಕ ಸಹಬಾಳ್ವೆಗೆ ಒತ್ತು ನೀಡುವ ಮೂಲಕ ಸಮಾಜದ ಉನ್ನತಿಗೆ ಶ್ರಮಿಸಿದವರು ಭಗವಾನ್ ಮಹಾವೀರ ಎಂದು ಪುತ್ತೂರು ತಹಶೀಲ್ದಾರ್ ಎಸ್.ಬಿ. ಕೂಡಲಗಿ ಅಭಿಪ್ರಾಯಪಟ್ಟರು.

ಸೋಮವಾರ ತಾಲೂಕು ಆಡಳಿತ ಸೌಧದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಡೆದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಿದ ಸಂತರು ಸಾಕಷ್ಟು ಮಂದಿ ಇದ್ದಾರೆ. ಅಂತವರ ನಡುವೆ ಸತ್ಯವನ್ನೇ ನಂಬಿಕೊಂಡು ತನ್ನ ವೈಭೋಗಗಳನ್ನು ತ್ಯಜಿಸಿ ಸಮಾಜಕ್ಕೆ ಅಗತ್ಯವಾದ ಚಿಂತನೆಗಳನ್ನು ನೀಡಿದ ಮಹಾವೀರರು ಉನ್ನತ ಸ್ಥಾನದಲ್ಲಿದ್ದಾರೆ. ಅವರ ಉಪದೇಶಗಳು ಎರಡು ಸಾವಿರ ವರ್ಷ ಕಳೆದರೂ ಜೀವಂತಿಕೆ ಕಳೆದುಕೊಳ್ಳದೆ ಇಂದಿಗೂ ಪ್ರಸ್ತುತವಾಗಿವೆ ಎಂದರು.

ಕಂದಾಯ ಇಲಾಖೆಯ ಶ್ರೀಕಲಾ ಮಾತನಾಡಿ, ಅಹಿಂಸಾ ತತ್ವದ ಮೂಲಕ ಹುಟ್ಟಿಕೊಂಡ ಜೈನಧರ್ಮ ಇಂದಿಗೂ ಉನ್ನತ ಸ್ಥಾನದಲ್ಲಿದೆ. ವರ್ಣ ವ್ಯವಸ್ಥೆಯ ವಿರುದ್ಧದ ಅವರ ಚಿಂತನೆಗಳು ಸಾರ್ವಕಾಲಿಕ ಮೌಲ್ಯಗಳಾಗಿ ಉಳಿದು ಕೊಂಡಿವೆ. ಸಾಹಿತ್ಯ, ಸಂಸ್ಕೃತಿ ಹಾಗೂ ವಾಸ್ತುಶಿಲ್ಪಕ್ಕೆ ಜೈನಧರ್ಮದ ಕೊಡುಗೆ ಅಪಾರವಾಗಿದೆ. ಸಮಾಜಕ್ಕೆ ಮಾರ್ಗದರ್ಶಕ ಧರ್ಮವಾಗಿರುವ ಜೈನಧರ್ಮ ಉನ್ನತವಾದ ಮೌಲ್ಯವನ್ನು ಕಾಪಾಡಿಕೊಂಡು ಬಂದಿದೆ. ಜೈನಸಮಾಜ ಇಂದಿಗೂ ಸಹಬಾಳ್ವೆಯ ಮಿತಿ ಮೀರಿ ಬದುಕುವುದನ್ನು ಇಚ್ಛಿಸುವುದಿಲ್ಲ ಎಂದರು.

> ಮಹಾವೀರರು ಉಪದೇಶ- ಚಿಂತನೆ ನಮ್ಮ ಬದುಕಿನಲ್ಲಿ ಅಳವಡಿಸಿದಾಗ ಅವರ ಸತ್ಯದ ಅನ್ವೇಷಣೆಗೆ ಪೂರಕವಾದ ವಾತಾವರಣ ನಿರ್ಮಾಣ ವಾಗುತ್ತದೆ. ಯಾರಿಗೂ ನೋವು ಕೊಡದ, ಸಮಸ್ಯೆಗಳ ಸೃಷ್ಟಿಗೆ ಕಾರಣವಾಗದ ಸಮಾಜ ಅಂದರೆ ಅದು ಜೈನ ಸಮಾಜ.
> ● ಎಸ್.ಬಿ. ಕೂಡಲಗಿ

ಪುತ್ತೂರು ಜೈನ್ ಮಿಲನ್ ಅಧ್ಯಕ್ಷ ಸತೀಶ್ ಪಡಿವಾಳ್ ಮಾತನಾಡಿ, ದೇಶದಲ್ಲಿ ಕೇವಲ ಶೇ. 0.09ರಷ್ಟಿರುವ ಜೈನರು ಅತ್ಯಂತ ಹೆಚ್ಚು ತೆರಿಗೆ ಪಾವತಿಸುವ ಸಮಾಜವಾಗಿದೆ ಎಂದರು.

ಡಿವೈಎಸ್ಪಿ ಪ್ರಮೋದ್ ಕುಮಾರ್, ನಗರಸಭಾ ಪೌರಾಯುಕ್ತೆ ವಿದ್ಯಾ ಎಸ್. ಕಾಳೆ, ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ವಿಷ್ಣುಪ್ರಸಾದ್ ಉಪಸ್ಥಿತರಿದ್ದರು. ಜೈನ್ ಮಿಲನ್ ಪುತ್ತೂರು ಇದರ ಪದಾಧಿಕಾರಿ ಯಶೋಧರ್ ಜೈನ್, ರಾಜಶೇಖರ್ ಜೈನ್, ವಿ.ಕೆ. ಜೈನ್, ಅಶೋಕ್ ಜೈನ್, ನರೇಂದ್ರ ಪಡಿವಾಳ್, ಅಕ್ರಮ-ಸಕ್ರಮ ಸಮಿತಿ ಸದಸ್ಯ ರಾಮಣ್ಣ ಪಿಲಿಂಜ, ತಾಲೂಕು ಆರೋಗ್ಯಾಧಿಕಾರಿ ಡಾ. ದೀಪಕ್ ರೈ, ಉಪತಹಶೀಲ್ದಾರ್ ರವಿಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಕೃಷ್ಣ ಸರ್ವೆ ಇಲಾಖೆಯ ಪ್ರಮೋದ್ ಕುಮಾರ್, ಕಂದಾಯ ನಿರೀಕ್ಷಕ ಗೋಪಾಲ್ ಇದ್ದರು. ನವೀನ್ ಪಡಿವಾಳ್ ಪ್ರಾರ್ಥಿಸಿದರು. ಕಂದಾಯ ಇಲಾಖೆಯ ದಯಾನಂದ ಡಿ.ಟಿ. ಕಾರ್ಯಕ್ರಮ ನಿರ್ವಹಿಸಿದರು.

ಮಹಿಳಾ ಸಬಲೀಕರಣದಿಂದ ಸುಸ್ಥಿರ ಸಮಾಜ ನಿರ್ಮಾಣ: ಶಾಂತಾರಾಮ ಶೆಟ್ಟಿ



ಮಂಗಳೂರು: ಮಹಿಳೆಯರಿಗೆ ಗೌರವ ನೀಡುವುದು ಕೇವಲ ಕರ್ತವ್ಯ ಅಲ್ಲ, ಅದು ನಮ್ಮ ಸಂಸ್ಕಾರ. ಮಹಿಳಾ ಸಬಲೀಕರಣವು ಸುಸ್ಥಿರ ಹಾಗೂ ಸಶಕ್ತ ಸಮಾಜ ನಿರ್ಮಾಣಕ್ಕೆ ಅಡಿಪಾಯವಾಗಿದೆ ಎಂದು ದ.ಕ.ಜಿಲ್ಲಾ ರೆಡ್‌ಕ್ರಾಸ್ ಸಮಿತಿಯ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ಹೇಳಿದರು.

ದ.ಕ.ಜಿಲ್ಲಾ ರೆಡ್‌ಕ್ರಾಸ್ ಸಮಿತಿ ವತಿಯಿಂದ ರೆಡ್‌ಕ್ರಾಸ್ ಶತಮಾನೋತ್ಸವ ಕಟ್ಟಡದ ಪ್ರೇರಣಾ ಸಭಾಂಗಣದಲ್ಲಿ ಸೋಮವಾರ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಳೆಯ ಮಕ್ಕಳ ಶಿಕ್ಷಣದ ಜತೆ ಮಾನವೀಯ ಸೇವೆಯಲ್ಲಿ ತೊಡಗಿರುವ ಅಂಗನವಾಡಿ ಶಿಕ್ಷಕಿಯರಿಗೆ ಆರೋಗ್ಯ ಶಿಬಿರ ಸಹಿತ ವಿವಿಧ ಸೌಲಭ್ಯ ಒದಗಿಸಲು ಜಿಲ್ಲಾ ರೆಡ್ ಕ್ರಾಸ್ ಹೆಚ್ಚಿನ ಆದ್ಯತೆ ನೀಡಲಿದೆ ಎಂದು ಅವರು ತಿಳಿಸಿದರು.

> **ಸಲಕರಣೆ ವಿತರಣೆ**
> ಮಂಗಳುರು ನಗರದ 50 ಅಂಗನವಾಡಿಗಳಿಗೆ ರೆಡ್‌ಕ್ರಾಸ್ ವತಿಯಿಂದ ಸಲಕರಣೆಗಳನ್ನು ವಿತರಿಸಲಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಉಸ್ಮಾನ್ ಕಾರ್ಯಕ್ರಮ ಉದ್ಘಾಟಿಸಿದರು.

ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ ಶ್ವೇತಾ ಎನ್. ಮುಖ್ಯ ಅತಿಥಿಯಾಗಿದ್ದರು. ರೆಡ್‌ಕ್ರಾಸ್ ಜಿಲ್ಲಾ ಸಮಿತಿಯ ಖಜಾಂಜಿ ಗುರುದತ್ ನಾಯಕ್ ಉಪಸ್ಥಿತರಿದ್ದರು. ರೆಡ್‌ಕ್ರಾಸ್ ಜಿಲ್ಲಾ ಸಮಿತಿಯ ಉಪಾಧ್ಯಕ್ಷ ಡಾ.ಸಚ್ಚಿದಾನಂದ ರೈ ಸ್ವಾಗತಿಸಿ, ನಿರ್ದೇಶಕ ಪಿ.ಬಿ.ಹರೀಶ್ ರೈ ವಂದಿಸಿದರು. ಕಾರ್ಯದರ್ಶಿ ಕಿಶೋರ್‌ಚಂದ್ರ ಹೆಗ್ಡೆ ಕಾರ್ಯಕ್ರಮ ನಿರೂಪಿಸಿದರು.

ಬದುಕಿಗೆ ಬೇಕಾದ ವಿಚಾರ ಶಿಬಿರದಿಂದ ಸಿಗಲಿದೆ: ಸವಣೂರು ಸೀತಾರಾಮ ರೈ



ಸವಣೂರು: ಸವಣೂರು ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ (ಎನ್ನೆಸ್ಸೆಸ್)ಯ ವಾರ್ಷಿಕ ವಿಶೇಷ ಶಿಬಿರ ಚೆನ್ನಾವರ ದ.ಕ. ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರಂಭಗೊಂಡಿತು.

ಮಾ.29ರಂದು ಶಿಬಿರ ಉದ್ಘಾಟಿಸಿದ ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕ ಸವಣೂರು ಕೆ. ಸೀತಾರಾಮ ರೈ, ಬದುಕಿಗೆ ಬೇಕಾದ ವಿಚಾರಗಳನ್ನು ಅರಿಯಲು ಶಿಬಿರ ಪೂರಕ.ಆಧುನಿಕತೆಯ ಯಾಂತ್ರಿಕತೆಯ ಜೀವನ ಶೈಲಿಯಲ್ಲಿ ತಮ್ಮ ಒಡನಾಡಿಗಳೊಂದಿಗೆ ಹೇಗೆ ಬದುಕಿ ಬಾಳಬೇಕು ಎಂಬುದನ್ನು ಅರಿಯಲು ಎನ್ನೆಸ್ಸೆಸ್ ಸಹಕಾರಿಯಾಗಲಿದೆ ಎಂದರು.

ಶಿಬಿರ ನಡೆಯುವ ಚೆನ್ನಾವರ ಕಿ.ಪ್ರಾ. ಶಾಲೆಗೆ ರೂ.10 ಸಾವಿರ ಕೊಡುಗೆ ನೀಡುವುದಾಗಿ ತಿಳಿಸಿದರು. ಮುಖ್ಯ ಅತಿಥಿ ಪ್ರಶಸ್ತಿ ಪುರಸ್ಕೃತ ಕೃಷಿಕ ಕಡಮಜಲು ಸುಭಾಶ್ ರೈ, ಕೆಯ್ಯೂರು ಕೆಪಿಎಸ್.ನ ಪ್ರಾಥಮಿಕ ವಿಭಾಗದ ಮುಖ್ಯಗುರು ಬಾಬು ಮಾತನಾಡಿದರು. ವಿದ್ಯಾರಶ್ಮಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯೆ ಡಾ. ರಾಜಲಕ್ಷ್ಮೀ ಎಸ್. ರೈ ಅಧ್ಯಕ್ಷತೆ ವಹಿಸಿದ್ದರು. ಕೆಯ್ಯೂರು ಕ್ಲಸ್ಟರ್ ಸಿಆರ್‌ಪಿ ಶಶಿಕಲಾ, ಸವಣೂರು ಗ್ರಾ.ಪಂ. ಮಾಜಿ ಅಧ್ಯಕ್ಷೆ ಸುಂದರಿ ಬಿ.ಎಸ್., ಚೆನ್ನಾವರ ಶಾಲಾ ಮುಖ್ಯ ಗುರು ಮಲ್ಲೇಶಯ್ಯ ಮಾತನಾಡಿದರು. ಪ್ರಗತಿಪರ ಕೃಷಿಕ ಬಾಲಕೃಷ್ಣ ರೈ ಚೆನ್ನಾವರ ಹೊಸಮನೆ, ಯುವ ಉದ್ಯಮಿ ಪುನೀತ್ ರೈ ಚೆನ್ನಾವರಪಟ್ಟೆ, ಸವಣೂರು ಗ್ರಾ.ಪಂ. ಮಾಜಿ ಸದಸ್ಯೆ ವಿನೋದಾ ಸಿ. ರೈ, ಚೆನ್ನಾವರ ಅಭ್ಯುದಯ ಯುವಕ ಮಂಡಲದ ಅಧ್ಯಕ್ಷ ಪುಟ್ಟಣ್ಣ ನಾಯ್ಕ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಪುರಂದರ ಕೆ., ಉಪಾಧ್ಯಕ್ಷೆ ಜಯಂತಿ ರೈ ನೆಲ್ಯಾಜೆ, ಸಹ ಕಾರ್ಯನಿರ್ವಹಣಾಧಿಕಾರಿ ವೆಂಕಟ್ರಮಣ ಎನ್., ನಿರಂಜನ್ ವಿ., ದೈಹಿಕ ಶಿಕ್ಷಣ ನಿರ್ದೇಶಕ ಭರತ್ ಎಂ.ಎಲ್., ಎನ್ನೆಸ್ಸೆಸ್ ಶಿಬಿರದ ವಿದ್ಯಾರ್ಥಿ ಸಂಘಟಕ ರಿಷಿಕ್ ಜಿ.ಕೆ. ಮತ್ತಿತರರಿದ್ದರು. ಕಾರ್ಯಕ್ರಮಾಧಿಕಾರಿ ಹರ್ಷಿತಾ ಎ. ಸ್ವಾಗತಿಸಿ, ಸಹ ಕಾರ್ಯನಿರ್ವಹಣಾಧಿಕಾರಿ ಪುಣ್ಯಶ್ರೀ ಬಿ.ಎಂ. ವಂದಿಸಿದರು. ಪವಿತ್ರಾ ಕೆ. ನಿರ್ವಹಿಸಿದರು

ಪ್ರಾಯೋಗಿಕ ಜ್ಞಾನ, ಕೌಶಲ್ಯ ಶಿಕ್ಷಣ ಅಗತ್ಯ: ಸಿಎ ಗೌತಮ್ ಪೈ



ಮಂಗಳೂರು: ನಗರದ ಕೆನರಾ ಕಾಲೇಜಿನಲ್ಲಿ (ಸ್ವಾಯತ್ತ) ಕಾಲೇಜು ದಿನಾಚರಣೆ ಸಮಾರಂಭ ಶನಿವಾರ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಚಾರ್ಟರ್ಡ್ ಅಕೌಂಟೆಂಟ್ ಸಿಎ. ಗೌತಮ್ ಪೈ ಮಾತನಾಡಿ, ಕೃತಕ ಬುದ್ಧಿಮತ್ತೆ ಮತ್ತು ತಂತ್ರಜ್ಞಾನಗಳು ಶಿಕ್ಷಣ ವ್ಯವಸ್ಥೆ ಸಂಪೂರ್ಣವಾಗಿ ರೂಪಾಂತರಿಸುತ್ತಿರುವ ಈ ಕಾಲಘಟ್ಟದಲ್ಲಿ, ಸಿಲೆಬಸ್‌ಗಳಲ್ಲಿ ನಿರಂತರ ನವೀಕರಣ ಅಗತ್ಯವಾಗಿದೆ. ಪುಸ್ತಕಾಧಾರಿತ ಕಲಿಕೆ ಮೀರಿ, ಪ್ರಾಯೋಗಿಕ ಜ್ಞಾನ ಮತ್ತು ಕೌಶಲ್ಯಾಧಾರಿತ ಶಿಕ್ಷಣದತ್ತ ವಿದ್ಯಾರ್ಥಿಗಳು ಗಮನಹರಿಸಿ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು ಈ ಸಂದರ್ಭ ಗೌರವಿಸಲಾಯಿತು. ಕೆನರಾ ಕಾಲೇಜಿಗೆ ವಿಶ್ವವಿದ್ಯಾನಿಲಯ ಮಟ್ಟದಲ್ಲಿ 8 ರ್‍ಯಾಂಕ್ ಲಭಿಸಿದ್ದು ಸಾಧಕ ವಿದ್ಯಾರ್ಥಿಗಳನ್ನು, ಪಿ.ಎಚ್‌ಡಿ ಪದವಿ ಪಡೆದ ಉಪನ್ಯಾಸಕರನ್ನು, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಬೇರೆ ಬೇರೆ ವಿಭಾಗಗಳಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಪ್ರಾಂಶುಪಾಲರಾದ ಡಾ. ಪ್ರೇಮಲತಾ ವಿ. ಕಾಲೇಜಿನ ವಾರ್ಷಿಕ ವರದಿ ವಾಚಿಸಿದರು. ಸಂಜನಾ ಗೌತಮ್ ಪೈ ಸಾಧಕರಿಗೆ ಬಹುಮಾನ ವಿತರಿಸಿದರು. ಕೆನರಾ ಸಂಸ್ಥೆಯ ಅಧ್ಯಕ್ಷ ಡಿ. ವಾಸುದೇವ ಕಾಮತ್ ಅಧ್ಯಕ್ಷತೆ ವಹಿಸಿ ಶುಭ ಹಾರೈಸಿದರು. ಸಂಸ್ಥೆಯ ಸಂಚಾಲಕ ಸಿಎ ಜಗನ್ನಾಥ್ ಕಾಮತ್, ವ್ಯವಸ್ಥಾಪಕ ಶಿವಾನಂದ ಶೆಣೈ, ಆಡಳಿತ ಅಧಿಕಾರಿ ಡಾ. ದೀಪ್ತಿ ನಾಯಕ್, ಕೆನರಾ ಸಂಧ್ಯಾ ಕಾಲೇಜಿನ ಪ್ರಾಂಶುಪಾಲ ಅನಿಲ, ಸಿಬ್ಬಂದಿ ಕ್ಷೇಮ ಪಾಲನ ಸಮಿತಿ ಸಂಯೋಜಕಿ ವಾಣಿ ಯು. ಎಸ್. ಇದ್ದರು. ಡಾ.ಗಣೇಶ್ ಶೆಟ್ಟಿ ಸ್ವಾಗತಿಸಿ, ಕೀರ್ತಿ ಆಳ್ವ ವಂದಿಸಿದರು. ಸ್ಮಿತಾ ಎಂ. ನಿರೂಪಿಸಿದರು.

ಉಡುಪಿಯಲ್ಲಿ ಭಗವಾನ್ ಮಹಾವೀರ ಜಯಂತಿಯಲ್ಲಿ ಗಫೂರ್ ಅಭಿಮತ

ಅಹಿಂಸೆ ಪಾಲನೆಯಡಿ ಸಾಮರಸ್ಯ ಸಮಾಜ ನಿರ್ಮಾಣ



ಉಡುಪಿ: ಬಿಹಾರದಲ್ಲಿ ಜನಿಸಿದ ಮಹಾವೀರ. 24ನೇ ತೀರ್ಥಂಕರಾಗಿ ಲೋಕ ಕಲ್ಯಾಣಕ್ಕೆ ಮುಂದಾದರು. ಪಂಚ ತತ್ವದ ಅಡಿ ಸಮಾಜವನ್ನು ಕಟ್ಟುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ ಮಹಾವೀರರು ಸಂದೇಶದಂತೆ ಸತ್ಯ ಮತ್ತು ಅಹಿಂಸೆಯ ಪಾಲನೆಯ ಮೂಲಕ ಸಾಮರಸ್ಯದ ಸಮಾಜ ಕಟ್ಟುವಂತಾಗಬೇಕು ಎಂದು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ.ಎ. ಗಫೂರ್ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಭಗವಾನ್ ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ದಾರ್ಶನಿಕರ ಚಿಂತನೆಗಳು ದಾರಿದೀಪ

ಇಂದಿನ ದಿನಗಳ ಅನೇಕ ಸಮಸ್ಯೆಗಳ ನಿವಾರಣೆಗಾಗಿ ದಾರ್ಶನಿಕರ ಚಿಂತನೆಗಳು ದಾರಿ ದೀಪ. ಪ್ರತಿಯೊಬ್ಬರು ಅವರ ಆದರ್ಶ ಪಾಲಿಸುವಂತಾಗಬೇಕು ಎಂದರು.

ಜಗತ್ತಿಗೆ ಅಹಿಂಸೆ ಮತ್ತು ಶಾಂತಿ ಪರಮೋಚ್ಚ ಸಂದೇಶವನ್ನು ನೀಡಿದ ಭಗವಾನ್ ಮಹಾವೀರರ ತತ್ವಗಳು ಇಂದಿನ ಸಂಘರ್ಷಮಯ ಕಾಲಘಟ್ಟದಲ್ಲಿ ವಿಶ್ವಕ್ಕೆ ಮಾದರಿಯಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಶ್ವೇತಾ ಜೈನ್ ಭಗವಾನ್ ಮಹಾವೀರರ ಕುರಿತು ವಿಶೇಷ ಉಪನ್ಯಾಸ ನೀಡಿದರು. ರಶ್ಮಿ ಸಾಗರ್ ಜಿನಾ ಸ್ಮೃತಿಯನ್ನು ಪ್ರಸ್ತುತ ಪಡಿಸಿದರು. ಈ ಸಂದರ್ಭ ಯೋಗರಾಜ್ ಶಾಸ್ತ್ರೀ ಅವರನ್ನು ಸನ್ಮಾನಿಸಲಾಯಿತು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನಕರ ಹೇರೂರು, ಜೈನ್ ಮಿಲನ್ ಅಧ್ಯಕ್ಷ ಡಾ. ನಿತಿನ್ ಪಾಟೀಲ್, ಭಾರತೀಯ ಜೈನ್ ಮಿಲನ್‌ನ ಕಾರ್ಯದರ್ಶಿ ಪ್ರಸನ್ನ, ಪಧಾಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಪ್ರಾಸ್ತವಿಕ ನುಡಿಗಳನ್ನಾಡಿದರು. ರಾಮಾಂಜಿ ನಿರೂಪಿಸಿ, ನಿತಿನ್ ವಂದಿಸಿದರು.

ಬಂಟ್ವಾಳ ತಾಲೂಕು ಆಡಳಿತದಿಂದ ಮಹಾವೀರ ಜಯಂತಿ ಆಚರಣೆ

ಅಹಿಂಸಾ ಮಾರ್ಗ ಪಾಲಿಸಿ: ರಾಜೇಂದ್ರ



ಬಂಟ್ವಾಳ: ಮಹಾವೀರ ಜನ್ಮ ಕಲ್ಯಾಣ ಮಹೋತ್ಸವಕ್ಕೆ ಬಂಟ್ವಾಳ ಆಡಳಿತಸೌಧದ ತಹಶೀಲ್ದಾರರ ಕಚೇರಿಯಲ್ಲಿ ಮಹಾವೀರ ತೀರ್ಥಂಕರರ ಭಾವಚಿತ್ರಕ್ಕೆ ದೀಪ ಬೆಳಗುವ ಮೂಲಕ ಚಾಲನೆ ನೀಡಲಾಯಿತು.

ಅತಿಥಿಯಾಗಿ ಭಾಗವಹಿಸಿದ್ದ ನ್ಯಾಯವಾದಿ ಶಿವಪ್ರಕಾಶ್ ಮಾತನಾಡಿ, ಮಹಾವೀರನ ಜೀವನ ಸಂದೇಶವನ್ನು ತಿಳಿಸಿದರು.

ಜೈನ್ ಮಿಲನ್ ಅಧ್ಯಕ್ಷರಾದ ರಾಜೇಂದ್ರ ಜೈನ್ ಮಾತನಾಡಿ, ಜೈನ ಧರ್ಮ ಬೆಳೆದುಬಂದ ರೀತಿ ಮತ್ತು ಮಹಾವೀರರ ಅಹಿಂಸಾ ಮಾರ್ಗದ ಬಗ್ಗೆ ತಿಳಿಸಿ ಬದುಕಿ ಬದುಕಲು ಬಿಡಿ ಎಂಬ ತತ್ವವನ್ನು ಪಾಲಿಸಬೇಕು. ಸಮಾಜದಲ್ಲಿ ಶಾಂತಿ ನಿರ್ಮಾಣಕ್ಕೂ ಈ ತತ್ವ ಅತೀ ಮುಖ್ಯ ಎಂದರು.

ಜೈನ್ ಮಿಲನ್ ವಲಯ ಉಪಾಧ್ಯಕ್ಷ ಸುದರ್ಶನ ಜೈನ್ ಶುಭ ಹಾರೈಸಿದರು. ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಡಿ. ಮಂಜುನಾಥ್ ಸಾಂದರ್ಭಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಜಯಕೀರ್ತಿ ವಂದಿಸಿದರು. ಜೈನ್ ಮಿಲನ್ ಶ್ರಾವಕ ಶ್ರಾವಕಿಯರು ಭಾಗವಹಿಸಿದ್ದರು ನವೀನ್ ಡೆಪ್ಯೂಟಿ ತಹಶೀಲ್ದಾರ ಕಾರ್ಯಕ್ರಮ ಸಂಯೋಜನೆ ಮಾಡಿದರು. ಸನ್ಮತಿ, ಜಯಶಾಮಲ ಪ್ರಾರ್ಥನೆ ನಡೆಸಿಕೊಟ್ಟರು.

ಚುನಾವಣಾ ಸಾಮಗ್ರಿಗಳ ವಿತರಣಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಭೇಟಿ ನೀಡಿ ಪರಿಶೀಲನೆ

ವಿಧಾನಸಭಾ ಚುನಾವಣೆ ಮನೆ ಮತದಾನ ಪ್ರಕ್ರಿಯೆ ಆರಂಭ

ಕಾಸರಗೋಡು: ವಿಧಾನಸಭಾ ಚುನಾವಣೆಯ ಅಂಗವಾಗಿ ಜಿಲ್ಲೆಯಲ್ಲಿ ಮನೆಯಲ್ಲೇ ಮತದಾನ ಪ್ರಕ್ರಿಯೆ ಸೋಮವಾರ ಆರಂಭವಾಯಿತು. ಈ ನಿಟ್ಟಿನಲ್ಲಿ ಮನೆ ಮತಗಟ್ಟೆಗಳ ವಿತರಣಾ ಕೇಂದ್ರಗಳಿಗೆ ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಭೇಟಿ ನೀಡಿ ವಿವಿಧ ಸೂಚನೆ ನಿರ್ದೇಶನಗಳನ್ನು ನೀಡಿದರು.

ಕೇರಳ ವಿಧಾನಸಭಾ ಚುನಾವಣೆಯ ಪ್ರಯುಕ್ತ ಜಿಲ್ಲೆಯಲ್ಲಿ ಸಕಲ ಸಿದ್ಧತೆಗಳನ್ನು ನಡೆಯುತ್ತಿವೆ. ಮಾತ್ರವಲ್ಲದೆ ಜಿಲ್ಲಾಡಳಿತವು ನಿಷ್ಪಕ್ಷಪಾತ, ಮುಕ್ತ ಮತ್ತು ಪಾರದರ್ಶಕ ರೀತಿಯಲ್ಲಿ ಮನೆಯಲ್ಲಿಯೇ ಮತಗಳನ್ನು ದಾಖಲಿಸಲು ಸಮರ್ಪಕ ವ್ಯವಸ್ಥೆಗಳನ್ನು ಏರ್ಪಡಿಸಿದೆ ಎಂದು ಜಿಲ್ಲಾಧಿಕಾರಿ ಹೇಳಿದರು.

ಕಾಸರಗೋಡು ಮತ್ತು ಮಂಜೇಶ್ವರ ವಿಧಾನಸಭಾ ಕ್ಷೇತ್ರಗಳಲ್ಲಿರುವ ಮತದಾನ ಸಾಮಗ್ರಿಗಳ ವಿತರಣಾ ಕೇಂದ್ರಗಳು, ಕಾಸರಗೋಡು ಸರಕಾರಿ ಕಾಲೇಜು ಮತ್ತು ಉದುಮ ಕ್ಷೇತ್ರಕ್ಕೆ ಸಂಬಂಧಿಸಿ ನಾಯನ್ಮಾರಮೂಲೆ ಟಿಐಎಚ್‌ಎಸ್‌ನಲ್ಲಿರುವ



ಮತದಾನ ಸಾಮಗ್ರಿಗಳ ವಿತರಣಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಭೇಟಿ ನೀಡಿದರು. ಚುನಾವಣಾಧಿಕಾರಿಗಳಾದ ವಿ.ಪಿ. ರಘುಮಣಿ, ಲಿಪು ಎಸ್.ಲಾರೆನ್ಸ್ ಜಿಲ್ಲಾಧಿಕಾರಿಯನ್ನು ಬರಮಾಡಿಕೊಂಡರು.

ಮಾನನಷ್ಟ ನಿಗ್ರಹ ದಳದ ಕಾರ್ಯಾಚರಣೆ

ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಮಾನನಷ್ಟ ನಿಗ್ರಹ ದಳ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಇದರ ಭಾಗವಾಗಿ ಅಧಿಕಾರಿಗಳು ಸೋಮವಾರದ ವರೆಗೆ ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಿಂದ ಒಟ್ಟು 3,467 ಅಕ್ರಮ ಪ್ರಚಾರ ಸಾಮಗ್ರಿಗಳನ್ನು ತೆರವುಗೊಳಿಸಿದ್ದಾರೆ. ಸೋಮವಾರ ಮಾತ್ರವಾಗಿ ಸಾರ್ವಜನಿಕ ಸ್ಥಳಗಳಿಂದ 192 ಪ್ರಚಾರ ಸಾಮಗ್ರಿಗಳು ಮತ್ತು ಖಾಸಗಿ ಸ್ಥಳಗಳಿಂದ 11 ಪ್ರಚಾರ ಸಾಮಗ್ರಿಗಳು ಸೇರಿದಂತೆ ಒಟ್ಟು 203 ಸಾಮಗ್ರಿಗಳನ್ನು ತೆಗೆದುಹಾಕಲಾಗಿದೆ ಎಂದು ಜಿಲ್ಲಾ ಚುನಾವಣಾ ವಿಭಾಗವು ಮಾಹಿತಿ ನೀಡಿದೆ.

ಸಾರ್ವಜನಿಕ ಸ್ಥಳಗಳಿಂದ ಇಲ್ಲಿಯವರೆಗೆ ಒಟ್ಟು 3,320 ಪ್ರಚಾರ ಸಾಮಗ್ರಿಗಳನ್ನು ತೆರವುಗೊಳಿಸಲಾಗಿದೆ. ಇದರಲ್ಲಿ 1,711 ಪೋಸ್ಟರ್‌ಗಳು, 1,179 ಇತರ ಪ್ರಚಾರ ಸಾಮಗ್ರಿಗಳು, 259 ಬ್ಯಾನರ್‌ಗಳು ಮತ್ತು 180 ಗೋಡೆ ಬರಹಗಳು ಸೇರಿವೆ. ನೀತಿ ಸಂಹಿತೆಯ ಉಲ್ಲಂಘನೆಗೆ ಸಂಬಂಧಿಸಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಇರಿಸಲಾದ ಪ್ರಚಾರ ಸಾಮಗ್ರಿಗಳಿಗೆ ಸಂಬಂಧಪಟ್ಟಂತೆ ಇದುವರೆಗೆ ಎರಡು ಪ್ರಕರಣಗಳನ್ನು ದಾಖಲಿಸಲಾಗಿದೆ.

ಖಾಸಗಿ ವ್ಯಕ್ತಿಗಳ ಒಡೆತನದ ಸ್ಥಳಗಳಲ್ಲಿ ಅನುಮತಿಯಿಲ್ಲದೆ ಇರಿಸಲಾದ 147 ಸಾಮಗ್ರಿಗಳನ್ನು ಅಧಿಕಾರಿಗಳು ತೆಗೆದುಹಾಕಿದ್ದಾರೆ. ಇದರಲ್ಲಿ 77 ಪೋಸ್ಟರ್‌ಗಳು, 39 ಇತರ ಸಾಮಗ್ರಿಗಳು, 24 ಬ್ಯಾನರ್‌ಗಳು ಮತ್ತು 15 ಗೋಡೆ ಬರಹಗಳು ಒಳಗೊಂಡಿವೆ. ಮಾದರಿ ನೀತಿ ಸಂಹಿತೆಯನ್ನು ನೋಡಲ್ ಅಧಿಕಾರಿಯಾದ ಹೆಚ್ಚುವರಿ ಜಿಲ್ಲಾ ಮೆಜಿಸ್ಟ್ರೇಟ್ (ಎಡಿಎಂ) ಕೆ.ವಿ.ಶ್ರುತಿ ನೇತೃತ್ವದ ತಂಡ ಮತ್ತು ಜಿಲ್ಲೆಯ ಅನಧಿಕೃತ ಪ್ರಚಾರ ಸಾಮಗ್ರಿ ನಿಗ್ರಹ ದಳ ಸಂಯೋಜಿಸುತ್ತಿದೆ.


ಕರ್ತವ್ಯದಲ್ಲಿದ್ದರೆ ಮಾತ್ರ ಅಂಚೆ ಮತದಾನ

2ನೇ ಹಂತದ ರ್‍ಯಾಂಡಮೈಸೇಷನ್ ಚುನಾವಣಾ ಕರ್ತವ್ಯ ಸ್ವೀಕರಿಸದ ಅಧಿಕಾರಿಗಳು, ನೌಕರರು ಅಂಚೆ ಮೂಲಕ ಮತ ಚಲಾಯಿಸಲು ಸಾಧ್ಯವಾಗುವುದಿಲ್ಲ. ಜಿಲ್ಲೆಯಲ್ಲಿ ಮಾ.30ರ ತನಕ ಅಂಚೆ ಮತಪತ್ರಗಳಿಗೆ 4,379 ಅರ್ಜಿಗಳು ಬಂದಿವೆ ಎಂದು ಚುನಾವಣಾ ವಿಭಾಗವು ತಿಳಿಸಿದೆ. ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಆರ್ಡರ್ ಸಾಫ್ಟ್‌ವೇರ್ ಮೂಲಕ ಚುನಾವಣಾ ಕರ್ತವ್ಯವನ್ನು ವಹಿಸಿಕೊಂಡು ಮೊದಲ ಹಂತದ ಚುನಾವಣಾ ತರಬೇತಿಯಲ್ಲಿ ಭಾಗವಹಿಸಿದ ನಂತರ ಅಂಚೆ ಮತಪತ್ರಕ್ಕೆ ಅರ್ಜಿ ಸಲ್ಲಿಸಿದ್ದರೂ ಎರಡನೇ ಹಂತದ ರ್‍ಯಾಂಡಮೈಸೇಷನ್ ಮೂಲಕ ಮತದಾನ ಕರ್ತವ್ಯದಿಂದ ವಿನಾಯಿತಿ ಪಡೆದವರು ಅಂಚೆ ಮತದಾನಕ್ಕೆ ಅರ್ಹರಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಸುತ್ತಮುತ್ತ

ಇಂದು ಸೇವೆಯಿಂದ ಜಗದೀಶ್ ಪ್ರಸಾದ್ ಕೂಡ್ಲು ನಿವೃತ್ತಿ

ಕಾಸರಗೋಡು: ಇತಿಹಾಸ ಪ್ರಸಿದ್ಧ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಕಾರ್ಯ ನಿರ್ವಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕೆ.ಜಗದೀಶ್ ಪ್ರಸಾದ್ ಕೂಡ್ಲು ಅವರು ಮಾರ್ಚ್ 31ರಂದು ತಮ್ಮ ಸೇವೆಯಿಂದ ನಿವೃತ್ತಿ ಹೊಂದುವರು. ಅವರು ಕೇರಳ ನಾಲ್ಕು ದಶಕಗಳಿಂದ ಮಲಬಾರ್ ದೇವಸ್ವಂ ಮಂಡಳಿಯ ಅಧೀನದಲ್ಲಿರುವ ನೂರಕ್ಕೂ ಅಧಿಕ ದೇವಾಲಯಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರ ಮೊದಲ ನೌಕರಿಯು ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದಲ್ಲಿ ಕ್ಲರ್ಕ್ ಹುದ್ದೆಯಾಗಿ



ಪ್ರಾರಂಭಗೊಂಡಿತು. ಕನ್ನಡಿಗ ಎಂಬ ವಿಶೇಷ ಆರ್ಹತೆಯ ನೆಲೆಯಲ್ಲಿ ಭಡ್ತಿ ಪಡೆದ ಅವರು ಕಾಸರಗೋಡಿನ ವಿಶೇಷ ಕನ್ನಡ ಬಲ್ಲ ಎಕ್ಸಿಕ್ಯೂಟಿವ್ ಆಫೀಸರ್ ಎಂಬ ಗೌರವಕ್ಕೂ ಕೂಡಾ ಪಾತ್ರರಾಗಿದ್ದಾರೆ. ಕಾಸರಗೋಡು ಗುಡ್ಡೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಬಳಿಯ ದಿ.ರಾಮಚಂದ್ರ ಮತ್ತು ದಿ.ರಮಣಿ ದಂಪತಿಯ ಪುತ್ರನಾದ ಅವರು ಪ್ರಾರಂಭಿಸಿದ ಕೆಲಸ ಬೇಗನೆ ಪೂರ್ತಿಗೊಳಿಸುವ ಹಠ ಇವರದ್ದು. ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಅಧಿಕಾರ ವಹಿಸಿ ಕೇವಲ ಎಂಟು ತಿಂಗಳಲ್ಲಿ ನವೀಕರಣ ಸಮಿತಿಯ ಪೂರ್ಣ ಸಹಕಾರದೊಂದಿಗೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಪೂರ್ತಿಗೊಳಿಸಿದ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ಅವರಿಗೆ ಈಗ ಮಧೂರು ಕ್ಷೇತ್ರದ ಜೊತೆ ಅಡೂರು ಕ್ಷೇತ್ರ, ಕಾಸರಗೋಡು ಮಲ್ಲಿಕಾರ್ಜುನ ಕ್ಷೇತ್ರ, ಗುಡ್ಡೆ ಶ್ರೀ ಮಹಾಲಿಂಗೇಶ್ವರ ಕ್ಷೇತ್ರದ ಹೆಚ್ಚುವರಿ ಜವಾಬ್ದಾರಿಯೂ ಇದೆ. ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದ ಅಭಿವೃದ್ಧಿಗೆ ಅವರು ಸದಾ ಮುತುವರ್ಜಿ ವಹಿಸಿ ಕಾರ್ಯ ಪ್ರಗತಿ ಉಂಟಾಗಿದೆ. ಇದರಿಂದ ಎಲ್ಲಾ ಭಕ್ತರು ಅವರನ್ನು ಪ್ರಶಂಸಿದ್ದಾರೆ.

ಸಾಮಾನ್ಯ ವೀಕ್ಷಕರಿಗೆ ದೂರು, ಆಕ್ಷೇಪಣೆ ಸಲ್ಲಿಸಲು ಅವಕಾಶ

ಕಾಸರಗೋಡು: ವಿಧಾನಸಭಾ ಚುನಾವಣೆಯ ಭಾಗವಾಗಿ ಮಂಜೇಶ್ವರ ಮತ್ತು ಕಾಸರಗೋಡು ವಿಧಾನಸಭಾ ಕ್ಷೇತ್ರಗಳ ಸಾಮಾನ್ಯ ವೀಕ್ಷಕರು ಪ್ರತಿ ದಿನ ಸಂಜೆ 5ರಿಂದ 6ರ ವರೆಗೆ ಕಾಸರಗೋಡು ವಿಧಾನಸಭಾ ಕ್ಷೇತ್ರದ ಚುನಾವಣಾಧಿಕಾರಿಯಾದ ಕಂದಾಯ ವಿಭಾಗೀಯ ಅಧಿಕಾರಿ ಕಚೇರಿಯಲ್ಲಿ ಮೊಕ್ಕಾಂ ಹೂಡಲಿದ್ದಾರೆ. ಚುನಾವಣೆಗೆ ಸಂಬಂಧಿಸಿದಂತೆ ಈ ಎರಡು ಕ್ಷೇತ್ರಗಳ ದೂರುಗಳು ಅಥವಾ ಆಕ್ಷೇಪಣೆಗಳನ್ನು ಸಾಮಾನ್ಯ ವೀಕ್ಷಕರಿಗೆ ಸಲ್ಲಿಸಬಹುದು ಎಂದು ಜಿಲ್ಲಾಡಳಿತವು ತಿಳಿಸಿದೆ.

ಕಲ್ಲಟ್ರ ಮಾಹಿನ್ ಹಾಜಿ ಇಂದಿನ ಕಾರ್ಯಕ್ರಮ

ಕಾಸರಗೋಡು: ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರು ಮಾ.31ರಂದು ಬೆಳಗ್ಗೆ 6.30ಕ್ಕೆ ಕಾಸರಗೋಡು ರೈಲು ನಿಲ್ದಾಣದಲ್ಲಿ ಮತಯಾಚನೆ ನಡೆಸುವರು. 10.30ಕ್ಕೆ ಕಾಸರಗೋಡು ನ್ಯಾಯಾಲಯದಲ್ಲಿ ಮತ್ತು 11.30ಕ್ಕೆ ಕಲೆಕ್ಟರೇಟ್ ಕಾಂಪೌಂಡ್‌ನಲ್ಲಿ ಮತ ಪ್ರಚಾರ ನಡೆಸಲಿದ್ದಾರೆ. ನಂತರ ವಿವಿಧ ಪಂಚಾಯತ್ ಗಳಲ್ಲಿ ಹಮ್ಮಿಕೊಳ್ಳಲಾಗಿರುವ ಬೂತ್ ಸಭೆಗಳಲ್ಲಿ ಭಾಗವಹಿಸಲಿದ್ದಾರೆ.

ಏ.2: ಹನುಮಜ್ಜಯಂತಿ

ಕಾಸರಗೋಡು: ಕರಂದಕ್ಕಾಡು ಶ್ರೀ ವೀರಹನುಮಾನ್ ಮಂದಿರದಲ್ಲಿ ಏಪ್ರಿಲ್ 2ರಂದು ಹನುಮಜ್ಜಯಂತಿ ಮಹೋತ್ಸವ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆ 6ಗಂಟೆಗೆ ಗಣಪತಿ ಹೋಮ, 8ಕ್ಕೆ ದೀಪಾರಾಧನೆ, ರಾತ್ರಿ 7ಕ್ಕೆ ಭಜನೆ, 8.30ಕ್ಕೆ ಹನುಮಜ್ಜಯಂತಿಯ ವಿಶೇಷ ಪೂಜೆ ನಡೆಯಲಿದೆ. ವಿಷು ಉತ್ಸವದ ದಿನವಾದ ಏಪ್ರಿಲ್ 15ರಂದು ಮಂದಿರದಲ್ಲಿ ವಿಷು ಕಣಿ ಏರ್ಪಡಿಸಲಾಗುವುದು ಎಂದು ಮಂದಿರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪರಂಪರಾ ವಿದ್ಯಾಪೀಠದ ಚಟುವಟಿಕೆ ಇತರ ದೇವಾಲಯಗೆ ವಿಸ್ತರಣೆ

ಕಾಸರಗೋಡು: ದೇಸಿ ಗೋವುಗಳ ರಕ್ಷಣೆ ಮತ್ತು ಭಾರತೀಯ ನೃತ್ಯ ಹಾಗೂ ಸಂಗೀತ ಕಲೆಗಳ ಪ್ರಚಾರಕ್ಕೆ ಬದ್ಧವಾಗಿರುವ ಬೇಕಲ ಗೋಕುಲಂ ಗೋಶಾಲೆಯ ಪರಂಪರಾ ವಿದ್ಯಾಪೀಠವು ಉತ್ತರ ಕೇರಳ ಮತ್ತು ದಕ್ಷಿಣ ಕನ್ನಡದ ದೇವಾಲಯಗಳು ಹಾಗೂ ಸಂಗೀತ ಶಾಲೆಗಳೊಂದಿಗೆ ಸಹಕರಿಸುವ ಮೂಲಕ ತನ್ನ ಚಟುವಟಿಕೆಗಳನ್ನು ವಿಸ್ತರಿಸಲು ನಿರ್ಧರಿಸಿದೆ. ನೃತ್ಯ ಮತ್ತು ಸಂಗೀತ ಕಲೆಗಳನ್ನು ಜನಪ್ರಿಯಗೊಳಿಸುವುದು ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಮೊದಲ ಹಂತದಲ್ಲಿ ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ಈ ನಿಟ್ಟಿನಲ್ಲಿ ವಿವಿಧ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆದರಂತೆ ಮಧೂರು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯವರ ಆದೃಷ್ಟಕ್ಷೇತ್ರದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ಪರಂಪರಾ ವಿದ್ಯಾಪೀಠದ ಆಚಾರ್ಯರಾದ ವಿಷ್ಣುಪ್ರಸಾದ್ ಹೆಬ್ಬಾರ್ ಅವರು ಆಸಕ್ತರಾಗಿ ಕಾರ್ಯಕ್ರಮವನ್ನು ಘೋಷಿಸಲಿದ್ದಾರೆ. ಮೊದಲ ಕಾರ್ಯಕ್ರಮವು ಮಾ.31ರಂದು ಸಂಜೆ 5.30 ರಿಂದ ರಾತ್ರಿ 7.30 ವರೆಗೆ ಸ್ಟಿರ್ಲಿಂಗ್‌ನ ಪ್ರಸಿದ್ಧ ಕರ್ನಾಟಕ ಸಂಗೀತಗಾರ ಉಮಾಕುಮಾರ್ ಸಂಗೀತ ಕಛೇರಿಯೊಂದಿಗೆ ಜರಗಲಿದೆ. ಪಿಟೀಲಿನಲ್ಲಿ ಬಾಲರಾಜ್ ಬದಿಯಡ್ಕ ಮತ್ತು ಮೃದಂಗದಲ್ಲಿ ರಂಜಿತ್ ವೆಳ್ಳಿಕ್ಕೋತ್ ಭಾಗವಹಿಸುವರು.

ಕನ್ನೆಪ್ಪಾಡಿ ಆಶ್ರಯ ಆಶ್ರಮಕ್ಕೆ ಸಂಸದ ತೇಜಸ್ವಿ ಸೂರ್ಯ ಭೇಟಿ



ಬದಿಯಡ್ಕ: ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ, ಭಾರತೀಯ ಜನತಾ ಯುವಮೋರ್ಚಾದ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ ಅವರು ಕನ್ನೆಪ್ಪಾಡಿ ಆಶ್ರಯ ಆಶ್ರಮಕ್ಕೆ ಭೇಟಿ ನೀಡಿದರು. ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಎಂ.ಎಲ್. ಅಶ್ವಿನಿ ಅವರ ಚುನಾವಣಾ ಪ್ರಚಾರಕ್ಕಾಗಿ ಅವರು ಬದಿಯಡ್ಕಕ್ಕೆ ಆಗಮಿಸಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

ಬದಿಯಡ್ಕದಲ್ಲಿ ನಡೆದ ರೋಡ್ ಶೋದಲ್ಲಿ ಭಾಗವಹಿಸಿದ ನಂತರ ಕನ್ನೆಪ್ಪಾಡಿ ಆಶ್ರಮದಲ್ಲಿ ಹಿರಿಯರೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಆಶ್ರಮದ ಟ್ರಸ್ಟ್ ಸದಸ್ಯ ರಮೇಶ್ ಕಳೇರಿ, ಬಾಲಕೃಷ್ಣ ವಿಣೆಯರ್ಪು, ರಾಮಕೃಷ್ಣ ಹೆಬ್ಬಾರ್, ಬಾಲಗೋಪಾಲ ವಿಣೆಯರ್ಪು, ಆಶ್ರಮದ ಹಿತೈಷಿ ರಾಜೇಶ್ ಮಾಸ್ಟರ್ ಅಗಲ್ಪಾಡಿ, ಬಾಲಸುಬ್ರಹ್ಮಣ್ಯ ಭಟ್ ಮಲ್ಲಡ್ಕ ಬದಿಯಡ್ಕ ಗ್ರಾ.ಪಂ. ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಬಿಜೆಪಿ ಬದಿಯಡ್ಕ ಮಂಡಲಾಧ್ಯಕ್ಷ ಗೋಪಾಲಕೃಷ್ಣ ಮುಂಡೋಳುಮೂಲೆ ಇದ್ದರು.

ಹೊಸಂಗಡಿಯಲ್ಲಿ ಎಡರಂಗ ಪ್ರತಿಭಟನೆ



ಮಂಜೇಶ್ವರ: ಕೇಂದ್ರ ಸರಕಾರದ ನಿರ್ಧಾರದ ಭಾಗವಾಗಿ ದೇಶದಲ್ಲಿ ಅಡುಗೆ ಅನಿಲ ಕ್ಷಾಮ ಉಂಟಾಗಿದೆ. ಕೇಂದ್ರ ಸರಕಾರ ಅಮೆರಿಕಾ ಅಧ್ಯಕ್ಷರ ಬೆದರಿಕೆಗೆ ಬಗ್ಗಿ ರಷ್ಯಾದಿಂದ ಸಿಗುತ್ತಿದ್ದ ಕಚ್ಚಾ ಕ್ರೂಡ್ ಆಯಿಲ್ ಖರೀದಿಸದೆ ಇರುವುದರಿಂದ ಅಡುಗೆ ಅನಿಲ ಕ್ಷಾಮ ಉಂಟಾಗಿದ್ದು ನಗರ, ಗ್ರಾಮ ಪ್ರದೇಶದ ಜನತೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಹಲವಾರು ಜನರು ಹೋಟೇಲ್ ಮುಚ್ಚಿರುವುದರಿಂದ ಆಹಾರ ಸಿಗದೆ ಪರದಾಡುವ ಪರಿಸ್ಥಿತಿ ಬಂದಿದೆ. ಇದಕ್ಕೆದುರಾಗಿ ಜನತೆ ಬೀದಿಗಿಳಿದು ಪ್ರತಿಭಟಿಸಬೇಕೆಂದು ಸಿಪಿಎಂ ಕಾಸರಗೋಡು ಜಿಲ್ಲಾ ಸಮಿತಿ ಸದಸ್ಯೆ ಹಾಗೂ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಪಿ.ಬೇಬಿ ಬಾಲಕೃಷ್ಣನ್ ಕರೆ ನೀಡಿದ್ದಾರೆ. ಹೊಸಂಗಡಿಯಲ್ಲಿ ನಡೆದ ಪ್ರತಿಭಟನೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಡುಗೆ ಅನಿಲ ಕ್ಷಾಮದ ವಿರುದ್ಧ ಒಲೆ ಉರಿಸಿ ಚಾ ತಯಾರಿಸಿ ಪ್ರತಿಭಟನೆ ನಡೆಸಲಾಯಿತು. ಸಿಪಿಐ ನೇತಾರ ರಾಮಚಂದ್ರ ಬಡಾಜೆ ಅಧ್ಯಕ್ಷತೆ ವಹಿಸಿದ್ದರು. ಕರುಣಾಕರ ಶೆಟ್ಟಿ ಪ್ರಣವ್, ಶರತ್, ಕಮಲಾಕ್ಷ ಕನಿಲ ಉಪಸ್ಥಿತರಿದ್ದರು. ಪ್ರಶಾಂತ್ ಕನಿಲ ಸ್ವಾಗತಿಸಿ, ವಂದಿಸಿದರು.

ವಿಧಾನಸಭಾ ಚುನಾವಣೆ: ಬಿಜೆಪಿ ಪ್ರತಾಪನಗರ ಬೂತ್ ಮಟ್ಟದ ಸಭೆ

ಉಪ್ಪಳ: ವಿಧಾನಸಭಾ ಕ್ಷೇತ್ರ ಚುನಾವಣೆ ಹಿನ್ನೆಲೆಯಲ್ಲಿ ಮತದಾರರನ್ನು ಒಲಿಸಲು ಅನುಸರಿಸಬೇಕಾದ ಮಾಹಿತಿಗಳ ಕುರಿತು ಚರ್ಚಿಸಲು ಮಂಗಲ್ಪಾಡಿ ಪಂಚಾಯತ್‌ನ 91 ಬೂತ್ ಕಾರ್ಯಕರ್ತರ ಪ್ರಮುಖ ಸಭೆ ಪ್ರತಾಪನಗರ ಗಣೇಶ ಮಂದಿರದಲ್ಲಿ ನಡೆಯಿತು.

ಬಿಜೆಪಿ ಮಂಗಲ್ಪಾಡಿ ಪಂಚಾಯತ್ ಚುನಾವಣೆ ಉಸ್ತುವಾರಿ ಕಿಶೋರ್ ಕುಮಾರ್ ಅವರು ಮಾತನಾಡಿ, ಹಿಂದಿನ ಚುನಾವಣೆಗಳ ಫಲಿತಾಂಶಗಳನ್ನು ಅವಲೋಕಿಸಿ ಮುಂದಿನ ದಿನಗಳಲ್ಲಿ ನಮ್ಮ ಕಾರ್ಯವೈಖರಿ ಹೇಗಿರಬೇಕು ಎಂಬುದನ್ನು ಅರಿತು ಸಾಗಬೇಕು ಎಂದು ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಿದರು. ಈ ಸಮಾವೇಶದಲ್ಲಿ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಸುಧಾ ಗಣೇಶ್, ಬೂತ್ ಅಧ್ಯಕ್ಷರಾದ ಲೀಲಾಧರ್ ಆಚಾರ್ಯ ಸೇರಿದಂತೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಗಿರಿರಾಜ್ ಸ್ವಾಗತಿಸಿ, ಮಧು ಮಾಸ್ಟರ್ ವಂದನಾರ್ಪಣೆ ಮಾಡಿದರು.

ಹಸ್ತಕಾಕೃತಿಯ ಸ್ಮೃತಿ ಕೃತಿಗಳು ಪ್ರಕಟವಾಗಲಿ: ನಾ.ಕಾರಂತ ಪೆರಾಜೆ



ಕಾಸರಗೋಡು: ಪುಂಡಿಕಾಯಿ ಕೃಷ್ಣಭಟ್ಟರು ಹಳೆ ತಲೆಮಾರಿನ ಅಪ್ಪಟ ಮದ್ದಳೆಗಾರ. ಪ್ರಾತಃಸ್ಮರಣೀಯ ಕುದ್ರೆಕೂಡ್ಲು ರಾಮ ಭಟ್ಟರ ಶಿಷ್ಯರಾಗಿ, ಸಂಪ್ರದಾಯದ ಚೌಕಟ್ಟನ್ನು ವೃತ್ತಿಯಲ್ಲಿ ಕಾಣಿಸಿದವರು. ಮದ್ದಳೆಯಲ್ಲಿ ಅವರದು ಶುದ್ಧ ಪಾಠ. ಯಾವುದೇ ಆರ್ಥಿಕ ಅಪೇಕ್ಷೆಯಿಲ್ಲದೆ ಶಿಷ್ಯರನ್ನು ರೂಪಿಸಿದ ಗುರು. ಮುಮ್ಮೇಳ ಹಾಗೂ ಹಿಮ್ಮೇಳದ ಅಪಸವ್ಯಗಳನ್ನು ಸಾತ್ವಿಕವಾಗಿ ಖಂಡಿಸುತ್ತಿದ್ದರು. ವಿವಿಧ ಮೇಳಗಳಲ್ಲಿ ನಾಲ್ಕು ದಶಕ ವ್ಯವಸಾಯ ಮಾಡಿದ್ದರು. ವೈಯಕ್ತಿವಾಗಿ ಬಡತನವಿದ್ದರೂ, ಯಕ್ಷಗಾನವನ್ನು ಶ್ರೀಮಂತಗೊಳಿಸಿದ ಕಲಾವಿದ ಎಂದು ಕಲಾವಿದ, ಲೇಖಕ ನಾ.ಕಾರಂತ ಪೆರಾಜೆ ಹೇಳಿದ್ದಾರೆ.

ಕಾಸರಗೋಡು ಜಿಲ್ಲೆಯ ಕುಂಟಾರು ದೇವಳದ ವಠಾರದಲ್ಲಿ ಭಾನುವಾರ ನಡೆದ ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರ ಕೂಡ್ಲು ಇದರ ರಜತ ರಂಗದ ಹನ್ನೊಂದನೇ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದ ಕೀರ್ತಿಶೇಷ ಪುಂಡಿಕಾಯಿ ಕೃಷ್ಣ ಭಟ್‌ರ ಸಂಸ್ಮರಣೆ ಭಾಷಣ ಮಾಡಿದ ಅವರು, ಅಭಿನಂದನೆ ಹಾಗೂ ಸ್ಮೃತಿ ಕೃತಿಗಳು ಯಕ್ಷಪ್ರಿಯರಿಗೆ ಒದಗುತ್ತಿಲ್ಲ, ಹಾಗಾಗಿ ಕೀರ್ತಿಶೇಷ ಕಲಾವಿದರ ಸಂಕ್ಷಿಪ್ತ ಪರಿಚಯವುಳ್ಳ ಹಸ್ತಕಾಕೃತಿಯ ಪುಸ್ತಕಗಳು ಪ್ರಕಟವಾಗಬೇಕು ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರು ಮಾತನಾಡಿ, ವಿವಿಧ ರಂಗುರಂಗಿನ ಮಾಧ್ಯಮಗಳ ಭರಾಟೆಯಲ್ಲಿ ಕನ್ನಡ ಭಾಷೆಯ ಉಳಿವಿಗೆ ಯಕ್ಷಗಾನದ ಕೊಡುಗೆ ಗುರುತರ ಎಂದರು. ವೇದಿಕೆಯಲ್ಲಿ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು, ಪದ್ಮನಾಭ ಭಟ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಪುಂಡಿಕಾಯಿ ಕೃಷ್ಣ ಭಟ್ಟರ ಪುತ್ರ ರಾಜೇಂದ್ರಪ್ರಸಾದ್ ಪುಂಡಿಕಾಯಿ ಅವರನ್ನು ಗೌರವಿಸಲಾಯಿತು. ರಜತ ರಂಗದ ಕಾರ್ಯದರ್ಶಿ ಸತ್ಯನಾರಾಯಣ ತಂತ್ರಿಯವರು ಕಾರ್ಯಕ್ರಮ ನಿರೂಪಿಸಿದರು.

ಆರಂಭದಲ್ಲಿ ಸಂಹಿತಾಲಕ್ಷ್ಮೀ ಅವರ ಪ್ರಾರ್ಥನೆಯಿಂದ ಆರಂಭಗೊಂಡ ಕಾರ್ಯಕ್ರಮದಲ್ಲಿ ಯಕ್ಷಗಾನ ತರಬೇತಿ ಕೇಂದ್ರದ ಸುರೇಶ್ ಮಣಿಯಾಣಿ ಸ್ವಾಗತಿಸಿ, ಗೋಪಾಲಕೃಷ್ಣ ಬಲ್ಲಾಯ ವಂದಿಸಿದರು.

ಕಾರ್ಯಕ್ರಮದ ಅಂಗವಾಗಿ ಸುಧನ್ವ ಮೋಕ್ಷ ಎಂಬ ಪ್ರಸಂಗದ ತಾಳಮದ್ದಳೆ ಸಂಪನ್ನಗೊಂಡಿತು. ಭಾಗವತರಾಗಿ ರಾಮಪ್ರಸಾದ್ ಮಯ್ಯ ಕೂಡ್ಲು, ಮದ್ದಳೆಯಲ್ಲಿ ಲಕ್ಷ್ಮೀಶ ಬೆಂಗ್ರೋಡಿ, ಚೆಂಡೆಯಲ್ಲಿ ರಾಜೇಂದ್ರಪ್ರಸಾದ್ ಪುಂಡಿಕಾಯಿ ಪುಂಡಿಕಾಯಿ ಹಾಗೂ ಅರ್ಜುನನಾಗಿ ಜಬ್ಬಾರ್ ಸಮೋ, ಸುಧನ್ವನಾಗಿ ನಾ.ಕಾರಂತ ಪೆರಾಜೆ, ಕೃಷ್ಣನಾಗಿ ಗೋಪಾಲಕೃಷ್ಣ ನಾಯಕ್ ಸೂರಂಬೈಲು ಸಹಕರಿಸಿದರು.

ಮಂಜೇಶ್ವರ ಕೋಳ್ಯೂರು: ಸ್ಪಂದನ ಚಿಕಿತ್ಸಾ ಸಹಾಯಧನದ ಹಸ್ತಾಂತರ



ಮಂಜೇಶ್ವರ: ಸ್ಪಂದನ ಟ್ರಸ್ಟ್ ಕೋಳ್ಯೂರು ಮಂಜೇಶ್ವರ ಇದರ 115ನೇ ಮಾಸಿಕ ಯೋಜನೆಯಲ್ಲಿ ಹರ್ಷಿತ್ ಮಜಿಬೈಲ್ ಅವರ ಚಿಕಿತ್ಸೆಗಾಗಿ ಭಾನುವಾರ ಫಲಾನುಭವಿಯ ಮನೆಗೆ ತೆರಳಿ ಚೆಕ್ ಮುಖಾಂತರ ಸಹಾಯಧನವನ್ನು ಹಸ್ತಾಂತರ ಮಾಡಲಾಯಿತು.

ಈ ಸಂದರ್ಭದಲ್ಲಿ ತೇಜಪ್ರಕಾಶ್ ಕೋಳ್ಯೂರು, ಸತೀಶ ಪರ್ಣಕಜೆ, ಉದಯ ಧರ್ಮನಗರ, ಸುರೇಶ್ ದುರ್ಗಿಪ್ಪಳ್ಳ, ಗುರುಪ್ರಸಾದ್ ಕೋಟ್ಯಾನ್ ಕೋಳ್ಯೂರು ಉಪಸ್ಥಿತರಿದ್ದರು.

ಜಿ.ಪಂ. ಪ್ರಾಂಗಣದ ಶಿಲ್ಪ ವೀಕ್ಷಿಸಿದ ಜಿಲ್ಲಾಧಿಕಾರಿ ಅರ್ಜುನ್



ಕಾಸರಗೋಡು: ಜಿಲ್ಲಾ ಪಂಚಾಯತ್ ಪ್ರಾಂಗಣದಲ್ಲಿ ಖ್ಯಾತ ಶಿಲ್ಪಿ ಕಾನಾಯಿ ಕುಂಞಿರಾಮನ್ ನಿರ್ಮಿಸುತ್ತಿರುವ ಫ್ರೀಡಂ ಶಿಲ್ಪವನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸೋಮವಾರ ವೀಕ್ಷಿಸಿದರು. ಇದೇ ಸಂದರ್ಭ ಜಿಲ್ಲಾಧಿಕಾರಿಗಳು ಶಿಲ್ಪಿಯೊಂದಿಗೆ ಮಾತುಕತೆ ನಡೆಸಿದರು. ಅಲ್ಲದೆ ಅವರ ಕಲಾ ಚಾತುರ್ಯವನ್ನು ಮೆಚ್ಚಿ ಕೊಂಡಾಡಿದರು.

ಕಾನಾಯಿ ಕುಂಞಿರಾಮನ್ ಅವರ ಪತ್ನಿ ನಳಿನಿ ಕಾನಾಯಿ, ನಿವೃತ್ತ ಕೋಟ್ಟಾಯಂ ಜಿಲ್ಲಾಧಿಕಾರಿ ಡಾ.ಪಿ.ಕೆ.ಜಯಶ್ರೀ, ಪಿ.ವಿ.ರವೀಂದ್ರನ್ ನಾಯರ್, ಕೇರಳ ಕೇಂದ್ರ ವಿಶ್ವವಿದ್ಯಾಲಯದ ವೈದ್ಯಕೀಯ ಅಧಿಕಾರಿ ಡಾ.ಆರತಿ ಆರ್.ನಾಯರ್, ಜಿಲ್ಲಾ ಪಂಚಾಯತ್ ಕಾರ್ಯದರ್ಶಿ ಎಸ್.ಬಿಜು, ಜಿಲ್ಲಾ ಮಾಹಿತಿ ಅಧಿಕಾರಿ ಎಂ. ಮಧುಸೂದನನ್ ಮುಂತಾದವರು ಜಿಲ್ಲಾಧಿಕಾರಿಯೊಂದಿಗೆ ಹಾಜರಿದ್ದರು. ಶಿಲ್ಪ ನಿರ್ಮಾಣ ಕಾರ್ಯವು ಅಂತಿಮ ಹಂತದಲ್ಲಿದೆ ಎಂದು ಶಿಲ್ಪಿ ಕಾನಾಯಿ ಕುಂಞಿರಾಮನ್ ಇದೇ ವೇಳೆ ಹೇಳಿದರು.

ಧರ್ಮಸ್ಥಳ ಯೋಜನೆ ಸುರಕ್ಷಾ ಆರೋಗ್ಯ ವಿಮಾ ಮೊತ್ತ ಹಸ್ತಾಂತರ



ಬದಿಯಡ್ಕ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಕಾಸರಗೋಡು ಬದಿಯಡ್ಕ ವಲಯದ ಆಶ್ರಯದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಸಂಪೂರ್ಣ ಸುರಕ್ಷಾ ಆರೋಗ್ಯ ವಿಮಾ ಕಾರ್ಯಕ್ರಮದಡಿ ಮಾಡತ್ತಡ್ಕ ಕಾರ್ಯಕ್ಷೇತ್ರದ ಶ್ರೀ ವಿನಾಯಕ ತಂಡದ ಸದಸ್ಯೆ ಭಾಗೀರಥಿ ಅವರು ಪಾರ್ಶ್ವವಾಯು ಪೀಡಿತರಾಗಿ ಚಿಕಿತ್ಸೆ ಪಡೆದಿದ್ದು, ಈ ಸಂಬಂಧ ಮಂಜೂರಾದ ಸುರಕ್ಷಾ ಆರೋಗ್ಯ ವಿಮಾ ಮೊತ್ತವಾದ 60,000 ರೂ. ಅವರ ಪುತ್ರಿ ಕವಿತಾ ಅವರಿಗೆ ತಾಲೂಕು ಯೋಜನಾಧಿಕಾರಿ ದಿನೇಶ್ ಬಿ. ಹಸ್ತಾಂತರಿಸಿದರು. ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಅಧ್ಯಕ್ಷ ಅಖಿಲೇಶ್ ನಗುಮುಗಂ, ವಿದ್ಯಾಗಿರಿ ಒಕ್ಕೂಟ ಅಧ್ಯಕ್ಷ ತಾರಾನಾಥ ಶೆಟ್ಟಿ, ಮಾಡತ್ತಡ್ಕ ಒಕ್ಕೂಟ ಕಾರ್ಯದರ್ಶಿ ಬೇಬಿ ಶಾಲಿನಿ, ಬದಿಯಡ್ಕ ವಲಯ ಮೇಲ್ವಿಚಾರಕಿ ಸುಗುಣ ಓ.ಹವಾಲ್ದಾರ್, ಸೇವಾ ಪ್ರತಿನಿಧಿ ಜಲಜಾಕ್ಷಿ ಹಾಗೂ ಶ್ರೀ ವಿನಾಯಕ ಹಾಗೂ ತಸ್ಮೈಶ್ರೀ ತಂಡದ ಇದ್ದರು.

ನಿವೃತ್ತಿ ಹೊಂದುವ ಕನ್ನಡ ಮಾಧ್ಯಮ ಅಧ್ಯಾಪಕರಿಗೆ ವಿದಾಯಕೂಟ ಸಮಾರಂಭದಲ್ಲಿ ಯು.ಮಹೇಶ್ವರಿ ಆಶಯ

ಗಡಿನಾಡಿನಲ್ಲಿ ಕನ್ನಡಕ್ಕಾಗಿ ಹೋರಾಡಿದ ಮಹನೀಯರನು ನಾವು ಮರೆಯಬಾರದು

ಕಾಸರಗೋಡು: ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ವತಿಯಿಂದ 2025-26ನೇ ಸಾಲಿನಲ್ಲಿ ನಿವೃತ್ತಿ ಹೊಂದುತ್ತಿರುವ ಕನ್ನಡ ಮಾಧ್ಯಮ ಶಾಲೆಗಳ ಶಿಕ್ಷಕ ಶಿಕ್ಷಕಿಯರಿಗೆ ವಿದಾಯ ಕೂಟ ಸಮಾರಂಭ ಬೀರಂತಬೈಲ್‌ನ ಕನ್ನಡ ಅಧ್ಯಾಪಕ ಭವನದಲ್ಲಿ ಜರಗಿತು.

ಕಾರ್ಯಕ್ರಮವನ್ನು ಕಾಸರಗೋಡು ಸರಕಾರಿ ಕಾಲೇಜು ನಿವೃತ್ತ ಕನ್ನಡ ಪ್ರಾಧ್ಯಾಪಿಕೆ ಯು. ಮಹೇಶ್ವರಿ ಉದ್ಘಾಟಿಸಿ ಮಾತನಾಡಿ, ಕನ್ನಡಕ್ಕಾಗಿ ಹೋರಾಡಿದಂತಹ ಮಹನೀಯರನ್ನು ನಾವು ಮರೆಯಬಾರದು. ನಮ್ಮ ಮಣ್ಣಿನ ಭಾಷೆಯನ್ನು ಉಳಿಸಲು ಪ್ರಯತ್ನ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಕೇಂದ್ರ ಸಮಿತಿಯ ಅಧ್ಯಕ್ಷ



ಸುಕೇಶ ಎ. ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ, ಪತ್ರಕರ್ತ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಮುಖ್ಯ ಅತಿಥಿಯಾಗಿದ್ದರು. ಕಾಸರಗೋಡು ಜಿಲ್ಲಾ ಶಿಕ್ಷಣಾಧಿಕಾರಿ ಸವಿತಾ ಪುಂಡೂರು, ಕಾಸರಗೋಡು ಡಿಪಿಒ ಆಗಸ್ಟಿನ್ ಬರ್ನಾಡ್ ಮೊಂತೆರೊ, ಕುಂಬಳೆ ಉಪಜಿಲ್ಲಾ ಶಿಕ್ಷಣಾಧಿಕಾರಿ ಶಶಿಧರ ಎಂ., ನಿವೃತ್ತ ಶಿಕ್ಷಣಾಧಿಕಾರಿ ಪುಂಡರೀಕಾಕ್ಷ ಆಚಾರ್ಯ, ಕೇಂದ್ರ ಸಮಿತಿ ಉಪಾಧ್ಯಕ್ಷೆ ಪ್ರಭಾವತಿ ಕೆದಿಲಾಯ ಇದ್ದರು. ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಅಧಿಕೃತ ವಕ್ತಾರ ಸುಕೇಶ್ ಎ.. ಪ್ರಾಸ್ತಾವಿಕ ಮಾತನಾಡಿದರು. 2025-26ನೇ ಸಾಲಿನಲ್ಲಿ ನಿವೃತ್ತಿ ಹೊಂದುವ ಕನ್ನಡ ಮಾಧ್ಯಮದ ಶಿಕ್ಷಕ ಶಿಕ್ಷಕಿಯರನ್ನು ಗೌರವಿಸಲಾಯಿತು. ಸೇವೆಯಿಂದ ನಿವೃತ್ತಿ ಹೊಂದುವವರ ಪರಿಚಯವನ್ನು ಕಾಸರಗೋಡು, ಬೇಕಲ ಹೊಸದುರ್ಗ ಉಪಜಿಲ್ಲೆಯ ಸುರೇಖಾ, ವನಿತಾ, ವಿನೀತಾ, ಪೂರ್ಣಿಮಾ, ನಿರೀಕ್ಷಾ, ವಿಜಯ ಕುಮಾರಿ, ರೋಹಿತಾಕ್ಷಿ, ಕವಿತಾ, ವಿದ್ಯಾ, ಕುಂಬಳೆ ಉಪಜಿಲ್ಲೆಯ ಅಂಕಿತಾ ಎಂ., ಸೌಮ್ಯಾಕುಮಾರಿ, ವನಜಾ ಸಿ.ಎಚ್., ಶ್ಯಾಮಲಾ ಕುಮಾರಿ, ಮಹಾಗಣಪತಿ, ಜ್ಯೋತ್ಸ್ನಾ , ತಿರುಮಲೇಶ್, ಶಶಿಧರ ಕೆ., ವೀಕ್ಷಿತ ಕೆ., ಕಮಲಾಕ್ಷ ನಾಯಕ್ ಮಂಜೇಶ್ವರ ಉಪಜಿಲ್ಲೆಯ ಪ್ರಶಾಂತ ಹೊಳ್ಳ, ರೇಖಾ, ಹರೀಶ್‌ಕುಮಾರ್, ದೀಪಿಕಾ ಕೆ., ಜಯಪ್ರಶಾಂತ್ ಪಾಲೆಂಗ್ರಿ, ನೀತಾ, ಹರಿಣಾಕ್ಷಿ, ಶಂಕರನಾರಾಯಣ ಭಟ್ ಮಮತಾ, ಜಯರಾಮ ಸಿ.ಎಚ್., ಸ್ಮಿತಾ ಬಿ., ಗಣೇಶ್, ಸುನಿಲ್‌ಕುಮಾರ್ ಎಂ., ಕವಿತಾ ಕೂಡ್ಲು ಪ್ರದೀಪ್, ಅಶೋಕ್‌ಕುಮಾರ್ ಕೊಡ್ಲಮೊಗರು, ಚಂದ್ರಿಕ ,ಭವ್ಯಾ, ಉಮೇಶ್ ಬಾಯಾರು ಮೊದಲಾದವರು ಪರಿಚಯ ಮಾಡಿದರು.

ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಕೇಂದ್ರ ಸಮಿತಿಯ ಅಧಿಕೃತ ವಕ್ತಾರ ಬಾಬು ಕೆ. ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಪ್ರದೀಪ್ ಕುಮಾರ್ ಶೆಟ್ಟಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೋಶಾಧಿಕಾರಿ ಶರತ್‌ಕುಮಾರ್ ಎಂ. ವಂದಿಸಿದರು. ಸಂಘಟನಾ ಕಾರ್ಯದರ್ಶಿ ಜಬ್ಬಾರ್, ಕಾರ್ಯದರ್ಶಿ ಜಯಪ್ರಶಾಂತ್ ಪಾಲೆಂಗ್ರಿ, ಉಪಾಧ್ಯಕ್ಷೆ ಶ್ರೀಲತಾ ನಿರೂಪಿಸಿದರು. ಸಂಘಟನೆಯ ಸದಸ್ಯರು ಉಪಸ್ಥಿತರಿದ್ದು ಸಹಕರಿಸಿದರು.

ಸುತ್ತಮುತ್ತ

ಮೇ 17: ಆರ್‌ಎಸ್‌ಬಿ ಬಿಜಿಎಸ್‌ಬಿ ವಧು-ವರರ ಪರಿಚಯ ಸಮಾವೇಶ

ಶಿರ್ವ: ಆರ್‌ಎಸ್‌ಬಿ ಮತ್ತು ಬಿಜಿಎಸ್‌ಬಿ 'ಸಪ್ತಪದಿ ವಿವಾಹ ಮಾಹಿತಿ ಕೇಂದ್ರ' ಬೆಂಗಳೂರು ಇವರ ಆಯೋಜನೆಯಲ್ಲಿ ಶ್ರೀಕ್ಷೇತ್ರ ಬಂಟಕಲ್ಲು ಶ್ರೀದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತ ಮಂಡಳಿ, ರಾಜಾಪುರ ಸಾರಸ್ವತ ಸೇವಾ ವೃಂದ, ಶ್ರೀದುರ್ಗಾ ಮಹಿಳಾ ವೃಂದ, ಶ್ರೀದುರ್ಗಾ ಮಹಿಳಾ ಚಂಡೆ ಬಳಗ, ಆಶ್ರಯದಲ್ಲಿ ಶ್ರೀದೇವಳದ ಸಭಾಭವನದಲ್ಲಿ ಮೇ 17ರಂದು ಬೆಳಿಗ್ಗೆಯಿಂದ ಅಪರಾಹ್ನ 3 ಗಂಟೆಯವರೆಗೆ 'ಋಣಾನುಬಂಧ -ವಧುವರರ ಪರಿಚಯ' ಸಮಾವೇಶ ಆಯೋಜಿಸಲಾಗಿದೆ. ಯುವಕ ಯುವತಿಯರು ಬಯೋಡೇಟಾ ಮತ್ತು ಪೂರ್ಣ ಭಾವಚಿತ್ರವನ್ನು ಆಯೋಜಕರಿಗೆ ನೀಡಿ ನೋಂದಣಿ ಮಾಡಿಸಿಕೊಳ್ಳಬೇಕು. ವಿಶೇಷ ಕಾರ್ಯಕ್ರಮವಾಗಿ 15 ವರ್ಷ ಮೇಲ್ಪಟ್ಟ ಸಮಾಜದ ವಿದ್ಯಾರ್ಥಿಗಳಿಗೆ ಜೀವನ ತರಬೇತುದಾರ ಸುಬ್ರಹ್ಮಣ್ಯ ಕುಲೇದು ಬೆಂಗಳೂರು ಇವರಿಂದ 'ಜೀವನದ ದೃಷ್ಟಿಕೋನವನ್ನು ಹೇಗೆ ಬದಲಾಯಿಸುವುದು' ವಿಷಯದ ಬಗ್ಗೆ ಉಪನ್ಯಾಸ ಮಾಹಿತಿ, ಸಾಧಕರಿಗೆ ಗೌರವ ಸಮರ್ಪಣೆ, ಹಿರಿಯ ದಂಪತಿಗಳಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ.ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 70199 76058 ಮತ್ತು 96869 14650 ಹಾಗೂ 9480762832ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೊದಲನೇ ಪುಟದಿಂದ

ಹುಲಿರಾಯ!


ಹುಲಿ ಅಲ್ಲಿಂದ ಪರಾರಿಯಾಗಿತ್ತು. ಮತ್ತೊಂದೆಡೆ ಅದೇ ದಿನ ದಕ್ಷಿಣಕೊಡಗಿನ ಪೊನ್ನಂಪೇಟೆ ಸಮೀಪದ ಕಿರುಗೂರು ಗ್ರಾಮದಲ್ಲಿ ಹುಲಿಯೊಂದು ದಾಳಿ ನಡೆಸಿ ಕರುವನ್ನು ಕೊಟ್ಟಿಗೆಯಿಂದ ಹೊರಗೆ ಎಳೆದೊಯ್ದು ಕೊಂದು ಹಾಕಿತ್ತಲ್ಲದೆ, ಸ್ವಲ್ಪ ಮಾಂಸವನ್ನು ತಿಂದು ಅಲ್ಲಿಂದ ಪರಾರಿಯಾಗಿತ್ತು. ಶನಿವಾರ ಪಾಲಿಬೆಟ್ಟ ಸಮೀಪದ ಕೈಮಕಾಡು ಭಾಗದ ಎಸ್ಟೇಟ್ ಪ್ರದೇಶದಲ್ಲಿ ಹಾಡಹಗಲೇ ಹುಲಿಯ ಘರ್ಜನೆ ಕೇಳಿ ಬಂದಿದ್ದು, ಪೂರ್ವಾಹ್ನ ಸೌದೆಗೆಂದು ತೆರಳಿದ್ದ ಕಾರ್ಮಿಕರು ಭಯದಿಂದ ಅಲ್ಲಿಂದ ಓಡಿ ಹೋಗಿ ಪ್ರಾಣಾಪಾಯದಿಂದ ಪಾರಾಗಿದ್ದರು. ಇತ್ತೀಚಿನ ದಿನಗಳಲ್ಲಿ ಕೊಡಗು ಜಿಲ್ಲೆಯಲ್ಲಿ ವನ್ಯಪ್ರಾಣಿಗಳು ಕಾಡು ಬಿಟ್ಟು ನಾಡಿನಲ್ಲಿ ಸಂಚರಿಸತೊಡಗಿರುವುದು ಆತಂಕಕಾರಿ ಸಂಗತಿಯಾಗಿದೆ. ಇದರಿಂದಾಗಿ ಕಾರ್ಮಿಕರು ತೋಟಗಳಲ್ಲಿ ದುಡಿದು ಜೀವನ ಸಾಗಿಸುವುದೂ ದುಸ್ತರವಾಗಿದೆ. ಕಾಡಾನೆಗಳು ರಾತ್ರಿ ಹಗಲೆನ್ನದೆ ಕಾಫಿ ತೋಟಗಳಲ್ಲೇ ಬೀಡು ಬಿಡುತ್ತಿರುವುದರಿಂದ ಕಾರ್ಮಿಕರು ಜೀವ ಭಯದಿಂದಲೇ ಕಾಫಿ ತೋಟಗಳಲ್ಲಿ ದುಡಿಯುವ ಅನಿವಾರ್ಯತೆ ಎದುರಾಗಿದ್ದು, ಈಗಾಗಲೇ ಬೆಳೆಗಾರರೊಬ್ಬರು ಸೇರಿದಂತೆ ಐದು ಮಂದಿ ಕಳೆದ ಮೂರು ತಿಂಗಳ ಅವಧಿಯಲ್ಲಿ ಕಾಡಾನೆ ದಾಳಿಗೆ ಬಲಿಯಾಗಿದ್ದಾರೆ. ದಕ್ಷಿಣ ಕೊಡಗಿನಲ್ಲಿ ಹಲವಾರು ಜಾನುವಾರುಗಳು ಹುಲಿ ದಾಳಿಗೆ ಬಲಿಯಾಗಿದ್ದು ಅಲ್ಲಿನ ಶ್ರೀಮಂಗಲ, ಕುಟ್ಟ, ಬಿರುನಾಣಿ, ಕಿರುಗೂರು, ತಿತಿಮತಿ, ಪಾಲಿಬೆಟ್ಟ ವ್ಯಾಪ್ತಿಯಲ್ಲಿ ಹುಲಿಗಳ ಸಂಚಾರ ನಿತ್ಯ ನಿರಂತರವಾಗಿದೆ.

ಶನಿವಾರ ಬೆಳಗ್ಗೆ ಸೌದೆಗೆಂದು ತೋಟದೊಳಗೆ ತೆರಳಿದ್ದ ಕೆಲ ಕಾರ್ಮಿಕರು ಏಕಾಏಕಿ ಹುಲಿಯ ಘರ್ಜನೆ ಕೇಳಿ ಭಯದಿಂದ ಅಲ್ಲಿಂದ ಪರಾರಿಯಾಗಿದ್ದಾರೆ. ಈ ಘಟನೆ ಬಳಿಕ ಕಾರ್ಮಿಕರು ಕೆಲಸಕ್ಕೆ ತೆರಳಲು ಹಿಂಜರಿಯುತ್ತಿದ್ದು, ಪ್ರದೇಶದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಘಟನೆಯ ಮಾಹಿತಿ ತಿಳಿದ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶೋಧ ಕಾರ್ಯ ಆರಂಭಿಸಿದ್ದಾರೆ. ಹುಲಿಯ ಚಲನವಲನ ಪತ್ತೆಹಚ್ಚಲು ಸಿಬ್ಬಂದಿಗಳ ತಂಡಗಳು ಎಸ್ಟೇಟ್ ಪ್ರದೇಶದಲ್ಲಿ ಪರಿಶೀಲನೆ ನಡೆಸುತ್ತಿದ್ದು, ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ, ತೋಟದ ಕಾರ್ಮಿಕರು ಮತ್ತು ಗ್ರಾಮಸ್ಥರು ಭಯಭೀತರಾಗಿದ್ದು, ಮಕ್ಕಳನ್ನು ಹೊರಗೆ ಬಿಡದಂತೆ ಮುನ್ನೆಚ್ಚರಿಕೆ ವಹಿಸುತ್ತಿದ್ದಾರೆ. ಅರಣ್ಯ ಇಲಾಖೆ ಕೂಡಾ ಜನರಿಗೆ ಎಚ್ಚರಿಕೆ ನೀಡಿದ್ದು, ಒಬ್ಬಂಟಿಯಾಗಿ ತೋಟ ಪ್ರದೇಶಗಳಿಗೆ ತೆರಳದಂತೆ ಸೂಚನೆ ನೀಡಿದೆ. ಹುಲಿ ಸಂಚಾರ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಕ್ಷಣವೇ ಸೂಕ್ತ ಕ್ರಮ ಕೈಗೊಂಡು ಜನರ ಸುರಕ್ಷತೆಯನ್ನು ಖಚಿತಪಡಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಇತ್ತೀಚೆಗೆ ಮಡಿಕೇರಿ ನಗರದ ಹೊರವಲಯದ ಇಬ್ನಿವಳವಾಡಿ ಗ್ರಾಮದಲ್ಲಿ ಹುಲಿಯ ಓಡಾಟ ಕಂಡು ಬಂದಿತ್ತು. ಕಾಡಾನೆ ಹಾಗೂ ಡ್ರೋಣ್ ನೆರವಿನಿಂದ ಹುಲಿಗಾಗಿ ಶೋಧ ನಡೆಸಿದರೂ ಪತ್ತೆಯಾಗಿರಲಿಲ್ಲ, ಅದೇ ಸಂದರ್ಭ ಪೊನ್ನಂಪೇಟೆ ಸಮೀಪದ ಕಿರುಗೂರು ಗ್ರಾಮದಲ್ಲಿ ಹುಲಿಯೊಂದು ಕರುವನ್ನು ಬಲಿ ತೆಗೆದುಕೊಂಡಿತ್ತು

ರಾಷ್ಟ್ರೀಯ ಹೆದ್ದಾರಿ 66ರ ಉಡುಪಿ- ಕುಂದಾಪುರ ಮಾರ್ಗದ ಸಂತೆಕಟ್ಟೆ ಮೇಲ್ಸೇತುವೆ ಸಂಚಾರಕ್ಕೆ ಮುಕ್ತ

ನಿರಂತರ ಹೋರಾಟ, ಟೀಕೆ ನಡುವೆ ಕೊನೆಗೂ ಸುಗಮ ಹಾದಿ

ಉಡುಪಿ: ರಾಷ್ಟ್ರೀಯ ಹೆದ್ದಾರಿ 66ರ ಉಡುಪಿ-ಕುಂದಾಪುರ ಮಾರ್ಗದ ಅತ್ಯಂತ ಜನನಿಬಿಡ ಸಂತೆಕಟ್ಟೆ ಜಂಕ್ಷನ್‌ನಲ್ಲಿ ಎದುರಾಗುತ್ತಿದ್ದ ಸಂಚಾರ ದಟ್ಟಣೆಗೆ ಕೊನೆಗೂ ಮುಕ್ತಿ ಸಿಕ್ಕಿದೆ. ಬಹುನಿರೀಕ್ಷಿತ ಸಂತೆಕಟ್ಟೆ ಮೇಲ್ಸೇತುವೆಯನ್ನು ಉಡುಪಿ-ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಅವರು ಇಂದು ಅಧಿಕೃತವಾಗಿ ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಿದರು.



ಸಂಚಾರ ದಟ್ಟಣೆಗೆ ಬ್ರೇಕ್

ಸಂತೆಕಟ್ಟೆ ಜಂಕ್ಷನ್‌ನಲ್ಲಿ ಅಂಡರ್‌ಪಾಸ್ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದ್ದು, ಈಗ ಮೇಲ್ಸೇತುವೆಯೂ ಬಳಕೆಗೆ ಸಿದ್ಧವಾಗಿರುವುದರಿಂದ ಹೆದ್ದಾರಿ ಮಾರ್ಗದಲ್ಲಿ ವಾಹನಗಳ ಚಲನೆ ಸುಗಮಗೊಳ್ಳಲಿದೆ. ವಿಶೇಷವಾಗಿ ಪೀಕ್ ಅವಧಿಯಲ್ಲಿ ಇಲ್ಲಿ ಉಂಟಾಗುತ್ತಿದ್ದ ಕಿಲೋಮೀಟರ್‌ಗಟ್ಟಲೆ ವಾಹನಗಳ ಸಾಲು ಮತ್ತು ಅದರಿಂದ ಸಂಭವಿಸುತ್ತಿದ್ದ ಸರಣಿ ಅಪಘಾತಗಳಿಗೆ ಈ ಹೊಸ ವ್ಯವಸ್ಥೆಯಿಂದ ಕಡಿವಾಣ ಬೀಳುವ ನಿರೀಕ್ಷೆಯಿದೆ.

ಟೀಕೆಗಳೇ ಕಾಮಗಾರಿಗೆ ಸ್ಫೂರ್ತಿ: ಕೋಟ

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಸಂಸದ ಕೋಟ ಶ್ರೀನಿವಾಸ್ ಪೂಜಾರಿ ಅವರು, ಜನರ ತುರ್ತು ಅಗತ್ಯವನ್ನು ಮನಗಂಡು ಇಂದಿನಿಂದಲೇ ಮೇಲ್ಸೇತುವೆ ಸಂಚಾರಕ್ಕೆ ಬಿಟ್ಟುಕೊಟ್ಟಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಟೀಕೆ-ಟಿಪ್ಪಣಿಗಳು ಸಹಜ. ಸಾರ್ವಜನಿಕರಿಂದ ಬಂದ ಟೀಕೆಗಳೇ ಈ ಕಾಮಗಾರಿಯನ್ನು ವೇಗವಾಗಿ ಪೂರ್ಣಗೊಳಿಸಲು ನಮಗೆ ಪ್ರೇರಣೆ ನೀಡಿತು ಎಂದು ಅಭಿಪ್ರಾಯಪಟ್ಟರು. 2022ರಲ್ಲಿ ಆರಂಭವಾದ ಈ ಯೋಜನೆ ಭೂಗರ್ಭದಲ್ಲಿ ಗಟ್ಟಿಯಾದ ಬಂಡೆಗಳು ಸಿಕ್ಕಿದ್ದರಿಂದ ತಾಂತ್ರಿಕ ಅಡೆತಡೆ ಎದುರಿಸಬೇಕಾಯಿತು. ಬಾಕಿ ಇರುವ ಸಣ್ಣಪುಟ್ಟ ಕೆಲಸಗಳು ಮುಗಿದ ನಂತರ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಸಮ್ಮುಖದಲ್ಲಿ ಅದ್ದೂರಿ ಸಮಾರಂಭದ ಮೂಲಕ ಅಧಿಕೃತ ಉದ್ಘಾಟನೆ ನೆರವೇರಿಸಲಾಗುವುದು ಎಂದರು.

ಹೋರಾಟದ ಹಾದಿ, ಸಂಕಷ್ಟದ 6 ವರ್ಷ

ಕಳೆದ ಆರು ವರ್ಷಗಳಲ್ಲಿ ಈ ಭಾಗದಲ್ಲಿ ನಡೆದ ಕಾಮಗಾರಿ ಅವಧಿಯಲ್ಲಿ ಸಾರ್ವಜನಿಕರು ಅನುಭವಿಸಿದ ಯಾತನೆ ಅಷ್ಟಿಷ್ಟಲ್ಲ. ಸಮರ್ಪಕ ಸರ್ವಿಸ್ ರಸ್ತೆಗಳಿಲ್ಲದೆ, ಬಸ್ ನಿಲ್ದಾಣದ ಸೌಕರ್ಯ ಮತ್ತು ಸೂಚನಾ ಫಲಕಗಳ ಕೊರತೆಯಿಂದಾಗಿ ಈ ಜಂಕ್ಷನ್‌ನಲ್ಲಿ ನೂರಾರು ಅಪಘಾತಗಳು ಸಂಭವಿಸಿ ಹಲವು ಅಮೂಲ್ಯ ಜೀವಗಳು ಬಲಿಯಾಗಿದ್ದವು. ಈ ಅವ್ಯವಸ್ಥೆಯ ವಿರುದ್ಧ ಕಲ್ಯಾಣಪುರ-ಸಂತೆಕಟ್ಟೆ ನಾಗರಿಕ ಹಿತರಕ್ಷಣಾ ವೇದಿಕೆಯ ನೇತೃತ್ವದಲ್ಲಿ ಸ್ಥಳೀಯರು, ವ್ಯಾಪಾರಸ್ಥರು, ವಿದ್ಯಾರ್ಥಿಗಳು ಹಾಗೂ ರಿಕ್ಷಾ ಚಾಲಕರು ಬೀದಿಗಿಳಿದು ನಿರಂತರ ಪ್ರತಿಭಟನೆ ನಡೆಸಿದ್ದರು. ಸಾರ್ವಜನಿಕರ ಈ ತೀವ್ರ ಆಕ್ರೋಶವೇ ಇಂದು ಈ ಯೋಜನೆಯು ಒಂದು ಹಂತಕ್ಕೆ ತಲುಪಲು ಕಾರಣವಾಗಿದೆ.

ವಿಶೇಷ ಅಂಶಗಳು: ಸಂಸದರ ಸ್ಪಷ್ಟನೆ

ಕೇವಲ ಕಠಿಣ ಬಂಡೆ ಮಾತ್ರವಲ್ಲದೆ, ಭೂಗತ ಪೈಪ್ ಲೈನ್, ವಿದ್ಯುತ್ ಕೇಬಲ್‌ಗಳ ಸ್ಥಳಾಂತರದ ತಾಂತ್ರಿಕ ಸವಾಲುಗಳಿಂದ ಕಾಮಗಾರಿ ವಿಳಂಬವಾಯಿತು. ಆದರೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮಾನದಂಡದಂತೆ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಂಡಿಲ್ಲ. ಪಾದಚಾರಿಗಳ ಸುರಕ್ಷತೆಗೆ ವೈಜ್ಞಾನಿಕ ಕ್ರಮ, ಸರ್ವಿಸ್ ರಸ್ತೆಗಳ ಪೂರ್ಣ ಪ್ರಮಾಣದ ದುರಸ್ತಿಗೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಂಸದರು ತಿಳಿಸಿದ್ದಾರೆ.

ಮುಂದಿನ ಸವಾಲುಗಳು

ಮೇಲ್ಸೇತುವೆ ಆರಂಭಗೊಂಡಿರುವುದು ಸ್ಥಳೀಯರಿಗೆ ಸದ್ಯಕ್ಕೆ ಸಮಾಧಾನ ತಂದಿದ್ದರೂ, ಮೂಲಭೂತ ಸೌಲಭ್ಯಗಳ ಕೊರತೆ ಇನ್ನೂ ಕಾಡುತ್ತಿದೆ. ಸುರಕ್ಷಿತವಾಗಿ ರಸ್ತೆ ದಾಟಲು ಹೈಟೆಕ್ ವ್ಯವಸ್ಥೆ, ಸರ್ವಿಸ್ ರಸ್ತೆಗಳ ಡಾಂಬರೀಕರಣ ಹಾಗೂ ಸಮರ್ಪಕ ಬೀದಿ ದೀಪಗಳ ಅಳವಡಿಕೆ ಶೀಘ್ರವಾಗಬೇಕಿದೆ. ಒಟ್ಟಿನಲ್ಲಿ, ಸಂಘಟಿತ ಹೋರಾಟ ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಫಲವಾಗಿ ಸಂತೆಕಟ್ಟೆಯ ಸಂಚಾರ ವ್ಯವಸ್ಥೆಯಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ.

ಕಟಪಾಡಿ ಒಂದು ಭಾಗದಲ್ಲಿ ಶೀಘ್ರ ವಾಹನ ಸಂಚಾರ



ಕಟಪಾಡಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಅಂಡರ್ ಪಾಸ್ ಕಾಮಗಾರಿ ವೇಗದಲ್ಲಿ ನಡೆಯುತಿದ್ದು, ಎಡಭಾಗದ ಕಾಮಗಾರಿ 15ದಿನಗಳಲ್ಲಿ ಪೂರ್ಣ ಗೊಂಡು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು. ಬಳಿಕ ಎರಡನೇ ಹಂತದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು ಎಂದರು. ಅಂಬಲಪಾಡಿ ಓವರ್‌ಪಾಸ್ ಕಾಮಗಾರಿಯನ್ನು ಮೇ ತಿಂಗಳೊಳಗೆ ಮುಗಿಸುವ ವಿಶ್ವಾಸವನ್ನು ಗುತ್ತಿಗೆದಾರರು ವ್ಯಕ್ತಪಡಿಸಿದ್ದು, ಮಳೆಗಾಲ ಪ್ರಾರಂಭಕ್ಕೆ ಮೊದಲೇ ಅದು ವಾಹನ ಸಂಚಾರಕ್ಕೆ ಮುಕ್ತಗೊಳ್ಳುವ ವಿಶ್ವಾಸವಿದೆ ಎಂದರು. ಕರಾವಳಿ ಬೈಪಾಸ್‌ನಿಂದ ಮಲ್ಪೆ ತನಕದ ಭೂಸಂತ್ರಸ್ಥರಿಗೆ ವಾರದೊಳಗೆ ಪರಿಹಾರ ಪಾವತಿ ಮಾಡಲಾಗುತ್ತಿದೆ.

ಮರ ತೆರವು ಹಾಗೂ ವಿದ್ಯುತ್ ಕಂಬಗಳ ತೆರವು ಸಹ ಶೀಘ್ರವೇ ನಡೆಯಲಿದೆ. ಕೆಳಪರ್ಕಳದಲ್ಲಿ ಸಂತ್ರಸ್ತರು ಮತ್ತೆ ನ್ಯಾಯಾಲಯದ ಮೆಟ್ಟಿಲೇರಿದ್ದು ಕಾಮಗಾರಿಗೆ ಅಡಚಣೆಯಾಗಿದೆ. ಹೀಗಾಗಿ ನ್ಯಾಯಾಲಯ ಮೂಲಕವೇ ಪರಿಹಾರ ಕಂಡುಕೊಳ್ಳುವ ಅನಿವಾರ್ಯತೆಯಿದೆ. ನ್ಯಾಯಾಲಯದಲ್ಲಿರುವ ಪ್ರಕರಣ ಹಿಂತೆಗೆವ ನಿಟ್ಟಿನಲ್ಲೂ ಪ್ರಯತ್ನ ನಡೆಯುತ್ತಿದೆ ಎಂದರು.

ಉಚ್ಚಿಲ ದೇವಸ್ಥಾನಕ್ಕೆ ಸಮರ್ಪಿಸಿದ ಚಂದ್ರ ಮಂಡಲ ರಥದ ಮೆರವಣಿಗೆ

ರಥೋತ್ಸವದ ಪ್ರಯುಕ್ತ ಹೊರೆ ಕಾಣಿಕೆ ಸಮರ್ಪಣೆ

ಪಡುಬಿದ್ರಿ: ಉಚ್ಚಿಲ ದ.ಕ ಮೊಗವೀರ ಮಹಾಜನ ಸಂಘದ ಆಡಳಿತಕ್ಕೊಳಪಟ್ಟ ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನಕ್ಕೆ ದ.ಕ ಮೊಗವೀರ ಮಹಿಳಾ ಮಹಾಜನ ಸಂಘ ಮತ್ತು ಬೆಳ್ಳಿ ರಥ ಸಮಿತಿಯ ವತಿಯಿಂದ ಸಮರ್ಪಣೆ ಮಾಡಿದ ಚಂದ್ರ ಮಂಡಲ ರಥ ಮೆರವಣಿಗೆ ಹಾಗೂ ರಥೋತ್ಸವದ ಪ್ರಯುಕ್ತ ಸೋಮವಾರ ಸಂಜೆ ಹೊರೆ ಕಾಣಿಕೆ ನೆರವೇರಿತು.



ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅರ್ಚಕ ಗೋವಿಂದ ಭಟ್ ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಮೊಗವೀರ ಮುಂದಾಳು ನಾಡೋಜ ಡಾ. ಜಿ ಶಂಕರ್ ಹೊರೆ ಕಾಣಿಕೆಗೆ ಚಾಲನೆ ನೀಡಿದರು. ದ.ಕ ಮೊಗವೀರ ಮಹಿಳಾ ಮಹಾಜನ ಸಂಘ ಮತ್ತು ಬೆಳ್ಳಿ ರಥ ಸಮಿತಿಯ ವತಿಯಿಂದ ಸಮರ್ಪಣೆ ಮಾಡಿದ ಚಂದ್ರಮಂಡಲ ರಥ ಮೆರವಣಿಗೆಗೆ ಮಹಿಳಾ ಮಂಡಲದ ಸದಸ್ಯೆಯರು, ಮೊಗವೀರ ಮುಂದಾಳು ನಾಡೋಜ ಡಾ. ಜಿ ಶಂಕರ್ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಚೆಂಡೆ, ವಾದ್ಯ, ತಟ್ಟಿರಾಯ, ಭಜನಾ ತಂಡಗೂ, ಕುಣಿತ ಭಜನಾ ತಂಡಗಳು ಮೆರವಣಿಗೆಗೆ ಮೆರುಗು ನೀಡಿತು. ಈ ಸಂದರ್ಭ ದ.ಕ. ಮೊಗವೀರ ಮಹಾಜನ ಸಂಘ ಉಚ್ಚಿಲ ಅಧ್ಯಕ್ಷ ಜಯ ಸಿ. ಕೋಟ್ಯಾನ್ ಬೆಳ್ಳಂಪಳ್ಳಿ, ಮಹಾಲಕ್ಷ್ಮೀ ದೇವಸ್ಥಾನದ ಕ್ಷೇತ್ರಾಡಳಿತ ಸಮಿತಿ ಅಧ್ಯಕ್ಷ ಗಿರಿಧರ ಸುವರ್ಣ, ದ.ಕ ಮಹಿಳಾ ಮಹಾಜನ ಸಂಘದ ಅಧ್ಯಕ್ಷೆ ಕವಿತಾಶರತ್, ಕಾರ್ಯದರ್ಶಿ ಪೂರ್ಣಿಮಾ ಚಂದ್ರಶೇಖರ್, ಬೆಳ್ಳಿ ರಥ ಸಮಿತಿ ಅಧ್ಯಕ್ಷೆ ಉಷಾರಾಣಿ, ಕಾರ್ಯದರ್ಶಿ ಶುಭಾ ದಿನೇಶ್, ಹರಿಯಪ್ಪ ಆರ್. ಕೋಟ್ಯಾನ್, ಶರಣ್ ಕುಮಾರ್ ಮಟ್ಟು, ವಿನಯ್ ಕರ್ಕೇರ ಮಲ್ಪೆ, ಸುಗುಣ ಕರ್ಕೇರ, ನಾರಾಯಣ ಕರ್ಕೇರಾ, ಸಂಜೀವ ಬಂಗೇರ, ಮೋಹನ್ ಬಂಗೇರ ಕಾಪು, ಕಾಪು ನಾಲ್ಕು ಪಟ್ಟ ಅಧ್ಯಕ್ಷ ಮನೋಜ್ ಕಾಂಚನ್, ವಾಸುದೇವ ಸಾಲ್ಯಾನ್ ಕಟಪಾಡಿ, ನಾರಾಯಣ ಕರ್ಕೇರ ಪಡುಬಿದ್ರಿ, ರವೀಶ್ ಎಸ್. ಕೋಟೇಶ್ವರ, ಮನೋಜ್ ಕಾಂಚನ್, ಅಶೋಕ್ ಸಾಲ್ಯಾನ್ ಪಡುಬಿದ್ರಿ, ಕಿರಣ್ ಕುಮಾರ್ ಉದ್ಯಾವರ, ಸು ಭಾಶ್ಚಂದ್ರ ಕಾಂಚನ್, ವಿಠಲ್ ಕರ್ಕೇರ, ಪುಂಡಲೀಕ ಹೊಸಬೆಟ್ಟು, ರವೀಂದ್ರ ಶ್ರೀಯಾನ್, ದಾಮೋದರ್ ಸುವರ್ಣ, ರತ್ನಾಕರ್ ಸಾಲ್ಯಾನ್ ಮಲ್ಪೆ, ಮಂಜುನಾಥ್ ಸುವರ್ಣ, ಶ್ರೀಧರ್ ಬಂಗೇರ ಎರ್ಮಾಳ್, ಸರ್ವೋತ್ತಮ ಕುಂದರ್, ಗುಂಡು ಬಿ ಅಮೀನ್, ಸುಜಿತ್ ಸಾಲ್ಯಾನ್, ದಿನೇಶ್ ಎರ್ಮಾಳು, ಸತೀಶ್ ಸಾಲ್ಯಾನ್ ಎರ್ಮಾಳ್ ಇದ್ದರು.

ಜಿಲ್ಲೆಯ ಸಂಘಗಳ ಆಡಳಿತ ಮಂಡಳಿ ಸದಸ್ಯರಿಗೆ ತರಬೇತಿ ಕಾರ್ಯಾಗಾರ

ಹಾಲು ಒಕ್ಕೂಟ ಸ್ವಾವಲಂಬಿಯಾಗಲಿ: ರವಿರಾಜ್

ಕೋಟ: ಹಾಲು ಉತ್ಪಾದಕರ ಸಂಘದ ಅಧ್ಯಕ್ಷರು ನಿರ್ದೇಶಕರುಗಳಿಗೆ ತರಬೇತಿ ಅತ್ಯಗತ್ಯ ಎಂದು ದ. ಕ. ಹಾಲು ಉತ್ಪಾದಕರ ಒಕ್ಕೂಟ ಮಂಗಳೂರು ಇದರ ಅಧ್ಯಕ್ಷ ಕೊಡವೂರು ರವಿರಾಜ ಹೆಗ್ಡೆ ಹೇಳಿದರು.



ಮಾ. 23ರಿಂದ 25ವರೆಗೆ ಕೋಟ ಸಹಕಾರಿ ವ್ಯವಸಾಯಕ ಸಂಘದ ಸಭಾಂಗಣದಲ್ಲಿ ಕರ್ನಾಟಕ ಹಾಲು ಮಹಾ ಮಂಡಳಿಯ ಮೈಸೂರು ತರಬೇತಿ ಕೇಂದ್ರ ಹಾಗೂ ದಕ್ಷಿಣ ಕನ್ನಡ ಹಾಲು ಉತ್ಪಾದಕರ ಒಕ್ಕೂಟ ಮಂಗಳೂರು ಇವರ ಸಹಯೋಗದೊಂದಿಗೆ ಉಡುಪಿ ಜಿಲ್ಲೆಯ ಆಯ್ದ ಸಂಘಗಳ ಆಡಳಿತ ಮಂಡಳಿ ಸದಸ್ಯರ ಮೂರು ದಿನದ ತರಬೇತಿ ಕಾರ್ಯಾಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂಘವನ್ನು ಬಲಪಡಿಸಿ

ದ.ಕ ಹಾಲು ಉತ್ಪಾದಕರ ಒಕ್ಕೂಟ ಹೈನುಗಾರಿಕೆಗೆ ಪ್ರೋತ್ಸಾಹ ನೀಡುವ ಜೊತೆಗೆ ಸ್ವಾವಲಂಬಿ ಬದುಕಿಗೆ ಮುನ್ನುಡಿ ಬರೆಯುವ ಕಾರ್ಯ ಮಾಡುತ್ತಿದೆ. ಈ ದಿಸೆಯಲ್ಲಿ ಹೈನುಗಾರರ ಸಮಸ್ಯೆಯನ್ನು ಪರಿಗಣಿಸಿ ಸ್ಥಳೀಯವಾಗಿ ತರಬೇತಿ ನಡೆಸಲಾಗುತ್ತಿದ್ದು, ಈ ತರಬೇತಿಯ ಸದುಪಯೋಗವನ್ನು ಪಡೆದು ಸಂಘದ ಆಡಳಿತವನ್ನು ಬಲಪಡಿಸುವಂತೆ ಸಲಹೆ ಅವರು ನೀಡಿದರು.

1 ರೂ. ಪ್ರೋತ್ಸಾಹ ಧನ

ಪ್ರಸ್ತುತ ಒಕ್ಕೂಟದ ಮುಖಾಂತರ ಪ್ರಸ್ತುತ ಲೀಟರ್ ಹಾಲಿಗೆ ಮೇ ತಿಂಗಳ ಅಂತ್ಯದವರೆಗೆ ಒಕ್ಕೂಟದ ವತಿಯಿಂದ ಒಂದು ರೂ. ಪ್ರೋತ್ಸಾಹ ಧನವನ್ನು ನೀಡುತ್ತಿದ್ದು, ಒಟ್ಟಾರೆಯಾಗಿ ಲೀಟರ್‌ಗೆ ಕಡಿಮೆ ಅಂದರೆ 40 ರೂ. ನೀಡುವ ವ್ಯವಸ್ಥೆ ಮಾಡುವ ಬಗ್ಗೆ ಸಭೆಗೆ ತಿಳಿಸಿ ಒಕ್ಕೂಟಕ್ಕೆ ಸದಸ್ಯರು ಹಾಲನ್ನು ಉತ್ಪಾದಿಸಿ ನೀಡಿ ಒಕ್ಕೂಟವನ್ನು ಸ್ವಾವಲಂಬಿ ಒಕ್ಕೂಟವಾಗಿಸಲು ಕರೆ ನೀಡಿದರು.

ಮುಖ್ಯ ಅಭ್ಯಾಗತಾರಾಗಿ ದ.ಕ. ಹಾಲು ಉತ್ಪಾದಕರ ಒಕ್ಕೂಟ ನಿರ್ದೇಶಕ ಶಿವಮೂರ್ತಿ ಕೆ., ಕೋಟ ಸಿ.ಎ ಬ್ಯಾಂಕ್ ಉಪಾಧ್ಯಕ್ಷ ಎಚ್. ನಾಗರಾಜ್ ಹಂದೆ, ದ.ಕ. ಹಾಲು ಉತ್ಪಾದಕರ ಒಕ್ಕೂಟ ವ್ಯವಸ್ಥಾಪಕ ರವಿರಾಜ್ ಉಡುಪ, ಉಪ ವ್ಯವಸ್ಥಾಪಕರಾದ ಮಾಧವ ಐತಾಳ್, ಶಂಕರ ನಾಯ್ಕ್, ಕೋಟ ಸಿಎ ಬ್ಯಾಂಕ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶರತ್ ಕುಮಾರ್ ಶೆಟ್ಟಿ ವಿಸ್ತರಣಾಧಿಕಾರಿ ಪ್ರತಿಭಾ ಉಪಸ್ಥಿತರಿದ್ದರು.

ವಿವಿಧ ವ್ಯಾಪ್ತಿಯ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಈ ಕಾರ್ಯಾಗಾರದಲ್ಲಿ ಭಾಗಿಯಾದರು. ಒಕ್ಕೂಟದ ವಿಸ್ತರಣಾಧಿಕಾರಿ ಉಮೇಶ್ ಕುಂದರ್ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕಟಪಾಡಿ ಶ್ರೀನಿವಾಸ ಕಲ್ಯಾಣೋತ್ಸವ: ಎಸ್‌ವಿಎಸ್ ಮೈದಾನದಲ್ಲಿ ಚಪ್ಪರ ಮುಹೂರ್ತ



ಶಿರ್ವ: ತಿರುಮಲ ತಿರುಪತಿ ದೇವಸ್ಥಾನದ ನೇತೃತ್ವದಲ್ಲಿ ಕೆ. ಕೃಷ್ಣಮೋಹನ್ ಪೈ ಯುಎಸ್‌ಎ ಅವರ ಸಂಕಲ್ಪದಂತೆ ಕಟಪಾಡಿ ವಿಜಯಾ ಪೈ, ಪುರುಷೋತ್ತಮ ಪೈ ಮತ್ತು ಕುಟುಂಬಸ್ಥರ ವತಿಯಿಂದ ಕಟಪಾಡಿ ಎಸ್‌ವಿಎಸ್ ವಿದ್ಯಾವರ್ಧಕ ಸಂಘ ಹಾಗೂ ಕಟಪಾಡಿಯ ನಾಗರಿಕರು, ಗಣ್ಯರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ದೇವಸ್ಥಾನ ದೈವಸ್ಥಾನಗಳ ಆಡಳಿತ ಮಂಡಳಿಯವರ ಸಹಕಾರದೊಂದಿಗೆ ಏ.11ರಂದು ಎಸ್‌ವಿಎಸ್ ಕ್ರೀಡಾಂಗಣದಲ್ಲಿ ಜರುಗಲಿರುವ ಶ್ರೀನಿವಾಸ ಕಲ್ಯಾಣೋತ್ಸವ ಪ್ರಯುಕ್ತ ಶನಿವಾರ ಎಸ್‌ವಿಎಸ್ ಕ್ರೀಡಾಂಗಣದಲ್ಲಿ ಚಪ್ಪರ ಮುಹೂರ್ತ ನೆರವೇರಿಸಲಾಯಿತು.

ಕಾರ್ಯಕ್ರಮದ ಪ್ರಮುಖ ರೂವಾರಿ ಕಟಪಾಡಿ ಎಸ್ ವಿಎಸ್ ವಿದ್ಯಾವರ್ಧಕ ಸಂಘದ ಸಂಚಾಲಕ ಕೆ. ಸತ್ಯೇಂದ್ರ ಪೈ ಅವರ ನೇತೃತ್ವದಲ್ಲಿ ಕಟಪಾಡಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ವಿಶೇಷ ಪ್ರಾರ್ಥನಾ ಪೂಜೆ ನೆರವೇರಿಸಿ, ದೇವರ ಪ್ರಸಾದವನ್ನು ಕ್ರೀಡಾಂಗಣಕ್ಕೆ ತಂದು ಚಪ್ಪರ ಮುಹೂರ್ತ ನೆರವೇರಿಸಲಾಯಿತು.

ಹಿರಿಯರಾದ ಪುಂಡಲೀಕ ಭಟ್, ಕೋಟೆ ಶ್ರೀಬಬ್ಬುಸ್ವಾಮಿ ದೈವಸ್ಥಾನದ ಕರ್ತಾರರು ಡಾ.ಯು.ಕೆ. ಶೆಟ್ಟಿ, ಕಟಪಾಡಿ ಶ್ರೀವಿಶ್ವನಾಥ ಕ್ಷೇತ್ರದ ಆಡಳಿತ ಮಂಡಳಿ ಅಧ್ಯಕ್ಷ ಮಹೇಶ್ ಎನ್. ಅಂಚನ್, ಎಸ್‌ವಿಎಸ್ ವಿದ್ಯಾವರ್ಧಕ ಸಂಘದ ಸದಸ್ಯರಾದ ಶ್ರೀನಿವಾಸ ವಾಸುದೇವ ಕಿಣಿ, ಬಿ. ಚಂದ್ರಕಾಂತ್ ಪೈ, ಕೆ. ಗಣೇಶ್ ಕಿಣಿ, ವೆಂಕಟರಮಣ ಭಟ್, ಆಡಳಿತಾಧಿಕಾರಿ ಸುಧಾಕರ್ ಬ್ರಹ್ಮಾವರ, ನಿವೃತ್ತ ಶಿಕ್ಷಕ ಭಾಸ್ಕರ್ ಕಾಮತ್ ಹಾಗೂ ಚಪ್ಪರದ ಗುತ್ತಿಗೆದಾರ ಕಾಶಿನಾಥ್ ಶೆಣೈ ಮತ್ತಿತರರು ಇದ್ದರು. ತಿರುಪತಿಯಿಂದಲೇ ದೇವರನ್ನು ಬರ ಮಾಡಿಸಿಕೊಂಡು ಅಲ್ಲಿನ ತಂಡದವರ ನೇತೃತ್ವದಲ್ಲಿ ನಡೆಯಲಿರುವ ಕಲ್ಯಾಣೋತ್ಸವ ದಲ್ಲಿ ಸಾವಿರಾರು ಮಂದಿ ಭಾಗವಹಿಸುವ ನಿರೀಕ್ಷೆಯಿದೆ.

ಬಿಜೂರು ಹಿರಿಯ ಪ್ರಾಥಮಿಕ ಶಾಲೆಗೆ ಮಣಿಪಾಲ್ ಫೌಂಡೇಶನ್‌ನಿಂದ ನೆರವು



ಬೈಂದೂರು: ವಿದ್ಯಾರ್ಥಿಗಳು ಕೇವಲ ತರಗತಿಯಲ್ಲಿ ಪಾಸಾದರಷ್ಟೇ ಸಾಲದು, ಜೀವನದಲ್ಲಿಯೂ ಯಶಸ್ಸು ಪಡೆಯಬೇಕು. ಉತ್ತಮ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಬದುಕನ್ನು ರೂಪಿಸಿಕೊಳ್ಳುವ ಮೂಲಕ ಸಮಾಜ, ದೇಶದ ಆಸ್ತಿಯಾಗಬೇಕು ಎಂದು ಬೆಂಗಳೂರು ಮಣಿಪಾಲ್ ಫೌಂಡೇಶನ್ ಸಿಎಸ್‌ಆರ್ ಸಂಯೋಜಕಿ ಲಿನ್ಸಿ ಮ್ಯಾಥ್ಯೂ ಹೇಳಿದರು.

ಬಿಜೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಫೌಂಡೇಶನ್ ವತಿಯಿಂದ ಸುಮಾರು 7 ಲಕ್ಷ ರೂ. ಮೌಲ್ಯದ ಶಾಲಾ ಪೀಠೋಪಕರಣ ಹಸ್ತಾಂತರಿಸಿ ಮಾತನಾಡಿದರು. ಮಣಿಪಾಲ್ ಸಂಸ್ಥೆಯು ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಸಮಾಜಮುಖಿ ಚಿಂತನೆಯ ಮೂಲಕ ಕಾರ್ಯನಿರ್ವಹಿಸುತ್ತಿದೆ ಎಂದರು.

ಶಾಲೆ ದತ್ತು ಸ್ವೀಕರಿಸಿದ ಡಾ. ಗೋವಿಂದಬಾಬು ಪೂಜಾರಿ ಮಾತನಾಡಿದರು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಮೇಶ ವಿ. ದೇವಾಡಿಗ ಅಧ್ಯಕ್ಷತೆ ವಹಿಸಿ ದಾನಿಗಳನ್ನು ಸನ್ಮಾನಿಸಿ ಶಾಲೆಗೆ ನೀಡಿರುವ ಕೊಡುಗೆಯನ್ನು ಸ್ಮರಿಸಿ ಶುಭಹಾರೈಸಿದರು. ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ್ ನಾಯ್ಕ, ನಿವೃತ್ತ ಮುಖ್ಯಶಿಕ್ಷಕ ಬಿಜೂರು ವಿಶ್ವೇಶ್ವರ ಅಡಿಗ, ಫೌಂಡೇಶನ್‌ನ ಸುಭಾಷ್, ಮಕ್ಕಳ ಮಿತ್ರ ರಾಜೇಂದ್ರ ಬಿಜೂರು, ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ನಂದೀಶ್ ದೇವಾಡಿಗ, ಜಯರಾಮ ಶೆಟ್ಟಿ ಬಿಜೂರು, ಸಮಾಜ ಸೇವಕ ಸುಬ್ರಹ್ಮಣ್ಯ ಬಿಜೂರು, ಅಲಕಾ ಸುರೇಶ್ ಬಿಜೂರು, ನಿವೃತ್ತ ಮುಖ್ಯ ಶಿಕ್ಷಕ ಗಿರೀಶ್ ಶ್ಯಾನುಭಾಗ್, ಉಪ್ಪುಂದ ಶ್ರೀ ವರಲಕ್ಷ್ಮೀ ಸೌಹಾರ್ದ ಕ್ರೆಡಿಟ್ ಕೋ-ಆಪ್ ಸೊಸೈಟಿ ಬೈಂದೂರು ಶಾಖಾ ವ್ಯವಸ್ಥಾಪಕ ನಾಗರಾಜ ಪಿ. ಯಡ್ತರೆ ಇದ್ದರು. ಮುಖ್ಯ ಶಿಕ್ಷಕ ಮಂಜುನಾಥ ಎಸ್. ಸ್ವಾಗತಿಸಿದರು. ಶಿಕ್ಷಕಿ ಸುಮತಿ ನಿರೂಪಿಸಿದರು. ದೈಹಿಕ ಶಿಕ್ಷಣ ಶಿಕ್ಷಕ ರವಿ ವಂದಿಸಿದರು.

ಕುಕ್ಕುಂದೂರಲ್ಲಿ ಪ್ರಸಾದ್ ನೇತ್ರಾಲಯ, ನಕ್ಸಲ್ ನಿಗ್ರಹ ದಳದಿಂದ ಕಣ್ಣಿನ ತಪಾಸಣಾ ಶಿಬಿರ



ಉಡುಪಿ: ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ, ಉಡುಪಿ, ನೇತ್ರ ಜ್ಯೋತಿ ಚಾರಿಟೇಬಲ್ ಟ್ರಸ್ಟ್ ಉಡುಪಿ, ಹಾಗೂ ನಕ್ಸಲ್ ನಿಗ್ರಹ ಪಡೆ ಕಾರ್ಕಳ, ಆಲೋಕ ವಿಷನ್ ಫೌಂಡೇಶನ್, ಬೆಂಗಳೂರು ಇದರ ವತಿಯಿಂದ ನಕ್ಸಲ್ ನಿಗ್ರಹ ಪಡೆ ತರಬೇತಿ ಕೇಂದ್ರ ಕುಕ್ಕುಂದೂರಿನಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಜರಗಿತು. ಇದರಲ್ಲಿ ಉಚಿತ ಕನ್ನಡಕ್ಕೆ ಆಯ್ಕೆಯಾದ 60 ಜನರಿಗೆ ಮಾ.26ರಂದು ಕನ್ನಡಕ ವಿತರಿಸಲಾಯಿತು. ಕನ್ನಡಕ ವಿತರಣಾ ಕಾರ್ಯಕ್ರಮದಲ್ಲಿ ಪ್ರಸಾದ್ ನೇತ್ರಾಲಯ ಸಮೂಹ ಕಣ್ಣಿನ ಆಸ್ಪತ್ರೆಗಳ ಮೆಡಿಕಲ್ ಡೈರೆಕ್ಟರ್ ಡಾ. ಕೃಷ್ಣಪ್ರಸಾದ್ ಕೂಡ್ಲು, ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀಮತಿ ರಶ್ಮಿ ಕೃಷ್ಣಪ್ರಸಾದ್, ಉಡುಪಿ ಉಪವಿಭಾಗ ಪೊಲೀಸ್ ಉಪ ಅಧೀಕ್ಷಕ ಬೆಳ್ಳಿಯಪ್ಪ, ಸುಮ ಇದ್ದರು. ಮಧುಕುಮಾರ್ ನಿರೂಪಿಸಿ, ರಾಘವೇಂದ್ರ ವಂದಿಸಿದರು.

ಕೋಟ ಪಂಚವರ್ಣ ಮಣೂರು ಫ್ರೆಂಡ್ಸ್ ರಜತ ಸಂಭ್ರಮ ವಿಶೇಷ ಪುರಸ್ಕಾರಕ್ಕೆ ಆಯ್ಕೆ

ಕೋಟ: ಇಲ್ಲಿನ ಕ್ರಿಯಾಶೀಲ ಸಂಘಟನೆಯಾದ ಕೋಟದ ಪಂಚವರ್ಣ ಸಂಘಟನೆಗೆ ಮಣೂರು ಫ್ರೆಂಡ್ಸ್ ಮಣೂರು ಇದರ ರಜತ ಸಂಭ್ರಮ ವಿಶೇಷ ಪುರಸ್ಕಾರಕ್ಕೆ ಆಯ್ಕೆಗೊಳಿಸಿದೆ. ಇದೇ ಎಪ್ರಿಲ್ 1ರಂದು ಮಣೂರು ಮಹಾಲಿಂಗೇಶ್ವರ ದೇಗುಲದ ಜಾತ್ರೋತ್ಸವದ ಅಂಗವಾಗಿ ಹಮ್ಮಿಕೊಳ್ಳುವ ವೇದಿಕೆಯಲ್ಲಿ ಈ ಪುರಸ್ಕಾರ ನೀಡಿ ಗೌರವಿಸಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಮಹತ್ವಾಕಾಂಕ್ಷಿ ಯೋಜನೆ ವಯೋವಂದನ ಆತಿಥ್ಯ ಗೃಹ ನಿರ್ಮಾಣಕ್ಕೆ ಸಂಬಂಧಿಸಿ ಕುಡ್ತೇರಿ ದೇವಸ್ಥಾನದ ಸಭಾಗೃಹದಲ್ಲಿ ಸಮಾಲೋಚನಾ ಸಭೆ

ಜಿಎಸ್‌ಬಿ ಹಿತ ರಕ್ಷಣಾ ವೇದಿಕೆ ವಯೋವಂದನ ಬದುಕಿನ ಸಂಧ್ಯಾಕಾಲಕ್ಕೆ ಚೇತನ: ವಿಠ್ಠಲ್ ಭಟ್

ಕಾರ್ಕಳ: ಜಿಎಸ್‌ಬಿ ಸಮಾಜ ಹಿತ ರಕ್ಷಣಾ ವೇದಿಕೆ ಸಮಾಜದ ಹಿರಿಯರಿಗಾಗಿ ನಿರ್ಮಿಸುತ್ತಿರುವ ವಯೋವಂದನ ಆತಿಥ್ಯ ಗೃಹ ಮಕ್ಕಳಿಲ್ಲದ ಹಿರಿಯರಿಗೆ ಜೀವನದ ಸಂಧ್ಯಾಕಾಲದಲ್ಲಿ ಆಸರೆಯಾಗಿ ಚೈತನ್ಯದಾಯಿಯಾಗಲಿದೆ. ವೇದಿಕೆಯ ಸಮಾಜ ಸಂಘಟನೆ ಮತ್ತು ಸಮಾಜಮುಖಿ ಕಾರ್ಯಗಳಿಗೆ ಸಮಾಜದ ಎಲ್ಲರೂ ಒಮ್ಮನಿಸ್ಸಿನಿಂದ ಕೈಜೋಡಿಸಿದರೆ ಈ ಮಹತ್ವಕಾಂಕ್ಷಿ ಯೋಜನೆ ಆದಷ್ಟು ಶೀಘ್ರ ನೆರವೇರಲಿದೆ ಎಂದು ವೇದಮೂರ್ತಿ ಎಂ.ವಿಠ್ಠಲ್ ಭಟ್ ಹೇಳಿದರು.



ಅವರು ಮಂಗಳೂರು ರಥ ಬೀದಿಯಲ್ಲಿರುವ ಶ್ರೀ ಕುಡ್ತೇರಿ ಮಹಾಮಾಯ ದೇವಸ್ಥಾನದ ಸಭಾಗೃಹದಲ್ಲಿ ಶನಿವಾರ ಸಂಜೆ ಜರುಗಿದ ವಯೋವಂದನ ಆತಿಥ್ಯ ಗೃಹದ ಸಮಾಲೋಚನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಉಡುಪಿ ತ್ರಿಶಾ ವಿದ್ಯಾ ಕಾಲೇಜಿನ ಸಂಸ್ಥಾಪಕ ಸಿಎ ಗೋಪಾಲಕೃಷ್ಣ ಭಟ್ ಯೋಜನೆಯ ಸಮಗ್ರ ವಿವರಗಳನ್ನು ಅಂಕಿ ಅಂಶಗಳ ಮೂಲಕ ವಿವರಿಸಿ, ನಿವಾಸಿಗಳಿಗೆ ಊಟೋಪಚಾರ, ವಸತಿ ವ್ಯವಸ್ಥೆ, ವೈದ್ಯಕೀಯ ಸೌಲಭ್ಯದ ಜೊತೆಗೆ ಜೀವನೋತ್ಸಾಹವನ್ನು ಹೆಚ್ಚಿಸುವ ನಿರಂತರ ಚಟುವಟಿಕೆ ಅಳವಡಿಸಿಕೊಳ್ಳಲಾಗುವುದು ಎಂದರು.

ಉದ್ಭವ ಡಿಸೈನ್ ಸ್ಟುಡಿಯೋ ಮಣಿಪಾಲದ ಸಿವಿಲ್ ಇಂಜಿನಿಯರ್ ಕುಂದಾಪುರದ ಸಚಿತ್ ಪೈ ಯವರು ವಾಸ್ತು ವಿನ್ಯಾಸ ಮತ್ತು ಕಟ್ಟಡ ನಿರ್ಮಾಣ ಸಲಹೆಗಾರರಾಗಿದ್ದು, ಪ್ರತಿ ಮಹಡಿಯಲ್ಲಿ 24 ಕೊಠಡಿ ಗಳಂತೆ ಒಟ್ಟು 72 ಕೊಠಡಿಗಳ 144 ಮಂದಿ ಹಿರಿಯರಿಗೆ ವಾಸಿಸಲು ಅನುಕೂಲವಾಗುವ 56 ಸಾವಿರ ಚದರಡಿಯ ಕಟ್ಟಡದ ವಾಸ್ತು ವಿನ್ಯಾಸ ಮತ್ತು ಸೌಲಭ್ಯಗಳ ವಿವರವನ್ನು ಸಭೆಗೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿ ಎಸ್ ಬಿ ಸಮಾಜ ಹಿತ ರಕ್ಷಣಾ ವೇದಿಕೆಯ ಸಂಚಾಲಕರು ಹಾಗೂ ವಯೋವಂದನ ಆತಿಥ್ಯ ಗ್ರಹ ಯೋಜನೆಯ ರೂವಾರಿಗಳಾದ ಆರ್. ವಿವೇಕಾನಂದ ಶೆಣೈಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕಳೆದ 14 ವರ್ಷಗಳಿಂದ ಕುಟುಂಬ ಚೈತನ್ಯ ನಿಧಿ, ವಿದ್ಯಾ ಪೋಷಕ ನಿಧಿ, ಪ್ರತಿಭಾ ಪುರಸ್ಕಾರ, ಆರೋಗ್ಯ ಚೈತನ್ಯ ನಿಧಿ, ಜಿಎಸ್‌ಬಿ ಗ್ರಹ ನಿರ್ಮಾಣ ಯೋಜನೆ, ಉಚಿತ ಗುಂಪು ಆರೋಗ್ಯ ವಿಮಾ ಯೋಜನೆಯ ಮೂಲಕ ಉಡುಪಿ ಜಿಲ್ಲೆಯಿಂದ ಪ್ರಾರಂಭಿಸಿ ದಕ್ಷಿಣ ಕನ್ನಡ ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗೆ ವಿಸ್ತರಿಸಿರುವ ಸಮಾಜಮುಖಿ ಯೋಜನೆಯು ವೇದಿಕೆಯ ಮಹತ್ವಾಕಾಂಕ್ಷಿ ಯೋಜನೆ ಯಾಗಿದ್ದು, ಪ್ರಮುಖವಾಗಿ ಸಮಾಜದ ಮಕ್ಕಳಿಲ್ಲದ ಹಿರಿಯರಿಗೆ ಉಚಿತ ವಾಸ್ತವ್ಯ ಕಲ್ಪಿಸುವ ಸದುದ್ದೇಶದಿಂದ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಮಕ್ಕಳು ವಿದೇಶದಲ್ಲಿದ್ದು ಒಂಟಿತನ ಕಾಡುವ ದಂಪತಿಗಳಿಗೆ ಕೂಡಾ ನಿಗದಿತ ಶುಲ್ಕದೊಂದಿಗೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿದ್ಯಾ ಪೋಷಕ ನಿಧಿ ವಿದ್ಯಾರ್ಥಿ ವೇತನದ ಅಧ್ಯಕ್ಷ ಸಿಎ ಎಸ್ ಎಸ್ ನಾಯಕ್ ಅವರು ತಮ್ಮ ತಾಯಿಯ ಹುಟ್ಟು ಹಬ್ಬದ ದಿನ ಸಂಕಲ್ಪಿಸಿದಂತೆ ಒಂದು ಕೊಠಡಿಯ ದೇಣಿಗೆ 8 ಲಕ್ಷ ರೂಪಾಯಿ ಚೆಕ್ಕನ್ನು ಹಸ್ತಾಂತರಿಸಿದರು.

ಉಡುಪಿ ಅನಂತ ವೈದಿಕ ಕೇಂದ್ರದ ವೇದಮೂರ್ತಿ ಚೇಂಪಿ ರಾಮಚಂದ್ರ ಅನಂತ ಭಟ್ ರವರು ಮಾತನಾಡಿದರು. ಮಂಗಳೂರು ವೆಂಕಟರಮಣ ದೇವಸ್ಥಾನದ ಟ್ರಸ್ಟಿಗಳಾದ ಗಣೇಶ್ ಕಾಮತ್, ಕಿರಣ ಪೈ, ಕುವೈಟ್ ಜಿಎಸ್‌ಬಿ ಸಮಾಜದ ಪ್ರಮುಖರಾದ ಮಂಜೇಶ್ವರ ಮೋಹನ್ ದಾಸ್ ಕಾಮತ್, ಮಂಗಳೂರಿನ ಸಮಾಜ ಸೇವಕಿ ಪುಷ್ಪಾ ಪ್ರಭು, ವಿದ್ಯಾ ಪೋಷಕ ನಿಧಿ ವಿದ್ಯಾರ್ಥಿ ವೇತನ ಯೋಜನೆಯ ಸಂಚಾಲಕ ಮೂಡಬಿದ್ರೆ ವಿಜಯಕುಮಾರ್ ಶೆಣೈ ಬೆಂಗಳೂರು ಉಪಸ್ಥಿತರಿದ್ದರು. ವಯೋವಂದನ ಯೋಜನೆಯ ಮಂಗಳೂರು ವಲಯ ಸಂಚಾಲಕ ರಘುನಾಥ ಪ್ರಭು ಸ್ವಾಗತಿಸಿ, ವೇದಿಕೆಯ ಪ್ರಧಾನ ಕಾರ್ಯದರ್ಶಿ ಸಾಣೂರು ನರಸಿಂಹ ಕಾಮತ್ ಕಾರ್ಯಕ್ರಮ ನಿರೂಪಿಸಿದರು. ಸಹ ಸಂಚಾಲಕ ಸುಬ್ರಹ್ಮಣ್ಯ ಪ್ರಭು ವಂದಿಸಿದರು.